UNIVERSAL
LIBRARY
OU_200320
UNIVERSAL
LIBRARY

# ಜಗನ್ಮೋಹಿನೀ

( ಧರ್ಮವಿಜಯ )

ಪಂಡಿತ ಎಚ್. ಸಿ. ಶ್ಯಾಮಾಚಾರ್ಯ

# ಜಗನ್ಮೋಹಿನೀ

## (ಧರ್ಮವಿಜಯ)

**ಪಂಡಿತ ಎಚ್. ಪಿ. ಶ್ಯಾಮಾಚಾರ್ಯ**

ಚಂದ್ರಕಳಾ, ಶಿರಿಯಾಳ, ಚಂದ್ರಹಾಸ ಮುಂತಾದ ಗ್ರಂಥಗಳ
ಪ್ರಣೇತರು ಮತ್ತು ಹಿಂದೆ ಶೈನ್ಟ್-ಜೋಸಫಸ್ ಕಾಲೇಜಿನ
ಸಂಸ್ಕೃತ ಮುಖ್ಯೋಪಾಧ್ಯಾಯರು

---

ಬೆಂಗಳೂರು ಸಿಟಿ:

ವಿದ್ಯಾನಂದ ಸಂಪಾದಕ

**ಬಿ. ಆದಿನಾರಾಯಣ ಶಾಸ್ತ್ರಿಯಿಂದ**

ಪ್ರಕಟಿಸಲ್ಪಟ್ಟಿದೆ

ಕೆ. ಎಸ್. ಕೃಷ್ಣಯ್ಯರ್, ಬಿ. ಎ. ಯವರ

ಐರಿಷ್ ಪ್ರೆಸ್ಸಿನಲ್ಲಿ ಮುದ್ರಿತವಾಗಿದೆ.

1919.

ರಿಜಿಸ್ಟರ್ಡ್ ಕಾಪೀರೈಟ್

ಬೆಲೆ ರೂ. ೧—೦—೦.

# ಪ್ರಸ್ತಾವನೆ.

---

ದೇಶದ ಸಂಪದಭ್ಯುದಯಕ್ಕೆ ನಿದಾನವಾದ ವಿದ್ಯಾಪ್ರಚುರಕ್ಕೆ ದೇಶಭಾಷೆಯೇ ಮುಖ್ಯೋಪಕರಣವಾಗಿರುವುದರಿಂದ ದೇಶಾಭಿಮಾನಿಗಳೆಲ್ಲರೂ ಪ್ರಥಮತಃ ದೇಶಭಾಷಾಭಿವೃದ್ಧಿಗೆ ಬದ್ಧಕಂಕಣರಾಗಬೇಕು. ತತ್ರಾಪಿ, ಸುಬದ್ಧಗಳಾದ ದೇಶ್ಯಪದಗಳಿಗೆ ಅನ್ಯದೇಶೀಯ ಪದಗಳ ಆದೇಶವೆಂಬ ಸಾಂಕ್ರಾಮಿಕ ಜಾಡ್ಯವು ಪ್ರಾಪ್ತವಾದಾಗ ಅದರ ಪರಿಷ್ಕರಣಕ್ಕಾದರೂ ಯಥಾಶಕ್ತಿ ಪ್ರಯತ್ನಪಡದೇ ತಾಟಸ್ಥ್ಯವನ್ನವಲಂಬಿಸುವುದು ದೇಶಭಾಷಾಭಿಮಾನಿಗಳಿಗೆ ಧರ್ಮವಲ್ಲವೆಂದು ಇದಕ್ಕೆ ಮುಂಚೆ 'ಚನ್ದ್ರಕಳಾ' ಎಂಬ ನೀತಿಬೋಧಕವಾದುದೊಂದು ಕಾದಂಬರಿಯನ್ನು ಬರೆದೆನು. ಅದನ್ನು ಓದಿದ, ವಿದ್ಯಾನಂದ ಸಂಪಾದಕರಾದ ಬ್ರಹ್ಮಶ್ರೀ ವಿದ್ವಾನ್ ಆದಿನಾರಾಯಣಶಾಸ್ತ್ರಿಗಳೇ ಮುಂತಾದ ರಸಜ್ಞಮಹಾಶಯರನೇಕರು ತಮ್ಮ ನೈಜವಾದ, ಪರರ ಗುಣಪರಮಾಣುವನ್ನು ಪರ್ವತವನ್ನಾಗಿ ಭಾವಿಸಿ ಕೊಂಡಾಡುವ ಗುಣವನ್ನು ಪ್ರಕಾಶಗೊಳಿಸಿ, ಅಂತಹ ಮತ್ತೆ ಕೆಲವು ಗ್ರಂಥಗಳನ್ನು ಬರೆಯಬೇಕೆಂದು ಪ್ರೋತ್ಸಾಹ ಮಾಡಿದುದರಿಂದ ಭಾಷಾ ಕೈಂಕರ್ಯಲೋಭಿಯಾದ ನಾನು ಕೇವಲ ಹೃದಯಂಗಮವಾಗಿ ನೀತಿಬೋಧಕವಾಗಿರುವಂತೆ 'ಜಗನ್ಮೋಹಿನೀ' ಎಂಬೀ ಕಾದಂಬರಿಯನ್ನು ಸರ್ವಜನಪರಿಗೃಹೀತವಾಗಬೇಕೆಂಬ ಅಭಿಲಾಷೆಯಿಂದ ಸುಲಭಶೈಲಿಯಲ್ಲಿ ಬರೆದಿರುವೆನು. ಇದು ದುಷ್ಟನಿಗ್ರಹ ಶಿಷ್ಟಪರಿ

ಪಾಲನ ರೂಪವಾದ ಭಗವದ್ವ್ಯಾಪಾರಕ್ಕೆ ಸಣ್ಣದೊಂದು ನಿದರ್ಶನವಾಗಿರುವುದು. ಇದರ ಅನ್ವರ್ಥಕವಾದ 'ಧರ್ಮವಿಜಯ' ವೆಂಬ ಅಭಿದಾನಕ್ಕೆ 'ಜಗನ್ಮೋಹಿನೀ'' ಎಂಬ ಕಥಾನಾಯಕಿಯ ಹೃದ್ಯವಾದ ನಾಮಧೇಯದ ಆವರಣವನ್ನು ಕೊಟ್ಟಿರುವೆನು. ನಮ್ಮ ಭಾಷಾಜನನಿಯು ಇದನ್ನು, ಸಹೃದಯರಾದ ಸಮಸ್ತ ಕನ್ನಡಿಗರ ಹಸ್ತಗತವಾಗಿ ಅವರಲ್ಲಿ ಸ್ವಭಾಷಾಭಿಮಾನವನ್ನುಂಟುಮಾಡತಕ್ಕ ಪರವನ್ನು ದಯೆಪಾಲಿಸಿ ನನ್ನೀ ಸೇವೆಯನ್ನು ಸಫಲವನ್ನಾಗಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಈ ಪುಸ್ತಕವನ್ನು ಪರಮಾದರದಿಂದ ಸ್ವೀಕಾರಮಾಡಿದ ನನ್ನ ಪ್ರಿಯಸ್ನೇಹಿತರಾದ ಮಹಾರಾಜಶ್ರೀ ತಂಗಲಿ ಲಕ್ಷ್ಮೀರಮಣ ಐಯ್ಯಂಗಾರವರಿಗೆ ನಾನು ಬಹಳ ಕೃತಜ್ಞನಾಗಿರುವೆನು.

ಬೆಂಗಳೂರು.
(ಸರಸ್ವತೀಪುರ)
29-8-1919.

ಎಚ್. ಪಿ. ವ್ಯಾಸಾಚಾರ್ಯ

*

# ಜಗನ್ಮೋಹಿನೀ

---

## ಅಪರಿಚಿತವ್ಯಕ್ತಿ

"ಸಂಸಾರದ ಸುಖ, ದುಃಖ, ವೃದ್ಧಿ, ಕ್ಷಯ, ಮುಂತಾದುವು ಚಕ್ರದಂತೆ ತಿರುಗುತ್ತಿವೆ——ಯಾವುದೂ ಶಾಶ್ವತವಲ್ಲ". ಎಂದು ಜಗಕೆ ತನ್ನ ಉದಯಾಸ್ತಮಯಗಳ ದೃಷ್ಟಾಂತರದಿಂದ ಬೋಧಿಸುತ್ತಿರುವಂತೆ ದಿನೇಶನು ಅಸ್ತಾಚಲದ ಕೋಡುಗಲ್ಲಿನ ಮೇಲೆ ಕರಗಳನ್ನೆತ್ತಿಕೊಂಡು ನಿಂತಿದ್ದನು.

ಆ ಸಮಯದಲ್ಲಿ ಬೈರಾಗಿಯೊಬ್ಬನು, ಮೂಡಲ ಸೀಮೆಯ ಕಡೆಯಿಂದ ವಿಂಧ್ಯಪರ್ವತದ ಕಣಿವೆಯ ಮಾರ್ಗವಾಗಿ ಬೇಗ ಬೇಗನೆ ಹೋಗುತ್ತಿದ್ದನು.

ಅವನು ಸುಮಾರು ಇಪ್ಪತ್ತೆರಡು ವರ್ಷದವನಾಗಿದ್ದನು ; ಆಕಾರದಲ್ಲಿ ಉದ್ದವಾಗಿಯೂ ತಪಸ್ವಿಗಳ ಸ್ವಭಾವಕ್ಕೆ ವಿರುದ್ಧವಾಗಿ ಕಾಯಪುಷ್ಟಿಯುಳ್ಳವನಾಗಿಯೂ ಚಟುವಟಿಕೆಯವನಾಗಿಯೂ ಇದ್ದನು. ಈಗಿನ ಸನ್ಯಾಸಿಗಳಂತೆ ಗುಲಾಬಿ ಬಣ್ಣದ ದೊಡ್ಡಂಚಿನ ಪಂಚೆಯನ್ನು ಸೊಂಟಕ್ಕೆ ಸುತ್ತಿಕೊಂಡಿದ್ದನು. ಮೈಗೆಲ್ಲಾ ಬಲವಾಗಿ ಬೂದಿಯನ್ನು ಬಳಿದುಕೊಂಡಿದ್ದನು. ದೊಡ್ಡ ದೊಡ್ಡ ರುದ್ರಾಕ್ಷಿಮಾಲೆಗಳನ್ನು ಕೊರಳಿಗೆ ಹಾಕಿಕೊಂಡಿದ್ದನು. ಕೈಯಲ್ಲಿ ದಂಡಕಾಷ್ಠದಂತೆ ಕಾಣುತ್ತಿದ್ದ ಹಣೆಮುಟ್ಟದ ದೊಣ್ಣೆಯನ್ನು ಹಿಡಿದುಕೊಂಡಿದ್ದನು. ಕೊಂಕುಳಲ್ಲಿ ಅಡ್ಡದಿಡ್ಡಿಯಾಗಿ ಸುತ್ತಿದ್ದ ವ್ಯಾಘ್ರಾಜಿನದ ಸುರುಳಿಯನ್ನು ಇರುಕಿಕೊಂಡಿದ್ದನು.

ಅವನ ಸಿಡುವಾದ ಗುಂಗುರಗೂದಲು ಗೊಂಚಲು ಗೊಂಚಲಾಗಿ ಅವನ ಭುಜಗಳ ಮೇಲೆಯೂ ಬೆನ್ನಿನ ಮೇಲೆಯೂ ಜೋಲಾಡುತ್ತಿದ್ದುವು. ಆ ಗುಚ್ಛಗಳು ದೂರದೃಷ್ಟಿಗೆ ಅವನ ಆಕಾರಕ್ಕೆ ತಕ್ಕಹಾಗೆ ಜಟಾಜೂಟದಂತೆ ಕಾಣುತ್ತಿದ್ದುವು. ಆದರೆ ಅವು ವಾಸ್ತವವಾಗಿ ಜಟೆಗಳಾಗಿ ಹೋಗಿರಲಿಲ್ಲ. ಇದಕ್ಕೆ ಕಾರಣವೇನಿದ್ದಿತೋ ?

ಈ ಕೂದಲು ಆಗಾಗ್ಗೆ ಹಿಂದಿನ ಗಾಳಿಯಿಂದ ಚದರಿ ಅವನ ಮೊಗದಮೇಲೆ ಬೀಳುತ್ತಿದ್ದಿತು. ಆಗ ಅವನು ಗಾಳಿಗೆ ಇದಿರಾಗಿ ತಿರುಗಿ ತನ್ನ ಎಡಗೈಯಿಂದ ಅದನ್ನು ಸರಿಮಾಡಿಕೊಳ್ಳುತ್ತಿದ್ದನು. ಅಡಿಗಡಿಗೆ, ಅಸ್ತಂಗತನಾಗುತ್ತಿದ್ದ ಸೂರ್ಯನ ನ್ನು ಸೂರ್ಯನ ಕಡೆಯ ರಶ್ಮಿಗಳನ್ನೂ ಪಶ್ಚಿಮದಿಗಂತಕ್ಕೆ ಸಡಗರದಿಂದ ಓಡಿಸಿಕೊಂಡು ಹೋಗುತ್ತಿದ್ದ ಮುಂಗತ್ತಲೆಯನ್ನೂ ದಿಟ್ಟಿಸಿನೋಡಿ ಮತ್ತಷ್ಟು ವೇಗವಾಗಿ ಮುಂದರಿದು ಹೋಗುತ್ತಿದ್ದನು.

ಇಷ್ಟು ವೇಗವಾಗಿ ಹೋಗುತ್ತಿದ್ದಾಗ್ಯೂ ಅವನು ಒಮ್ಮೊಂದೊಮ್ಮೆ ಮರಗೊಂಡವನಂತೆ ನಿಂತು ಕಿರುಗಣ್ಣಿನಿಂದ ಶೂನ್ಯವಾದ ಆಕಾಶವನ್ನು ಒಂದೆರಡುಗಳಿಗೆ ನೋಡುತ್ತಿದ್ದು ಕೂಡಲೇ ಎಚ್ಚರಗೊಂಡು, ಆಲೋಚನೆಯು ಬಗೆ ಹರಿಯಿತೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವಂತೆ, ತಲೆಯನ್ನು ಎಡಗೈ ತರ್ಜನಿಯನ್ನೂ ಅಲ್ಲಾಡಿಸಿಕೊಂಡು ಮತ್ತಷ್ಟು ವೇಗವಾಗಿ ಮುಂದಕ್ಕೆ ಸಾಗುತ್ತಿದ್ದನು.

ಸ್ವಲ್ಪದೂರದಲ್ಲಿಯೇ ಅವನ ದಾರಿಗೆ ಅಡ್ಡವಾಗಿ ದೊಡ್ಡದೊಂದು ಹೊಳೆಯು ಹರಿಯುತ್ತಿದ್ದಿತು. ಅವನು ಅದರ ಆಳವನ್ನು ಚೆನ್ನಾಗಿ ಅರಿತವನಂತೆ ಕೈಯಲ್ಲಿದ್ದ ಕೋಲನ್ನು ಕೂಡ ಊರಿನೋಡದೆ ನಿರ್ಭಯವಾಗಿ ನೀರೊಳಗಿಳಿದನು. ಅದರಲ್ಲಿ

ನೀರು ಮುಂಡಿಯ ಮಟ್ಟಕ್ಕಿಂತಲೂ ಹೆಚ್ಚಾಗಿರಲಿಲ್ಲ ; ನಿಂತನೀರಿ ನಂತೆ ನಿದಾನವಾಗಿ ಹರಿಯುತ್ತಿದ್ದಿತು. ನಡುಹೊಳೆಯಲ್ಲಿ ಅವನು ಬಗ್ಗಿ ಪಶುವಿನಂತೆ ನೀರು ಕುಡಿದನು. ಕುಡಿಯೇಳುವಾಗ ಸಂಧ್ಯಾ ಕಾಲದ ಅರುಣ ಕಿರಣ ಸಂಪರ್ಕದಿಂದ ಆ ನೀರಿನಲ್ಲಿ ಪ್ರತಿಬಿಂಬಿತ ವಾದ ಅವನ ಆಕಾರವು ಅವನ ಕಣ್ಣಿಗೆ ಬಿದ್ದಿತು. ಅದನ್ನು ಬಿರಬಿರನೆ ನೋಡುತ್ತಾ ಒಂದು ಗಳಿಗೆ ನಿಂತನು .

ಆಗ ಅವನ ಮೊಗದಲ್ಲಿ ವಿಕಾಸವೂ ಹಾಸವೂ ವಿಕಾರವೂ ಒಂ ದರಮೇಲೊಂದು ತೋರಿದುವು- ಆದರೆ,—ಉತ್ತರ ಕ್ಷಣದಲ್ಲಿಯೇ ಅವನು ಪ್ರಕೃತಿಸ್ಥನಾಗಿ ಎಡಗೈಯಿಂದ ತನ್ನ ಕುಡಿಮೀಸೆಯನ್ನು ತೀಡಿಕೊಳ್ಳುತ್ತಾ ಅಸ್ಪಷ್ಟವಾದ ಏನೋ ಕೆಲವು ಮಾತುಗಳನ್ನು ಆಡಿಕೊಂಡು ಹೊಳೆಯನ್ನು ದಾಟಿ ಮುಂದಕ್ಕೆ ಹೊರಟನು.

ಅಲ್ಲಿಂದಾಚೆಗೆ ದಾರಿಯು ಬಹಳ ಒಡಬಲಾಗಿಯೂ ನಿಬಿಡ ವಾದ ತರುಚ್ಛಾಯೆಯಿಂದ ಮಬ್ಬಾಗಿಯೂ ಇದ್ದಿತು. ಆದರೂ ಆ ಮಹಾಪುರುಷನು ಕಾಡುಮೃಗದಂತೆ ಹಳ್ಳಕೊಳ್ಳಗಳನ್ನೂ ಗಿಡ ಗೆಂಟೆಗಳನ್ನೂ ಲಕ್ಷಿಸದೇ ನೆಟ್ಟಗೆ ನಡುಬೆಟ್ಟಕ್ಕೆ ಹೋಗಿ ಸೇರಿದನು.

ಆ ವೇಳೆಗೆ ಪ್ರಪಂಚವೆಲ್ಲಾ ಗಾಢಾಂಧಕಾರದಲ್ಲಿ ಪೂರ್ತಿ ಯಾಗಿ ಮುಳುಗಿ ಹೋಯಿತು. ಅಂತಹ ನಿಬಿಡವಾದ ಕಾಡಿನಲ್ಲಿ ಇನ್ನೂ ಹೊತ್ತಿರುವಾಗಲೇ ಎತ್ತಲೂ ದಾರಿತೋರದಂತೆ ಕತ್ತಲು ಕವಿತುಕೊಳ್ಳುವುದು ಸ್ವಾಭಾವಿಕವಾಗಿಯೇ ಇದೆ; ಹೊತ್ತು ಮುಳುಗಿದಮೇಲೆ ಹೇಳಬೇಕೇ ?

ಇದಲ್ಲದೆ ಅಲ್ಲಿ ಆ ಹೊತ್ತಿನಲ್ಲಿ ಹುಲಿ, ಕರಡಿ, ಆನೆ ಮೊದಲಾದ ದುಷ್ಟಮೃಗಗಳ ಅಬ್ಬರವು ಆ ಬೆಟ್ಟದ ಗುಹೆಗಳಲ್ಲಿ ನಲಿಗೊಂಡು ದಾರಿಗರೆದೆ ನಡುಗುವಂತೆ ಭೋರೆಂದು ಕೇಳ ಬರುತ್ತಿದ್ದಿತು.

ಈ ಸಮಯದಲ್ಲಿ ಮಾತ್ರ ರಾದರೂ ಪಟ್ಟಣಿಗರಾಗಿದ್ದರೆ ಆ ಬೆಟ್ಟದಮೇಲೆ ಮುಂದೊಂದಡಿಯಿಟ್ಟು ಹೋಗುತ್ತಿರಲಿಲ್ಲ.

ಇದೂ ಹಾಗಿರಲಿ, ಆಗಿನ ಕಾಲವಲ್ಲಿ ಆ ಪ್ರಾಂತ್ಯದ ರಾಜ ಮಾರ್ಗಗಳಲ್ಲಿಯೂ ಕೂಡಾ ಪ್ರಯಾಣಿಕರು ಒಂಟಿಯಾಗಿ ತಿರುಗಾಡುತ್ತಿರಲಿಲ್ಲ. ಏತಕ್ಕೆಂದರೆ, ಅಲ್ಲಿ ಕಳ್ಳರಕಾಟವು ಅಷ್ಟು ಪ್ರಬಲವಾಗಿದ್ದಿತು ; ಗುಂಪುಗುಂಪಾಗಿ ತಕ್ಕ ಸನ್ನಾಹದೊಡನೆ ಪ್ರಯಾಣಮಾಡುವವರಿಗೆ ಕೂಡಾ ದಾರಿಯಲ್ಲಿ ಸುಲಿಗೆಸೇವೆಯಾಗದೆ ಇರುವುದು ಅಪೂರ್ವ.

ಈ ಬೈರಾಗಿಗೆ ಅಂತಹ ಭೀತಿಯೊಂದು ಮನಸ್ಸಿಗೆ ತಟ್ಟಿದಂತೆ ತೋರಲಿಲ್ಲ ; ಬೈರಾಗಿಯು ಕಳ್ಳರಕಾಟಕ್ಕೆ ಹೆದರದೇ ಇದ್ದುದೇನೋ ಸಹಜವೇಸರಿ ; ಆದರೆ, ಆ ಪ್ರಾಣಿಯು ಅಲ್ಲಿಯ ಭಯಂಕರವಾದ ಕಾಡುಮೃಗಗಳ ಕೋಟಲೆಗೆ ಹೆದರದೇ ಇದ್ದುದೊಂದು ಸೋಜಿಗ. ಪ್ರಾಣಿಮಾತ್ರಕ್ಕೆ ಪ್ರಾಣಭಯಕ್ಕಿಂತಲೂ ಹೆಚ್ಚಾದ ಭಯವಾವುದು ? ಇವನು ಸ್ವಲ್ಪ ಹೊತ್ತಿನಲ್ಲಿಯೇ ಗವಿಯಂತೆ ಕಾಣುತ್ತಿದ್ದ ಒಂದು ತೋಪಿನ ಇದಿರಿಗೆ ಹೋಗಿ ನಿಂತನು

ಅದರ ಒಳಭಾಗದಲ್ಲಿ ಕೆಲಜನರು ಸುತ್ತಿಕೊಂಡು ಕಾಡು ತೊಲೆಗಳನ್ನು ಚಾಚಿ ಬೆಂಕಿಯನ್ನು ಉರಿಮಾಡಿ ಏನನ್ನೋ ಸುಡುತ್ತಿದ್ದರು. ಅಲ್ಲಿ ಹೊಗೆಯು ವಿಪರೀತವಾಗಿ ತುಂಬಿಕೊಂಡಿದ್ದುದರಿಂದ ಅವರ ಆಕಾರವೂ ಸಂಖ್ಯೆಯೂ ಚೆನ್ನಾಗಿ ಗೊತ್ತಾಗಲಿಲ್ಲ. ಆದರೆ ಒಂದೊಂದುವೇಳೆ ಧಗ್ಗನೆ ಏಳುತ್ತಿದ್ದ ಉರಿಯ ಬೆಳಕಿನಲ್ಲಿ ಅವರ ಸ್ವರೂಪವು ಸ್ವಲ್ಪಮಟ್ಟಿಗೆ ವ್ಯಕ್ತವಾಗುತ್ತಿದ್ದಿತು.

ಇವರೆಲ್ಲರೂ ಕುಳ್ಳರಾಗಿಯೂ ಕುರೂಪಿಗಳಾಗಿಯೂ

ಕಪ್ಪುಬಣ್ಣದವರಾಗಿಯೂ ಕಾಣುತ್ತಿದ್ದರು. ಈ ಕಪ್ಪುಬಣ್ಣವು ಅವರಿಗೆ ಸ್ವಭಾವಿಕವಾದುದೋ ಅಥವಾ ಅಲ್ಲಿ ಮುಚ್ಚಿಕೊಂಡಿದ್ದ ಹೊಗೆಯ ಸಂಪರ್ಕದಿಂದ ಉಂಟಾಗುವುದೋ ಹೇಳುವುದಕ್ಕೆ ಆಗುತ್ತಿರಲಿಲ್ಲ. ಅವರೆಲ್ಲರೂ ಮಂಡಿಯ ಮಟ್ಟದ ಬಿಳೀ ಚಡ್ಡಿಗಳನ್ನು ಹಾಕಿಕೊಂಡಿದ್ದರು ; ಸೊಂಟಕ್ಕೆ ಕೆಂಪು ನವಾರು ಪಟ್ಟಿಗಳನ್ನು ಒಂದೇ ರೀತಿಯಾಗಿ ಎಡಗಡೆಗೆ ಕೊನೆಯ ಕುಚ್ಚುಗಳನ್ನು ಜೋಲು ಬಿಟ್ಟು ಕಟ್ಟಿಕೊಂಡಿದ್ದರು ; ಅರ್ಧತೋಳಿನ ಕರೀ ಕುಡತಗಳನ್ನು ತೊಟ್ಟುಕೊಂಡಿದ್ದರು ; ತಲೆಯಮೇಲೆ ಕುಲಾವಿಗಳನ್ನು ಇಟ್ಟುಕೊಂಡಿದ್ದರು. ಇವರ ಸಾಧಾರಣವಾದ ಸಂವಾದವು ಪ್ರಮಾದವಾದ ವಿವಾದದಂತೆ ಕೇಳಬರುತ್ತಿದ್ದಿತು.

ಈ ಗುಂಪನ್ನು ನೋಡಿ ಬೈರಾಗಿಯು ಬಾಯಿಯಿಂದ ಒಂದುವಿಧವಾಗಿ ಶಿಳ್ಳು ಹಾಕಿದನು. ಅದನ್ನು ಅವರೆಲ್ಲರೂ ಕಿವಿಗೊಟ್ಟು ಕೇಳಿದರು. ಕೂಡಲೆ ಅವರಲ್ಲೊಬ್ಬನು ಉಳಿದವರ ಸಂಗಡ ಏನೋ ಗುಜುಗುಜು ಮಾತಾಡಿ ಉರಿಯುತ್ತಿದ್ದ ಕೊಳ್ಳಿಯೊಂದನ್ನು ಕೈಗೆ ತೆಗೆದುಕೊಂಡು " ಓಹೋ ! ಓಹೋ !! " ಎಂದು ಗಟ್ಟಿಯಾಗಿ ಕೂಗುತ್ತಾ ಬೈರಾಗಿಯ ಇದಿರಿಗೆ ಬಂದು ಕೊಳ್ಳಿಯನ್ನು ಎತ್ತಿ ಅವನ ಮುಖವನ್ನು ನೋಡಿ, ತಟ್ಟನೆ ಒಂದೆರಡಡಿ ಹಿಂದಕ್ಕೆ ಹೋಗಿ ಬೈರಾಗಿಯ ಮುಂದಿಗೆ ಬೆಳಕು ಬೀಳುವಂತೆ ಕೊಳ್ಳಿಯನ್ನು ತಿರುಗಿಸಿ ಹಿಡಿದುಕೊಂಡು ಮುಂದರಿದು ಹೊರಟನು.

ಮಾಸಿಯು ಅವನನ್ನು ಹಿಂಬಾಲಿಸಿದನು ; ಇಬ್ಬರೂ ಸುಮಾರು ಐದು ನಿಮಿಷದವರೆಗೆ ಒಬ್ಬರ ಸಂಗಡ ಒಬ್ಬರು ಮಾತನಾಡದೇ ಆ ಡೊಂಕುಡೊಂಕಾದ ಕಾಡು ದಾರಿಯಲ್ಲಿ ಪ್ರಯಾಣ ಮಾಡಿದರು. ಆ ವೇಳೆಗೆ ಕೊಳ್ಳಿಯ ಬೆಳಕು ಸುತರಾಂ ಆರಿಹೋ

ಯಿತು. ಕೊಳ್ಳಿಯವನು ಅದನ್ನು ಉರಿಮಾಡುವುದಕ್ಕೆ ಊದಿ ಊದಿ ಎಷ್ಟೋ ಕಷ್ಟಪಟ್ಟನು. ಆದರೂ ಅದು ಪುನಃ ಹತ್ತಿ ಕೊಳ್ಳಲಿಲ್ಲ; ಆಗ ಬೈರಾಗಿಯು ಆತುರದಿಂದ “ ಅದರಲ್ಲಿರುವ ಕೆಂಡದ ಬೆಳಕೇ ಸಾಕು ! ಹೊತ್ತಾಯಿತು ! ಮುಂದೆ ಸಾಗು ” ಎಂದನು ; ಅದಕ್ಕವನು “ ಅಪ್ಪಣೆ ” ಎಂದು ಮುಂದರಿದು ಒಂದೆ ರಡು ನಿಮಿಷ ನಡೆದಮೇಲೆ ಬಾಯಿಯಿಂದ ಒಂದು ವಿಧವಾದ ಶಿಳ್ಳು ಹೊಡೆದನು. ಈ ಶಿಳ್ಳಿನ ಶಬ್ದವಡಗುವಷ್ಟರೊಳಗಾಗಿ ಇದಿರಿ ನಲ್ಲಿ ಒಂದುಕ್ಕೊಂದೊಮ್ಮೆ ಗುಡುಗಿನಂತಹ ಶಬ್ದವೆದ್ದಿತು. ಹಿಂ ದೆಯೇ ತರಂಗತರಂಗವಾಗಿ ಉರಿಗಳೆದುವು.

ಈ ಪಂಜಿನ ಬೆಳಕಿನಲ್ಲಿ ದೊಡ್ಡ ದೊಡ್ಡ ಒರಟು ಕಲ್ಲು ಗಳಿಂದ ಕಟ್ಟಲ್ಪಟ್ಟಿದ್ದ ಪುರಾತನವಾದ ದೊಡ್ಡ ಕೋಟೆಯೊಂದು ಕಾಣಿಸಿತು. ಅದರ ಅದ್ಭುತವಾದ ಬಾಗಿಲ ಮುಂದುಗಡೆ ಪಂಜಿ ನವರು ಸಾಲು ಸಾಲಾಗಿ ನಿಂತಿದ್ದರು. ಒಳಗಿನಿಂದ ಬಿಚ್ಚುಕತ್ತಿ ಯವರು ಒಬ್ಬರ ಹಿಂದೆ ಒಬ್ಬರು ಬಂದು ಬಾಗಿಲ ಮುಂದುಗಡೆ ನಿಲ್ಲುತ್ತಿದ್ದರು.

ಈಗ ನಾವು, ಮೊದಲು ಉಂಟಾದ ಮೇಘ ಗರ್ಜನೆಯಂ ತಹ ಶಬ್ದವು ಕೊಳ್ಳಿಯವನು ಮಾಡಿದ ಸಂಕೇತದಿಂದ ತೆಗೆಯ ಲ್ಪಟ್ಟ ಕೋಟೆಯ ಕವಾಟದ ಶಬ್ದವೆಂತಲೂ ಏಕಕಾಲದಲ್ಲಿ ಎದ್ದ ಉರಿಗಳು ಆ ಕೋಟೆಯೊಳಗಿನಿಂದ ಬಂದ ಈ ಪಂಜಿ ನವರ ಪಂಜುಗಳದೆಂತಲೂ ಸುಲಭವಾಗಿ ನಿಶ್ಚಯಿಸಬಹುದು.

ಆ ಬಿಚ್ಚುಕತ್ತಿಯವರು ಬೈರಾಗಿಯನ್ನು ನೋಡಿದ ಕೂಡಲೆ ಓರೆಯಾಗಿ ದಾರಿ ಬಿಟ್ಟು ವಿನೀತ ಭಾವದಿಂದ ನಿಂತರು. ಕೂ ಡಲೇ ಬೈರಾಗಿಯು ಮುಂದರಿದು ಆ ಕೋಟೆಯೊಳಕ್ಕೆ ಸಾಧಾರಣ ವಾಗಿ ನುಗ್ಗಿದನು. ಹಿಂದೆಯೇ ಯಥಾಪ್ರಕಾರ ಬಾಗಿಲು ಮು

ಚ್ಚಲ್ಪಟ್ಟಿತು. ಕೊಳ್ಳಿಯವನು ಹೊರಗಡೆಯೇ ನಿಂತುಹೋದನು.

ಆ ಕೋಟೆಯ ನಡುವೆ ದೊಡ್ಡದೊಂದು ಪ್ರಾಸಾದವಿದ್ದಿತು. ಅದರ ಸುತ್ತಲೂ ದೊಡ್ಡ ದೊಡ್ಡ ಕಲ್ಲು ಮಂಟಪಗಳಿದ್ದುವು. ಅವುಗಳಲ್ಲೆಲ್ಲಾ ದೊಡ್ಡ ದೊಡ್ಡ ದೀಪಗಳು ಉರಿಯುತ್ತಿದ್ದುವು. ಹಲವು ಜನರು ಗಲಿಬಿಲಿಯಿಂದ ಏನೇನೋ ಕೆಲಸಗಳನ್ನು ಮಾಡುತ್ತಿದ್ದರು; ಕೆಲವರು ದೀವಟಿಗೆಗಳನ್ನು ಹಿಡಿದುಕೊಂಡು ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ತಿರುಗಾಡುತ್ತಿದ್ದರು. ಬೈರಾಗಿಯು ಅತ್ತಿತ್ತ ನೋಡದೆ ನೆಟ್ಟಗೆ ಆ ಪ್ರಾಕಾರದ ಮಹಾದ್ವಾರದ ಹತ್ತಿರಕ್ಕೆ ಹೋದನು. ವರೆಗಳಚಿದ ಕತ್ತಿಯನ್ನು ಹಿಡಿದುಕೊಂಡು ತಿರುಗಾಡುತ್ತಿದ್ದ ಪಹರೆಯವನು ಇವನಿಗೆ ದಾರಿಯನ್ನು ಬಿಟ್ಟು ಅರುಗಾಗಿ ನಿಂತನು. ಬೈರಾಗಿಯು ಒಳಕ್ಕೆ ನುಗ್ಗಿದನು.

ಆ ಪ್ರಸಾದದ ನಟ್ಟನಡುವೆ ದೊಡ್ಡದೊಂದು ಪಡಸಾಲೆ ಇದ್ದಿತು. ಇದರಲ್ಲಿ ಅಲ್ಲಲ್ಲಿ ಆಳಾಳುದ್ದದ ದೀಪದ ಕಂಬಗಳು ಬಹು ಪ್ರಕಾಶವಾಗಿ ಉರಿಯುತ್ತಿದ್ದುವು. ಇದಿರಿಗೆ ಸರಿಯಾಗಿ ಪಳಕಿನಂತೆ ಥಳಥಳಿಸುತ್ತಿದ್ದ ಕಲ್ಲಿನ ಸೋಪಾನ ಮಾರ್ಗದಿಂದ ಶೋಭಾಯಮಾನವಾಗಿದ್ದ ಸುಮಾರು ಮೂರಡಿ ಎತ್ತರದ ಜಗಲಿಯೊಂದಿದ್ದಿತು. ಇದರ ಮೇಲೆ ವಿಚಿತ್ರತರವಾದ ರತ್ನಕಂಬಳಿಗಳಿಂದಲೂ ಮುಖಮಲ್ಲಿನ ಗೌಸಣಿಗೆಯ ದಿಂಬುಗಳಿಂದಲೂ ಪರಿಷ್ಕರಿಸಲ್ಪಟ್ಟಿದ್ದ ಗಾದಿಯೊಂದಿದ್ದಿತು. ಅದರ ಮೇಲೆ ದಿಂಬಿಗೆ ಒರಗಿಕೊಂಡು ಮೀಸೆಯನ್ನು ಹುರಿಮಾಡಿಕೊಳ್ಳುತ್ತಾ ಮನುಷ್ಯನೊಬ್ಬನು ಕುಳಿತಿದ್ದನು.

ಇವನ ವಯಸ್ಸು ಸುಮಾರು ಮೂವತ್ತೈದುವರ್ಷ; ಶರೀರವು ಸ್ಥೂಲವಾಗಿಯೂ ನಿಡುಪಾಗಿಯೂ ಇದ್ದಿತು; ಮೈ ಬಣ್ಣವು ಕೆಂಪು; ಗಡ್ಡಮೀಸೆಗಳಿಲ್ಲದೇ ಹೋಗಿದ್ದರೆ ಮುಖವು

ಬಹು ಸುಂದರವಾಗಿರುತ್ತಿದ್ದಿತು; ಈತನು ಆಗಿನ ಕಾಲದ ರಾಜ ಕುಮಾರರಂತೆ ತಲೆಗೆ ಮುಂಡಾಸನ್ನು ಕಟ್ಟಿಕೊಂಡಿದ್ದನು; ಮೈಗೆ ಕೆಂಪು ನಿಲುವಂಗಿಯನ್ನು ಹಾಕಿಕೊಂಡಿದ್ದನು; ನಡುಕಟ್ಟಿಗೆ ನಿಡುವಾದ ಕತ್ತಿಯನ್ನು ಕಟ್ಟಿಕೊಂಡಿದ್ದನು.

ಆ ಕಟ್ಟೆಯ ಕೆಳಗಡೆ ಹನ್ನೆರಡು ಜನಕಾಲಾಳುಗಳು ಆಯುಧ ಪಾಣಿಗಳಾಗಿ ಅಪ್ಪಣೆಯನ್ನು ನಿರೀಕ್ಷಿಸಿಕೊಂಡು ನಿಂತಿದ್ದರು. ಆ ಸಮಾಜವನ್ನು ನೋಡಿದ ಕೂಡಲೆ ಎಂತಹ ಮಡೆನಾಯುದರೂ, ಆ ಗಾದಿಯ ಮೇಲೆ ಕೂತಿದ್ದ ಮಹಾವ್ಯಕ್ತಿಯೇ ಅಲ್ಲಿದ್ದ ಜನಗಳ ಗೊಡೆಯನೆಂದು ದೃಢವಾಗಿ ಹೇಳುತ್ತಿದ್ದನು.

ಬೈರಾಗಿಯು, ಆ ಪ್ರಮುಖನಿಗೆ ಅಭಿಮುಖವಾಗಿ ಹೋಗಿ ನಿಂತನು. ಆತನು ಇವನನ್ನು ನೋಡಿದ ಕೂಡಲೆ ಹಸನ್ಮುಖಿ ಯಾಗಿ "ಏನು ಗುರುಗಳೇ, ಚೆನ್ನಾಗಿದ್ದೀರಾ? ಯಾವ ಸಮಾ ಚಾರವನ್ನು ತಂದಿರುವಿರಿ? ಜಾಗ್ರತೆಯಾಗಿ ಅಪ್ಪಣೆಯಾಗಲಿ" ಎಂದು ದೊಡ್ಡವರು ಕೆಲವು ವೇಳೆ ಚಿಕ್ಕವರನ್ನು ಪ್ರೀತಿಯಿಂದ ಲೂ ಸಲಿಗೆಯಿಂದಲೂ ಬಹುವಚನದಲ್ಲಿ ಮಾತನಾಡಿಸುವ ರೀತಿಯ ಧ್ವನಿಯಿಂದ ಕೇಳಿದನು.

ಬೈರಾಗಿ:—ಒಡೆಯನಿಗೆ ತಿಳಿಯದ ವರ್ತಮಾನವಿರುವುದೆ?

ಪ್ರಮುಖ:—ಓಹೋ! ನಿನ್ನ ಮುಖವನ್ನು ನೋಡಿದರೆ ನೀನೀಗ ಆ ರವಿವರ್ಮನಿಗೆ ಸರಿಯಾದ ದಾಟಿಯನ್ನು ಹೇಳಿ ಬಂದಿ ರುವಹಾಗೆ ಕಾಣುತ್ತದೆ.

ಬೈರಾಗಿ—ಅಹುದು.

ಪ್ರಮುಖ—ಎದ್ದು ಕುಳಿತು "ಎಲೈ, ನೀನು ಮೊನ್ನೆ ಬಂದಿ ದ್ದಾಗ ನಮ್ಮೊಡನೆ ಹೇಳಿದ ಸಮಾಚಾರವೆಲ್ಲಾ ಯಥಾರ್ಥವಾದು ದೆಂಬ ವಿಷಯದಲ್ಲಿ ನಿನಗೆ ಚೆನ್ನಾಗಿ ನಂಬುಗೆಯುಂಟೋ?

ಬೈರಾಗಿ. ಆ ವಿಷಯದಲ್ಲಿ ಸಂಶಯವೇ ಇಲ್ಲ.

ಪ್ರಮುಖ—ಎಲೈ, ನೀನು ಹೇಳಿದ ಸಮಾಚಾರವನ್ನು ಯೋಚಿಸಿನೋಡಿದರೆ ನನಗೊಂದು ಸೋಜಿಗವಾದ ಕಟ್ಟು ಕಥೆಯಂತೆ ಕಾಣುತ್ತದೆ. ಏತಕ್ಕೆ ಎನ್ನುವಿಯೋ, ನಾನೀ ಭರತಖಂಡವನ್ನು ಕರತಳಾಮಲಕದಂತೆ ನೋಡಿರುವೆನು; ಆದರೂ ನೀನು ಹೇಳುವ ಆ ಪದ್ಮದ್ವೀಪವೆಂಬುದನ್ನು ನಾನು ಇದುವರೆಗೂ ಕೇಳಿರಲಿಲ್ಲ.

ಬೈರಾಗಿ—ಒಡೆಯನೇ! ನೀನಾ ವಿಷಯದಲ್ಲಿ ರವೆಯಷ್ಟು ಸಂದೇಹ ಪಡಬೇಕಾದುದಿಲ್ಲ. ಪೂರ್ವವರ್ಣಿತವಾದ ಆ ಪದ್ಮದ್ವೀಪವೆಂಬುದೊಂದು ಈಗಿನ ಕಾಲದಲ್ಲಿ ಮಹಾ ಯೋಗಿಗಳ ಯೋಗಪ್ರಭಾವಕ್ಕೆ ನಿದರ್ಶನವಾಗಿದೆ.

ಪ್ರಮುಖ – ಒರಗಿದ್ದವನು ಎದ್ದು ಕುಳಿತು ಎರಡು ಕೈಗಳಿಂದಲೂ ಮೀಶೆಯನ್ನು ಹುರಿಮಾಡಿಕೊಳ್ಳುತ್ತ ಗಂಭೀರವಾಗಿ "ಎಲೈ ಏನಾದರೂ ಆಗಲಿ, ನಾನೀಕಾರ್ಯದಲ್ಲಿ ಪ್ರವರ್ತಿಸುವೆನು. ಜೋಕೆ! ಈ ಕಾರ್ಯವು ಕೈಗೂಡುವವರೆಗೂ ನಾನು ಬಹುಜಾಗರೂಕತೆಯಿಂದ ಕೆಲಸಮಾಡುತ್ತಿರಬೇಕು. ನಿನ್ನ ಬುದ್ಧಿಪ್ರಭಾವವನ್ನು ಪ್ರಕಾಶಗೊಳಿಸಿ ಪ್ರಬಲನಾಗುವುದಕ್ಕೆ ಇದುವೇ ಸಮಯ.

ಬೈರಾಗಿ—ನಗುಮುಖನಾಗಿ, "ಅಪ್ಪಣೆಯಂತಾಗಲಿ."

ಪ್ರಮುಖ—ಬೈರಾಗಿಯ ಮುಖಭಾವವನ್ನು ನೋಡಿ ಮುಗುಳುನಗೆಯಿಂದ "ಹಾಗಾದರೆ, ಬೈರಾಗಿಯು ಇನ್ನು ತನ್ನ ಕೆಲಸಕ್ಕೆ ಹೊರಡಬಹುದು." ಎಂದು ತನ್ನ ಗಾದಿಯನ್ನು ಬಿಟ್ಟು ಕೆಳಗಿಳಿದು, ತನ್ನ ಅಪ್ಪಣೆಯಂತೆ ಹಿಂದಿರುಗಿ ಹೋಗು

2

ತ್ತಿದ್ದ ಬೈರಾಗಿಯು ಬೆನ್ನುತಟ್ಟಿ "ಮೊನ್ನೆ ನೀನು ಹೇಳಿದ ಮುಹೂರ್ತವೇ ಸರಿಯಾದುದಷ್ಟೆ. ಎಂದು ಕೇಳಿದನು.

ಅದಕ್ಕೆ ಬೈರಾಗಿಯು ತವಕದಿಂದ "ಅಹುದು! ಅಹುದು!!" ಎಂದು ಉತ್ತರವನ್ನು ಕೊಡುತ್ತಾ ಮುಂದರಿದು ಹೊರಟು ಹೋದನು.

## ಎರಡನೆಯ ಪ್ರಕರಣ.

---

### ದುಷ್ಟಸಂಹಾರ

ಪ್ರಾಯಶಃ ಪ್ರಯಾಣಿಕರಿಗೆ ಬೆಳಗಿನಜಾವವೇ ಪಯಣಕ್ಕೆ ಅನುಕೂಲವಾದ ಸಮಯ. ಆದರೆ, ದಾರಿಯಲ್ಲಿ ಕಳ್ಳರ ಕೋಟಲೆಯಾಗಲಿ ಕಾಡುಮೃಗಗಳ ಕಾಟವಾಗಲಿ ಇರುವುದಾದರೆ, ದಾರಿಗರು ಎಷ್ಟು ಪರಾಕ್ರಮಿಗಳಾಗಿದ್ದರೂ ರಾಜಮಾರ್ಗಗಳಲ್ಲಿ ಸುದಾ ಪೂರ್ತಿಯಾಗಿ ಬೆಳಕು ಹರಿಯುವವರೆಗೂ ಪ್ರಯಾಣ ಮಾಡುವುದಿಲ್ಲ. ರಾಜಪುತ್ರರ ಸ್ಥಾನದಿಂದ ಮಹೋದಯಕ್ಕೆ ಹೋಗುವ ದಾರಿಯು, ನಟ್ಟಡವಿಯಲ್ಲಿರುವುದರಿಂದ ಅಲ್ಲಿ ಕಾಡುಮೃಗಗಳ ಕಾಟವೇನೋ ಸ್ವಾಭಾವಿಕವಾದುದೇಸರಿ. ಆದರೆ, ಅದು ಆ ಪ್ರಾಂತದಲ್ಲಿ ತಿರಸ್ಕಾರವಾದ ಉಪಯನಕ್ಕೆ ಸುಪ್ರಸಿದ್ಧವಾಗಿದ್ದಿತು.

ಈ ಮಾರ್ಗದಲ್ಲಿ, ಹಿಂದಿನ ಪ್ರಕರಣದಲ್ಲಿ ಆಖ್ಯಾತವಾದ ಸಂಗತಿಯು ನಡೆದ ಮಾರನೆಯ ದಿನವೇ, ಬೆಳಗಿನ ಜಾವದಲ್ಲಿ, ಇಪ್ಪತ್ತೈದು ಮಂದಿ ಸವಾರರು ಸಕಲಸನ್ನಾಹದೊಡನೆ ಸಾಲುಮರಗಳ ಕೆಳಗೆ ಒಬ್ಬರಹಿಂದೊಬ್ಬರು ಕುದುರೆಗಳನ್ನು ನಿದಾನವಾಗಿ ಬಿಟ್ಟುಕೊಂಡು ಹೋಗುತ್ತಿದ್ದರು.

ಇವರೆಲ್ಲರೂ ಬಹುದೂರದಿಂದ ಅತಿವೇಗವಾಗಿ ಸವಾರಿಮಾಡಿಕೊಂಡು ಬಂದವರಂತೆ ಕಾಣುತ್ತಿದ್ದರು. ಏತಕೆಂದರೆ, ಇವರ ಕುದುರೆಗಳೆಲ್ಲಾ ಬೆವತು ನೀರು ನೀರಾಗಿ ಬಾಯಿಯಿಂದ ಬುರುಗು ಸುರಿಸುತ್ತಿದ್ದುವು; ಇವುಗಳ ಕಾಲುಗಳ ಮೇಲೆಲ್ಲಾ ಧೂಳುತುಂಬಿಕೊಂಡಿದ್ದಿತು.

ಇವರಲ್ಲಿ ಮುಂದಣ ಕುದುರೆಯ ಸವಾರನು ಆಕಾರದಿಂದಲೂ ವೇಷದಿಂದಲೂ ಉಳಿದವರಿಗೆಲ್ಲಾ ಯಜಮಾನನಂತೆ ಕಾಣುತ್ತಿದ್ದನು. ಇವನು ಶೋಧಿಸುವ ದೃಷ್ಟಿಯಿಂದ ಹೊತ್ತಿನ ಕಡೆಗೂ ಅತ್ತಿತ್ತಲೂ ನೋಡುತ್ತಲೇ ಇದ್ದನು. ಇದಿರಿಗೆ ಸ್ವಲ್ಪದೂರದಲ್ಲಿ ಎರಡು ದಾರಿಗಳು ಸೇರುವ ಸ್ಥಳವು ಕಾಣಿಸಿತು. ಅವನು ಅದನ್ನು ನೋಡಿ ತಟ್ಟನೆ ಕುದುರೆಯನ್ನು ಹಿಂದಕ್ಕೆ ತಿರುಗಿಸಿ ತನ್ನನ್ನು ಹಿಂಬಾಲಿಸಿ ಬರುತ್ತಿದ್ದ ಸವಾರರನ್ನು ನೋಡಿ "ಇದುವೇ ಸ್ಥಳ, ಜೋಕೆ! ಈದಿನ ನೀವೆಲ್ಲರೂ ಆಯುಧಗಳನ್ನು ಉಪಯೋಗಿಸುವುದರಲ್ಲಿ ಒಡೆಯನ ಶಾಸನವನ್ನು ನೆನಪಿನಲ್ಲಿಟ್ಟುಕೊಂಡು ಬಹು ಜಾಗರೂಕತೆಯಿಂದ ಕಾರ್ಯವನ್ನು ಸಾಧಿಸಬೇಕು." ಎಂದು ಹೊತ್ತಿನಕಡೆಗೆ ನೋಡಿ "ಅರುಣೋದಯ ಸಮಯವಾಯಿತು. ಇನ್ನು ಮೇಲೆ ನಾವೀ ರಾಜಮಾರ್ಗದಲ್ಲಿ ಸುಳಿದಾಡುವುದು ಸರಿಯಲ್ಲ. ಆದುದರಿಂದ ನಾವೆಲ್ಲರೂ ಜಾಗ್ರತೆಯಾಗಿ ಇಲ್ಲೆಲ್ಲಾದರೂ ಮರೆಯಲ್ಲಿ ಸುಸಜ್ಜಿತರಾಗಿ ಸಮಯವನ್ನು ನಿರೀಕ್ಷಿಸುತ್ತಿರೋಣ." ಎಂದು ಎಡಗೈಯಿಂದ ತನ್ನ ಕುದುರೆಯ ಕಡಿವಾಣವನ್ನು ಹಿಡಿದುಕೊಂಡು ಬಲಗೈಯಿಂದ ತನ್ನ ಸೊಂಟದಲ್ಲಿ ಜೋಲಾಡುತ್ತಿದ್ದ ಕತ್ತಿಯನ್ನು ಸೆಳೆದೆತ್ತಿಕೊಂಡು ಆ ಮಾರ್ಗದ ಪಾರ್ಶ್ವದಲ್ಲಿ ಕಾಣುತ್ತಿದ್ದ ಮೆಳೆಯ

ಕಡೆಗೆ ತನ್ನ ಕುದುರೆಯನ್ನು ಬಿಟ್ಟನು. ಕೂಡಲೇ ಉಳಿದ ಸವಾರರೆಲ್ಲರೂ ಅದೇ ರೀತಿಯಾಗಿ ಅಲ್ಲಲ್ಲಿ ಮರೆಯಾದರು.

ಅವರೆಲ್ಲರೂ ಅಡಗಿಕೊಳ್ಳುವ ಸಡಗರದಲ್ಲಿರುವಾಗಲೇ ರಾಜಪುತ್ರಸ್ಥಾನದ ಕಡೆಯಿಂದ ಮಾರ್ಗದಲ್ಲಿ ಬರುತ್ತಿದ್ದ ಕುದುರೆಗಳ ಖುರಪುಟದ ಶಬ್ದವು ಕೇಳಬಂದಿತು. ಅರದೆಂದು ಅತ್ತಿತ್ತ ನೋಡುವಷ್ಟರೊಳಗಾಗಿ ಮೂರುಮಂದಿ ಸವಾರರು ದೃಷ್ಟಿಗೋಚರರಾದರು.

ಇವರೆಲ್ಲರೂ ಬಹು ತೇಜಸ್ವಿಗಳಾದ ರಾಜಪುತ್ರರಂತೆ ಕಾಣುತ್ತಿದ್ದರು. ನೋಡುತ್ತಿದ್ದ ಹಾಗೆಯೇ ಅವರು ಸಮೀಪಕ್ಕೆ ಬಂದರು. ಅವರಲ್ಲೊಬ್ಬನು ಮುಂದಾಗಿ ಬರುತ್ತಿದ್ದನು. ಈತನ ಎರಡು ಪಕ್ಕಗಳಲ್ಲಿಯೂ ಇಬ್ಬರು ಸವಾರರು, ಮುಂದರಿದು ಹೋಗುತ್ತಿದ್ದ ತಮ್ಮ ಕುದುರೆಗಳ ಕಡಿವಾಣವನ್ನು ಬಲವಾಗಿ ಎರಡು ಕೈಗಳಿಂದಲೂ ಎಳೆಯುತ್ತಾ ಪ್ರಯತ್ನಪೂರ್ವಕವಾಗಿ ಕೊಂಚ ಹಿಂದಾಗಿಯೇ ಬರುತ್ತಿದ್ದರು. ಮುಂದೆ ಬರುತ್ತಿದ್ದವನು ಆ ವೇಳೆಗೆ ಉದಯಾದ್ರಿಯ ಶಿಖರದಮೇಲೆ ಕನಕಕಲಶದಂತೆ ಕಣ್ಗೊಳಿಸುತ್ತಿದ್ದ ದಿನಮಣಿಯ ಮಂಡಲವನ್ನು ತನ್ನ ಜತೆಗಾರರಿಗೆ ಬೆರಳಿನಿಂದ ತೋರಿ ಮಂದಹಾಸದಿಂದ ಏನನ್ನೊ ಹೇಳುತ್ತಿದ್ದನು.

ಇವರನ್ನು ನೋಡಿದ ಕೂಡಲೆ ಅಲ್ಲಿ ಪೊದೆಗಳಲ್ಲಿ ಹೊಂಚು ಕಾಯುತ್ತಿದ್ದ ಆ ರಾವುತರ ಅಧಿಪತಿಯು ಬಾಯಿಂದ ಒಂದು ವಿಧವಾದ ಧ್ವನಿಯನ್ನು ಮಾಡಿದನು. ಉತ್ತರ ಕ್ಷಣದಲ್ಲಿಯೇ ಅವರೆಲ್ಲರೂ ಏಕಕಾಲದಲ್ಲಿ ಹೊರಹೊರಟು ಆ ರಾಜಪುತ್ರರನ್ನು ಮುತ್ತಿ ಅವರ ಕುದುರೆಗಳ ಕಾಲುಗಳನ್ನು ಕತ್ತರಿಸಿ ಕೆಡಹಿದರು. ಆ ಕುದುರೆಗಳೊಂದಿಗೆ ಕೆಳಕ್ಕೆ ಬಿದ್ದ ರಾಜಪುತ್ರರು

ಮೇಲಕ್ಕೆ ಎದ್ದು ಚೇತರಿಸಿಕೊಳ್ಳುವಷ್ಟರೊಳಗಾಗಿ, ಒಬ್ಬೊಬ್ಬನಿಗೆ ಎಂಟು ಹತ್ತು ಮಂದಿ ಮೇಲಕ್ಕೆ ಏಳದಂತೆ, ಮೇಲೆ ಅಮುಕಿಕೊಂಡು ಅವರ ಸೊಂಟದಲ್ಲಿದ್ದ ಆಯುಧಗಳನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನಪಟ್ಟರು

ಅಷ್ಟರಲ್ಲಿ ಆ ಮುಂದಿದ್ದ ರಾಜಪುತ್ರವೀರನು ಮಿಂಚಿನ ವೇಗದಿಂದ ಚೇತರಿಸಿಕೊಂಡೆದ್ದು ತನ್ನನ್ನು ಸುತ್ತಿಕೊಂಡಿದ್ದವರನ್ನು ಒದ್ದೊದ್ದು ಆಚೆಗೆ ಒದರಿ ತನ್ನ ಕತ್ತಿಯನ್ನು ಕೈಗೆ ತೆಗೆದುಕೊಂಡು ನಿರ್ದಯನಾಗಿ ಅವರನ್ನು ಕತ್ತರಿಸಲಾರಂಭಿಸಿದನು. ಒಂದು ನಿಮಿಷಮಾತ್ರದಲ್ಲಿ ಇಪ್ಪತ್ತುಮೂರು ಜನರು ಆ ವೀರನ ಕತ್ತಿಗೆ ತುತ್ತಾದರು

ಕತ್ತರಿಸಲ್ಪಟ್ಟವರ ಮುಂಡಗಳು ಗಗನಮಂಡಲಕ್ಕೆ ಚಂಡಿನಂತೆ ಹಾರಿ ನೆಲಕ್ಕೆ ಬಿದ್ದು ಕುಣಿದಾಡಿದುವು; ಮುಂಡಗಳು, ಕುತ್ತಿಗೆಯಿಂದ ಉಕ್ಕಿ ಉಕ್ಕಿ ಸುರಿಯುತ್ತಿದ್ದ ರಕ್ತಪ್ರವಾಹದಿಂದ ನೆನದು ಕೆಂಪಾಗಿ ಹಿಂದಿರುಗಿ ದಿಕ್ಕು ದಿಕ್ಕಿಗೆ ಓಡಿ, ಮುಗ್ಗರಿಸಿ, ತಡವರಿಸಿ, ನೆಲಕ್ಕುರುಳಿ ಹೊರಳಾಡಿದುವು.

ದೇವರು ದಯಾಸಮುದ್ರನಾಗಿದ್ದರೂ ದುಷ್ಟಜನರ ವಿಷಯದಲ್ಲಿ ಎಷ್ಟು ನಿಷ್ಕರುಣಿಯಾಗಿರುವನು ! ಆಹಾ ! ಆ ರಾವುತರ ದುರಭಿಸಂಧಿಗೆ ಎಂತಹ ತೀವ್ರವಾದ ಶಿಕ್ಷೆಯನ್ನು ವಿಧಿಸಿದನು !

ಆಗ ಆ ವೀರನು ಅಲ್ಲಿ ಸತ್ತುಬಿದ್ದಿದ್ದ ತನ್ನ ಕುದುರೆಯನ್ನು ಸುತ್ತಿ ಸುತ್ತಿ ನೋಡಿ ಮುಟ್ಟಿ,ತಟ್ಟಿ, ಕೊಂಚಹೊತ್ತು ಮರುಗುತ್ತಿದ್ದು ಬಳಿಕ ತನ್ನ ಜೊತೆಗಾರರನ್ನು ನೋಡಿ ಮಂದಸ್ಮಿತದಿಂದ " ಇನ್ನು ತಡವೇಕೆ ? ಇದೋ ನೋಡಿ ! ನಮ್ಮ ಮೂರು ಕುದುರೆಗಳಿಗೆ ಬದುಲಾಗಿ ದೇವರು ಇಪ್ಪತ್ತು ಮೂರುಕುದುರೆಗಳನ್ನು ಕೊಟ್ಟಿರುವನು. ಇವುಗಳಲ್ಲಿ ನಮಗೆ ಬೇಕಾದುದನ್ನು ಆರಿಸಿ

ಕೊಂಡು ಮುಂದಕ್ಕೆ ಹೊರಡೋಣ'' ಎಂದು ಅಲ್ಲಿದ್ದ ಕುದುರೆಗ ಳಲ್ಲಿ ತಾನೊಂದು ಕುದುರೆಯನ್ನು ಹಿಡಿದುಕೊಂಡು ಅದರಮೇಲೆ ಕೂತು ಮುಂದಕ್ಕೆ ಹೊರಟನು. ಹಿಂದೆಯೇ ಅವನ ಜೊತೆಗಾ ರರೀರ್ವರೂ ತನು ತನುಗೆ ಬೇಕಾದ ಕುದುರೆಗಳನ್ನು ಏರಿಕೊಂಡು ಮೊದಲಿಸಂತೆಯೇ ಅವನನ್ನು ಹಿಂಬಾಲಿಸಿದರು

ಆಗ, ಆ ವೀರನು ವಿನೋದ ಕ್ರೀಡೆಯಲ್ಲಿ ಗೆದ್ದವನ ಮುಖ ಭಾವವುಳ್ಳವನಾಗಿ ಸುಂದಹಾಸದಿಂದ ತನ್ನ ಜೊತೆಗಾರರನ್ನು ಕು ರಿತು "ಎಲ್ಲೈ ಆ ಒಡಯೋಧರಾರಿರಬಹುದು ; ನೀವು ಊಹಿಸ ಬಲ್ಲಿರಾ ?'' ಎಂದು ಕೇಳಿದನು.

ಮೊದಲನೆಯು (ಬಲಗಡೆಯುಳ್ಳದ್ದು) ಸವಾರ:—ಅವರಿಗೆ ಯೋಧರೆಂಬ ಹೆಸರು ಸರ್ವಥಾ ಸಲ್ಲುವುದಿಲ್ಲ ; ಅವರಾರೋ ಹುಟ್ಟುಗಳ್ಳರಾಗಿರಬೇಕು

ವೀರ:--ಅದು ಹೇಗೆ ?

ಮೊದಲನೆಯ ಸವಾರ:--ಅವರು ಹುಟ್ಟುಗಳ್ಳರಲ್ಲದಿದ್ದಲ್ಲಿ ಅಜಾಗರೂಕತೆಯಿಂದ ಪಯಣಮಾಡುತ್ತಿದ್ದ ಮಾರ್ಗಸ್ಥರಮೇಲೆ ಆ ರೀತಿಯಾಗಿ ತೋಳಗಳಂತೆ ಎಂದಿಗೂ ಬೀಳುತ್ತಿದ್ದರೆ ? ಅವರ ಮುಂಡಗಳು ರಣರಂಗದಿಂದ ಹಿಂದಿರುಗಿ ದಿಕ್ಕುಗಳೋಡುತ್ತಿ ದ್ದುವೆ ? ಕುಲೀನರಾದ ಯೋಧರ ರಕ್ತವು ಅವರ ಧಮನಗಳಲ್ಲಿ ಓಡುತ್ತಿದ್ದರೆ ಅವರು, ಯೋಧಪ್ರಪಂಚಕ್ಕೆ ಹಾಸ್ಯಾಸ್ಪದವಾದ ಇಂತಹ ನೀಚಕೃತ್ಯವನ್ನು ಎಂದಿಗೂ ಮಾಡುತ್ತಿರಲಿಲ್ಲ.

ವೀರ:--ಕಿಲಕಿಲನೆ ನಕ್ಕು "ಅಹುದು! ನೀನು ಸರಿಯಾಗಿ ಊಹಿಸಿದೆ'' ಎಂದು ಕೊಂಚ ಯೋಚಿಸಿ "ಆ ದುರಾತ್ಮರು ನಮ್ಮನ್ನು ಸುಲಿಗೆಮಾಡುವುದಕ್ಕೂ ಬಂದಿದ್ದಂತೆ ತೋರುವುದಿಲ್ಲ ; ದವರ ಉದ್ದೇಶವೇನಿದ್ದೀತೋ ?

ಮೊದಲನೆಯ ಸವಾರ:—ಸುಲಿಗೆಮಾಡುವುದಕ್ಕೆ ಬಂದಿದ್ದವರಾಗಿದ್ದರೆ, ನಾವು ನೆಲಕ್ಕೆ ಬಿದ್ದಕೂಡಲೆ ಅವರು ನಮ್ಮಮೇಲೆ ಕತ್ತಿಗಳನ್ನು ಎತ್ತದೇ ಎಲ್ಲರೂ ಏಕರೀತಿಯಾಗಿ ತಮ್ಮ ತಮ್ಮ ಕತ್ತಿಗಳನ್ನು ಒರೆಯೊಳಗಿರಿಸಿ ಬರಿಗೈಗಳಿಂದ ನಮ್ಮಮೇಲೆ ಬಿದ್ದು ನಮ್ಮ ಆಯುಧಗಳನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನಪಡುತ್ತಿರಲಿಲ್ಲ. ಇವುಗಳನ್ನೆಲ್ಲಾ ಪರ್ಯಾಲೋಚಿಸಿದರೆ, ಅವರಿಗೆ ನಮ್ಮನ್ನು ಕೈಸೆರೆ ಹಿಡಿದುಕೊಳ್ಳಬೇಕೆಂಬ ಉದ್ದೇಶವಿದ್ದಂತೆ ತೋರುತ್ತದೆ.

ಎರಡನೆಯ ಸವಾರ:—ದಾರಿಗರನ್ನು ಕೈಸೆರೆ ಹಿಡಿದುಕೊಳ್ಳುವುದರಿಂದ ಆ ಕಳ್ಳರಿಗೆ ಆಗುವ ಫಲವೇನು ?

ಮೊದಲನೆಯ ಸವಾರ:—ಸಾಧಾರಣವಾದ ಕಳ್ಳರಿಗೆ ಜನರನ್ನು ಕೈಸೆರೆ ಹಿಡಿಯುವುದರಿಂದ ಫಲವೇನೂ ಇದ್ದಹಾಗೆ ತೋರುವುದಿಲ್ಲ. ಆದರೆ, ಅವರನ್ನು ಸಾಧಾರಣರಾದ ಕಳ್ಳರೆಂದು ತಿಳಿಯಲಾಗದು; ಸಾಧಾರಣ ಕಳ್ಳರಿಗೆ ಅಂತಹ ಸವಾರರ ಸೈನ್ಯವೆಲ್ಲಿಯದು?

ವೀರ:—ಹಾಗಾದರೆ, ಅವರಾರಾಗಿರಬಹುದು?

ಮೊದಲನೆಯ ಸವಾರ:—ಅವರೆಲ್ಲರೂ ಆ ಪ್ರಸಿದ್ಧನಾದ ಭೈರವಾನಂದನೆಂಬ ಪಾಳೆಯಗಾರನ ಕಡೆಯವರಾಗಿರಬಹುದೆಂದು ನನಗೆ ತೋರುತ್ತದೆ.

ಎರಡನೆಯ ಸವಾರ:—ಆ ಭೈರವಾನಂದನ ಭಯಂಕರವಾದ ಕಥೆಗಳನ್ನು ನಾವು ಪ್ರತಿದಿನವೂ ಕೇಳುತ್ತಿರುವೆವು. ಆದರೆ ಅವುಗಳೆಲ್ಲಾ ಯಥಾರ್ಥವಾದವುಗಳೆಂದು ಯಾರೂ ನಂಬುವುದಿಲ್ಲ.

ಮೊದಲನೆಯ ಸವಾರ:—ಅವುಗಳೆಲ್ಲವೂ ಯಥಾರ್ಥವೆಂಬುದಕ್ಕೆ ನಮ್ಮ ಈದಿನದ ಅನುಭವವೇ ಸಾಲದೆ?

ವೀರ: —ಈ ದಾರಿಯಲ್ಲಿ ಅಂತಹ ಚೋರರ ಭಯವಾವು ದೂ ಇಲ್ಲವೆಂದು ನನಗೆ ಆಪ್ತರು ಹೇಳಿದ್ದರು. ಆದುದರಿಂದಲೇ ನಾನೀದಿನ ಸೇನಾಸಮೇತನಾಗಿ ಹೊರಡಲಿಲ್ಲ.

ಮೊದಲನೆಯ ಸವಾರ: —ಓಹೋ ! ಹಾಗೋ ! ನಿನಗೆ ಈ ಮಾರ್ಗವು ನಿರುಪದ್ರವವಾಗಿದೆ ಎಂದು ಹೇಳಿದ ಆಪ್ತನಾರು?

ವೀರ: —ನನಗೆ ಕಾಗದವನ್ನು ತಂದುಕೊಟ್ಟ ಆ ತಪಸ್ವಿಗಳೇ ಹೇಳಿದರು. ಅವರಿಗಿಂತಲೂ ಆಪ್ತರಾರಿರುವರು ?

ಮೊದಲನೆಯ ಸವಾರ: —ಓಹೋ | ಆ ಮಹಾನುಭಾವರೇ ಹೇಳಿದ್ದ ಮೇಲೆ ಪ್ರಕೃತ, ನಮಗೆ ಸಂಭವಿಸಿದ್ದ ವಿಪತ್ತಿಗೆ ನಮ್ಮ ದುರ್ವಿಧಿಯೇ ಕಾರಣವೆಂದು ಭಾವಿಸಬೇಕಾಗಿದೆ.

ವೀರ: —ಅದು ವಾಸ್ತವ. ಒಳ್ಳೆಯದು, ಆಶ್ಚರ್ಯವಾನಂದನಿಗೆ ತಾನೆ ಪ್ರಯಾಣಿಕರನ್ನು ಶರೆಹಿಡಿದುಕೊಳ್ಳುವುದರಿಂದ ಪ್ರಯೋಜನವೇನಿರಬಹುದು.

ಮೊದಲನೆಯ ಸವಾರ;—ಪ್ರಯಾಣಿಕರನ್ನು ಶರೆಹಿಡಿದುಕೊಳ್ಳುವುದರಿಂದ ಅವನಿಗೂ ಏನೂ ಪ್ರಯೋಜನವಿರಲಾರದು.

ವೀರ:—ಹಾಗಾದರೆ ಅವರು ನಮ್ಮನ್ನೇಕೆ ಶರೆಹಿಡಿಯುವುದಕ್ಕೆ ಪ್ರಯತ್ನಪಟ್ಟರು ?

ಮೊದಲನೆಯ ಸವಾರ: —ಆ ವಿಷಯವನ್ನು ನಾವೀಗಾಗಲೇ ಊಹಿಸುವದಕ್ಕಾಗುವುದಿಲ್ಲ.

ಎರಡನೆಯ ಸವಾರ:—ಹಾಗಾದ ಮೇಲೆ, ನಮಗೆ ಆ ಕಳ್ಳರಬಾಧೆಯು ಪೂರ್ತಿಯಾಗಿ ನಿವೃತ್ತಿಯಾಗಲಿಲ್ಲವೆಂದು ನೀನು ಅಭಿಪ್ರಾಯಪಡುವಹಾಗೆ ಕಾಣುತ್ತದೆ. ಅಲ್ಲವೆ ?

ಮೊದಲನೆಯ ಸವಾರ:—ಅಹುದು.

ವೀರ: —"ನಮ್ಮ ಮೇಲೆ ಬಿದ್ದ ಆ ಸವಾರರು, ಆ ಪ್ರಸಿದ್ಧನಾದ ಪಾಳೆಯಗಾರನ ಕಡೆಯವರಾಗಿದ್ದರೆ, ನಾವು ಅವರನ್ನು ಕೊಂದುದು ಹೆಜ್ಜೇನಿನ ಗೂಡಿಗೆ ಕಲ್ಲು ಹೊಡೆದಂತೆ ಆಗಿದೆ. ಅದು ಹೇಗಾದರೂ ಇರಲಿ, ಆ ಕಳ್ಳ ಸವಾರರು ಸಂಹೃತರಾದರೆಂದು ನಾವು ಉದಾಸೀನರಾಗಿರಕೂಡದು" ಎಂದು ತನ್ನ ಕುದುರೆಯನ್ನು ಹಿಮ್ಮಡಿ ಮುಳ್ಳುಗಳಿಂದ ಚುಚ್ಚಿ ವೇಗವಾಗಿ ಮುಂದಕ್ಕೆ ಬಿಟ್ಟನು.

ಆ ವೇಳೆಗೆ ಅರವಿಂದ ಬಾಂಧವನು ಔತ್ಸುಕ್ಯದಿಂದ ಗಗನಮಂಡಲಕ್ಕೆ ಏರಿ ಆ ಜಯಶಾಲಿಯಾದ ನಮ್ಮ ಮಾರ್ಗಸ್ಥನ ಮುಖದ ಮೇಲೆ ಸಾಲಿಡುತ್ತಿದ್ದ ಶ್ರಮಾಂಬುಕಣಗಳನ್ನು ತನ್ನ ಕರಗಳಿಂದ ಒರೆಸುತ್ತಿದ್ದನು ಆ ಯುವಕನನ್ನು ಕಣ್ಣಾರ ನೋಡುವುದಕ್ಕೆ ಇದುವೇ ಸಮಯ.

ಅವನು, ಸುಮಾರು ಇಪ್ಪತ್ತು ವರ್ಷ ವಯಸ್ಸುಳ್ಳವನಾಗಿದ್ದನು ; ಆಕಾರದಲ್ಲಿ ಆಜಾನುಬಾಹುವಾಗಿಯೂ ದೃಢಾಂಗನಾಗಿಯೂ ಇದ್ದನು. ಪ್ರಫುಲ್ಲವಾದ ಅವನ ಮುಖವು ರಾಕಾಚಂದ್ರ ಬಿಂಬದಂತೆ ಮನೋಜ್ಞವಾಗಿದ್ದಿತು; ಕಣ್ಣುಗಳು ಕಮಲದಳಗಳಂತೆ ಕರ್ಣಾಂತ ವಿಶ್ರಾಂತವಾಗಿದ್ದುವು. ವಿಶಾಲವಾದ ಉನ್ನತವಾದ ಅವನ ಲಲಾಟದಲ್ಲಿ ಜಯಲಕ್ಷ್ಮಿಯು ಸುವ್ಯಕ್ತಳಾಗಿದ್ದಳು ; ಅವನ ಮಧುರವಾದ ವಾಣಿಯು ಅವನ ವಿದ್ಯೆಯನ್ನೂ ವಿನಯವನ್ನೂ ಗಾಂಭೀರ್ಯವನ್ನೂ ಔದಾರ್ಯವನ್ನೂ ಮಹತ್ವವನ್ನೂ ವ್ಯಕ್ತಪಡಿಸುತ್ತಿದ್ದಿತು.

---

# ಮೂರನೆಯ ಪ್ರಕರಣ

## ದೈವಸಹಾಯ.

ನಡು ಬೇಸಿಗೆ ; ಎಳೆ ಬಿಸಿಲಿನ ಬೇಗೆಯನ್ನು ಕೂಡಾ ಸೈರಿಸುವುದಕ್ಕಾಗದು ; ನೋಡುತ್ತಿದ್ದ ಹಾಗೆಯೇ ಬಿಸಿಲು ಬಲು ತೀವ್ರವಾಗಿ ಏರುತ್ತಿದ್ದಿತು; ಮೃಗಗಳೂ ಪಕ್ಷಿಗಳೂ ನಳಲನ್ನೂ ನೀರನ್ನೂ ಹುಡುಕಿಕೊಂಡು ಅಂಡಲೆಯುತ್ತಿದ್ದುವು ; ನೆಲವು ಕಾದು ಕಾದಕಾವಲಿಯಂತಾಗಿದ್ದಿತು ; ಆ ವೇಳೆಯಲ್ಲಿ ಕಾಲು ನಡೆಯಾಗಿ ಪಯಣಮಾಡುವ ದಾರಿಗರ ಪಾಡು ಬಣ್ಣಿಸಲಸದಳವಾದುದು.

ನಮ್ಮ ಸವಾರರ ಕುದುರೆಗಳು ಓಡಿಓಡಿ ದಣಿದು ಕಾಲು ಸೋತು ಬೆವರು ಸುರಿಸುತ್ತಾ ಬೆಂಡಾಗಿ ತಲ್ಲಣಿಸುತ್ತಿದ್ದುವು.

ಸವಾರರು ಕಷ್ಟ ಸಹಿಷ್ಣುಗಳಾಗಿಯೂ ಪರಾಕ್ರಮಿಗಳಾಗಿಯೂ ಇದ್ದಾಗ್ಯೂ ಆ ಬಿಸಿಲಿನ ತಾಪವನ್ನು ತಡೆಯಲಾರದೇ ಬಾಯಾರಿ ಬಳಲಿದರು ; ಎಲ್ಲಾದರೂ ನೀರು ನೆಳಲು ಸಿಕ್ಕಿದರೆ ದಣಿವಾರಿಸಿಕೊಳ್ಳುವ ಎಂದು ಅತ್ತಿತ್ತ ನೋಡುತ್ತಿದ್ದರು. ಆ ದಾರಿಯಲ್ಲಿ ಎಲ್ಲಿಯೂ ಕೆರೆ ಕುಂಟೆಗಳು ಹಳ್ಳಿಪಳ್ಳಿಗಳು ಮನೆ ಮಠಗಳು ಯಾವುವೂ ಇರಲಿಲ್ಲ ; ಹಾಗೂ ಹೀಗೂ ಮೂರು ಜಾವದ ಹೊತ್ತಿಗೆ ಮೂರು ದಾರಿಗಳು ಸೇರುವೆಡೆಗೆ ಹೋಗಿ ಸೇರಿದರು. ಆ ದಾರಿಗಳಲ್ಲಿ ಮಹೋದಯಕ್ಕೆ ಹೋಗುವಮಾರ್ಗವಾವುದೋ ಅವರಿಗೆ ಗೊತ್ತಾಗಲಿಲ್ಲ. ಯಾರನ್ನಾದರೂ ವಿಚಾರಿಸುವ ಎಂದರೆ, ಆ ದಾರಿಯಲ್ಲಿ ಯಾರೂ ಅಡ್ಡಸುಳಿಯಲಿಲ್ಲ.

'ದೈವಯೋಗದಿಂದ ಯಾರಾದರೂ ದಾರಿಗರು ಕಣ್ಣಿಗೆ ಬಿದ್ದರೆ ಅವರನ್ನು ವಿಚಾರಿಸುವ' ಎಂದುಕೊಂಡು ಆ ಮೂವರೂ ಅಲ್ಲಿಯೇ ನಾಲ್ಕು ಕಡೆಯೂ ನೋಡುತ್ತ ನಿಂತರು. ಆಗ ಎಲ್ಲಿಂದಲೋ "ಗಣ, ಗಣ" ಎಂಬ ಶಬ್ದವು ಕೇಳಬಂದಿತು. ಏನದೆಂದು ಅತ್ತಿತ್ತ ನೋಡುವಷ್ಟರಲ್ಲಿಯೇ ಇದಿರಿಗೆ ಬಹು ದೂರದಲ್ಲಿ ಒಂದು ಅಪೂರ್ವವಾದ ಮನುಷ್ಯನ ಆಕಾರವು ಅತ್ತಲೇ ಬರುತ್ತಿದ್ದಂತೆ ಕಾಣಿಸಿತು.

ಕೂಡಲೇ ಅವರು ತವಕದಿಂದ ಅದನ್ನು ಎದುಗೊಳ್ಳು ವುದಕ್ಕೆ ಹೋದರು, ಆ ಆಕಾರವು ಒಬ್ಬ ಮನುಷ್ಯನದಾಗಿದ್ದಿತು.

ಅವನಿಗೆವಯಸ್ಸು ಎಪ್ಪತ್ತೈದು ವರುಷದಮೇಲಾಗಿದ್ದಿತು. ಅವನು ಬಲಕೈಯಲ್ಲಿ ಊರುಗೋಲನ್ನೂ ಎಡಗೈಯಲ್ಲಿ ಕಬ್ಬಿಣದ ದೀಪದ ಕಂಬವನ್ನೂ ಹಿಡಿದುಕೊಂಡಿದ್ದನು; ಎದೆಗೆ ಹಿತ್ತಾಳೆಯ ಆಂಜನೇಯನ ಪ್ರತಿಮೆಯನ್ನು ಹಾಕಿಕೊಂಡಿದ್ದನು. ಕಂಬದ ಮೇಲೂ ಆಂಜನೇಯನ ಮೇಲೂ ಬಾಡಿದ ದಾಸವಾಳದ ಹೂವಿನ ಸರಗಳು ಜೋಲಾಡುತ್ತಿದ್ದುವು; ಒಂದು ನವಾರಿನ ಪಟ್ಟಿಯ ಒಂದು ಕೊನೆಗೆ ಒಂದು ದೊಡ್ಡ ಸಂಕವನ್ನೂ ಜಾಗಟೆ ಗಂಟೆಗಳನ್ನೂ ಸುತ್ತಿಕೊಂಡು ಕೊನೆಗೂ ಕಟ್ಟಿ ಎಡ ಹೆಗಲಮೇಲೆ ಸಂಕು ಮುಂದೆ ಕಾಣುವಂತೆ ಹಾಕಿಕೊಂಡಿದ್ದನು; ತಲೆಗೆ ಅರಶಿನ ಬಣ್ಣದ ಗಾತ್ರವಾದ ರುಮಾಲನ್ನು ಕಟ್ಟಿಕೊಂಡಿದ್ದನು; ಕೊಳೆ ಪಂಚೆಯನ್ನುಟ್ಟು ಸೊಂಟಕ್ಕೆ ಒಂದು ಚಂಗಾವಿ ಬೈರವಾಸವನ್ನು ಸುತ್ತಿಕೊಂಡಿದ್ದನು; ಬಲಗಡೆಯ ಮುಂಗಾಲಿಗೆ ಕರಿಯ ಬಟ್ಟೆಯನ್ನು ಕಟ್ಟಿಕೊಂಡಿದ್ದನು. ಇದರ ಮೇಲೆ ನೊಣಗಳು ಮುತ್ತಿಕೊಂಡಿದ್ದುವು. ಇವನು ಸೊಂಟ ಬಗ್ಗಿಸಿಕೊಂಡು

ಕುಂಟುತ್ತಾ ಕೋಲೂರಿಕೊಂಡು ನಡೆವಾಗ ಹಿಂದುಗಡೆ ಗಂಟೆಯು ಅಲ್ಲಾಡುತ್ತಿದ್ದಿತು.

ವೀರನು ಅವನ ವಾರ್ಧಿಕ್ಯತೆಯನ್ನು ನೋಡಿ ಮನ ಮರುಗಿ ಮರ್ಯಾದೆಯಿಂದ "ಅಜ್ಜಾ! ಮಹೋದಯಕ್ಕೆ ಹೋಗುವ ದಾರಿ ಯಾವುದು ? ಕರುಣಿಸಿ ಹೇಳುವಿಯಾ ?" ಎಂದು ಕೇಳಿದನು. ಅದಕ್ಕೆ ಆ ಮುದುಕನು ಮರುಮಾತಾಡದೆ ತಲೆಯೆತ್ತಿ ಕೂಡ ನೋಡದೆಯೇ ಮುಂದಕ್ಕೆ ಸಾಗುತ್ತಿದ್ದನು.

ಆಗ ವೀರನು ತಟ್ಟನೆ ಕುದುರೆಯಿಂದಿಳಿದು ಕಡಿವಾಳವನ್ನು ಕೈಯಲ್ಲಿ ಹಿಡಿದುಕೊಂಡು ಆ ಮುದುಕನ ಇದಿರಿಗೆ ಹೋಗಿ ನಿಂತು "ಅಯ್ಯಾ! ಅದೇಕೆ ಮಾತನಾಡದೆ ಹೋಗುತ್ತಿರುವೆ? ಕೊಂಚ ನಿಲ್ಲು." ಎನಲು ಮುದುಕನು ವೀರನನ್ನೂ ಅವನ ಜತೆಗಾರರನ್ನೂ ದೊಡ್ಡದಾಗಿ ಕಣ್ಣುಬಿಟ್ಟು ನೋಡಿ ಬೆಚ್ಚಿ, ಬೆದರಿ, ನಡುನಡುಗುತ್ತಾ ಗದ್ಗದ ಸ್ವರದಿಂದ "ನಾರಾಯಾ! ತಾಳು ತಾಳು! ನಿನ್ನ ಕಾಲಿಗೆ ಬೀಳುತ್ತೇನೆ; ನನ್ನ ತಲೆ ಕಡಿಯ ಬೇಡ; ನನ್ನ ಹತ್ತಿರ ಇರುವುದನ್ನೆಲ್ಲಾ ಸದ್ದುಮಾಡದೇ ನಿನ ಗೊಪ್ಪಿಸಿ ಬಿಡುತ್ತೇನೆ." ಎಂದನು.

ವೀರ — ಅಯ್ಯೋ! ಪಾಪ! ಈ ಬಡವೃದ್ಧನು ನಮ್ಮನ್ನು ಕಳ್ಳರೆಂದೆಣಿಸಿ ದಿಗಿಲು ಪಡುತ್ತಿದಾನೆ, ಎಂದುಕೊಂಡು ಕನಿಕರ ದಿಂದ "ಅಯ್ಯಾ! ಭಯಪಡಬೇಡ; ನಾವು ಕಳ್ಳರಲ್ಲ.'

ಮುದುಕ —ಅಯ್ಯಯ್ಯೋ! ಸತ್ಯವಾಗಿ, ಪರಶುರಾಮ ಕ್ಷೇತ್ರದಲ್ಲಿ ಬಂದ ಕಾಸುಗಳೆಲ್ಲಾ ಇದೋ ಈ ಗರುಡಕಂಬ ದಲ್ಲಿಯೇ ಇವೆ. ಅವುಗಳನ್ನೆಲ್ಲಾ ನೀನೇ ತೆಗೆದುಕೊಳ್ಳಬಹುದು. ನಮ್ಮಪ್ಪಾ! ನಿನ್ನನ್ನು ಬೇಡಿಕೊಳ್ಳುತ್ತೇನೆ; ನನ್ನ ಹೊಟ್ಟೆ

ಚೀಲಕ್ಕೆ ಮಾತ್ರ ಕೈಹಾಕಬೇಡ; ನಿನ್ನಾಣೆ ಅದರಲ್ಲಿ ಮತ್ತೇನೂ ಇಲ್ಲ. ಎಲ್ಲೋ ರವೆಯಷ್ಟು ಕಡ್ಡಿಪುಡಿ, ನಾಲ್ಕು ತರಗೆಲೆಗಳು ಬಿದ್ದಿವೆ. ಮಾರಾಯಾ! ಈ ಸಂಕ ಚಾಗಟೆಗಳೇ ನನ್ನ ಆಸ್ತಿ. ಇವುಗಳನ್ನು ನೀನು ಕಿತ್ತುಕೊಂಡು ಹೋದರೆ ನನ್ನ ಮಕ್ಕಳೂ ಮರಿಗಳೂ ಹೊಟ್ಟೆಗಿಲ್ಲದೇ ಅನ್ಯಾಯವಾಗಿ ಸತ್ತು ಹೋಗುತ್ತಾರೆ.

ವೀರ.—ಆ ಮುದುಕನಿಗೆ ಕಿವಿ ಕೇಳಿಸುವುದಿಲ್ಲವೆಂದು ತಿಳಿದು, ನಸುನಕ್ಕು, ಅವನ ಕಿವಿಯಹತ್ತಿರ ಬಗ್ಗಿ ಗಟ್ಟಿಯಾಗಿ "ಅಯ್ಯಾ! ಹೆದರಬೇಡ! ಹೆದರಬೇಡ! ನಾವೂ ನಿನ್ನಂತೆಯೇ ಮಾರ್ಗಸ್ಥರು; ನಾವು ಮಹೋದಯಕ್ಕೆ ಹೋಗಬೇಕು; ದಾರಿ ಗಾಣದೇ ಬಡಬಡಿಸುತ್ತಿದೇವೆ; ನೀನು ದಯೆಯಿಟ್ಟು ದಾರಿಯನ್ನು ತೋರಿಸಿದರೆ ನಾವು ಹೊರಟುಹೋಗುತ್ತೇವೆ.

ಮುದುಕ.—ನಮ್ಮಪ್ಪಾ! ನನ್ನೊಡೆಯಾ! ಬದುಕಿಸಿದೆ; ನಿನ್ನಹೊಟ್ಟೆ ತಣ್ಣಗಿರಲಿ; ನಿನ್ನ ಮಕ್ಕಳೂ ಮರಿಗಳೂ ನೆಮ್ಮದಿಯಾಗಿರಲಿ. ಅದೋ ನೋಡು; ಅದೇ ಮಹೋದಯಕ್ಕೆ ಹೋಗುವದಾರಿ, ಎಂದು ತನ್ನ ಊರುಗೋಲನ್ನು ಎತ್ತಿ ಅಲ್ಲಿಂದ ಆಗ್ನೇಯಕ್ಕೆ ಹೋಗುತ್ತಿದ್ದ ದಾರಿಯನ್ನು ತೋರಿಸಿದನು.

ಬಳಿಕ ವೀರನು ಅವನನ್ನು ಬಹುವಾಗಿ ಕೊಂಡಾಡಿ ತನ್ನ ಜತೆಗಾರರೊಡನೆ ಆ ದಾರಿಯನ್ನು ಹಿಡಿದು ಹೊರಟನು.

ಆವೇಳೆಗೆ, ದಿನಮಣಿಯು ಅಸ್ತಗಿರಿಯ ಮಸ್ತಕದ ಮೇಲೆ ನಿಂತು ರತ್ನಾಕರದ ಪ್ರತಿತರಂಗಗಳಲ್ಲಿಯೂ ಪ್ರತಿಬಿಂಬಿತವಾಗಿ ರತ್ನ ರಾಶಿಯಂತೆ ಕಣ್ಗೊಳಿಸುತ್ತಿದ್ದ ತನ್ನ ಪ್ರತಿಬಿಂಬವನ್ನು ಅಚ್ಚರಿಗೊಂಡು ನೋಡಿ ನಗುತ್ತಿದ್ದನು; ಪಕ್ಷಿಗಳು ತಮ್ಮ ತಮ್ಮ ಗೂಡುಗಳನ್ನು ಸೇರಿಕೊಳ್ಳುತ್ತಿದ್ದುವು; ಗೂಬೆಗಳೂ

ಕಣ್ಣು ಕಪಟಗಳೂ ಹೊರಹೊರಟು ಮರಗಳ ಮರೆ ಮರೆಯಲ್ಲಿ ಯೇ ಹಾರಾಡುತ್ತಿದ್ದುವು; ಗುಳ್ಳನರಿಗಳು ಗೋಳಾಡುವುದಕ್ಕೆ ಮೊದಲುಮಾಡಿದುವು.

ಆ ವೀರ ಪುರುಷರು ಹೊತ್ತುಬೀಳುವುದಕ್ಕೆ ಮುಂಚಿತ ವಾಗಿಯೇ ಯಾವುದಾದರೂ ಒಂದು ವಸತಿಗೆ ಹೋಗಿ ಸೇರ ಬೇಕೆಂದು ಕುದುರೆಗಳನ್ನು ಅತಿವೇಗವಾಗಿ ಓಡಿಸಿದರು. ಮುಂದ ಕ್ಕೆ ಹೋದಹಾಗೆಲ್ಲಾ ಅವರ ದಾರಿಯು ಕಿರಿದಾಗುತ್ತಾ ಬಂದು ಕೊನೆ ಕೊನೆಗೆ ಕಾಲುದಾರಿಯಂತಾಯಿತು. ಈ ಮಾರ್ಗವು ಕಡೆಗೆ ಅವರನ್ನು ದುರ್ಗಮವಾದ ಕಾಡಿಗೆ ತಂದು ಸೇರಿಸಿತು.

ಈಕಾಡಿನಲ್ಲಿ ಒತ್ತಟ್ಟಿಗೆ ಒಂದು ಸರೋವರವು ಕಾಣಿಸಿತು. ಅದು ಮುಕುಳಿತವಾಗುತ್ತಿದ್ದ ಕಮಲಗಳಿಂದಲೂ ವಿಕಸಿತವಾಗು ತ್ತಿದ್ದ ಕನ್ನೈದಿಲೆಗಳಿಂದಲೂ ಪೂ ದೊಳೆಯನ್ನು ಭೇದಿಸಿಕೊಂಡು ಈಸುಡುತ್ತಿದ್ದ ಕಲಹಂಸ ಕಾರಂಡವಾದಿ ಪಕ್ಷಿಗಳಿಂದಲೂ ಬಹು ರಮಣೀಯವಾಗಿದ್ದಿತು. ಇದರ ಸುತ್ತಲೂ ಫಲಭರದಿಂದ ನೆಲಕ್ಕೆ ಬಾಗಿದ್ದ ಫಲವೃಕ್ಷಗಳೂ ಹೂವಿನ ಗಿಡಗಳೂ ಹೇರಳವಾಗಿ ಬೆಳ ದಿದ್ದುವು.

ಅವರು ಅಲ್ಲಿಳಿದು ಕುದುರೆಗಳನ್ನು ಮೇಯಬಿಟ್ಟು ಆ ಸರೋವರದಲ್ಲಿ ಸ್ನಾನಪಾನಾದಿಗಳನ್ನು ಮಾಡತೊಡಗಿದರು. ಆಗ ಅಲ್ಲಿ ಸಮೀಪದಲ್ಲೆಲ್ಲೋ ಹಠಾತ್ತಾಗಿ ಆರ್ತಸ್ವರವು ಕೇಳ ಬಂದಿತು. ಅವರು ಅದನ್ನು ಕುತುಕದಿಂದ ಕಿವಿಗೊಟ್ಟು ಕೇಳಿದರು.

“ಅಯ್ಯಯ್ಯೋ ! ಮುಂದೇನುಗತಿ ! ದೇವರೇ ! ಅನಾಥ ಳಾದ ನನ್ನನ್ನು ಈ ದುರುಳರು ಹೀಗೆ ಬಾಧಿಸುತ್ತಿರುವರಲ್ಲಾ ! ಏನು ಮಾಡಲಿ ; ಯಾರಿಗೆ ಮೊರೆಯಿಡಲಿ, ಹಾ ವಿಧಿಯೆ, ಜನ್ಮಾಂತ

ರದಲ್ಲಿ ನಾನಾವ ಮಹಾಪತಿವ್ರತೆಯ ಮಾನಭಂಗವನ್ನು ಮಾಡಿದ್ದೆನೋ? ಆವ ಸತಿಯು ಪತಿಯನ್ನು ಅಗಲಿಸಿದ್ದೆನೋ? ಈಗ ನನಗಿಂತಹ ದುರವಸ್ಥೆಯು ಬಂದೊದಗಿತು. ಅಕಟಕಟಾ, ಕೆಟ್ಟೆನು ಕೆಟ್ಟೆನು, ಹಾ! ವನದೇವತೆಯೆ, ಧರ್ಮದೇವತೆಯೆ! ಭೂಮಾತೆಯೆ! ನನ್ನ ಮಾನವನ್ನು ಕಾಪಾಡಿ ಕಾಪಾಡಿ. ನಿಮ್ಮ ಹೊರತು ಈ ಮಹಾರಣ್ಯದಲ್ಲಿ ಆರ್ತರಾದ ಅಬಲೆಯರನ್ನು ಕಾಪಾಡುವ ಕ್ಷತ್ರಿಯ ವೀರರಾರಿರುವರು?'' ಎಂದು ಯಾರೋ ಒಬ್ಬ ಹೆಂಗಸು ಗೋಳಾಡುತ್ತಿದ್ದಳು. ಈ ಮನೋವೇಧಕವಾದ ಮಾತುಗಳು, ಕೇಳಿಸಿದಕೂಡಲೇ ''ಭಯಪಡಬೇಡ! ಭಯಪಡಬೇಡ! ಇದೊ ಬಂದೆನು'' ಎಂಬ ವಚನವು ವೀರನ ಬಾಯಿಯಿಂದ ತನ್ನಷ್ಟಕ್ಕೆ ತಾನೇ ಹೊರಟಿತು; ಕೂಡಲೇ ಅವನು ವೀರಾವೇಶದಿಂದ ಕತ್ತಿಯನ್ನು ಹಿರಿದೆತ್ತಿಕೊಂಡು ಆಯೆಡೆಗೆ ಸಿಡಿಗಿನಂತೆ ನುಗ್ಗಿದನು. ಅವನ ಜತೆಗಾರರೂ ಆಯುಧಪಾಣಿಗಳಾಗಿ ಅವನನ್ನು ಹಿಂಬಾಲಿಸಿದರು.

ಅಲ್ಲಿ ಯಾರೋ ಕಾಡುಜನರಿಬ್ಬರು ಒಬ್ಬ ಯುವತಿಯನ್ನು ಹಿಗ್ಗಾಮುಗ್ಗಾ ಎಳೆದಾಡುತ್ತಿದ್ದರು. ಅವರು ಈ ವೀರಮುಖ್ಯರ ಮುಖಗಳನ್ನು ನೋಡಿದ ಕೂಡಲೇ ಆ ಮಾನಿನಿಯನ್ನು ಬಿಟ್ಟು ಓಡಿಹೋದರು.

ಆಗ ಆ ಹೆಂಗಸು ಓಡಿಬಂದು ''ಮಹಾನುಭಾವನೆ! ಕಾಪಾಡು, ಕಾಪಾಡು'' ಎಂದು ವೀರನ ಕಾಲಿನ ಮೇಲೆ ಬಿದ್ದಳು. ಆತನು ದಯಾಮಯವಾದ ದನಿಯಿಂದ ''ತಾಯೆ, ಏಳು ಏಳು. ಸಂತೈಸಿಕೊ, ಆಪದ್ಗತರಾದವರನ್ನು ಕಾಪಾಡುವುದಕ್ಕೆ ಬದ್ಧಕಂಕಣನಾದ ಈ ದಾಸನು ನಿನ್ನ ಸಹಾಯಕ್ಕೆ ಬಂದಿರುವನು;

ನೀನಿನ್ನು ಅಂಜಬೇಕಾದುದಿಲ್ಲ" ಎನ್ನಲು ಆಕೆಯು ಎದ್ದು ನಿಂತಳು.

ಈಕೆಯು ನಡು ಪ್ರಾಯದವಳಾಗಿಯೂ ರೂಪವತಿಯಾಗಿಯೂ ಕೃಶಾಂಗಿಯಾಗಿಯೂ ಇದ್ದಳು. ದಿವ್ಯತರವಾದ ಪೀತಾಂಬರವನ್ನುಟ್ಟು ಸಕಲಾಭರಣಗಳನ್ನು ಇಟ್ಟುಕೊಂಡಿದ್ದಳು. ಆಕೆಯ ಕೇಶಪಾಶವು ಕೆದರಿಹೋಗಿದ್ದಿತು. ಅವರ ಎಳೆದಾಟದಲ್ಲಿ ಆಕೆಯ ಜಡೆಮುಡಿಯು ಬಿಚ್ಚಿಹೋಗಿದ್ದುದೋ ಏನೋ.

ವೀರನು ಆ ನಾರಿಯನ್ನು ಕರುಣಾಮಯವಾದ ಕಡೆಗಣ್ಣಿನಿಂದನೋಡಿ "ಮಾನಿನಿಯೆ! ನೀನಾರು? ಈವೇಳೆಯಲ್ಲಿ ಇಲ್ಲಿಗೆಬಂದುದಕ್ಕೆ ಕಾರಣವೇನು? ನಿನ್ನನ್ನು ಎಳೆದಾಡುತ್ತಿದ್ದ ಆ ಜನರಾರು?" ಎಂದು ಕೇಳಿದನು.

ಹೆಂಗಸು:—ಸ್ವಾಮಿ. ನಾನು ಕುಶಸ್ಥಳದ ಪ್ರಸಿದ್ಧರಾದ ಸೋಮಯಾಜಿಗಳ ಧರ್ಮಪತ್ನಿ. ನಾವು ದಂಪತಿಗಳು ಸೇವಾರ್ಥಿಗಳಾಗಿ ಕಾಲುನಡೆಯಿಂದ ಪರಶುರಾಮಕ್ಷೇತ್ರಕ್ಕೆ ಪಯಣಮಾಡುತ್ತಿರುವೆವು. ಅತಿವೃದ್ಧನಾದ ನನ್ನ ಪತಿಯು ಇಂದು ಬಿಸಿಲಿನ ಬೇಗೆಯನ್ನು ಸೈರಿಸಿಕೊಂಡು ಈ ಕಾಡುದಾರಿಯಲ್ಲಿ ನಡೆಯಲಾರದೆ ಬಹಳ ಬಳಲಿದನು. ಅದರ ಮೇಲೆ, ಆಲಸಿಕೆಯಿಂದಲೊ ಏನೋ, ಸಂಜೆಯ ಮುಂದೆ ವಿಪರೀತವಾಗಿ ಜ್ವರ ಹೊಡಿಯಿತು. ಆದುದರಿಂದ ಈ ಇರುಳು ಆ ಸರೋವರದ ದಂಡೆಯಲ್ಲಿಯೇ ಎಲ್ಲಿಯಾದರೂ ತಂಗಿ ದಣಿವಾರಿಸಿಕೊಂಡು ನಾಳೆ ಹೊತ್ತಾರೆ ತಂಪು ಹೊತ್ತಿನಲ್ಲಿ ಮುಂದಕ್ಕೆ ಹೊರಡಬೇಕೆಂದು ನಿಶ್ಚಯಿಸಿಕೊಂಡು ಆ ತೋಟದ ಕಾವಲುಗಾರನ ಗುಡಿಸಿಲಿನಲ್ಲಿ ಇಳದುಕೊಂಡಿರುವೆವು. ನಾನೀಗತಾನೆ ಆ ಸರೋವರಕ್ಕೆ ನೀರಿಗೆ ಸಲವಾಗಿ ಬಂದೆನು. ಅಲ್ಲಿಂದಿಲ್ಲಿಗೆ ಯಾರೋ ಘೋರರೂಪಿಗಳಾದ ಇಬ್ಬರು ನನ್ನನ್ನು ಎತ್ತಿಕೊಂಡು ಒಂದು ಬಾಧಿಸುತ್ತಿದ್ದರು.

ಅಷ್ಟರಲ್ಲಿಯೇ ನನ್ನ ಸುಕೃತದ ಬಲ್ಮೆಯಿಂದ ದ್ರೌಪದಿಗೆ ಕೃಷ್ಣನಂತೆ ನೀನು ದೃಷ್ಟಿಗೋಚರನಾಗಿ ನನ್ನ ಕಷ್ಟವನ್ನು ಪರಿಹರಿಸಿದೆ. ನೀನೇ ನನ್ನ ದೇವರು— " ಎನ್ನುತ್ತಿರುವಷ್ಟರಲ್ಲಿಯೇ

ವೀರ:—ತಾಳು ತಾಳು ! ತಾಯೇ ! ನೀನು ದ್ರೌಪದಿಗೆ ಸಮಾನಳಾಗಿದ್ದರೂ ಇರಬಹುದು; ಪಾರ್ವತಿಗೆ ಸಮಾನಳಾಗಿದ್ದರೂ ಇರಬಹುದು ; ಏತಕೆಂದರೆ ಸತೀಜನರ ಮೈಮೆಯು ಬಣ್ಣಿಸಲಸದಳವಾದುದು. ಆದರೆ, ಸಾಧುಗಳ ಪಾದಸೇವಕನಾದ ನಾನು ಆ ಕೃಷ್ಣನಿಗೆ ಸಮಾನನಾಗುವೆನೆ ? ಮಾನವರನ್ನು ದೇವರಿಗೆ ಹೋಲಿಸುವ ಸ್ತುತಿವಚನಕ್ಕಿಂತಲೂ ಹೇಯವಾದುದಾವುದೂ ಇಲ್ಲ. ಅದಕ್ಕೆ ವಿವೇಕಿಗಳೆಂದಿಗೂ ಕಿವಿಗೊಡರು. ಅದು ಹಾಗಿರಲಿ, ಸದ್ಯ ನನ್ನಿಂದ ನಿನಗೇನಾದರೂ ಆಗಬೇಕಾದುದಿದ್ದರೆ ಬೇಗನೆ ಹೇಳು.

ಹೆಂಗಸು:—ಸ್ವಾಮೀ ! ಕರುಣಿಸಿ, ನನ್ನನ್ನು ನನ್ನ ಪತಿಯಿರುವ ಎಡೆಗೆ ಒಡಗೊಂಡು ಹೋಗಿ ಬಿಡಬೇಕು.

ಅದಕ್ಕೆ ವೀರನು 'ಹಾಗಾದರೆ ನನ್ನ ಹಿಂದೆ ಬಾ' ಎಂದು ಮುಂದರಿದು ಹೊರಟನು ; ಆ ಹೆಂಗಸು ಅವನ ಹಿಂದೆಯೇ ಹೊರಟಳು. ವೀರನ ಜತೆಗಾರರಿಬ್ಬರೂ ಮೈಗಾವಲಾಗಿ ಅವಳ ಹಿಂದೆ ನಡೆದರು. ಈ ರೀತಿಯಾಗಿ ಅವರು ಒಂದು ನಿಮಿಷದಲ್ಲಿ ಆ ಸರೋವರದ ಕಡೆಗೆ ಬಂದು ಸೇರಿದರು.

ಆಗ ವೀರನು, ಅಲ್ಲಿ ನಿಂತು ಆ ಹೆಂಗಸನ್ನು ಕುರಿತು 'ನೀವು ಇಳಿದಿರುವ ಗುಡಿಸಲು ಇಲ್ಲೆಲ್ಲಿದೆ ?' ಎಂದು ಕೇಳಿದನು.

ಹೆಂಗಸು:—'ಇದೋ ನೋಡು ಆ ಮರದಡಿ ಹೊಗೆಯಾ

ಡುತ್ತಿರುವುದೇ ನನ್ನ ಗುಡಿಸಲು' ಎಂದು ಕೈಯೆತ್ತಿ ತೋರಿಸಿದಳು.

ವೀರ:—ಹಾಗಾದರೆ ನೀನಿನ್ನು ನಿನ್ನ ವಸತಿಗೆ ಹೋಗಿ ನಿನ್ನ ಪತಿಯನ್ನು ಶರಾಮರಿಸಬಹುದು.

ಹೆಂಗಸು:—ನೀವೆಲ್ಲಿಗೆ ಹೋಗುವಿರಿ ?

ವೀರ:—ನಾವು ನಮ್ಮ ಕೆಲಸಕ್ಕೆ ಹೋಗುತ್ತೇವೆ.

ಹೆಂಗಸು:—ಅಯ್ಯೋ! ನೀವೀಗ ನನ್ನನ್ನು ಬಿಟ್ಟು ಹೋದರೆ ನಡುನೀರಿನಲ್ಲಿ ಕೈಬಿಟ್ಟ ಹಾಗಾಗುತ್ತದೆ. ನೀವಿಲ್ಲದಮೇಲೆ ಈ ರಾತ್ರಿ ಆ ನೀಚರು ನನ್ನನ್ನು ಚಿತ್ರವಧೆ ಮಾಡದೇ ಬಿಡರು. ಜ್ವರ ತಪ್ತನಾಗಿ ಶಯ್ಯೆಯಮೇಲೆ ಪ್ರಜ್ಞೆಯಿಲ್ಲದೇ ಬಿದ್ದಿರುವ ವೃದ್ಧನಾದ ನನ್ನ ಪತಿಯು ಆ ರಕ್ಕಸರ ಸಂಗಡ ಹೋರಾಡಲಾಪನೆ ? ಆಪನ್ನಳಾದ ಅಬಲೆಗೆ ಅಭಯವನ್ನು ಕೊಟ್ಟಮೇಲೆ ನೆಟ್ಟಗೆ ನಿಲ್ಲುವವರೆಗೂ ಕಾಪಾಡದೇ ನಿರ್ಜನವಾದ ನಟ್ಟಡವಿಯಲ್ಲಿ ಬಿಟ್ಟು ಹೋಗುವುದು ಸಜ್ಜನರಿಗೆ ಧರ್ಮವೆ ? ನೀವು ಹೊರಟುಹೋದರೆ ನಾನು ಈ ಸರಸ್ಸಿನಲ್ಲಿ ಬಿದ್ದು ಪ್ರಾಣವನ್ನು ಕಳೆದುಕೊಳ್ಳುತ್ತೇನೆ ಮಾನಕ್ಕಿಂತಲೂ ಪ್ರಾಣವು ಹೆಚ್ಚಾದುದಲ್ಲ. ಅಯ್ಯೋ ಆಗ ನನ್ನ ಪತಿಯ ಗತಿಯು ಏನಾಗುವುದೋ?

ವೀರ:—ಕೊಂಚ ಯೋಚಿಸಿ, 'ಒಳ್ಳೆಯದು, ನಾವು ಈ ರಾತ್ರಿಯನ್ನು ಕಳೆಯುವುದಕ್ಕೆ ಅಲ್ಲಿ ಎಲ್ಲಿಯಾದರೂ ಅನುಕೂಲವಾದ ಸ್ಥಳವಿದೆಯೇ ?

ಹೆಂಗಸು:—ನಮ್ಮ ಗುಡಿಸಲಿನ ಪಕ್ಕದಲ್ಲಿಯೇ ತೋಟದ ಕಾವಲುಗಾರನ ಮಂಚಿಗೆಯೊಂದಿದೆ. ಅದು ಬಹಳ ಅನುಕೂಲವಾಗಿದೆ. ಅದರಲ್ಲಿ ನೀವು ಇರುವುದಕ್ಕೆ ಏನೂ ಆಕ್ಷೇಪಣೆಯಿಲ್ಲ.

ವೀರ:—ಆ ಕಾವಲುಗಾರನು ಅದರಲ್ಲಿ ಇಲ್ಲವೋ ?

ಹೆಂಗಸು:—ಅವನು ಅಸ್ವಸ್ಥನಾಗಿದ್ದುದರಿಂದ ತನ್ನ ಕುವರನನ್ನು ಅಲ್ಲಿರಿಸಿ ಊರಿಗೆ ಹೊರಟುಹೋದನು. ಆ ಪ್ರಾಣಿಯು ಅಲ್ಲೆಲ್ಲಿಯೋ ಆಡಿಕೊಂಡಿದ್ದಾನೆ.

ಅದಕ್ಕೆ ವೀರನು 'ಹಾಗಾದರೆ ಅಲ್ಲಿಗೆ ಹೋಗುವ ನಡೆ.' ಎಂದು ಆ ಗುಡಸಲಿನ ಹತ್ತಿರಕ್ಕೆ ಹೋದನು. ಆ ಹೆಂಗಸು ತನ್ನ ಗುಡಿಸಲಿಗೆ ಹೋದಳು.

ಆ ಗುಡಿಸಲುಗಳು ಒಂದು ದೊಡ್ಡಮರದಡಿ ಕಟ್ಟಲ್ಪಟ್ಟಿದ್ದುವು. ಆ ಮರವು ನೂರಾರು ಜನಗಳ ವಾಸಕ್ಕೆ ಅನುಕೂಲವಾದ ಒಂದು ದೊಡ್ಡ ಗುಡಾರದಂತೆ ಕಾಣುತ್ತಿದ್ದಿತು ; ಆ ವೇಳೆಗೆ ಮುಂಗತ್ತಲು ತಲೆದೋರಿದ್ದುದರಿಂದ ಆ ಮರವು ಇಂಥಾದ್ದೆಂದು ನಿರ್ಧರಿಸುವುದಕ್ಕೆ ಅಸಾಧ್ಯವಾಗಿದ್ದಿತು ಆಗಿನ ನೋಟಕ್ಕೆ ಅದೊಂದು ಹುಣಿಸೆಮರದಂತೆ ಕಾಣುತ್ತಿದ್ದಿತು ಆ ಗುಡಿಸಲುಗಳಿಗೆ ಕಬ್ಬಿನ ಸೋಗೆಯ ಛಾವಣಿಗಳಿದ್ದುವು. ಇವುಗಳ ಸೂರುಗಳು, ಬೈಲೊಡ್ಡರು, ಡೊಂಬರು, ಮುಂತಾದ ಒಡ್ಡೊಕ್ಕಲುಗಳು ಕಟ್ಟಿಕೊಳ್ಳುವ ಹಂಗಾಮಿ ಗುಡಿಸಲುಗಳಂತೆ ನೆಲಕ್ಕೆ ತಗುಲಿಕೊಂಡಿದ್ದುವು. ಹೊಗೆಯಾಡುತ್ತಿದ್ದ ಗುಡಿಸಲಿಗಿಂತಲೂ ಅದರ ಪಕ್ಕದಲ್ಲಿದ್ದ ಜೋಪಡಿಯು ಬಲು ಚಿಕ್ಕದಾಗಿದ್ದಾಗ್ಗೂ ನೋಡುವುದಕ್ಕೆ ಅಂದವಾಗಿದ್ದಿತು; ಸುಮಾರು ಮೂರು ಅಡಿ ಎತ್ತರದ ಜಗಲಿಯ ಮೇಲೆ ಕಟ್ಟಲ್ಪಟ್ಟಿದ್ದಿತು; ಇದಕ್ಕೆ ಏರುವುದಕ್ಕೆ ನೆಲದಿಂದ ಮೂರು ಮೆಟ್ಟಲುಗಳಿದ್ದುವು. ಇದರ ಮುಂದುಗಡೆ ಎಂಟು ಹತ್ತು ವರ್ಷದ ಹುಡುಗನೊಬ್ಬನು ಕಸ ಉಡುಗುತ್ತಿದ್ದನು. ಇವನು ಕೆಂಪುಚಡ್ಡಿಯನ್ನೂ ಮಂಡುತೋಳಿನಕುಡತವನ್ನೂ ಹಾಕಿಕೊಂಡಿದ್ದನು; ತಲೆಗೆ ಕೆಂಪು ವಸ್ತ್ರವನ್ನು ಕೋರೆಯಾಗಿ ಸುತ್ತಿ

ಕೊಂಡಿದ್ದನು.

ವೀರನು ಇವನನ್ನು ನೋಡಿ ಎಲಾ ಮಾಣೀ! ನೀನಾರು ?" ಎಂದು ಕೇಳಿದನು.

ಹುಡುಗ:—ಮಾಡುತ್ತಿದ್ದ ಕೆಲಸವನ್ನು ಬಿಟ್ಟು ನಿಂತು, 'ನಾನು ಕಾವಲುಗಾರ.'

ವೀರ:—ಇಲ್ಲಿ ಕಳ್ಳರ ಕೋಟಲೆಯುಂಟೋ ?

ಹುಡುಗ:—ಆ ಕೋಟಲೆ ಇಲ್ಲದಮೇಲೆ ಕಾವಲೇತಕ್ಕೆ ?

ವೀರ:—ಭಲಾ! ಚನ್ನಾಗಿ ಹೇಳಿದೆ. ಒಳ್ಳೆಯದು, ರಾತ್ರಿ ವೇಳೆ ಈ ಗುಡಿಸಲುಗಳಲ್ಲಿ ದೀಪಹಚ್ಚುವ ಕಟ್ಟಲೆ ಇಲ್ಲವೋ ?

ಹುಡುಗ:—ಕಾವಲುಗಾರನು ದೀಪ ಹಚ್ಚಿಕೊಂಡು, ಪದ ಹೇಳಿಕೊಂಡಿದ್ದರೆ ಕಳ್ಳರನ್ನು ಚನ್ನಾಗಿ ಕಂಡು ಹಿಡಿಯಬಹುದು. ಬೇಟೆಗಾರನು ಬಲೆಯೊಡ್ಡಿ ದೀವಟಿಗೆ ಹಿಡಿದುಕೊಂಡಿದ್ದರೆ ಮೃಗಗಳು ತಾವಾಗಿಯೇ ಸದ್ದಿಲ್ಲದೇಬಂದು ಬಿದ್ದುಬಿಡುತ್ತವೆ ಅಲ್ಲವೆ?

ವೀರನು ಅವನಮಾತಿಗೆ ಬೆರಗಾಗಿ 'ಇಲ್ಲವೈಯಾ, ಇಲ್ಲ ಎಂದು ಮೊದಲನೆಯ ಸವಾರನ ಮೊಗವನ್ನು ನೋಡಿದನು. ಅವನು 'ಈಹುಡುಗನಿಗೆ ಕಳ್ಳರನ್ನುಹಿಡಿಯುವ ಯುಕ್ತಿಯು ವಂಶ ಪರಂಪರೆಯಾಗಿ ಬಂದಿರುವಹಾಗೆ ಕಾಣುತ್ತದೆ. ಇವನು ದೊಡ್ಡವನಾದರೆ ಕಳ್ಳರನ್ನು ಹಿಡಿಯುವುದರಲ್ಲಿ ಬಹಳ ಪ್ರವೀಣನಾಗುತ್ತಾನೆ' ಎಂದನು. ಅದಕ್ಕೆ ವೀರನು ನಕ್ಕು 'ಎಲಾ ಹುಡುಗಾ ಈ ರಾತ್ರಿ ನಮಗೆ ಇರುವುದಕ್ಕೆ ನಿನ್ನ ಗುಡಿಸಲಿನಲ್ಲಿ ಸ್ಥಳ ಕೊಡುವಿಯಾ ? ' ಎಂದು ಕೇಳಿದನು.

ಹುಡುಗ.—ಸದ್ದುಮಾಡದೇ, ಎದ್ದು ಓಡಾಡದೇ, ಬಿದ್ದಿರುವುದಾದರೆ ನಿಮ್ಮ ಮಾತಿಗೆ ಪ್ರತಿ ಹೇಳುವುದಿಲ್ಲ.

ವೀರ.—'ಒಳ್ಳೆಯದು, ನಿದ್ದೆಬಂದಮೇಲೆ ನಾವು ಸದ್ದು ಮಾಡುವುದೂ ಇಲ್ಲ; ಎದ್ದು ಓಡಾಡುವುದೂ ಇಲ್ಲ; ಎಂದು ಅಲ್ಲಿಯೇ ಮೇಯುತ್ತಿದ್ದ ಕುದುರೆಗಳನ್ನು ನೋಡಿ ಹುಡುಗನನ್ನು ಕುರಿತು "ಎಲೈ! ನಮ್ಮ ಕುದುರೆಗಳಿಗೆ ಈ ಇರುಳು ಹುಲ್ಲಿಗೂ ಸ್ಥಳಕ್ಕೂ ಏರ್ಪಾಡು ಮಾಡುವಿಯಾ? ನಿನಗೆ ನಾನು ಒಳ್ಳೆಯ ಪಾರಿತೋಷಿಕವನ್ನು ಕೊಡಿಸುತ್ತೇನೆ." ಎಂದನು.

ಹುಡುಗ.—'ಒಳ್ಳೆಯದಾಗಲಿ, ಬುದ್ಧೀ! ಅದಕ್ಕೆ ಹೇಗೆ' ಎನ್ನಬೇಕೆ? ಇಲ್ಲೇನು, ಹುಲ್ಲಿಗೆ ಕಡಮೆಯೇ? ಸ್ಥಳಕ್ಕೆ ಕಡಮೆಯೇ ಈ ಪಕ್ಕದಲ್ಲಿರುವ ಹುಲ್ಲುಗಾವಲಿನಲ್ಲಿ ಒಂದೊಂದು ಗೂಂತು ಕಟ್ಟಿದರೆ ನಿಮ್ಮ ಕುದುರೆಗಳು ಹೊಟ್ಟೆದುಂಬ ಮೇದು ಸಾಕಾಗಿ ಮಲಗಿಕೊಳ್ಳುತ್ತವೆ; ಎಂದು ಆ ಕುದುರೆಗಳ ಕಡೆಗೆ ಹೊರಟನು.

ಆಗ ಆ ವೀರಮುಖ್ಯರು ತಮ್ಮ ತಮ್ಮ ಕುದುರೆಗಳನ್ನು ಹಿಡಿದುಕೊಂಡು ಜಡಿಯನ್ನೂ ಕಡಿವಾಣವನ್ನೂ ಕಳಚಿ ಕೆಳಗಿಳಿಸಿ ಮೈಯ್ಯೊರಸಿ, ಬೆನ್ನುತಟ್ಟಿ ಕೊರಳಿಗೆ ಸುತ್ತಿದ್ದ ಹಗ್ಗದೊರಸೆ ಅವನ ಕೈಗೆ ಕೊಟ್ಟರು.

ಆವೇಳೆಗೆ, ಆ ಹೆಂಗಸು ತನ್ನ ಗುಡಿಸಲಿನ ಮುಂದುಗಡೆ ಬಂದು ನಿಂತಳು. ಈಗ ತಟ್ಟನೆ ಆಕೆಯನ್ನು ಗುರುತು ಹಿಡಿಯುವುದಕ್ಕಾಗಲಿಲ್ಲ; ಏಕೆಂದರೆ, ಆಕೆಯು ತನ್ನ ಉಡಿಗೆ ತೊಡಿಗೆಗಳನ್ನು ಮಾರ್ಪಡಿಸಿಕೊಂಡಿದ್ದಳು. ಚಂಗಾವಿ ಶೀರೆಯನ್ನುಟ್ಟಿದ್ದಳು; ಕುತ್ತನಿ ಕುಪ್ಪಸವನ್ನು ತೊಟ್ಟಿದ್ದಳು.

ವೀರನು ಆಕೆಯನ್ನು ನೋಡಿ "ಅಮ್ಮಾ! ನಿನ್ನ ಪತಿಯು ದೇಹಸ್ಥಿತಿಯು ಹೇಗಿದೆ;" ಎನ್ನಲು ಆಕೆಯು "ಜ್ವರಬಿಟ್ಟಿದೆ; ಚನ್ನಾಗಿ ನಿದ್ದೆಮಾಡುತಿದ್ದಾನೆ" ಎಂದು ಸ್ವಲ್ಪ ಮುಂದಕ್ಕೆ

ಬಂದು "ನೀವುಗಳು ಇಂದು ಮಾರ್ಗಾಯಾಸದಿಂದ ಬಹಳ ಬಳಲಿರುವ ಹಾಗೆ ಕಾಣುತ್ತದೆ? ಬನ್ನಿ, ಇಲ್ಲಿ ಕೊಂಚಹೊತ್ತು ಕುಳಿತುಕೊಂಡು ಮಾತನಾಡುತ್ತಿರುವ." ಎಂದು ಇದಿರಿಗೆ ಒತ್ತಾಗಿ ಬೆಳದಿದ್ದ ಹಸುರಾದ ಹುಲ್ಲಿನಮೇಲೆ ಕುಳಿತುಕೊಂಡಳು. ವೀರಮುಖ್ಯರೂ ಅಲ್ಲಿಗೆ ಹೋಗಿ ದೂರ ಕುಳಿತುಕೊಂಡರು.

ಆಗ ಆ ಹೆಂಗಸು ಆ ಹುಲ್ಲನ್ನು ತನ್ನ ಅಂಗೈಯಿಂದ ಒತ್ತಿ ಒತ್ತಿ ನೋಡಿ "ಆಹಾ! ಈ ಹುಲ್ಲು ಹಂಸತೂಲಿಕೆಯ ಹಾಸಿಗೆಯಂತೆ ಎಷ್ಟು ಮೃದುವಾಗಿದೆ", ಎಂದಳು.

ವೀರ.—ಪರೋಪಕಾರಿಗಳಾದ ಪಶುಗಳಿಗೆ ಇದು ದೇವರಿಂದ ನಿರ್ಮಿತವಾದ ಆಹಾರ. ಆಹಾ! ದೇವರು ಪರೋಪಕಾರಿಗಳಾದ ಪ್ರಾಣಿಗಳನ್ನು ಎಷ್ಟು ಪ್ರೀತಿಯಿಂದ ಪರಾಮರಿಸುತ್ತಿದಾನೆ; ನೋಡಿದಿರಾ!

ಹೆಂಗಸು.—ರಾತ್ರಿ ಇದರಮೇಲೆ ಮಲಗಿಕೊಂಡರೆ ಬಹಳ ಚನ್ನಾಗಿ ನಿದ್ರೆಬರಬಹುದು; ಆದರೆ ಈ ವನದಲ್ಲಿ ಒಂಟಿಯಾಗಿ ರಾತ್ರಿವೇಳೆ ಮಲಗಿಕೊಳ್ಳುವುದು ಕಷ್ಟ.

ವೀರ.—ಒಂಟಿಯಾದರೇನು! ಜಗಕೆ ತಂದೆಯಾದ ದೇವರು ಯಾವ ಪ್ರಾಣಿಯನ್ನೂ ಎಂದಿಗೂ ಅರಗಳಿಗೆಯಾದರೂ ಬಿಟ್ಟಿರುವುದಿಲ್ಲ; ಅಂತಹ ಮೃಗಾವಲಿದ್ದಮೇಲೆ ಕಷ್ಟವೇನು? ತಾಯಿಯ ಗರ್ಭದಲ್ಲಿರುವಾಗ ನಮ್ಮನ್ನು ಕಾಪಾಡಿದವರಾರು? ಮೈಮರೆತು ನಿದ್ರೆ ಮಾಡುತ್ತಿರುವಾಗ ಕಾವಲಿದ್ದು ನಮ್ಮನ್ನು ಕಾಪಾಡುವರಾರು?

ಅವರು ಈರೀತಿಯಾಗಿ ಮಾತನಾಡಿಕೊಳ್ಳುತ್ತಿದ್ದ ಹಾಗೆಯೇ ಒಬ್ಬರ ಮೊಗ ಒಬ್ಬರಿಗೆ ಕಾಣದಂತೆ ಕತ್ತಲು ಕವಿತುಕೊಂಡಿತು.

ಒಮ್ಮೆಂದೊಮ್ಮೆ ನಡುಬಾನದಲ್ಲಿ ಗುಡುಗು ಮಿಂಚುಗಳು ಹುಟ್ಟಿದುವು; ಕಾರ್ಮುಗಿಲಿನಬಿಡ್ಡುಗಳು ದಿಕ್ಕುದಿಕ್ಕುಗಳಿಂದಬಿತ್ತರಿಸಿದುವು ಅತಿ ಶೀಘ್ರವಾದ ಗಾಳಿಯು ಬೀಸತೊಡಗಿತು; ದೂರದಲ್ಲಿ ಹೊಡೆಯುತ್ತಿದ್ದ ಮಳೆಯ ಶಬ್ದವು 'ಜರೋ' ಎಂದು ಕೇಳಬಂದಿತು; ಸರೋವರದಲ್ಲಿ ಕಪ್ಪೆಗಳು ಅಧ್ಯಯನಕ್ಕೆ ಮೊದಲು ಮಾಡಿದುವು. ಮಳೆಯ ಹನಿಗಳೂ ಒಂದೊಂದು ಉದುರಿದುವು.

ಆಗ ಆ ಹೆಂಗಸು "ಓಹೋ! ಮಳೆಬಂದಿತು" ಎಂದು ತಟ್ಟನೆ ಎದ್ದು ನಿಂತು "ಅಣ್ಣಂದಿರಾ! ಈದಿನ ನನ್ನಿಂದ ನಿಮಗೆ ಬಹಳ ತೊಂದರೆಯಾಯಿತು; ಕ್ಷಮಿಸಬೇಕು. ನಿಮ್ಮ ಆಶ್ರಯದ ಬಲುಮೆಯಿಂದ ನನಗೀಗಾಗಲೇ ಕಣ್ಣಿಗೆ ನಿದ್ರೆ ಹತ್ತುತ್ತಿದೆ. ನಾನಿನ್ನು ನನ್ನ ಗುಡಿಸಲೊಳಕ್ಕೆ ಹೋಗಿ ನಿಮ್ಮ ರಕ್ಷಣೆಯ ಫಲವನ್ನು ಪೂರ್ತಿಯಾಗಿ ಅನುಭವಿಸುತ್ತೇನೆ." ಎಂದು ಆಕಾಶವನ್ನು ನೋಡಿ "ಇದೋ ಮಳೆಯು ವಿಪರೀತವಾಗಿ ಬರುವಹಾಗಿದೆ, ನೀವುಗಳು ಮಂಚಿಕೆಯೊಳಕ್ಕೆ ಹೋಗಿ ಮಲಗಿಕೊಳ್ಳಿರಿ. ಒಳಗೆ ನೆಲವು ಬಹಳ ನಿರ್ಮಲವಾಗಿದೆ; ಆ ಮಾಣಿ ಸಾಯಂಕಾಲ ಚನ್ನಾಗಿ ಗುಡಿಸಿದಾನೆ" ಎಂದು ತನ್ನ ಗುಡಿಸಲಿಗೆ ಹೊರಟುಹೋದಳು.

ವೀರಮುಖ್ಯರೂ ಒಳಕ್ಕೆ ಹೋದರು; ಮಳೆಯು ಗಡಸಾಯಿತು.

ಒಳಗೆ ನೆಲಕ್ಕೆ ಹಲಿಗೆಗಳನ್ನು ಜೋಡಿಸಿದ್ದರು. ಸುತ್ತಮುತ್ತಲೂ ಮೇಲೂ ಎಲ್ಲಿ ಕೈಯಿಟ್ಟರಲ್ಲಿ ತರಕಲ ಹುಲ್ಲು ತಗಲುತಿದ್ದಿತು. ಒಳಗೂ ಹೊರಗೂ ಒಂದೇ ಸಮನಾಗಿಕಗ್ಗತ್ತಲುಕವಿತುಕೊಂಡಿದ್ದುದರಿಂದ ಅಲ್ಲಿ ಮತ್ತೇನೂ ಕಾಣಿಸಲಿಲ್ಲ.

ಅಲ್ಲಿ ನೂರವರೂ ತಮ್ಮ ತಮ್ಮ ನಿಲುವಂಗಿಗಳನ್ನು ಹಾಸಿಕೊಂಡು ದೇವರನಾಮುಗಳನ್ನು ಉಚ್ಚಾರಮಾಡುತಾ ಮಲಗಿಕೊಂಡರು.

ಆಗ ವೀರನು "ಈ ಸಮಯದಲ್ಲಿ ಮಹಾಕವಿಗಳಲ್ಲಿಯಾರಾದರೂ ಒಬ್ಬರು ಇಲ್ಲಿದ್ದರೆ ಈ ಗುಡಿಸಲನ್ನು ಹೇಗೆಬಣ್ಣಿಸುತ್ತಿದ್ದರೋ? ಒಳ್ಳೆಯದು, ಸದ್ಯಕ್ಕೆ ಮಹಾವೀರರ ಕವಿತಾ ಚಾತುರ್ಯವನ್ನು ನೋಡುವ. ನೀವು ಇದನ್ನು ಸಂಕ್ಷೇಪವಾಗಿ ವರ್ಣಿಸಿರಿ.'' ಎಂದನು.

ಮೊದಲನೆಯುಸವಾರ.—ಈ ಕುಟೀರವು ಕಪಟಿಯ ಹೃದಯದಂತೆ ತಮೋಮಯವಾಗಿರುವುದು.

ವೀರ.—ಭಾಪುರೆ! ನಿನಗೆ ಆಶುಕವಿಯೆಂಬ ಬಿರುದು ತಕ್ಕುದು. ಆದರೆ ಈ ತೃಣ ಕುಟಿಗೆ ಕಪಟಿಗಳ ಹೃದಯದ ಸಾದೃಶ್ಯವನ್ನು ಹೇಳುವುದು ಏನೋ ನನಗೆ ಅಧರ್ಮವಾಗಿ ಕಾಣುತ್ತದೆ; ಏತಕೆಂದರೆ, ಕಪಟಿಗಳ ಹೃದಯದಲ್ಲಿ ಸಿಲುಕಿದ ಬಡಪ್ರಾಣಿಗೆ ಬಿಡುಗಡೆಯಾಗುವುದು ಕಷ್ಟ.

ಆವೇಳೆಗೆ, ಕಾವಲಿನ ಹುಡುಗನು ಗುಡಿಸಲ ಬಾಗಿಲ ಬಳಿಯ ಬಂದುನಿಂತು "ಬುದ್ಧೀ! ಕುದುರೆಗಳಿಗೆ ನೀರುಕುಡಿಸಿ, ಗಾಳಿಗೂ ಮಳಿಗೂ ಮರೆಯಾದ ಸ್ಥಳದಲ್ಲಿ ಭದ್ರವಾಗಿ ಕಟ್ಟಿ, ಯಥೇಷ್ಟವಾಗಿ ಹುಲ್ಲು ತಂದುಹಾಕಿರುವೆನು. ಅಪ್ಪಣೆಯಾದರೆ ನಾನು ಆ ಯಮ್ಮಣ್ಣಯವರ ಗುಡಸಲಿಗೆ ಹೋಗಿ ಮಲಗಿಕೊಳ್ಳುತ್ತೇನೆ. ಸಾಮಿ! ಬುದ್ಧೀ! ನೆನಪಿರಲಿ; ನಾನು ನಿದ್ದೆಮಾಡುತ್ತಿರುವಾಗ ನೀವೆಲ್ಲಿಯಾದರೂ ನನಗೆ ಇನಾಮು ಕೊಡದೇ ಮೋಸಮಾಡಿ ಹೊರಟುಹೋಗಿ ಬಿಟ್ಟೀರಿ.,, ಎಂದು ಕೂಗಿ ಹೇಳಿದನು.

ವೀರ:- ನಕ್ಕು 'ಈ ಹುಡುಗನು ಅದೇಕೆ ಈಗಾಗಲೇ ಪರರನ್ನು ನಂಬುವುದಿಲ್ಲ.' ಎಂದು ಎಂದುಕೊಂಡು "ಒಳ್ಳೆಯದು, ನೀನು ಈ ರಾತ್ರಿ ನಮ್ಮಲ್ಲಿ ನಂಬುಗೆಇಟ್ಟು ನಮ್ಮ ಕುದುರೆಗಳನ್ನು ಜಾಗರೂಕತೆಯಿಂದ ನೋಡಿಕೊಳ್ಳುತ್ತಿರು ; ನಾವು ಹೋಗುವಾಗ ನಿನ್ನನ್ನು ಕೂಗಿ ನಿನಗೆ ಯೋಗ್ಯವಾದುದನ್ನು ಕೊಡುತ್ತೇವೆ."

ಹುಡುಗ.—'ಹಾಗೆಯೇ ಆಗಲಿ; ನಾನು ಹೋಗುತ್ತೇನೆ' ಎಂದು ಕೊಂಚ ಮುಂದಕ್ಕೆ ಹೋಗಿ ತಟ್ಟನೆ ಹಿನ್ದಿರುಗಿ ಓಡಿ ಬಂದು "ಸಾಮಿಾ ! ಬುದ್ಧೀ ! ರಾತ್ರಿ ನೀವು ಈ ಗುಡಿಸಲ ಬಾಗಿಲನ್ನು ಮಾತ್ರ ಭದ್ರವಾಗಿ ಹಾಕಿಕೊಂಡಿರಬೇಕು ; ಏತಕೆ ಎನ್ನುತ್ತೀರೋ, ಇರುವ ಸಂಗತಿಯನ್ನು ಅರಿಕೆಮಾಡುತ್ತೇನೆ ಕೇಳಿ. ಈ ಕಾಡಿನೊಳಗೆ ಆನೆಗಳ ಕೋಟಲೆಯು ಬಹಳ ಹೆಚ್ಚು ; ಇದಲ್ಲದೇ ಇಲ್ಲಿ ನಾಯಿಯೊಂದು ಮನುಷ್ಯರನ್ನು ತಿನ್ನುವುದಕ್ಕೆ ಪಳಗಿಕೊಂಡಿದೆ. ಅದು ಮೊನ್ನೆ ಈ ಕೊಳದ ತಡಿಯಲ್ಲಿಯೇ ದನಕಾಯುತ್ತಿದ್ದ ಒಬ್ಬ ಹುಡುಗನನ್ನು ಕೊಂದು ತಿಂದಿತು. ಅದಕ್ಕೆ ತಕ್ಕ ಹಾಗೆಯೇ ಈ ಗುಡಿಸಲಿನ ಕದ ಮುರಿದುಹೋಗಿದೆ. ನಮ್ಮ ಧಣಿಗಳು ಬಂದಾಗೆಲ್ಲಾ 'ಇದಕ್ಕೊಂದು ಬಾಗಿಲು ಮಾಡಿಸಿಕೊಡಬೇಕು, ಎಂದು ಕೇಳುತ್ತಲೇಇರುವೆನು. ಅವರು ಅದನ್ನು ಕಿವಿಯಮೇಲೆ ಹಾಕಿಕೊಳ್ಳುವುದೇಇಲ್ಲ. ಹೀಗೆ ಬಂದು ಹಾಗೆ ಕಾಲಾಟವಾಡಿಕೊಂಡು ಹೋಗುವವರಿಗೆ ಈ ಕಾಡಿನಲ್ಲಿ ಕಾವಲು ಬಿದ್ದಿರುವವರ ಕಷ್ಟನಷ್ಟಗಳು ಹೇಗೆ ಗೊತ್ತಾಗುತ್ತವೆ. ನೀವು ನಿದ್ದೆಮಾಡಿರಿ ಬುದ್ಧೀ! ನಾನು ಹೋಗುತ್ತೇನೆ. ಮಳೆ ದೊಡ್ಡದಾಯಿತು.. ಆ ಮುರುಕು ಕದವನ್ನು ಮುಚ್ಚಿ

ಕೊಳ್ಳುವುದಕ್ಕೆ ಏನುಕೆ ಬರುವುದಿಲ್ಲ : ಅಪ್ಪಣೆಯಾದರೆ ನಾನೇ ಅದನ್ನು ಸರಿಮಾಡಿ ಮುಚ್ಚಿಕೊಂಡು ಹೋಗುತ್ತೇನೆ.

ಇವನ ಮಾತುಗಳನ್ನು ಕೇಳುತ್ತಿದ್ದ ಹಾಗೆಯೇ ಶ್ರಾಂತರಾಗಿದ್ದ ಆ ವೀರ ಮುಖ್ಯರು ಮೈ ಮರೆತು ನಿದ್ರೆಹೋದರು. ವೀರನು ನಿದ್ದೆಗಣ್ಣಿನಲ್ಲಿಯೇ 'ಒಳ್ಳೆಯದು, ಹಾಗೆಯೇ ಮಾಡು' ಎಂದನು.

ಕೂಡಲೆ, ಆ ಹುಡುಗನು ಆ ಗುಡಿಸಲ ಬಾಗಿಲನ್ನು ದಡಾರೆಂದು ಮುಚ್ಚಿದನು. ಹಿಂದೆಯೇ 'ಖಣೀರ್, ಖಣೀರ್' ಎಂಬ ಕಬ್ಬಿಣದ ಸಂಕಲೆಗಳ ಶಬ್ದವೂ ಚಪ್ಪಳೆಯ ಸಪ್ಪಳವೂ ಒಂದರ ಮೇಲೊಂದು ಕೇಳಬಂದುವು.

ಅರನಿದ್ದೆಯಲ್ಲಿದ್ದ ಮೊದಲನೆಯ ಸವಾರನು ಈ ಶಬ್ದಗಳಿಗೆ ಬೆಚ್ಚಿಬಿದ್ದು ಎಚ್ಚರಗೊಂಡು ತನ್ನೊಳುತಾನು 'ಏನಿದಾಶ್ಚರ್ಯ ! ಆ ಹುಡುಗನು ಹೇಳಿದುದನ್ನು ಕೇಳಿದರೆ, ಇದರ ಬಾಗಿಲು ಈ ರಾತ್ರಿಗಾಳಿಗೆ ನಮ್ಮ ತಲೆಯಮೇಲೆಲ್ಲಿ ಬೀಳುವುದೋ ಎಂದು ಭಯವಾಗಿದ್ದಿತು ; ಅಂಥದು, ಕೀಲು ಗೂಟಗಳಮೇಲೆ ತಿರುಗುವ ಕಬ್ಬಿಣದ ಕದದಂತೆ ಸಶಬ್ದವಾಗಿ ಮುಚ್ಚಿಕೊಂಡುದು ಹೇಗೆ ? ಆ ಶೃಂಖಳೆಗಳ ಶಬ್ದವೆಲ್ಲಿಯದು ? ಹೊರಗಡೆ, ಚಪ್ಪಳೆ ಬಡಿದವರಾರು ? ಎಂದು ಎಂದುಕೊಂಡು ಇವುಗಳನ್ನು ವಿಮರ್ಶಿಸುವುದಕ್ಕೆ ಸಲವಾಗಿ ತಟ್ಟನೆ ಎದ್ದು ಬಾಗಿಲನ್ನು ಹುಡಕಾಡಿದನು.

ಕೈಗೆ ದೊಡ್ಡದೊಡ್ಡ ಕಬ್ಬಿಣದ ಕಂಬಿಗಳು ಸಿಕ್ಕಿದುವು. ಆಗ ಅವನ ಸಂಶಯವು ಮತ್ತಷ್ಟು ಹೆಚ್ಚಿತು. ತವಕದಿಂದ ಸುತ್ತ ಮುತ್ತಲೂ ನೋಡ ಹೊರಟನು. ಈ ಸಂಭ್ರಮದಲ್ಲಿ

ಅವನು ವೀರನ ಕಾಲನ್ನು ಕತ್ತಲಲ್ಲಿ ಕಾಣದೆ ತುಳಿದನು. ವೀರನು 'ಯಾರದು' ಎನಲು ಆ ಸವಾರನು 'ನಾನು, ಕ್ಷಮಿಸಬೇಕು' ಎಂದನು. ಅದಕ್ಕೆ ಅವನು "ಎಲೈ! ನಿನಗೇನು ಚಿತ್ತಭ್ರಮಣೆಯೋ? ನಿದ್ರಾಭ್ರಮಣೆಯೋ? ಅದೇಕೆ ಹೀಗೆ ಕತ್ತಲಲ್ಲಿ ಎದ್ದು ಸುತ್ತುತ್ತಿರುವೆ?" ಎಂದು ಕೇಳಿದನು. ಅದಕ್ಕೆ ಸವಾರನು "ಸ್ವಾಮಿ! ಜಾಗ್ರತೆಯಾಗಿ ಎದ್ದು ಈ ಗುಡಿಸಲನ್ನು ಪರೀಕ್ಷಿಸಿನೋಡಿದರೆ ಯಾವುದೊಂದೂ ಗೊತ್ತಾಗುತ್ತದೆ. ಏಳಿ, ಎದ್ದುನೋಡಿ! ತಡಮಾಡಬೇಡಿ!" ಎಂದನು.

ಅವನ ಮಾತುಗಳನ್ನು ವೀರನೂ ಅವನ ಮತ್ತೊಬ್ಬ ಜತೆಗಾರನೂ ಕೇಳಿ ಅಚ್ಚರಿಗೊಂಡು ಮೇಲಕ್ಕೆ ಏಳುವಷ್ಟರೊಳಗಾಗಿ, ಮೃಗಗಳನ್ನು ಅಟ್ಟಿಕೊಂಡು ಬರುವ ಬೇಟೆಗಾರರ ಕಲಕಲವೆದ್ದಿತು,—ಶಿಳ್ಳುಗಳೂ ಚಪ್ಪಾಳೆಗಳೂ ಚೀರಾಟವೂ ಕೂಗಾಟವೂ ಆ ಕಾಡಿನಲ್ಲಿ ಕಿಲಿಗೊಂಡುವು.

ಅದನ್ನು ಕೇಳಿ ವೀರಮುಖ್ಯರು ಬೆಕ್ಕಸಬೆರಗಾಗಿ ದಿಕ್ಕುತೋಚದೇ ಕೂಗಿ, ರೇಗಿ ಆ ಗುಡಿಸಲನ್ನು ಮುರಿದು ಹೊರಹೊರಡುವುದಕ್ಕೆ ಎಷ್ಟೋ ಸಾಹಸಪಟ್ಟರು. ಆದರೂ ಅವರ ಸಾಹಸವು ಸಾರ್ಥಕವಾಗಲಿಲ್ಲ. ಸುತ್ತಮುತ್ತಲೂ ಮುರಿಯುವುದಕ್ಕೂ ಬಗ್ಗಿಸುವುದಕ್ಕೂ ಅಸಾಧ್ಯವಾದ ಕಣಕಾಲು ಗಾತ್ರದ ಕಬ್ಬಿಣದ ಕಂಬಿಗಳ ಹೊರತು ಮತ್ತಾವುದೂ ಅವರ ಕೈಗೆ ಸಿಗಲಿಲ್ಲ.

ಹೊರಗಡೆ, ಕಾಡಾನೆಗಳು ಮುತ್ತಿಕೊಂಡು ಮೇಲಿನ ಛಾವಣಿಯನ್ನು ಕಿತ್ತಿಕಿತ್ತಿ ಈಡಾಡುತ್ತವೆಯೋ ಎಂಬಂತೆ ಆ ಗುಡಿಸಲು ಗದಗದನೆ ನಡುಗಿತು; ಮೇಗಣಿಂದ ಹರಗುಗಳು ಸರಗರಿಯುತ್ತ ಸುತ್ತಲೂ ಉದುರಿದುವು; ಕಾಡಗಿಚ್ಚು ಬಂದು

ಬಿದ್ದುದೋ ಎಂಬಂತೆ ಕಂಬಿಗಳ ಸಂದಿನಿಂದ ದೊಡ್ಡ ದೊಡ್ಡ ಉರಿಗಳು ಕಾಣಬಂದುವು.

ಒಂದು ನಿಮಿಷಮಾತ್ರದಲ್ಲಿ ಆ ಗುಡಿಸಲು ಒಂದು ದೊಡ್ಡ ಕಬ್ಬಿಣದ ಬೋನಿನಂತೆ ಮಾರ್ಪಟ್ಟಿತು; ನಾಲ್ಕು ಮೂಲೆಗಳಲ್ಲಿಯೂ ನಾಲ್ವರು ದೀವಟಿಗೆಗಳನ್ನು ಹಿಡಿದುಕೊಂಡು ನಿಂತಿದ್ದರು; ಸುತ್ತಲೂ ಹನ್ನೆರಡು ಮಂದಿ ನೀಳವಾದ ಭರ್ಜಿಗಳನ್ನು ಹಿಡಿದುಕೊಂಡು ನಿಂತಿದ್ದರು. ಕಲವರು ಸನಿಕೆಗಳಿಂದ ಮೊಣ್ಣೆ ಳೆದು ನೆಲವನ್ನು ಸಮಗಟ್ಟುತ್ತಿದ್ದರು; ಮತ್ತೆ ಕೆಲವರು ಸುತ್ತಮುತ್ತಲೂ ಬಿದ್ದಿದ್ದ ಹುಲ್ಲು, ತರಗು, ಚಾಪೆ, ಮುಂತಾದುವುಗಳನ್ನು ಬಾಚಿ ಬಾಚಿ ಬೀಸಾಡುತ್ತಿದ್ದರು.

ಆಗ ಕೋವಿಯನ್ನು ಹೆಗಲಮೇಲೆ ಹೊತ್ತುಕೊಂಡು ಸುತ್ತಲೂ ತಿರುಗಾಡುತ್ತಿದ್ದ ಗಡತರದ ಆಳೊಬ್ಬನು ಅಲ್ಲಿದ್ದವರನ್ನು ನೋಡಿ 'ಹೊತ್ತಾಯಿತು! ಜಾಗ್ರತೆಯಾಗಿ ಬೋನಿಗೆ ಕೋಣಗಳನ್ನು ತಂದು ಕಟ್ಟಿರಿ' ಎಂದು ಅಧಿಕಾರಯುಳ್ಳವನ ಹಾಗೆ ಕೂಗಿಹೇಳಿದನು. ಕೂಡಲೆ, ಅಲ್ಲಿದ್ದವರಲ್ಲಿ ಕೆಲವರು ಓಡಿಹೋಗಿ ಕಾಡಾನೆಗಳಂತೆ ಭೀಕರವಾದ ಆಕಾರವುಳ್ಳ ಮೂರುಜತೆ ಕೋಣಗಳನ್ನು ಹಿಡಿದುಕೊಂಡು ಬಂದು ಆ ಬೋನಿಗೆ ಹೂಡಿದರು. ತೇರುಸಾಗಿದಂತೆ ಆ ಬೋನು ಮುಂದಕ್ಕೆ ತೆರಳಿತು.

ಬೋನಿನೊಳಗಿದ್ದ ವೀರಮುಖ್ಯರು ಸಿಂಹಗಳಂತೆ ಕೂಗಿ, ರೇಗಿ, ಕೆಂಡವಾಗಿ, ಸುತ್ತಲೂ ಸುತ್ತಿಸುತ್ತಿ ಕಬ್ಬಿಣದ ಕಂಬಿಗಳನ್ನು ಹಿಡಿದು ಬೋನು ತತ್ತರಿಸುವಂತೆ ಅಲ್ಲಾಡಿಸುತಿದ್ದರು.

ಇವರ ಅಸಾಧಾರಣವಾದ ಸಾಹಸವನ್ನು ನೋಡಿ ಆ ಜನರು ಅಟ್ಟಹಾಸದಿಂದ, ಪಂಜಿನಬೆಳಕಿನಲ್ಲಿ ಥಳಥಳಿಸುತ್ತಿದ್ದ ತಮ್ಮ

ಭರ್ಜಿಗಳನ್ನು ತೋರಿಸಿ "ಎಲೈ! ವ್ಯರ್ಥವಾಗಿ ನೀವೇಕೆ ಹೀಗೆ ನೆಗೆದಾಡುತ್ತೀರಿ. ನಮ್ಮ ಬೋನಿಗೆ ಬಿದ್ದಮೇಲೆ ಮಾರೀಚನಂತಹ ಶೂರನಾದರೂ ತಪ್ಪಿಸಿಕೊಂಡು ಹೋಗಲಾರನು. ಜೋಕೆ! ನೀವಿನ್ನು ಕೂಗಾಡದೇ ಸುಮ್ಮನೆ ಇದ್ದರೆ ಬದುಕಿದಿರಿ; ಇಲ್ಲದಿದ್ದರೆ ಇದೋನೋಡಿ ಈ ಭರ್ಜಿಗಳಿಂದ ನಿಮ್ಮ ಕಣ್ಣುಗುಡ್ಡೆಗಳನ್ನು ತಿವಿದುಬಿಡುತ್ತೇವೆ." ಎಂದು ಗದರಿಸಿದರು.

ಆ ಮಹಾವೀರರು ಈ ದುರ್ಭಾಷಿತಕ್ಕೆ ಬದಲುತ್ತರವನ್ನು ಕೊಡದೇ ಸುಮ್ಮನಾದರು. ಇದೇನಾಶ್ಚರ್ಯವಲ್ಲ; ಅದೇತಕೆಂದರೆ, ಮಹಾತ್ಮರ ಮನವು ಆಪತ್ಕಾಲದಲ್ಲಿ ಕಲ್ಲಿಗಿಂತಲೂ ಕಠಿಣವಾಗುವುದು ಸಾಜ. ಆ ನೀಚರು ಮಹಾತ್ಮರ ಇದಿರಿಗೆ ನಿಂತು ಬಾಯಿಗೆಬಂದಹಾಗೆ ಮಾತನಾಡಿದುದೂ ಅಚ್ಚರಿಯಲ್ಲ; ಅದೇಕೆಂದರೆ, ಬೋನಿನಲ್ಲಿರುವ ಸಿಂಹವನ್ನು ನೋಡಿ ಶ್ವಾನವು ಬೊಗಳುವುದು ಸಾಜವಲ್ಲವೆ?

ಬೋನಿನ ಮುಂದುಗಡೆ ಇಬ್ಬರು ಪಂಜಿನವರು ದಾರಿತೋರಿಸುತ್ತಾ ಹೊರಟರು. ಬಣ್ಣದಲ್ಲಿಯೂ ರೂಪದಲ್ಲಿಯೂ ಗಾತ್ರದಲ್ಲಿಯೂ ಕೋಣಗಳನ್ನು ಹೋಲುತ್ತಿದ್ದ ಮೂವರು ಬಾರು ಬಾರು ಉದ್ದದ ಬಾರುಗೋಲುಗಳಿಂದ ಆ ಕೋಣಗಳನ್ನು ಹೊಡದು ಓಡಿಸುತ್ತಿದ್ದರು. ಅವುಗಳು ಹಳ್ಳ ತಿಟ್ಟುಗಳನ್ನು ಲೆಕ್ಕಿಸದೇ ಅಡ್ಡಾದಿಡ್ಡಿಯಾಗಿ ನುಗ್ಗುತಿದ್ದುವು. ಆ ಜನರೆಲ್ಲರೂ ಒಂದೇ ವಿಧವಾದ ಪದವನ್ನು ಒಕ್ಕಟ್ಟಾಗಿ ಪಾಡಿಕೊಂಡು ಹೊರಟರು. ಆ ಪದದ ಅರ್ಥಕ್ಕೆ ನಮ್ಮ ವೀರಮುಖ್ಯರು ಗಮನಕೊಟ್ಟದ್ದರೆ, ಆ ದುರ್ವಿನೀತರಾರೆಂಬುದನ್ನು ವಿವರವಾಗಿ ತಿಳಿಯುಬಹುದಾಗಿ

ದ್ದಿತು; ಆದರೆ: - ಆಗಿನ ಸ್ಥಿತಿಯಲ್ಲಿ ಅವರ ಮನಸ್ಸಿಗೆ ಅಷ್ಟು ಶಾಂತಿಎಲ್ಲಿಯದು.

ಈ ಬೋನಿಗೆ ಸುಮಾರು ಎರಡು ಅಡಿ ಎತ್ತರದ ನಾಲ್ಕು ಕಬ್ಬಿಣದ ಚಕ್ರಗಳಿದ್ದುವು. ಇವುಗಳಿಗೆ ಎರೆ ಇಲ್ಲದೇ ಇದ್ದುದರಿಂದ ಉಂಟಾದ 'ಕಿರೋ, ಎಂಬ ನಾದವೂ ಕೊರಕಲುಗಳನ್ನು ಇಳಿದು ಏರುವಾಗ ಉಂಟಾದ 'ದಡ ದಡ' ಎಂಬ ಶಬ್ದವೂ ಆ ದುರ್ನಯರ ಸುಮ್ಮಾನದ ಹಾಡಿಕೆಗೆ ಹಿಮ್ಮೇಳವಾಗಿದ್ದುವು.

ಈರೀತಿಯಾಗಿ ಸುಮಾರು ಮೂರುಘಂಟೆ ಹೊತ್ತು ಆ ಕಾಡಿನಲ್ಲಿ ಪಯಣಮಾಡಿದ ಬಳಿಕ ಒಮ್ಮಿಂದೊಮ್ಮೆ ಸಮುದ್ರವು ಉಕ್ಕಿ ಮೇರೆತಪ್ಪಿ ಹರಿದು ಬರುತ್ತಿದೆಯೋ ಎಂಬ ಭ್ರಾಂತಿಯನ್ನುಂಟುಮಾಡುವ 'ಭೋರ್'' ಎಂಬ ಶಬ್ದವು ಕೇಳಬಂದಿತು.

ಅದನ್ನು ಅವರೆಲ್ಲರೂ ತಮ್ಮ ಗದ್ದಲವನ್ನು ನಿಲ್ಲಿಸಿ ಕಿವಿಗೊಟ್ಟು ಕೇಳಿದರು. ಆಗ ಅವರಲ್ಲಿ ಒಬ್ಬನು ''ಓಹೋ! ಹೊಳೆಗೆ ಈರಾತ್ರಿ ಪೂರ್ಣಪ್ರವಾಹ ಒಂದಿರುವಹಾಗೆ ಕಾಣುತ್ತದೆ. ಈ ಕೆಟ್ಟತೊರೆಗೆ ಪೂರ್ಣಪ್ರವಾಹ ಬಂದರೆ ಸೇತುವೆಯ ಮೇಲೆ ಆಳುದ್ದ ನೀರು ಹರಿಯುತ್ತದೆ. ಈ ಬೋನನ್ನು ನಾವೀಗ ಸೇತುವೆಯಮೇಲೆ ಸಾಗಿಸಿಕೊಂಡು ಹೋಗುವುದುಹೇಗೆ!

ಮತ್ತೊಬ್ಬ:— ಈದಿನ ಅಂತಹ ಪ್ರವಾಹ ಬರುವ ಮಳೆ ಬಂದಿಲ್ಲ? ಒಂದುವೇಳೆ ಬಂದಿದ್ದರೆತಾನೆ ಭಯವೇನು? ಈ ಹೊಳೆಯ ಪ್ರವಾಹವು ಮೂರೊಮುಕ್ಕಾಲುಗಳಿಗೆ ಇರುವುದಿಲ್ಲ. ಹೊಳೆ ಇಳಿಯುವವರೆಗೂ ಈಚೆತಡಿಯಲ್ಲಿಯೇ ಕಾದಿದ್ದರೂ ಆಯಿತು; ಇಲ್ಲದಿದ್ದರೆ ಅಂಬಿಗರನ್ನು ಕರೆಯಕಳುಹಿಸಿ, ದೋಣಿಯನ್ನು ಹಾಕಿಸಿದರೂ ಆಯಿತು. ಇದಕ್ಕೆಯೋಚಿಸಬೇಕೆ?

ಅದಕ್ಕೆ ಕೋವಿಯನ್ನು ಹಿಡಿದುಕೊಂಡಿದ್ದವನು, ನಕ್ಕು "ಕುರಿಹೊತ್ತುಕೊಂಡು ನೀರಿನಲ್ಲಿ ಬೀಳುವ ಜಾತಿಯಲ್ಲಿ ಹುಟ್ಟಿದವನು ನೀನು. ನಿನ್ನ ತಲೆಯಮೇಲಿನ ಕೂದಳಿ ನೆನೆದು ನಿನ್ನ ಮೂಗಿನಮೇಲೆ ನೀರು ಪ್ರವಾಹವಾಗಿ ಹರಿಯುವವರೆಗೂ ನೀನು ಮಳೆ ಬರಲೇ ಇಲ್ಲ ಎನ್ನುವೆ. ಒಡೆಯನ ಅಪ್ಪಣೆಯ ಮೇರಿಗೆ, ನಾವು ಈ ಮೃಗಗಳನ್ನು ಮದ್ಯಾಹ್ನವೇ ಹಿಡಿದು ಸಾಗಿಸಿಕೊಂಡು ಹೋಗಿರಬೇಕಾಗಿದ್ದಿತು; ಅಂಥದು, ಬೆಳಗಿನಜಾವವಾದರೂ ಅರ್ಧದಾರಿಗೆ ಬರಲಿಲ್ಲ. ಇಷ್ಟುಕಾಲ ವಿಳಂಬವಾದುದಕ್ಕೆ ಇಂದು ಯಾರ ಯಾರ ಗತಿ ಏನೇನಾಗುವುದೋ ? ಇನ್ನು ನಿನ್ನ ಮಾತು ಕೇಳಿ, ಈ ಪ್ರವಾಹಕ್ಕೆ ಹೆದರಿ, ಹೊಳೆಯ ಕರೆಯಲ್ಲಿ ತಂಗಿದರೆ ನಾವೆಲ್ಲರೂ ಒಟ್ಟಿಗೆ ಜವರಾಯನ ಪಟ್ಟಣಕ್ಕೆ ಪಯಣಮಾಡಬೇಕಾಗುತ್ತದೆ.

ಆ ವೇಳೆಗೆ, ಮುಂದುಗಡೆ ಹೋಗುತ್ತಿದ್ದ ಪಂಜಿನವರು ನಿಂತು "ಬೋನನ್ನು ಅಲ್ಲಿಯೇ ನಿಲ್ಲಿಸಿ; ವಿಪರೀತವಾಗಿ ಹೊ ಬಂದಿದೆ. ತಾಳಿ ತಾಳಿರಿ! ಮೊದಲು ಎಲ್ಲರೂ ಸೇತುವೆಯಮೇ ಹೋಗಿ ದಾರಿಯನ್ನು ನೋಡಿಕೊಂಡು ಬರುವ" ಎಂದು ಕೂ ಹೇಳಿದನು.

ಒಡನೆಯೇ ಬೋನನ್ನು ನಿಲ್ಲಿಸಿದರು. ಕೋವಿಯನ್ನು ಹಿಡಿದುಕೊಂಡು ಅವರಿಗೆಲ್ಲಾ ಅಧಿಕನಂತೆ ಕಾಣುತಿದ್ದವನು ಮುಂ ದರಿದು ಸೇತುವೆಯನ್ನು ನೋಡಿಕೊಂಡುಬರುವುದಕ್ಕೆ ಹೊರಟನು

ಬಂಧನದೊಳಗೆ ಸಿಲುಕಿದ್ದ ವೀರಮುಖ್ಯರು ಆ ಸಾಹಸಿಕ ವೇಷವನ್ನೂ ಕಜ್ಜನವನ್ನೂ ನೋಡಿ ಅಚ್ಚರಿಗೊಂಡು ತಮ್ಮನ್ನು ಅವರು ಆದಿನ ಮೋಸಗೊಳಿಸಿದ ರೀತಿಗಳನ್ನು ನೆನೆ ನೆನೆದು ಚಿಂತ

ಸಾಗರದಲ್ಲಿ ಮಗ್ನರಾಗಿ ಒಂದೂ ತೋಚದೇ 'ದೈವವಿಲಾಸವು ಅಚಿಂತ್ಯವಾದುದು; ಎಂದುಕೊಂಡು ಧೈರ್ಯದಿಂದ ತಮ್ಮ ಇಷ್ಟ ದೇವತೆಯನ್ನು ಧ್ಯಾನಿಸುತ್ತಿದ್ದರು.

ಸುಮಾರು ಐದು ನಿಮಿಷದ ಮೇಲೆ ಅದ್ದಿಕನು ಹಿಂದಿರುಗಿ ಒಂದು ' ಬೋನನ್ನು ಮುಂದಕ್ಕೆ ಬಿಡಿ ! ನೀರು ಇನ್ನೂ ಸೇತು ವೆಯ ಮೇಲೆ ಹತ್ತಲಿಲ್ಲ; ಈಗೀಗ ಹತ್ತುತ್ತಿದೆ. ಅಷ್ಟರೊಳ ಗಾಗಿ ನಾವು ಕೋಣಗಳನ್ನು ಓಡಿಸಿಕೊಂಡು ತಟಾದು ಹೊರಟು ಹೋಗುವ'' ಎಂದನು.

ಆಗ ಎಲ್ಲರೂ ಕೋಣಗಳನ್ನು ಬೆದರಿಸಿದರು; ಕೆಲವರು ಬಾಲಗಳನ್ನು ಮುರಿಯುತ್ತಾ ಅರಚಿದರು; ಮತ್ತೆ ಕೆಲವರು ತಮ್ಮ ಭರ್ಜಿಗಳನ್ನು ತಿರುಗಿಸಿಕೊಂಡು ಹೊಡೆದರು.

ಆ ಕೋಣಗಳು ಆ ಜನಗಳ ಚೀರಾಟಕ್ಕೂ ಆ ದೊಣ್ಣೆ ಗಳ ಪೆಟ್ಟಿಗೂ ಆ ಪ್ರವಾಹದ ಭಯಂಕರವಾದ ಶಬ್ದಕ್ಕೂ ಬೆದರಿ ಚದರಿ ಪ್ರಾಣಭಯದಿಂದ ನಿಟ್ಟೋಟವಾಗಿ ಓಡಿದುವು. ನಡುಸೇತು ವೆಯ ಮೇಲೆ ಹೋಗುತ್ತಿದ್ದಾಗ ಒಮ್ಮೆಂದೊಮ್ಮೆ ಏಕಕಾಲದಲ್ಲಿ ಎದ್ದ ಸಾವಿರಾರು ಸಿಡಿಲಬ್ಬರಣೆಗಳಂತೆ '' ಪಟಪಟಪಟ ಧಡಧಡ ಧಡ '' ಎಂದು ಶಬ್ದವಾಯಿತು.

ಏನದೆಂಬುವಷ್ಟರೊಳಗಾಗಿ ಆ ಸೇತುವೆಯು ಒಡೆದು ಪುಡಿಪುಡಿಯಾಗಿ ಪ್ರವಾಹದೊಳಕ್ಕೆ ಬಿದ್ದುಹೋಯಿತು.

## ನಾಲ್ಕನೆಯ ಪ್ರಕರಣ.

### ಭೈರವಾನಂದ.

ಪಾಪಪುಣ್ಯಗಳಿಗೆ ಸಾಕ್ಷಿಯಾದ ಪ್ರತ್ಯಕ್ಷದೇವತೆಯ ಮಂಡಲವು ಮೂಡಣದೆಶೆಯಲ್ಲಿ ಮೂಡಿತು ; ಇಂದು ಮಂಡಲವು ಅಂದಗೆಟ್ಟು ಪಡುವಲ ಕಡೆಗೆ ಓಡಿತು—ಲೋಕದಲ್ಲಿ ಬಲವತ್ತರನಾದವನಿಂದ ಸೋಲಿಸಲ್ಪಟ್ಟವನು ಕಳೆಗೆಟ್ಟು ಓಡಿದುದೇನೂ ಸ್ವಭಾವವಿರುದ್ಧವಾದುದಲ್ಲ ; ವನರಾಜಿಯು ಕೋಕಿಲೆಗಳ ಕಾಕಲಿಯಿಂದ ಕೂಡಿತು ; ಎಳಗಾಳಿಯು ಅರೆಬಿರಿದಸರಸಿಜದ ಪರಿಮಳದಿಂದ ತೀಡಿತು ; ಮರಗಿಡಬಳ್ಳಿಗಳ ಮೇಲೆ ಬಿದ್ದಿದ್ದ ಇಬ್ಬನಿಯು ಅರುಣಕಿರಣ ಸಂಪರ್ಕದಿಂದ ಮಳೆಬಿಲ್ಲಿನ ಬಣ್ಣಗಳನ್ನು ಹೊಂದಿ ಕಣ್ಗೊಳಿಸಿತು.

ಈ ಸಮಯದಲ್ಲಿ ಪದಾತಿಗಳಂತೆ ಕಾಣುತ್ತಿದ್ದ ಮೂವರು ವಿಂಧ್ಯಪರ್ವತದ ವಾಯುವ್ಯ ದಿಗ್ಭಾಗದ ಮಹಾರಣ್ಯದಲ್ಲಿದ್ದ ಒಂದು ಮಹಾಕಾಳಿಯ ದೇವಸ್ಥಾನದ ಹತ್ತಿರಕ್ಕೆ ಅತಿರಭಸದಿಂದ ಬಂದರು.

ಈ ದೇವಾಲಯವು ಬಹು ಪುರಾತನವಾದುದು. ಇದರ ಪ್ರಾಕಾರ, ಮಹಾದ್ವಾರ ಮೊದಲಾದ ಆವರಣಗಳು ಬಿದ್ದು ಹಾಳಾಗಿ ಹೋಗಿದ್ದಾಗ್ಗೂ ಅದರ ಗೋಡೆಗಳ ಮೇಲೂ ಕಂಬಗಳ ಮೇಲೂ ಗೋಪುರಗಳ ಮೇಲೂ ಅದನ್ನು ಕಟ್ಟಿದ ಶಿಲ್ಪಕಾರನ ಕಲಾಕೌಶಲ್ಯವು ಸುವ್ಯಕ್ತವಾಗಿದ್ದಿತು.

ಇದರ ಮುಂದುಗಡೆ, ಸುಮಾರು ಒಂದುಬಾರು ಅಗಲ

ಹನ್ನೆರಡು ಬಾರು ಉದ್ದದ ಅಗ್ನಿಕುಂಡ ಒಂದಿದ್ದಿತು. ಇದಕ್ಕೂ ಗುಡಿಗೂ ನಡುವೆ ಗಡತರವಾದ ಕಲ್ಲುಕಂಬ ಒಂದಿದ್ದಿತು. ಇದರ ಮುಂದುಗಡೆ ಬಾರು ಬಾರುದ್ದ ಕೋಡಿನ ಕೋಣದ ತಲೆಯೊಂದು ಇಡಲ್ಪಟ್ಟಿದ್ದಿತು. ಇದರ ಮೇಲೆ ಒಂದು ಪರಿವಾಣದಲ್ಲಿ ದೀಪವು ಧಣ ಧಣನೆ ಉರಿಯುತ್ತಿದ್ದಿತು; ಅದರ ಕಣಕಾಲು ಅದರ ಬಾಯಿಯಲ್ಲಿ ಇಡಲ್ಪಟ್ಟಿದ್ದಿತು; ಇದರ ಸುತ್ತಲೂ ರಕ್ತದ ಕಾಲುವೆಗಳು ಹರಿದು ಹೆಪ್ಪುಕಟ್ಟಿಕೊಂಡಿದ್ದುವು.

ಕರ್ರಗೆ ಕುರೂಪಿಗಳಾದ ಕೆಲವರು ಆ ಗುಡಿಯ ಇದಿರಿಗೆ ನಿಂತುಕೊಂಡು ದೇವಿಯನ್ನು ನೋಡಿ ಅಪಸ್ವರದಿಂದ ಪಾಡುತ್ತಿದ್ದರು.

ಈ ಜನರು ಆ ಪದಾತಿಗಳನ್ನು ನೋಡಿದ ಕೂಡಲೇ ಕಿಶಿಬಿಶಿ ಮಾತಾಡಿಕೊಂಡು ಸದ್ದು ಮಾಡದೇ ನಿಂತರು.

ಆಗ ಆ ಪದಾತಿಗಳಲ್ಲಿ ಒಬ್ಬನು ಆ ಗುಡಿಯ ಬಾಗಿಲ ಪಕ್ಕದಲ್ಲಿ ಮುರಿದುಬಿದ್ದಿದ್ದ ಕಲ್ಲಿನ ಆನೆಯ ಮೇಲೆ ಕುಳಿತುಕೊಂಡನು. ಅವನನ್ನು ಹಿಂಬಾಲಿಸಿ ಬರುತ್ತಿದ್ದ ಭಟರಿಬ್ಬರೂ ಅವನ ಇದಿರಿಗೆ ಕೈಗಟ್ಟಿಕೊಂಡು ವಿಧೇಯರಾಗಿ ನಿಂತರು.

ಆನೆಯ ಮೇಲೆ ಕುಳಿತುಕೊಂಡವನ ಆಕಾರವು ಸ್ಥೂಲವಾಗಿಯೂ ನೀಳವಾಗಿಯೂ ಇದ್ದಿತು; ಶರೀರ ಛಾಯೆಯು ಕೆಂಚಾಗಿದ್ದಿತು; ಮುಖವು ಗುಂಡಾಗಿದ್ದಿತು; ಹಣೆಯು ವಿಶಾಲವಾಗಿದ್ದಿತು; ಕಣ್ಣುಗುಡ್ಡುಗಳು ಕೆಂಡಗಳಂತೆ ಕೆಂಪಾಗಿದ್ದುವು; ಕೆನ್ನೆ ಮೀಸೆಗಳು ಕೆದರಿಕೊಂಡಿದ್ದುವು. ಒಟ್ಟಿನ ಮೇಲೆ ಹೇಳಬಹುದೇನಂದರೆ, ಆಗ ಅವನ ಆಕಾರವು ಸಿಟ್ಟುಗೊಂಡ ಸಿಂಹದಂತೆ ಭೀಕರವಾಗಿದ್ದಿತು.

ಈ ವ್ಯಕ್ತಿಯು ಹೆಸರನ್ನು ನಾವು ಇನ್ನೇಕೆ ರಹಸ್ಯವಾಗಿಟ್ಟು ಕೊಂಡಿರಬೇಕು? ಆಗಿನ ಕಾಲದಲ್ಲಿ ವಿಂಧ್ಯಪರ್ವತಕ್ಕೆ ಉತ್ತರದಲ್ಲಿಯು ನಾಡುಗಳ ಆಬಾಲವೃದ್ಧರಿಗೂ ಸಿಂಹಸ್ವಪ್ನ ಪ್ರಾಯವಾಗಿದ್ದ, ಭೈರವಾನಂದನೆಂಬ ಹೆಸರು ಈ ಮಹಾಪುರುಷನನ್ನು ಸೇರಿ ಅನ್ವರ್ಥಕವಾಗಿದ್ದಿತು. ಇವನೇ ಆ ಸುಪ್ರಸಿದ್ಧನಾಗಿದ್ದ ಗಿರಿದುರ್ಗದ ಪಾಳೆಯಗಾರನು.

ಅವನ ಇದಿರಿಗೆ ನಿಂತಿದ್ದ ಭಟರಲ್ಲಿ ಒಬ್ಬನು ಅವನಮುಖ್ಯಮಂತ್ರಿಯು; ಮತ್ತೊಬ್ಬನು ಅವನ ಸೇನಾನಾಯಕನು.

ಭೈರವಾನಂದನು ಆ ಕಲ್ಲಿನ ಮೇಲೆ ಕುಳಿತುಕೊಂಡ ಕೂಡಲೇ 'ಆಲಸ್ಯವಿಳಂಬಗಳನ್ನು ನಾನು ಒಂದು ಕ್ಷಣವಾದರೂ ಸಹಿಸಲಾರೆನು! ಎಂದಿಗೂ ಇಲ್ಲದ ಇಂದಿನ ವಿಳಂಬವು ನನಗೆ ಬಹು ಭಯಂಕರವಾಗಿದೆ' ಎಂದು ತನ್ನ ಸೊಂಟದಲ್ಲಿದ್ದ ಕರವಾಳವನ್ನು ಸರ್‍ರನೆ ಕೈಗೆ ಸೆಳೆದುಕೊಂಡು ಎದ್ದುನಿಂತು, ಗುಡಿಯುಬಾಗಿಲ ಮುಂದೆ ನಿಂತಿದ್ದ ಆ ಜನರನ್ನು ನೋಡಿ 'ಓಹೋ! ಇಂದು ದೇವಿಗೆ ಕೋಣನ ಬಲಿಯೋ? ಕುರಿಕೋಣಗಳ ಬಲಿ ಇಲ್ಲದಿದ್ದರೆ ಈ ಸೋಮಾರಿಗಳಿಗೆ ಇಷ್ಟು ಚಟುವಟಿಕೆ ಎಲ್ಲಿಯದು? ' ಎಂದು ಹಿಂದಿರುಗಿ ತನ್ನ ಪರಿಜನರನ್ನು ನೋಡಿ 'ಎಲೈ! ಈದಿನ ಆ ತೊತ್ತಿನ ಮಕ್ಕಳು, ನೇಮಿಸಿದ ಕೆಲಸವನ್ನು ನೆರವೇರಿಸದೇ ಬಂದರೆ, ಅವರನ್ನೆಲ್ಲಾ ಒಂದೇ ಬಾರಿ, ಈ ದೇವಿಗೆ ಬಲಿಕೊಡಬಾರದೇಕೆ? ಎಂದು ಕೇಳಿದನು.

ಪರಿಜನರು, ಒಕ್ಕಟ್ಟಾಗಿ, "ಅವರಿಗೆ ಹಾಗೆಯೇ ಮಾಡಬೇಕು; ಬುದ್ಧೀ, ಹಾಗೆಯೇ ಮಾಡಬೇಕು !!" ಎಂದರು.

ಭೈರವಾನಂದನು ಆಮಾತನ್ನು ಕೇಳಿ ಕನಲಿ 'ಎಲೈ ! ನೀವುಗಳು ನನ್ನ ಮಾತುಗಳಿಗೆ ಮಾದನಿಗೊಡುತ್ತಾ ನನ್ನ ಇದಿರಿಗೆ ಸ್ಥಂಭಗಳಂತೆ ನಿಂತುಕೊಂಡಿರುವುದೇಕೆ? ಅವರಿಗಿಂತಲೂ ಮುಂಚೆ ಮ್ಮನ್ನು ಈ ಯೂಪ ಸ್ಥಂಭಕ್ಕೆ ಕಟ್ಟಿಸಬೇಕು.' ಎಂದು ಅಬ್ಬರಿಸಿದನು.

ಆಗ, ಅವನ ಸೇನಾಪತಿಯು ತತ್ತರಗೊಂಡು 'ಬುದ್ಧೀ ! ಅಪ್ಪಣೆಯಾದರೆ, ಅವರನ್ನು ಒಂದು ನಿಮಿಷದಲ್ಲಿ ಹುಡುಕಿಕೊಂಡು ಬರುವೆನು.'' ಎಂದನು.

ಭೈರವಾನಂದನು, ಪರಿಹಾಸ್ಯವಾಗಿ ನಕ್ಕು ''ಛೆ! ಗಾಂಪನೇ ! ನಿನಗೆ ಪ್ರತಿಯೊಂದಕ್ಕೂ ಅಪ್ಪಣೆಯೊಂದಾಗಬೇಕೋ ? ನಿಮಿಷಕ್ಕೂ ವರ್ಷಕ್ಕೂ ಇರುವ ವ್ಯತ್ಯಾಸವನ್ನು ನೀನು ಸ್ವಪ್ನದಲ್ಲಿಯೂ ಕಂಡು ಕೇಳಿದ ಹಾಗೆ ಕಾಣುವುದಿಲ್ಲ. ಒಳ್ಳೆಯದು ತೊಲಗಿಹೋಗು. ಏನುಮಾಡಿಕೊಂಡು ಬರುವಿಯೋ ನೋಡುವ.'' ಎಂದನು.

ಕೂಡಲೇ ಅವನು ಕಾಡಿನೊಳಕ್ಕೆ ಎತ್ತಲೋ ಓಡಿಹೋದನು.

ಬಳಿಕ ಭೈರವಾನಂದನು ತನ್ನ ಮಂತ್ರಿಯನ್ನು ಕುರಿತು, 'ಎಲೈ ! ಅವರು ಇದುವರೆಗೂ ಬಾರದೇ ಇರುವುದಕ್ಕೆ ಕಾರಣವೇನಿರಬಹುದು; ನೀನು ಊಹಿಸಲಾಪೆಯಾ ?' ಎಂದು ಕೇಳಿದನು.

ಮಂತ್ರಿ.—ಒಡೆಯನೇ ! ಬೈರಾಗಿಯು ಹೇಳಿದ ಸಮಯಕ್ಕೆ ಸರಿಯಾಗಿ ಆ ರಾಜಪುತ್ರನು ಅಲ್ಲಿಗೆ ಬಂದಿರಲಾರನು ; ಆದುದರಿಂದಲೇ ತಡವಾಗಿರಬಹುದೆಂದು ತೋರುತ್ತದೆ.

ಭೈರವಾನಂದ.—ಅವನು ತನಗೆ ಚೆನ್ನಾಗಿ ತಿಳಿಯದ ವೃತ್ತಾಂತವನ್ನು ಎಂದಿಗೂ ಹೇಳುವುದಿಲ್ಲ. ಇಂತಹ ಮಾಯಾ ಪ್ರಯೋಗಗಳಲ್ಲಿ ಅವನಿಗೆ ಸಮಾನರು ನಮ್ಮಲ್ಲಿ ಮತ್ತಾರೂ ಇಲ್ಲ. ಆದುದರಿಂದಲೇ, ನಾನು ಅವನಿಗೆ ಈ ಕಾರ್ಯವನ್ನು ನೇಮಿಸಿರುವೆನು.

ಅವರು ಈರೀತಿಯಾಗಿ ಮಾತನಾಡಿಕೊಳ್ಳುತ್ತಿರುವಾಗಲೇ ದಳಪತಿಯು ಹಿಂದಿರುಗಿ ಓಡಿಬಂದು 'ಒಡೆಯನೇ| ಪಾರುಪತ್ಯಗಾರನು ಇಲ್ಲಿಯೇ ಬರುತ್ತಿರುವನು.' ಎಂದು ಬಿನ್ನವಿಸಿದನು.

ಭೈರವಾನಂದನು ತವಕದಿಂದ ಮುಂದರಿದು ಅವನನ್ನು ಇದಿರುಗೊಂಡನು. ಪಾರುಪತ್ಯಗಾರನು ಅವನನ್ನು ನೋಡಿದ ಕೂಡಲೇ ಥರಥರನೆ ನಡುಗುತ್ತ ಮಾತನಾಡದೆ ಮೂಕನಂತೆ ನಿಂತನು.

ಭೈರವಾನಂದ.—ಅವನನ್ನು ನೋಡಿ, "ಎಲೈ ! ನಿನಗೇನು ಪಿಶಾಚಿಹಿಡಿಯಿತೋ ? ಅದುರುವಾಯು ಬಂದಿತೋ? ಈ ಕಳ್ಳವಿದ್ಯೆಗಳು ಹಾಗಿರಲಿ. ಇವುಗಳಿಗೆ ತಕ್ಕ ಚಿಕಿತ್ಸೆಯನ್ನು ನಾನು ಮಾಡಬಲ್ಲೆನು. ಒಳ್ಳೆಯದು ; ಜಯವೋ ಅಪಜಯವೋ ಜಾಗ್ರತೆಯಾಗಿ ಹೇಳು."

ಪಾರುಪತ್ಯಗಾರ.— ತೊದಲು ನುಡಿಯಿಂದ , "ಜಯವೂ ಅಲ್ಲ; ಅಪಜಯವೂ ಅಲ್ಲ."

ಭೈರವಾನಂದ.—ಛೇ ! ಮುಟ್ಠಾಳಾ ! ಅಸಂಭವವನ್ನು ಬೊಗಳಬೇಡ. ನಡೆದಸಂಗತಿಯನ್ನು ವಿವರವಾಗಿ ಹೇಳು, ಹೆದರುವಿಯೇಕೆ ?

ಪಾರುಪತ್ಯಗಾರ.— ಬುದ್ಧೀ ! ಮೊನ್ನೆರಾತ್ರಿ, ಅಪ್ಪಣೆಯಾದಂತೆ, ನಾನು ಇಪ್ಪತ್ತುಮೂರುಮಂದಿ ಸವಾರರನ್ನು ಸಂಗಡ ಕರೆದುಕೊಂಡು ಕಾಲಕ್ಕೆಸರಿಯಾಗಿ ಹೋಗಿ ಮಹೋದಯದ ಮಾರ್ಗದಲ್ಲಿ ಹೊಂಚಿಕೊಂಡಿದ್ದೆನು. ಆ ರಾಜಪುತ್ರನು ತನ್ನ ಇಬ್ಬರು ಜತೆಗಾರರೊಡನೆ ಹೊತ್ತುಹುಟ್ಟುವ ಹೊತ್ತಿಗೆ ಸರಿಯಾಗಿ ಅಲ್ಲಿಗೆ ಬಂದನು.

ಭೈರವಾನಂದ.—ತನ್ನ ಮಂತ್ರಿಯ ಮೊಗವನ್ನು ನೋಡಿ 'ನೋಡಿದೆಯಾ ! ಭೈರಾಗಿಯು ಸ್ಥಳವನ್ನೂ ಕಾಲವನ್ನೂ ಬರುವ ಜನರ ಸಂಖ್ಯೆಯನ್ನೂ ಎಷ್ಟು ಸಮಂಜಸವಾಗಿ ಹೇಳಿರುವನು ? ಎಂದು, "ಒಳ್ಳೆಯದು! ಮುಂದೆ ? "

ಪಾರುಪತ್ಯಗಾರ.— ಆಗ ನಾವೆಲ್ಲರೂ ಏಕಕಾಲದಲ್ಲಿ ಅವರನ್ನು ಮುತ್ತಿ ಮೊಟ್ಟಮೊದಲು ಅವರ ಕುದುರೆಗಳ ಕಾಲುಗಳನ್ನು ಒಂದು ಕ್ಷಣಮಾತ್ರದಲ್ಲಿ ಕತ್ತರಿಸಿಬಿಟ್ಟೆವು.

ಭೈರವಾನಂದ.—ಭಾಪುರೆ ! ಮಝಭಾಪು ! ಆಮೇಲೆ ? ಆಮೇಲೆ ?

ಪಾರುಪತ್ಯಗಾರ.—ಅವರು ತಮ್ಮ ಕುದುರೆಗಳ ಸಂಗಡ ಕಕ್ಕಾಬಿಕ್ಕಿಯಾಗಿ ಕೆಳಕ್ಕೆಬಿದ್ದರು. ಕೂಡಲೇ, ನಾವು ಅವರನ್ನು ಮೇಲಕ್ಕೆ ಏಳಬಿಡದೇ ಒಬ್ಬೊಬ್ಬರಿಗೆ ಏಳೆಂಟು ಮಂದಿ ಸುತ್ತಿಕೊಂಡು ಅವರನ್ನು ನಿರಾಯುಧರನ್ನಾಗಿ ಮಾಡಲು ಉಜ್ಜುಗಿಸಿದೆವು.

ಭೈರವಾನಂದ.— ಶಾಬಾಸು ! ಶಾಬಾಸು ! ಒಳ್ಳೆಯಕೆಲಸವನ್ನು ಮಾಡಿದಿರಿ. ಆಮೇಲೆ ಆಮೇಲೆ ?

ಪಾರುಪತ್ಯಗಾರ.--ಒಡೆಯನೇ! ಆಮೇಲೆ ನಡೆದ ಸಂಗತಿಯನ್ನು ಏನೆಂದುಹೇಳಲಿ; ಹೇಳುವದಕ್ಕೆ ನನಗೆ ಬಾಯಿಯೇ ಬರುವುದಿಲ್ಲವಲ್ಲಾ ಏನುಮಾಡಲಿ ? ಹೇಗೆಹೇಳಲಿ ?

ಭೈರವಾನಂದ.--ಎಲೈ ! ನೀನಂಜಬೇಡ. ಏನಾದರೂ ಆಗಲಿ, ನಡೆದಸಂಗತಿಯನ್ನು ಯಥಾರ್ಥವಾಗಿ ಹೇಳು.

ಪಾರುಪತ್ಯಗಾರ.—"ಒಡೆಯನೇ ! ಆ ರಾಜಕುಮಾರನ ಆಳುತನವನ್ನು ಏನುಹೇಳಲಿ ? ರೆಪ್ಪೆ ಬಡಿಯುವಷ್ಟರೊಳಗಾಗಿ ನಮ್ಮ ಇಪ್ಪತ್ತುಮೂರು ಸವಾರರನ್ನು—"ಎಂದು ಸುಮ್ಮನಾದನು.

ಭೈರವಾನಂದ.—ಏನುಮಾಡಿದನು? ತಡಮಾಡದೇಹೇಳು. ಕತ್ತರಿಸಿಬಿಟ್ಟನೋ ?

ಪಾರುಪತ್ಯಗಾರ.—ಅಹುದು; ಬುದ್ಧೀ ! ಅಹುದು.

ಭೈರವಾನಂದ.—ಮುಟ್ಠಾಳಾ ! ಅವನು, ಎದ್ದು ಕತ್ತಿ ಎತಿ ಕಡಿಯುವವರೆಗೂ ನೀವು ಮಾಡುತ್ತಿದ್ದುದೇನು ? ಕುರಿಗಳಂತೆ ತಲೆಬೊಗ್ಗಿಸಿಕೊಂಡು ನಿಂತಿದ್ದಿರೋ ? ಅಥವಾ ಬಾಳೆಯ ಹಣ್ಣು ತಿನ್ನುತಿದ್ದಿರೋ ? ನಿಮ್ಮ ಕೈಯಲ್ಲಿ ಆಯುಧಗಳು ಇರಲಿಲ್ಲವೋ ?

ಪಾರುಪತ್ಯಗಾರ.—ಆಯುಧಗಳನ್ನು ಉಪಯೋಗಿಸುವ ಹಾಗೆ ಇದ್ದಿದ್ದರೆ, ಈ ಅನರ್ಥಗಳು ಸಂಭವಿಸುತ್ತಿರಲಿಲ್ಲ.

ಭೈರವಾನಂದ.—ನೀವು ಆಯುಧಗಳನ್ನು ಉಪಯೋಗಿಸದೇ ಇದ್ದುದೇಕೆ ? ನಿಮ್ಮ ಆಯುಧಗಳಿಗೆ ಯಾರಾದರೂ ಪಂಪು ಮಾಡಿದ್ದರೋ ?

ಪಾರುಪತ್ಯಗಾರ.—ಒಡೆಯನೇ ! ಮನ್ನಿಸಬೇಕು; ಆಯುಧಗಳನ್ನು ಉಪಯೋಗಿಸದೇ ಅವರನ್ನು ಉಪಾಯದಿಂದ ಕೈಸೆರೆ ಹಿಡಿದುಕೊಂಡು ಬರಬೇಕೆಂದು ಅಪ್ಪಣೆಯಾಗಿರಲಿಲ್ಲವೆ ?

ಭೈರವಾನಂದ.—ಓಹೋ ! ಅಹುದು ! ಆಮೇಲೆ ಏನಾಯಿತು ?

ಪಾರುಪತ್ಯಗಾರ.—ನಾನೊಬ್ಬನುಮಾತ್ರ ದೈವಗತಿಯಿಂದ ಹೇಗೋ ಅವರ ಕಣ್ಣಿಗೆ ಬೀಳದೆ ತಪ್ಪಿಸಿಕೊಂಡುಹೋದೆನು. ಹೋಗುವ ಸಂಭ್ರಮದಲ್ಲಿ ನನ್ನ ಪ್ರಿಯವಾದ ಕುದುರೆಯು ಒಂದು ದೊಡ್ಡ ಕೊರಕಲಿನೊಳಕ್ಕೆ ಬಿದ್ದು ಸತ್ತುಹೋಯಿತು.

ಭೈರವಾನಂದ.—ನಿನ್ನಂತಹ ರಣಹೇಡಿಯನ್ನು ಹೊತ್ತುಕೊಂಡು ಭೂಮಿಯಮೇಲೆ ಸುತ್ತುವುದಕ್ಕಿಂತಲೂ ಆ ಬಡಪ್ರಾಣಿಯು ಸತ್ತುಹೋದುದೇ ಲೇಸಾಯಿತು. ನಾಚಗೆಗೆಟ್ಟವನೇ ಆಬಳಿಕ ನೀನು ಮಾಡಿದುದೇನು ?

ಪಾರುಪತ್ಯಗಾರ.—ಮತ್ತಗೆ ತೆಪ್ಪತ್ತುಕೊಂಡು ಪರುಶುರಾಮಕ್ಷೇತ್ರದ ಕಡೆಗೆ ಓಡಿದೆನು.

ಭೈರವಾನಂದ.—ಕತ್ತೇ ! ಯಮಲೋಕದ ಕಡೆಗೆ ಓಡಬಾರದಾಗಿತ್ತೆ ? ನೀನತ್ತ ಕಡೆಗೆ ಓಡಿದುದೇಕೆ ?

ಪಾರುಪತ್ಯಗಾರ.—ಬುದ್ಧೀ, ನಾನು ಅಲ್ಲಿಗೆ ಬುದ್ಧಿಗೆಟ್ಟು ಓಡಲಿಲ್ಲ.

ಭೈರವಾನಂದ.—ಮತ್ತೇತಕೆ ಓಡಿದೆ ? ಜಾಗ್ರತೆಯಾಗಿ ಬೊಗಳು.

ಪಾರುಪತ್ಯಗಾರ.—ಆ ದಿನ ಆ ಹೊತ್ತಿಗೆ ಸರಿಯಾಗಿ ನಿನ್ನ ಪ್ರಿಯಳಾದ ಗಂಧರ್ವಕುಮಾರಿಯು ಅಲ್ಲಿಗೆ ಬರುತ್ತಾಳೆಂದು ನನಗೆ ಚೆನ್ನಾಗಿ ಗೊತ್ತಿದ್ದಿತು.

ಭೈರವಾನಂದ.—ಮೊಲಕ್ಕೆ ಅಂಜಿ ನಾಯಿಯು ಬಿಲಕ್ಕೆ ಸೇರಿಕೊಂಡಹಾಗಾಯಿತು. ಆ ರಾಜಪುತ್ರರಿಗೆ ಅಂಜಿ ನೀನು ಆ ಅಬಲೆಯನ್ನು ಮರೆಹೊಕ್ಕೆಯೋ ?

ಪಾರುಪತ್ಯಗಾರ.—ಹಾಗಲ್ಲ ; ಆ ರಾಜಪುತ್ರರನು ಆ ರಾತ್ರಿ, ಏನಾದರೂ ಒಂದುಪಾಯದಿಂದ ಬೋನಿನೊಳಕ್ಕೆ ಸೇರಿಸುವಂತೆ ಆಕೆಯನ್ನು ಕೇಳಿಕೊಂಡು ಆಕೆಗೆ ನಾನು ಬೆಂಬಲವಾಗಿ ನಿಂತುಕೊಂಡೆನು.

ಭೈರವಾನಂದ.—ಮತ್ತೂ ಸೊಗಸಾಯಿತು. ಯಾವ ಊರಿಗೆ ಯಾವ ದಾರಿ? ಪರಶುರಾಮಕ್ಷೇತ್ರವಿರುವುದೆಲ್ಲಿ ? ರಾಜಪುತ್ರರು ಪಯಣಮಾಡುತ್ತಿರುವುದೆಲ್ಲಿಗೆ ?

ಪಾರುಪತ್ಯಗಾರ.—ಆ ರಾಜಪುತ್ರರು ತಾವಾಗಿಯೇ ನಾವು ಒಡ್ಡಿದ್ದ ಬೋನಿನ ಸಮೀಪಕ್ಕೆ ಹೋಗಿಸೇರುವಹಾಗೆ ಮಾಡಿದೆನು.

ಭೈರವಾನಂದ.—ಭಲಾ ! ಭಲಾ !! ಅದು ಹೇಗೆ ?

ಪಾರುಪತ್ಯಗಾರ.—ಆ ರಾಜಪುತ್ರರು ಆದಾರಿಯಲ್ಲಿ ಅದೇ ಮೊದಲನೆಯಸಲ ಪಯಣ ಮಾಡುವುದೆಂದು ನನಗೆ ಚೆನ್ನಾಗಿ ಗೊತ್ತಾಗಿದ್ದುದರಿಂದ ಅವರು ಸ್ವಾಭಾವಿಕವಾಗಿ ಮೂರು ದಾರಿಗಳು ಸೇರುವ ಸ್ಥಳದಲ್ಲಿ ದಾರಿಯನ್ನು ವಿಚಾರಿಸದೇ ಮುಂದರಿಯಲಾರರೆಂದು ಯೋಚಿಸಿಕೊಂಡು ಆ ಸಮಯದಲ್ಲಿ ಪರಶುರಾಮಕ್ಷೇತ್ರದಿಂದ ಬರುತ್ತಿದ್ದ ಒಬ್ಬ ದಾಸೈಯ್ಯನನ್ನು ಕಂಡು ಅವನನ್ನು ಕೈಕಾಲು ಕಟ್ಟಿ ಒಂದು ಹಳ್ಳದಲ್ಲಿ ಕೆಡಹಿ ಅವನ

ಬಟ್ಟೆ ಬರೆಗಳನ್ನು ಕಿತ್ತುಕೊಂಡು ನಾನು ದಾಸ್ಯೆಯ್ಯನ ವೇಷವನ್ನು ಹಾಕಿಕೊಂಡು ಆ ರಾಜಪುತ್ರರ ಇದಿರಿಗೆ ಹೋದೆನು. ಆಗ ಹೊತ್ತುಬೀಳುವ ಹೊತ್ತಾಗಿದ್ದುದರಿಂದ, ಅವರು ನಾನು ಬಗೆದಿದ್ದಂತೆಯೇ ತವಕದಿಂದ ನನ್ನನ್ನು ಮಹೋದಯಕ್ಕೆ ದಾರಿ ಕೇಳಿದರು. ನಾನು ಅವರಿಗೆ ಬೋನಿನ ದಾರಿಯನ್ನು ತೋರಿಸಿದೆನು. ಅವರು ಆ ದಾರಿಯಲ್ಲಿ ಕಣ್ಣಿಗೆ ಕಾಣದಷ್ಟು ದೂರ ಹೋದಬಳಿಕ ನಾನು ತಕ್ಕ ಸಿಬ್ಬಂದಿಯೊಡನೆ ಗಂಧರ್ವ ಕುಮಾರಿಯ ಸಹಾಯಕ್ಕೆ ಹೋದೆನು.

ಭೈರವಾನಂದ.--ಒಳ್ಳೆಯದು! ಇದಾದರೂ ನೆರವೇರಿತೋ?

ಪಾರುಪತ್ಯಗಾರ.— ಒಡೆಯನೇ ! ಗಂಧರ್ವ ಕುಮಾರಿಯ ಚಾತುರ್ಯವು ಬಣ್ಣಿಸಲು ಅಸದಳವಾಗಿದೆ. ಆಹಾ ! ಆ ಚದುರೆಯು ಆ ಮಹಾವೀರರು ತಾವಾಗಿ ತಾವೇ ಬೋನಿನೊಳಕ್ಕೆ ಹೋಗುವ ಹಾಗೆ ಮಾಡಿದಳು.

ಭೈರವಾನಂದ.—ಶಾಬಾಸು ! ಶಾಬಾಸು ! ! ನಿನಗಿಂತಲೂ ಆ ಹೆಂಗಸೇ ಮೇಲು.

ಪಾರುಪತ್ಯಗಾರ.—ಆದರೆ ಫಲವೇನು? ಹಾವನ್ನು ಹೊಡದು ಹದ್ದಿಗೆ ಹಾಕಿದಂತಾಯಿತು.

ಭೈರವಾನಂದ.—ಹಾಗಂದರೇನು ?

ಪಾರುಪತ್ಯಗಾರ. —ಒಡೆಯನೇ ! ನಾವು ಬೋನನ್ನು ಸೇತುವೆಯ ಮೇಲೆ ಸಾಗಿಸಿಕೊಂಡು ಬರುತ್ತಿದ್ದಾಗ ಆ ಸೇತುವೆಯು ಅಕಸ್ಮಾತ್ತಾಗಿ ಒಡೆದುಹೋಯಿತು. ಬೋನೂ ಅದರ ಹಿಂದೆಮುಂದೆ ಬರುತ್ತಿದ್ದ ಪಂಜಿನವರೂ ಬೋನಿಗೆ ಕಟ್ಟಿದ್ದ ಕೋಣಗಳೂ ಬೋನನ್ನು ಹೊಡೆಯುತ್ತಿದ್ದವರೂ ಪ್ರವಾಹದ

ಪಾಲಾಗಿಹೋದರು. ಇಷ್ಟು ಹೊತ್ತಿಗೆ ಆ ಸೇತುವೆಯ ಕಲ್ಲುಗಳು ಕೂಡ ಸಮುದ್ರಕ್ಕೆ ಸೇರಿಹೋಗಿರಬಹುದು.

ಭೈರವಾನಂದ.—ಕೋಪೋದ್ದೀಪಿತನಾಗಿ, ತನ್ನ ಮಂತ್ರಿಯ ಕಡೆಗೆ ತಿರುಗಿ "ಎಲೈ ! ಈ ಅನರ್ಥ ಪರಂಪರೆಗೆ ಕಾರಣವೇನಿರಬಹುದು.

ಮಂತ್ರಿ.—ಒಡೆಯನೇ ! ಈ ಕಾರ್ಯದಲ್ಲಿ ದೈವವು ನಮಗೆ ಪ್ರತಿಕೂಲವಾಗಿರುವ ಹಾಗೆ ಕಾಣುತ್ತದೆ ; ಇಲ್ಲದಿದ್ದರೆ, ಪ್ರಯತ್ನವು ವಿಫಲವಾಗುವುದಕ್ಕೆ ಕಾರಣವಿಲ್ಲ.

ಭೈರವಾನಂದ.—ರೇಗಿ "ಒಳ್ಳೆಯ ಮಂತ್ರಣ ! ದೈವವೆಂಬುದೊಂದು ಇಲ್ಲದಿದ್ದರೆ, ಲೋಕದಲ್ಲಿ ಅವಿವೇಕಿಗಳು ತಮ್ಮ ತಪ್ಪುಗಳನ್ನು ಯಾರ ಮೇಲೆ ಹಾಕುತ್ತಿದ್ದರೋ ? ನಿನ್ನಂತಹ ದೈವಜ್ಞಶಿಖಾಮಣಿಯ ಉಪದೇಶವನ್ನು ಕೇಳಿದರೆ, ಲೋಕದಲ್ಲಿರುವ ಮಹಾವೀರರೆಲ್ಲರೂ ಕತ್ತಿಗಳನ್ನು ಬೀಸಾಡಬೇಕಾಗುತ್ತದೆ. " ಎಂದು ಅಲ್ಲಿದ್ದವರನ್ನೆಲ್ಲಾ ನೋಡಿ, "ಒಳ್ಳೆಯದು ಪ್ರಕೃತ, ನೀವೆಲ್ಲರೂ ನಿಮ್ಮ ದೈವವಾದವನ್ನು ಮರೆತು, ಮೊದಲು ಮಂತ್ರಣ ಮಾಡಿದ್ದಂತೆ, ಈ ಕಾರ್ಯವು ಕೈಗೂಡುವವರೆಗೂ ನಿಮ್ಮ ನಿಮ್ಮ ಕೆಲಸಗಳನ್ನು ಬಹು ಜಾಗರೂಕತೆಯಿಂದ ಮಾಡುತ್ತಿರಬೇಕು. ಜೋಕೆ ! ಆ ರಾಜಪುತ್ರರು ಪ್ರವಾಹಕ್ಕೆ ಬಿದ್ದು ಹೋದಮಾತ್ರಕ್ಕೆ ಅವರು ಸತ್ತುಹೋದರೆಂದು ನೀವು ಸರ್ವಥಾ ತಿಳಿಯಲಾಗದು. ನಾನು ಈ ಕಾರ್ಯವನ್ನು ಸಾಧಿಸದೇ ಎಂದಿಗೂ ಬಿಡುವುದಿಲ್ಲ. ಇನ್ನು ನೀವು ನಿಮ್ಮ ನಿಮ್ಮ ಕೆಲಸಗಳಿಗೆ ಹೋಗಿರಿ; ನಾನು ಆ ಬೈರಾಗಿಯನ್ನು ನೋಡಿಬರುವೆನು." ಎಂದು ಹೊರಟುಹೋದನು.

# ನಾಲ್ಕನೆಯ ಪ್ರಕರಣ.

---

## ಸಮಾಗಮ.

ಪ್ರಾಚೀನ ಕಾಲದಲ್ಲಿ ಸಾಮಾನ್ಯವಾಗಿ ನದಿಗಳು ಪೂರ್ಣವಾಗಿ ಪ್ರವಹಿಸಿದರೆ, ನದೀತೀರವಾಸಿಗಳಿಗೆ ಅದೊಂದು ದೊಡ್ಡ ಮಹೋತ್ಸವವಾಗಿದ್ದಿತು. ಅದ್ಯಾಪಿ, ಈ ಮಹೋತ್ಸವವನ್ನು ವಿಶೇಷವಾಗಿ, ಮಹಾನದೀತೀರವಾಸಿಗಳು ಬಹು ಶ್ರದ್ಧೆಯಿಂದಲೂ ವೈಭವದಿಂದಲೂ ಮಾಡುತ್ತಾರೆ.

ಈ ಉತ್ಸವವು ವರ್ಷಂಪ್ರತಿಯಲ್ಲಿಯೂ ನಡೆಯುವುದಿಲ್ಲ. ಏತಕ್ಕೆಂದರೆ, ಅಂತಹ ಪೂರ್ಣಪ್ರವಾಹವು, ಕೇವಲ ಅತಿವೃಷ್ಟಿಯಾದ ವರ್ಷಗಳಲ್ಲಿ ಮಾತ್ರ ಬರುವುದಲ್ಲದೆ ಸಾಧಾರಣವಾದ ಮಳೆಗಳಿಗೆಲ್ಲಾ ಬರುವುದಿಲ್ಲ.

ಅತಿವೃಷ್ಟಿಯು ಬಹುತರವಾಗಿ ಸಸ್ಯವರ್ಗಕ್ಕೂ ಪ್ರಾಣಿವರ್ಗಕ್ಕೂ ಅಪಾಯಕರವಾದಾಗ್ಯೂ ಆರ್ಯರು ಅದನ್ನು ಸಾಕ್ಷಾದ್ವರುಣನ ಪ್ರತಿನಿಧಿಯೆಂದು ಅಷ್ಟು ಶ್ರದ್ಧಾಭಕ್ತಿಯಿಂದ ಪೂಜಿಸುವುದೇನೂ ಅಯುಕ್ತವಲ್ಲ. ಅದೇತಕ್ಕೆಂದರೆ, ''ಲೋಕಕ್ಕುಪಕರಿಸುವನೊಳ್ದೋಷಮುಂ ಸ್ತುತ್ಯಮಲ್ತೇ''

ಪ್ರತಿಯೊಂದು ನದೀತೀರ ಪಟ್ಟಣಗಳಲ್ಲಿಯೂ ಪೂರ್ಣಪ್ರವಾಹಕ್ಕೆ ಒಂದೊಂದು ಗುರುತು ಉಂಟು. ಆಯಾ ಗುರುತುಗಳಿಗೆ ನೀರುಹತ್ತಿದ ಹೊರತು ಪೂರ್ಣಪ್ರವಾಹವೆನ್ನುವುದಿಲ್ಲ.

ಕುಶಾವತೀನದಿಯ ದಡದ ಮೇಲೆ ಸುಪ್ರಸಿದ್ಧವಾದ ರಾಜಧಾನಿಯಾಗಿದ್ದ ಮಹೋದಯವೆಂಬ ಪಟ್ಟಣದಲ್ಲಿ ಮಣಿಕರ್ಣಿಕಘಟ್ಟದ ಬಳಿ ವಿಶ್ವಕರ್ಮನಿಂದ ಕಟ್ಟಲ್ಪಟ್ಟಿದ್ದ ಆದಿನಾರಾಯಣಸ್ವಾಮಿಯ ದೇವಾಲಯದ ಮಹಾದ್ವಾರದ ಮುಂದುಗಡೆಯ ಸೋಪಾನವನ್ನು ಪ್ರವಾಹವು ಹತ್ತಿದರೆ ಅಲ್ಲಿಯ ಜನರು ಆಗ ಪೂರ್ಣಪ್ರವಾಹಮಹೋತ್ಸವವನ್ನು ಮಾಡುತ್ತಿದ್ದರು.

ಬೆಳಿಗ್ಗೆ ಸುಮಾರು ಆರುಗಂಟೆಯ ಸಮಯವಾಗಿದೆ. ಮೇಘಮಂಡಲವು ಏಕಕಾಲದಲ್ಲಿ ಭೂಮಂಡಲಕ್ಕೆ ಇಳಿಯುತ್ತಿದೆಯೋ ಎಂಬಂತೆ ಆಕಾಶವನ್ನು ಆವರಿಸಿಕೊಂಡಿದ್ದ ಹಿಮದ ಸಂದಣಿಯನ್ನು ದಿವಾಕರನ ಕಿರಣಗಳು ಪ್ರತಿಭಟಿಸುತ್ತಿದ್ದುವು.

ಈವೇಳೆಯಲ್ಲಿ ಗಂಗೆಯು ತನ್ನ ಜನ್ಮಸ್ಥಾನವಾದ ವಿಷ್ಣುಪಾದವನ್ನು ಸೇವಿಸುವುದಕ್ಕೆ ಹೋಗುತ್ತಿರುವಳೋ ಎಂಬಂತೆ, ಕುಶಾವತಿಯು ಮುತ್ತಿನ ಪದಕಗಳಂತೆ ಕಣ್ಗೊಳಿಸುತ್ತಿದ್ದ ಬಿಳಿಯ ನೊರೆಯಿಂದ ಕೂಡಿದ ಹೊಂಬಣ್ಣದ ಉತ್ತುಂಗತರಂಗಮಾಲೆಯಿಂದ ಅಲಂಕೃತಳಾಗಿ ಆದಿನಾರಾಯಣನ ಆಲಯದ ಮಹಾದ್ವಾರದ ಸೋಪಾನವನ್ನು ಹತ್ತುತ್ತಿದ್ದಳು.

ಅಷ್ಟು ಹೊತ್ತಿಗಾಗಲೇ ಮಹೋದಯದಲ್ಲಿ ಪೂರ್ಣಪ್ರವಾಹ ಮಹೋತ್ಸವಕ್ಕೆ ಉಪಕ್ರಮವಾಗಿದೆ. ಪುರಜನರೆಲ್ಲರೂ ಗಂಧಪುಷ್ಪಾದಿ ಪೂಜಾಸಾಮಗ್ರಿಗಳಿಂದ ಸಮೇತರಾಗಿ ಸಡಗರದಿಂದ ನದಿಯ ತಡಿಗೆ ತರಂಗ ತರಂಗವಾಗಿ ಬರುತ್ತಿದಾರೆ.

ಮಹಾರಾಜನು ಗಂಗೆಯ ಸೇವೆಗೆ ಬರುತ್ತಾನೆಂದು ಅರಮನೆಯ ಉದ್ಯೋಗಸ್ಥರೆಲ್ಲರೂ ತಮ್ಮ ತಮ್ಮ ಕಾರ್ಯಗಳಲ್ಲಿ ಅಪ್ರಮತ್ತರಾಗಿ ದಾರಿನೋಡುತ್ತ ಆದಿನಾರಾಯಣಸ್ವಾಮಿಯ

ದೇವಾಲಯದ ಸುತ್ತಮುತ್ತಲೂ ನೆರೆದಿದಾರೆ.

ನೋಡುತ್ತಿದ್ದ ಹಾಗೆಯೇ ಮಹಾರಾಜನು ಸಕುಟುಂಬನಾಗಿ ಸ್ನಾನಘಟ್ಟಕ್ಕೆ ಬಂದು ಯಥಾವಿಧಿಯಾಗಿ ಸ್ನಾನಮಾಡಿ ಗಂಗೆಯನ್ನು ಪೂಜಿಸಿ ಯಥೇಷ್ಟವಾಗಿ ದಾನಧರ್ಮಗಳನ್ನು ಮಾಡತೊಡಗಿದನು.

ಮಹಾರಾಣಿಯು ತಮ್ಮ ಹಿರಿಯರ ಪರಿವಿಡಿಯಂತೆ ಪ್ರವಾಹರೂಪಿಣಿಯಾದ ಗಂಗೆಗೆ ಮರದ ಬಾಗಿಣವನ್ನು ಕೊಟ್ಟಳು. ಈ ಮರದಲ್ಲಿ ಪೀತಾಂಬರ, ಕುಪ್ಪಸ, ಕಾಲುಂಗುರ ಮುಂತಾದ ಸುಮಂಗಲಿಯರ ಅಮೂಲ್ಯವಾದ ಪ್ರಸಾಧನಗಳಿದ್ದುವು.

ಆ ದ್ರವ್ಯದ ಆಶೆಗೆ, ಪ್ರಾಣದಮೇಲೆ ಆಶೆಬಿಟ್ಟು, ಆ ಮಹಾಪ್ರವಾಹಕ್ಕೆ ಬಿದ್ದ ಆ ಮರಗಳನ್ನು ಹಿಡಿದುಕೊಳ್ಳುವುದಕ್ಕೆ ಸಿದ್ಧರಾಗಿ ನಿಂತಿದ್ದ ಸಾಹಸಿಗರು ನಾಮುಂದು ತಾಮುಂದು ಎನ್ನುತ್ತ ಮೊಸಳೆಗಳಂತೆ ನೀರಿನೊಳಕ್ಕೆ ಇಳಿಬಿದ್ದರು.

ಅಂತಹ ತೀವ್ರವಾದ ಮೇಲುಹೊಳೆಯಲ್ಲಿ ತೇಲಿಕೊಂಡು ಹೋಗುತ್ತಿರುವುದನ್ನು ಹಿಡಿದುಕೊಳ್ಳುವುದು ಸಾಮಾನ್ಯರಿಗೆ ಸಾಧ್ಯವಲ್ಲ. ಹಿಂದೆ ಬಹುಮಂದಿ ಇಂತಹ ಮೇಲಾಟದಲ್ಲಿ ಸುಳಿಗೆ ಸಿಲುಕಿ ಸತ್ತುಹೋಗಿದ್ದುದು ಅಲ್ಲಿಯ ಜನರಿಗೆಲ್ಲಾ ನೆನಪಿನಲ್ಲಿ ಇದ್ದಿತು. ಆದುದರಿಂದಲೇ ಆ ಪಟ್ಟಣವಾಸಿಗಳಿಗೆ ಆಶ್ಚರ್ಯಕರವಾದ ನೋಟವಾಗಿದ್ದಿತು.

ಪರಮಕೃಪಾಳುವಾದ ಆ ಮಹಾರಾಜನು ಈ ಅಸಾಧಾರಣವಾದ ಪ್ರವಾಹಕ್ಕೆ ಅಕಸ್ಮಾತ್ತಾಗಿ ಸಿಲುಕಿದ ಪ್ರಾಣಿಗಳನ್ನು ಸಂರಕ್ಷಿಸುವದಕ್ಕೋಸ್ಕರ ಪ್ರವಾಹಕ್ಕೆ ಅಡ್ಡವಾಗಿ ತೆಂಗಿನ ಹಗ್ಗದ ಬಲವಾದ ಬಲೆಗಳನ್ನು ಕಟ್ಟಿಸಿದ್ದನು. ಈ ಬಲೆಗಳಿಗೆ

ಸಿಲುಕಿದ ಪ್ರಾಣಿಗಳನ್ನು ದಡಕ್ಕೆ ಸಾಗಿಸಿಕೊಂಡು ಹೋಗುವುದಕ್ಕೆ ತಕ್ಕ ಅಂಬಿಗರ ನೆರವಿಯೊಡನೆ ಸರಿಗೊಳಿಸಿದ್ದ ಹಲವು ಹರಗೋಲುಗಳು ತಿರುಗಾಡುತ್ತಿದ್ದುವು.

ನದಿಯ ಕರೆಯಮೇಲೆ ಆಪದ್ಗತರಾದವರನ್ನು ಆದರಿಸುವ ಸಲುವಾಗಿ ದೊಡ್ಡದೊಂದು ಗುಡಾರವು ಹಾಕಲ್ಪಟ್ಟಿದ್ದಿತು. ಇದರಲ್ಲಿ ಅರಮನೆಯ ವೈದ್ಯರು ಮಹಾರಾಜನ ಅಪ್ಪಣೆಯ ಮೇರೆಗೆ ಬೇನೆಯುವರ ಬೇನೆಗಳನ್ನು ಅರಿತು ಅತ್ಯಭಿಮಾನದಿಂದ ಚಿಕಿತ್ಸೆ ಮಾಡುತ್ತಿದ್ದರು.

ಇದಲದೆ ಬಲೆಗೆ ಸಿಲುಕಿದ ಹುಲಿ, ಕರಡಿ ಮುಂತಾದ ಕಾಡುಮೃಗಗಳನ್ನು ಕೂಡಾ ಬಹು ಪ್ರಯತ್ನದಿಂದ ಹಿಡಿದು ದಡಕ್ಕೆ ತಂದು ಕಾಪಾಡಿ ಅರಮನೆಯ ಉದ್ಯಾನದಲ್ಲಿ ಇರಿಸುತ್ತಿದ್ದರು.

ಮಹಾರಾಜನು ಗಂಗೆಯ ಪೂಜೆಯನ್ನು ತೀರಿಸಿಕೊಂಡು ಸತಿಸುತರೊಡನೆ ತವಕದಿಂದ ಡೇರೆಗೆ ಬಂದು ಜಲದೋಷದಿಂದ ಸಂಕಟ ಪಡುತ್ತಿದ್ದವರನ್ನು ಉಪಚರಿಸತೊಡಗಿದನು.

ಅಲ್ಲಿ ನಾಲ್ಕುಮಂದಿ ಮಾತ್ರ ಜೀವಂತರಾಗಿದ್ದರು. ಅವರಲ್ಲಿ ಮೂವರು ರಾಜಕುಮಾರರಂತೆ ಸುಕುಮಾರರಾಗಿದ್ದಾಗ್ಯೂ ಕಷ್ಟಸಹಿಷ್ಣುಗಳಾಗಿಯೂ ಮಹಾಪ್ರವಾಹಕ್ಕೆ ಬಿದ್ದು ತೊಳಲಿ ಬಳಲಿ ಬಸವಳಿದು ಬಣ್ಣಗೆಟ್ಟಿದ್ದಾಗ್ಯೂ ವರ್ಚಸ್ವಿಗಳಾಗಿಯೂ ಕಂಗೆಟ್ಟು ಕಳವಳಿಸುವದಕ್ಕೆ ಕಾರಣವಿದ್ದಾಗ್ಯೂ ಸಮಾಹಿತಚಿತ್ತರಾಗಿಯೂ ಕಾಣುತ್ತಿದ್ದರು.

ಬಹು ಸಂಪತ್ಸಮೃದ್ಧವಾದ ಆ ಮಹೋದಯದ ಮೇಲೆ ಆಗಿನ ಕಾಲದಲ್ಲಿ ಅನೇಕರಿಗೆ ಕಣ್ಣಿದ್ದಿತು. ಆಗಾಗ್ಗೆ ಅಲ್ಲಲ್ಲಿ

ವಿದೇಶದ ಗೂಢಚಾರರು ಸುಳಿದಾಡುತ್ತಿರುವರೆಂಬ ಸುದ್ದಿಯು ರಾಜ್ಯಾಧಿಕಾರಿಗಳ ಕಿವಿಗೆ ಬಿದ್ದಿದ್ದಿತು. ಈ ಕಾರಣದಿಂದ ಮಂತ್ರಿ ಮೊದಲಾದವರು ಇವರನ್ನು ಬೇಹುಕಾರರೆಂದು ಸಂಶಯಪಟ್ಟರು. ಮಹಾರಾಜನು ಅದನ್ನು ಲೆಕ್ಕಿಸದೇ 'ಆಪದ್ಗತನಾದವನು ಶತ್ರುವಾದಾಗ್ಯೂ ಅವನನ್ನು ದ್ವೇಷಿಸದೇ ಮಿತ್ರನೆಂತೆ ಭಾವಿಸಿ ಪೋಷಿಸುವುದು ನಮ್ಮ ಧರ್ಮ-ಮಾನವಧರ್ಮ' ಎಂದು ಹೇಳಿ ಅವರನ್ನು ಆದರಾತಿಶಯದಿಂದ ಆದರಿಸಿ ಸನ್ತವಿಸುತ್ತಿದ್ದನು.

ಆಗ ಮಹಾರಾಜನ ಮಕ್ಕಳು ಅವರಾರೆಂಬುದನ್ನು ಅರಿಯಬೇಕೆಂದು ತವಕಪಡುತ್ತಿರಲು ಮಹಾರಾಜನು ಅವರನ್ನು ಕುರಿತು ರಹಸ್ಯವಾಗಿ 'ಎಲೈ' ಅಭಿಗಾತ್ಯಕ್ಕೂ ಮನೋಗತಕ್ಕೂ ಶೀಲಸ್ವಭಾವಕ್ಕೂ ಮುಖಭಾವವೇ ಅನುಕ್ರಮಣಿಕೆ. ಅಪರಿಚಿತರಾದವರ, ಮತವನ್ನೂ ಜೀವನವನ್ನೂ ವೇತನವನ್ನೂ ಯಾತನೆಯನ್ನೂ ತಟ್ಟನೆ ಕೇಳಬಾರದು. ಅದೇತಕೆಂದರೆ, ಅಂತಹ ಪರಿಶೋಧಕ ಪ್ರಶ್ನೆಗಳು ಬಹು ಮರ್ಮಸ್ಪರ್ಶಗಳು. ಇದುದರಿಂದ ಸಮಯೋಚಿತವಾದುದನ್ನು ಮಾತ್ರ ಕೇಳಿ ತಿಳಿದುಕೊಳ್ಳುವ, ಎಂದು ಆ ರಾಜಕುಮಾರರನ್ನು ನೋಡಿ "ಎಲೈ! ತಮ್ಮಂದಿರಾ! ನೀವುಗಳು ಕುಶಾವತಿಯ ಪ್ರವಾಹಕ್ಕೆ ಬಿದ್ದ ಬಗೆ ಹೇಗೆ?" ಎಂದನು.

ಅದಕ್ಕೆ ಆ ಮೂವರಲ್ಲಿ ಮಹಾತೇಜಸ್ವಿಯಂತೆ ಕಾಣುತ್ತಿದ್ದ ಯುವಕನು ಗಂಭೀರವಾದ ಸ್ವರದಿಂದ "ಆರ್ಯನೇ! ನಾವು ಒಂದು ರಹಸ್ಯವಾದ ಕೆಲಸಕ್ಕೆ ಸಲುವಾಗಿ ಪರಶುರಾಮಕ್ಷೇತ್ರದ ಮೇಲೆ ಮಹೋದಯಕ್ಕೆ ಪಯಣವಾಗಿ ಹೊರಟೆವು.

ರಾಜ.—ಕೊಂಕಣವನ್ನು ಸುತ್ತಿಕೊಂಡು ಮೈಲಾರಕ್ಕೆ ಹೋದಹಾಗಾಯಿತು. ನೇರವಾದ ರಾಜಮಾರ್ಗವನ್ನು ಬಿಟ್ಟು ನೀವು ಆ ಕೆಟ್ಟದಾರಿಯನ್ನು ಹಿಡಿದುದೇಕೆ ?

ರಾಜಕುಮಾರ.—ಆ ದಾರಿಯು ನಿರಪಾಯವಾದುದೆಂತಲೂ ಸಮೀಪವಾದುದೆಂತಲೂ ನನಗೊಬ್ಬ ತಪಸ್ವಿಯು ಹೇಳಿದನು.

ರಾಜ.—ಆ ದಾರಿಯು ಕೇವಲ ತಪಸ್ವಿಗಳಿಗಲ್ಲದೇ ಮತ್ತಾರಿಗೂ ಅನುಕೂಲವಾದುದಲ್ಲ.

ರಾಜಕುಮಾರ.—ಸಾಧುಗಳು ಸರ್ವ ಭೂತಗಳ ವಿಷಯದಲ್ಲಿಯೂ ತಮ್ಮ ಉಪಮಾನದಿಂದಲೇ ವ್ಯವಹರಿಸುವುದು ಸ್ವಭಾವ ವಿರುದ್ಧವಾದುದೇನೂ ಅಲ್ಲ.

ರಾಜ.—ಯುವಕನೇ ಧರ್ಮವು ಕಲಿಯುಗದಲ್ಲಿ ಬಹು ಮಟ್ಟಿಗೆ ಮಲಿನವಾಗುತ್ತಾ ಬರುತ್ತಿದೆ. ಆದರೆ, ಯಾರಿಗೆಯಾವ ಸಾಧುವಿನ ಸಾಧುತ್ವದ ವಿಷಯದಲ್ಲಿ ವಿವಾದವಿಲ್ಲವೆಂದು ನಂಬುಗೆಯುಂಟೋ ಅವರು ಆ ಸಾಧುವಿನ ಮಾತನ್ನು ಸಾಧಾರಣವಾಗಿ ನಂಬಬಹುದು.

ರಾಜಕುಮಾರ.—ಸಾಧುವೇ ಆಗಲಿ ಅಸಾಧುವೇ ಆಗಲಿ, ಯಾವಕಾಲದಲ್ಲಿಯಾದರೂ ಕರ್ಮಕ್ಕೆ ವಿರುದ್ಧವಾದ ಸಾಹಾಯ್ಯವನ್ನು ಮಾಡಲಾರನು.

ರಾಜ.—ಅದು ಶಾಸ್ತ್ರಸಮ್ಮತವಾದ ಮಾತು, ಒಳ್ಳೆಯದು! ಮುಂದೆ ?

ರಾಜಕುಮಾರ.—ಆ ದಾರಿಯಲ್ಲಿ ಯಾರೋ ಅನಾರ್ಯರು ನಮ್ಮನ್ನು ಮೋಸಗೊಳಿಸಿ ಕಬ್ಬಿಣದ ಬೋನಿನೊಳಕ್ಕೆ ಸಿಕ್ಕಿಸಿಕೊಂಡು ಯಾವದೋ ಒಂದು ಸೇತುವೆಯ ಮೇಲೆ ಎತ್ತಲೋ

ಸಾಗಿಸಿಕೊಂಡು ಹೋಗುತ್ತಿದ್ದರು. ಆ ಸಮಯದಲ್ಲಿ ನಾವು ಅಕಸ್ಮಾತ್ತಾಗಿ ನದಿಯ ಪ್ರವಾಹದೊಳಕ್ಕೆ ಬಿದ್ದು ಹೋದೆವು.

ರಾಜ.—ಹಾಗೆ ಬೀಳುವುದಕ್ಕೆ ಕಾರಣವೇನು ? ನೀವಾಗಿ ನೀವೇ ದುಮುಕಿದಿರೋ ? ಅಥವಾ ಆ ಕೇಡಾಳಿಗಳೇ ಬೇಕಾಗಿ ನಿಮ್ಮನ್ನು ಪ್ರವಾಹಕ್ಕೆ ಕೆಡವಿದರೋ ? ಅಥವಾ ಆ ಬೋನೇನಾದರೂ ಅಪಾಯದಿಂದ ಜಾರಿ ನೀರಿನೊಳಕ್ಕೆ ಉರುಳಿಕೊಂಡಿತೋ ?

ರಾಜಕುಮಾರ.—ಬೋನಿನೊಳಗೆ ಸಿಲುಕಿ ಬಗೆಗೆಟ್ಟು ಭಂಗಪಡುತ್ತಿದ್ದನಮಗೆ ಹೊರಗಣ ಕಾರಣಗಳನ್ನು ತಿಳಿಯುವುದು ಅಸದಳವಾಗಿದ್ದಿತು. ಹಾಗೆ ಅಕಸ್ಮಾತ್ತಾಗಿ ಬೋನೇನಾದರೂ ನೀರಿನೊಳಕ್ಕೆ ಉರುಳಿಕೊಂಡಿದ್ದರೆ, ನಮಗೆ ದುರ್ಮರಣವು ತಪ್ಪುತ್ತಿರಲಿಲ್ಲ. ಏತಕ್ಕೆಂದರೆ,ಆ ಬೋನಿನ ಬಾಗಿಲು ಅಷ್ಟು ಬಲವಾಗಿದ್ದಿತು. ಆ ಕೆಡುಕರು ನಮ್ಮನ್ನು ನೀರಿನೊಳಕ್ಕೆ ಕೆಡವಿದರೆಂದು ಹೇಳುವುದಕ್ಕೂ ಆಗುವುದಿಲ್ಲ. ಅದೇತಕ್ಕೆಂದರೆ, ಮೊದಲಿಂದ ಕಡೆಯವರೆಗೂ ಅವರ ಸಾಹಸವೆಲ್ಲವೂ ನಮ್ಮನ್ನು ಕೈಸೆರೆ ಹಿಡಿದುಕೊಂಡು ಹೋಗುವುದಕ್ಕೆ ಆಗಿದ್ದಿತೇ ಹೊರತು ಬೇರೆಯಲ್ಲ.

ರಾಜ.—ಅಹಹಾ! ದೈವಗತಿಯು ಅತಿ ವಿಚಿತ್ರವಾದುದು! ಒಳ್ಳೆಯದು ! ಪ್ರವಾಹದೊಳಕ್ಕೆ ಬಿದ್ದಮೇಲೆ ನೀವು ಮೂವರೂ ಮರಳಿ ಸೇರಿಬಂದುದು ಹೇಗೆ?

ರಾಜಕುಮಾರ.—ನಾನು ನೀರಿನೊಳಕ್ಕೆ ಬಿದ್ದ ಕೂಡಲೇ ನನ್ನ ಕೈಗೊಂದು ದೊಡ್ಡ ತೊಲೆಯು ಸಿಕ್ಕಿತು. ಅದರ ಮೇಲೆ ಅನಾಯಾಸವಾಗಿ ಏರಿ ಕುಳಿತುಕೊಂಡು ಈ ನನ್ನ ಪ್ರಾಣ ಮಿತ್ರರ ಪಾಡೇನಾಯಿತೋ ಎಂದು ಯೋಚಿಸುತ್ತಿದ್ದ ಹಾಗೆಯೇ ನಿಮ್ಮ

ಬಲೆಯು ಹತ್ತಿರಕ್ಕೆ ಬಂದೆನು. ಆವೇಳೆಗೆ ಬೆಳಗೂ ಆಯಿತು ; ನನ್ನಂತೆಯೇ ತೊಲೆಗಳ ಮೇಲೆ ಏರಿಕೊಂಡು ಎಂದಿನಂತೆ ನನ್ನ ಹಿಂದೆಯೇ ಬರುತ್ತಿದ್ದ ನನ್ನ ಮಿತ್ರರೂ ಕಣ್ಣಿಗೆಬಿದ್ದರು.

ರಾಜ.—ನಿಮ್ಮ ಬಂಧನಕ್ಕಿಂತಲೂ ವಿಮೋಚನೆಯು ಐಂದ್ರ ಜಾಲಿಕದಂತೆ ಬಲು ಸೋಜಿಗವಾಗಿದೆ. "ವನದಲ್ಲಿಯೂ ರಣ ರಂಗದಲ್ಲಿಯೂ ಶತ್ರು, ಜಲ, ಅಗ್ನಿ, ಇವುಗಳ ಮಧ್ಯದಲ್ಲಿಯೂ ಪುರಾಕೃತವಾದ ಪುಣ್ಯವು ಕಾಪಾಡುತ್ತದೆ" ಎಂಬ ಶಾಸ್ತ್ರಕ್ಕೆ ನಿಮ್ಮ ಚರಿತ್ರೆಯೊಂದು ನಿದರ್ಶನವಾಗಿದೆ. ನಿಮ್ಮ ಬಂಧವಿಮೋಚ ನೆಗೆ ದೈವದ ಸಹಾಯದ ಹೊರತು ಬೇರೆ ಕಾರಣವಾವುದೂ ಕಾಣು ವುದಿಲ್ಲ. ಇಂತಹ ದೈವಾನುಗ್ರಹಕ್ಕೆ ಪಾತ್ರರಾದ ನಿಮ್ಮನ್ನು ಕುರಿತು ಹಲವು ವಿಷಯಗಳನ್ನು ವಿಚಾರಮಾಡಬೇಕೆಂದು ನನ್ನ ಮನವು ಆತುರಪಡುತ್ತಿದೆ ; ಆದರೆ, ವಿಧಿವಶದಿಂದ ಕಳವಳ ಗೊಂಡಿರುವ ನಿಮ್ಮನ್ನು ಬೇಡದ ಪ್ರಶ್ನೆಗಳಿಂದ ಪ್ರಯಾಸಬಡಿಸು ವುದು ಯುಕ್ತವಲ್ಲ. ಆದುದರಿಂದ ನಾನಿನ್ನು ಹೆಚ್ಚು ಮಾತ ನಾಡದೇ ನಿಮ್ಮ ಕೈಂಕರ್ಯಕ್ಕೆ ಸಿದ್ಧನಾಗುವೆನು. ನಿಮ್ಮ ಪ್ರಕೃತ ಕಾರ್ಯಕ್ಕೆ ಈ ದಾಸನಿಂದ ಏನಾದರೂ ಉಪಯೋಗವಾಗುವು ದಾಗಿದ್ದರೆ ಅಪ್ಪಣೆಯಾಗಬಹುದು.

ರಾಜಕುಮಾರ.—ಆರ್ಯನೇ ಈ ಸಂಗತಿಗಳ ಪರಂಪರೆ ಯು ನನಗೆ ಸ್ವಪ್ನದಂತೆ ಕಾಣುತ್ತಿದೆ. ಆದುದರಿಂದ ನಾವು ಈಗ ಯಾವ ದೇಶಕ್ಕೆ ಬಂದು ಸೇರಿರುವೆವೋ ? ಯಾವ ಮಹಾನು ಭಾವನ ಸಂಗಡ ಮಾತನಾಡುವ ಗೌರವಕ್ಕೆ ಪಾತ್ರರಾಗಿರುವೆವೋ? ಯಾವ ಸತ್ಕಾರಿಯ ಆತಿಥ್ಯವನ್ನು ಅನುಭವಿಸುತ್ತಿರುವೆವೋ ? ಕರುಣಿಸಿ ಹೇಳಿ ನನ್ನ ಬುದ್ಧಿಯನ್ನು ಬೆಳಗ ಮಾಡಬೇಕು.

ಅರಸು.— ವತ್ಸಾ! ಇಹಸಂಸಾರವೇ ಸ್ವಪ್ನಪ್ರಾಯವಾಗಿದೆ. ಅದರಲ್ಲಿ ಇಂತಹ ಕ್ಷಣ ಭಂಗುರಗಳಾದ ಸಂಭವಗಳು ಉಪ ಸ್ವಪ್ನಗಳಾಗಿರುವುವು. ಆದರೂ ಲೌಕಿಕ ವ್ಯವಹಾರಕ್ಕೆ ಅನು ಸಾರವಾಗಿ ಅವುಗಳನ್ನು ಯಥಾರ್ಥವಾದುವುಗಳೆಂದು ಭಾವಿಸ ಬೇಕಾಗಿದೆ. ನೀವು ಈಗ ನಿಮ್ಮ ಉದ್ದೇಶದಂತೆ ಮಹೋದಯಕ್ಕೆ ಬಂದು ಸೇರಿರುವಿರಿ. ಈ ನಗರಕ್ಕೆ ಅರಸನೆಂದು ಕರೆಯಲ್ಪಡು ತ್ತಿರುವ ಮಲಯಕೇತುವೆಂಬ ಸಜ್ಜನ ವಿಧೇಯನಿಗೆ ನೀವು ಈಗ ದಯೆಮಾಡಿ ನಿಮ್ಮಗಳ ಸಮಾಗಮ ಸನ್ಮಾನವನ್ನು ದಯೆಪಾಲಿಸು ತ್ತಿರುವಿರಿ. ಸಾಧುಗಳಾದ ಈ ದೇಶದ ಪ್ರಜೆಗಳ ಪ್ರೇಮ ಪೂರ್ವಕವಾದ ಆತಿಥ್ಯವನ್ನು ಆದರಿಸುತ್ತಿರುವಿರಿ.

ರಾಜಕುಮಾರ.—ಮಲಗಿದ್ದವನು ತಟ್ಟನೆ ಎದ್ದುನಿಂತು, ವಿನಯದಿಂದ ''ಮಹಾ ಸ್ವಾಮಿ! ಅರಿವಿಲ್ಲದ ನನ್ನ ಅನಾದರ ವನ್ನು ಮನ್ನಿಸಬೇಕು. ತಮ್ಮ ಪಾದದರುಶನದಿಂದ ನಾನಿಂದು ಧನ್ಯನಾದೆನು,—ಪುನೀತನಾದೆನು. ತಾವು ಕಳೆದ ಮಾಸದಲ್ಲಿ ಮಾ ಡಿದ ಜ್ಯೋತಿಷ್ಟೋಮದಲ್ಲಿ ಋತ್ವಿಜರಾಗಿದ್ದ, ಬದರಿಕಾಶ್ರಮ ವಾಸಿಗಳಾದ ಸೋಮಯಾಜಿಗಳ ಮುಖದಿಂದ ತಮ್ಮ ಮಹಾ ಮಹಿಮೆಯನ್ನು ಕೇಳಿ ಅಳವಿಲ್ಲದ ಆನಂದವನ್ನು ಹೊಂದಿದೆನು. ಈಗಲೀಗ ನಾನು ಪಟ್ಟ ಕಷ್ಟಗಳೆಲ್ಲವೂ ಮರೆತುಹೋದುವು. ಈಗಲೀಗ ನಾನು ಬಗೆದ ಕಾರ್ಯದ ಉತ್ಸಾಹವು ನನ್ನ ಮನ ದಲ್ಲಿ ಮರಳಿ ಅಂಕುರಿತವಾಯಿತು.

ರಾಜ.—ವತ್ಸಾ! ನನಗೆ ಗೋಸೇವೆಗೆ ವೇಳೆಯಾಯಿತು. ಇದಲ್ಲದೇ ನಿಮ್ಮ ಕಾರ್ಯವು ಬಹಳ ಅವಸರವಾದುದಾಗಿ ಕಾಣು ತ್ತದೆ. ಆದುದರಿಂದ ನನ್ನಿಂದ ನಿಮಗೆ ಏನಾದರೂ ಆಗಬೇಕಾದು ದಿದ್ದರೆ ಜಾಗ್ರತೆಯಾಗಿ ಹೇಳು.

ರಾಜಕುಮಾರ.—ಸ್ವಾಮಿ! ನಾನು ಈ ಪಟ್ಟಣಕ್ಕೆ ಈಶಾನ್ಯದಲ್ಲಿರುವ ಧರ್ಮಾರಣ್ಯದಲ್ಲಿ ವಾನಪ್ರಸ್ಥಾಶ್ರಮದಲ್ಲಿರುವ ಮಹಾನುಭಾವರಾದ ಕುಶನಾಭರ ಸನ್ದರ್ಶನಕ್ಕೆಹೋಗಬೇಕಾಗಿದೆ. ಆದುದರಿಂದ ನಮಗೆ ಅಲ್ಲಿಗೆ ಹಾದಿತೋರಿಸುವುದಕ್ಕೆ ಯಾರನ್ನಾದರೂ ಒಬ್ಬ ಸಹಾಯಕನನ್ನು ಕರುಣಿಸಿ ಕಳುಹಿಸಿಕೊಡಬೇಕು.

ಮಹಾರಾಜನು ತನ್ನ ಮಂತ್ರಿಯನ್ನು ನೋಡಿ "ಎಲೈ! ಈ ಕುಮಾರರು ಸುರಕ್ಷಿತರಾಗಿ ಕುಶನಾಭರ ಆಶ್ರಮಕ್ಕೆ ಹೋಗಿ ಸೇರುವುದಕ್ಕೆ ತಕ್ಕ ಏರ್ಪಾಡನ್ನು ಒಡನೆಯೇ ಮಾಡಿಸತಕ್ಕದ್ದು" ಎಂದು ಬೆಸಸಿ ಮುಂದರಿದು ಅಲ್ಲಿ ಬಲೆಯಲ್ಲಿ ಸಿಕ್ಕಿದ್ದ ಮತ್ತೊಬ್ಬ ಬೇನೆಯವನ ಸನಿಹಕ್ಕೆ ಹೋದನು.

ಇವನು ಕಾಡಮನುಷ್ಯನಂತೆ ಕುಳ್ಳಾಗಿಯೂ ಕಪ್ಪಾಗಿಯೂ ವಿಕಾರವಾಗಿಯೂ ಇದ್ದನು. ಇವನ ತಲೆಗೂ ಕೈ ಕಾಲುಗಳಿಗೂ ಬಹಳ ಪೆಟ್ಟು ತಗುಲಿದ್ದಿತು. ಗಾಯಗಳಿಗೆಲ್ಲಾ ವೈದ್ಯರು ಮದ್ದು ಹಾಕಿ ಬಿಳಿಯ ಅರಿವೆಗಳನ್ನು ಕಟ್ಟಿದ್ದರು. ಇವನು ಮೈಯ್ಯ ಮೇಲೆ ಅಷ್ಟು ಗಾಯಗಳಾಗಿದ್ದಾಗ್ಯೂ ಗೆಲುವಾಗಿಯೇ ಇದ್ದನು; ದೃಷ್ಟಿಯನ್ನು ಬೇರೆ ಕಡೆಯಲ್ಲಿ ಇಟ್ಟಿದ್ದಾಗ್ಯೂ ಮಹಾರಾಜನಿಗೂ ರಾಜಕುಮಾರನಿಗೂ ನಡೆದ ಸಂಭಾಷಣೆಯನ್ನು ಗುಟ್ಟುಗಳ್ಳನಂತೆ ಕಿವಿಗೊಟ್ಟು ಕೇಳುತ್ತಿದ್ದನು.

ಇವನನ್ನು ನೋಡಿ ಮಹಾರಾಜನು 'ಎನ್ನೈಯ್ಯಾ, ! ನೀನು ಆರೋಗ್ಯವಾಗಿರುವಿಯಾ ?

ಕುಳ್ಳ.—ನಾನು ಸತ್ತು ಮತ್ತೆ ಹುಟ್ಟಿದಹಾಗಾಯಿತು, ಬುದ್ಧೀ !

ಪುಲಯಕೇತು.—ನೀನಾರು ?

ಕುಳ್ಳ.—ಬುದ್ಧೀ, ನಾನು ಕಾಡಕುರುಬ. ಕಾಳೀ ಕಣಿವೆಯಲ್ಲಿ ಜೇನು ಹಿಡಿದು ಜೀವನಮಾಡುತ್ತಿರುವೆನು.

ಮಲಯಕೇತು.—ನೀನು ಪ್ರವಾಹಕ್ಕೆ ಸಿಕ್ಕುಬಿದ್ದುದು ಹೇಗೆ ?

ಕುರುಬ.—ನೆನ್ನೆ ಹೊತ್ತು ಬೀಳುವ ಹೊತ್ತಿನಲ್ಲಿ ಸೋಮಪುರದ ಸಂತೆಯಿಂದ ಜೇನುತುಪ್ಪಮಾರಿಕೊಂಡು ಬರುತ್ತಿದ್ದೆನು. ಹೊಳೆಯು ಅಡ್ಡಗಟ್ಟಿಕೊಂಡಿದ್ದಿತು. ಕೊಂಚ ಹೊತ್ತಿನಲ್ಲಿಯೇ ಇಳಿದು ಹೋಗಬಹುದೆಂದೆಣಿಸಿ ಕರೆಯ ದಂಡೆಯಲ್ಲಿದ್ದ ಒಂದು ಬಂಡೆಯಮೇಲೆ ಕುಳಿತುಕೊಂಡು ಗೆಣಸಿನ ಗೆಡ್ಡೆಯನ್ನು ತಿನ್ನುತ್ತಿದ್ದೆನು. ಇದ್ದಕ್ಕಿದ್ದ ಹಾಗೆಯೇ ಸದ್ದುಮಾಡದೆ ಆ ಮಾಯದ ಹೊಳೆ ಎದ್ದು ನನ್ನನ್ನು ಹೊತ್ತುಕೊಂಡು ಬಂದಿತು.

ಮಲಯಕೇತು.—ನಕ್ಕು "ಎಲ ಎಲವೋ ! ಹೊಳೆ ಎದ್ದು ಸದ್ದುಮಾಡದೇ ಬಂದಿತೆ? ಅದೆಂತಹ ಮೋಸದ ಕೆಲಸ ! ಬಹುಶಃ ಅದು ನಿನ್ನ ಗೆಣಸಿನ ಗೆಡ್ಡೆಯನ್ನು ಅಪಹರಿಸುವುದಕ್ಕೆ ಹಾಗೆ ಮಾಡಿರಬಹುದು. ಒಳ್ಳೆಯದು ! ಬೇಕಾದರೆ, ನಿನ್ನ ಗಾಯಗಳು ಚನ್ನಾಗಿ ವಾಸಿಯಾಗುವವರೆಗೂ ಇಲ್ಲಿಯೇ ಇದ್ದು ಬಳಿಕ ನಿನ್ನೂರಿಗೆ ಹೋಗಬಹುದು." ಎಂದು ಹೇಳಿ ಹಿಂದಿರುಗಿ ತನ್ನ ಅರಮನೆಯ ಕಡೆಗೆ ತೆರಳಿದನು.

ಹಿನ್ದೆಯೇ ನಾಲ್ಕು ಕುದುರೆಯ ಗಾಡಿಯೊಂದು ಆ ಡೇರೆಯ ಬಾಗಿಲ ಮುಂದುಗಡೆ ಬಂದು ನಿಂತಿತು. ಇದರ ಹಿನ್ದೆ ಮುನ್ದೆ ಬಿಚ್ಚುಕತ್ತಿಯ ಸವಾರರಿದ್ದರು. ಕೂಡಲೇ ದ್ವಾರಪಾಲಕನು ರಾಜಕುಮಾರರ ಸನಿಹಕ್ಕೆ ಹೋಗಿ "ಮಹಾಸ್ವಾಮಿ ! ತಮ್ಮ ಪಟ್ಟಣಕ್ಕೆ ಗಾಡಿಯು ಸಿದ್ಧವಾಗಿದೆ" ಎಂದು ಬಿನ್ನವಿಸಿದನು.

ಅದನ್ನು ಕೇಳಿ ರಾಜಕುಮಾರರು ತಟ್ಟನೆ ಎದ್ದು ಅಲ್ಲಿದ್ದ ವೈದ್ಯರಿಗೂ ಇತರ ಪರೋಪಕಾರಿಗಳಿಗೂ ವಂದಿಸಿ ಅವರ ಅಪ್ಪಣೆಯನ್ನು ಪಡೆದು ಗಾಡಿಯಲ್ಲಿ ಹೋಗಿ ಕುಳಿತುಕೊಂಡರು. ಕೂಡಲೇ ಗಾಡಿಯು ಮುಂದಕ್ಕೆ ಹೊರಟಿತು.

ಈ ರಾಜಕುಮಾರರಾರೆಂಬುದು ನಮ್ಮ ವಾಚಕ ಮಹಾಶಯರಿಗೆ ಕಥಾಸಂದರ್ಭದಿಂದ ತಿಳಿದೇ ಇರಬಹುದು. ಆದಾಗ್ಯೂ ನಾವು ಇವರನ್ನು ನಮ್ಮ ವಾಚಕರಿಗೆ ಗುರುತು ಹೇಳದೇ ಇರಲಾಗದು. ಇವರು, ಮೊದಲನೆಯ ಪ್ರಕರಣದಲ್ಲಿ ಆಖ್ಯಾತವಾದ ಸಂಗತಿಯಲ್ಲಿ ಆ ಇಪ್ಪತ್ತು ಮೂರು ಜನ ಸವಾರರ ತಲೆಗಳನ್ನು ಚಂಡಾಡಿದ ಕಡುಗಲಿಯಾದ ಆ ವೀರನೂ ಅವನ ಜತೆಗಾರರೂ ಅಲ್ಲದೇ ಮತ್ತಾರೂ ಅಲ್ಲ.

# ಆರನೆಯ ಪ್ರಕರಣ.

## ಅಶ್ವಮುಣ್ಡಲ.

ಬೇಸಿಗೆ ಕಾಲದ ಬಿಸಿಲಿಗಿಂತಲೂ ಮಳೆಗಾಲದ ಬಿಸಿಲ ಬೇಗೆಯು ಬಹಳ ಹೆಚ್ಚು. ಈ ಕಾಲದಲ್ಲಿ ಬೇಗೆ ಹೆಚ್ಚಾದ ದಿನ ಮಳೆಗೆ ಮಹಾಯೋಗವೆನ್ನುವರು ; ಆ ದಿನ ಬಹುಶಃ ಮಳೆ ವಿಪರೀತವಾಗಿ ಬಾರದೇ ಇರುವುದಿಲ್ಲ.

ನಮ್ಮ ವೀರ ಮುಖ್ಯರು ಮಹೋದಯದಿಂದ ಪಯಣ ಮಾಡಿ ಹೊರಟವೇಳೆಯಲ್ಲಿ, ಆದಿನ ಇನ್ನೆಷ್ಟು ಮಳೆಸುರಿವುದೋ ಎಂಬಂತೆ ದಗದಗನೆ ದಗೆ ಏಳುತ್ತಿದ್ದಿತು. ಆಗಸದಲ್ಲಿ ಅಲ್ಲಲ್ಲಿ ಬಿಳಿಮೋಡದೊಡ್ಡುಗಳು ಆಗಾಗಲೇ ಕಪ್ಪೇರುತ್ತಿದ್ದವು. ಸಾಲು ಮರಗಳ ನೆಳಲಲ್ಲಿ ಗಾಡಿಯು ಅತಿವೇಗವಾಗಿ ಓಡುತ್ತಿದ್ದುದರಿಂದ ವೀರಮುಖ್ಯರಿಗೆ ಆಗಿನ ಬಿಸಲಿನ ಬೇಗೆಯು ಅಷ್ಟು ಕಾಣಲಿಲ್ಲ.

ರಾಜಮಾರ್ಗದ ಇಕ್ಕಡೆಯಲ್ಲಿಯೂ ಹೊಲಗಳಲ್ಲಿ ಹಳ್ಳಿಯ ಹೆಂಗಸರು ತಲೆಗೆ ಶರಗುಗಳನ್ನು ಕಟ್ಟಿಕೊಂಡು ಗುಂಪುಗೂಡಿ ಪದಗಳನ್ನು ಇಂಪಾಗಿ ಪಾಡುತ್ತಾ ತನಕಗೊಂಡು ಮೊಗದಿಂದ ತಟಕುತ್ತಿದ್ದ ಬೆವರು ನೀರನ್ನು ಕೂಡಾ ಒರಸಿಕೊಳ್ಳದೇ ನಾಮುಂದು ತಾಮುಂದು ಎಂದು ಗಂಡಾಳುಗಳನ್ನು ಹಿಂದೆ ಮಾಡುತ್ತಾ ಸಾಲಹಿಡಿದು ಕಳೇಕೀಳುತ್ತಿದ್ದರು.

ಬದಗಳ ಮೇಲೆ ಮರಳಿನಿಂದ ಮನೆಗಟ್ಟಿಕೊಂಡು ಬೆತ್ತಲೆ ಆಡುತ್ತಿದ್ದ ಕೂಲಿಯಾಳುಗಳ ಚಿಕ್ಕ ಮಕ್ಕಳು ವೀರ ಮುಖ್ಯರ ಕುದುರೆ ಗಾಡಿಯನ್ನು ಕಂಡು, ಆಶ್ಚರಿಗೊಂಡು, ಕೂಗಾಡುತ್ತಾ ದಾರಿಯ ಅಂಚಿಗೆ ಓಡಿಬಂದು "ಸಾರೋಟ್! ಸಾರೋಟ್" ಎಂದು ಕುಣಿದಾಡುತ್ತಿದ್ದರು.

ವೀರನು ಇವನ್ನು ನೋಡಿ ವಿನೋದಗೊಂಡು ತನ್ನ ಜತೆಗಾರನಾದ ಮೊದಲನೆಯ ಸವಾರನನ್ನು ನೋಡಿ "ಎಲೈ! ಕಬಟ ತೋಟದ ಕಾವಲುಗಾರನಾಗಿದ್ದ ಆ ಮಾಯಾವಿಯಾದ ಮಾಣಿಯು ಈ ಹುಡುಗರಿಗಿಂತಲೂ ಕೊಂಚ ದೊಡ್ಡವನಾಗಿದ್ದನಲ್ಲವೇ?

ಸವಾರ:—ಹಾವು ಎಳೆಯದಾದರೆ ಅದರ ವಿಷವೂ ಎಳೆಯದಾದೀತೆ?

ವೀರ.—ಎಲೈ! ನೀನು ಅವನನ್ನು ನೋಡಿದ ಕೂಡಲೇ 'ಕಳ್ಳರನ್ನು ಹಿಡಿಯುವ ಯುಕುತಿಯು ಇವನಿಗೆ ವಂಶ ಪರಂಪರೆಯಾಗಿ ಬಂದ ಹಾಗಿದೆ' ಎಂತಲೂ 'ಇವನು ದೊಡ್ಡವನಾದರೆ ಕಳ್ಳರನ್ನು ಹಿಡಿವುದರಲ್ಲಿ ಮಹಾ ಪ್ರವೀಣನಾಗುತ್ತಾನೆ' ಎಂತಲೂ ಹೇಗೆ ಊಹಿಸಿದೆ? ಇದು ಹಾಗಿರಲಿ, ಆ ಗುಡಿಸಲನ್ನು ನೀನು ಕಪಟಿಗಳ ಹೃದಯಕ್ಕೆ ಹೋಲಿಸಿದುದೀಗ ಪರಮಾಶ್ಚರ್ಯಕರವಾಗಿದೆ. ಓಹೋ ಆಶ್ಚರ್ಯಪಡಲೇಕೆ? ಈಗಿನ ಕಾಲದಲ್ಲಿ ನೀನೊಬ್ಬ ಮಹಾಕವಿಯಲ್ಲವೆ? ಮಹಾ ಕವಿಗಳಿಗೆ ತ್ರಿಕಾಲಜ್ಞಾನವು ಸರಸ್ವತೀ ವರಪ್ರಸಾದಲಬ್ಧವಾದುದು. ಹಾಗಿಲ್ಲದಿದ್ದರೆ "ಹುತಾಶನನು ಚನ್ದನ ಪಂಕದಂತೆ ಸೀತಳನಾಗಿರುವನು." "ಹಗಲು ಕಾಗಿಯ ಕೂಗಿಗೆ ಭಯಪಟ್ಟವಳು, ರಾತ್ರಿ ನರ್ಮದೆಯನ್ನು ದಾಟುವಳು." ಇವಾದಿಯಾದ ಭೋಜರಾಜನ ಸಮಸ್ಯ

ಗಳನ್ನು ಕವಿಗಳು ಹೇಗೆ ಪೂರಣಮಾಡುತ್ತಿದ್ದರು, ಆ ಕವಿತ್ವವು ಅಷ್ಟು ಯಥಾರ್ಥವಾಗದೆ ಬರಿ ನುಡಿಗಳ ಗಡಣವಾಗಿದ್ದರೆ ವಿದ್ವನ್ಮಣಿಯಾದ ಭೋಜ ಮಹಾಪ್ರಭುವು ಅವುಗಳಿಗೆ ಅಕ್ಷರ ಲಕ್ಷವನ್ನು ಕೊಡುತ್ತಿದ್ದನೆ ?

ಸವಾರ.—ಒಡೆಯನೇ ! ಪರರ ದೋಷಗಳನ್ನು ಗಮನಿಸದೇ ಕೇವಲ ಗುಣವನ್ನು ಮಾತ್ರ ಗ್ರಹಿಸಿ ಅದನ್ನು ಅತಿಶಯೋಕ್ತಿಯಿಂದ ಕೊಂಡಾಡುವುದು ಸಜ್ಜನರಿಗೆ ಸಹಜವಾದುದು. ಆದರೆ, ಅಲ್ಪಮತಿಯಾದ ನಾನು ಆ ಮಹಾ ಕವಿಗಳ ಪಾದಧೂಳಿಯನ್ನು ಕೂಡಾ ಹೋಲಲಾರೆನೆಂದು ದೃಢವಾಗಿ ನಂಬಿರುವೆನು.

ವೀರ.—ಪೂರ್ಣಪಂಡಿತರಿಗೆ ಸ್ವಾಹಂಕಾರ ಖಂಡನೆಯು ಸ್ವಾಭಾವಿಕವಾದುದು ; ಕವಿಸಾರ್ವಭೌಮನಾದ ಕಾಳಿದಾಸನು ತನ್ನನ್ನು ತಾನು ಮಂದನೆಂದು ಭಾವಿಸಿಕೊಂಡಿರುವನು.

ವೀರಮುಖ್ಯರು ಈ ರೀತಿಯಾಗಿ ವಿನೋದದಿಂದ ಸುಳ್ಳು ನುಡಿಗಳನ್ನು ಆಡಿಕೊಳ್ಳುತ್ತಿದ್ದಹಾಗೆಯೇ ಸಂಜೆಗೆಂಪು ಅವರ ಮುಖಕ್ಕೆ ಮೆರುಗಿಟ್ಟಿತು.

ಆವೇಳೆಗೆ ಗಾಡಿಯೊಂದು ದೊಡ್ಡ ಆಲದಮರದ ಕೆಳಗೆ ನಿಂತಿತು. ಒಡನೇ ಸಾರಥಿಯು ಕೆಳಕ್ಕೆ ಇಳಿದು ವೀರಮುಖ್ಯರಿಗೆ ಕೈ ಮುಗಿದು "ಮಹಾಸ್ವಾಮೀ ! ಇದುವೇ ಕುಶನಾಭರ ಆಶ್ರಮದ್ವಾರ. ಇಲ್ಲಿಂದಾಚೆಗೆ ಗಾಡಿ ಹೋಗುವುದಿಲ್ಲ". ಎಂದು ಬಿನ್ನವಿಸಿದನು.

ಆ ಮಾತನ್ನು ಕೇಳಿ ಮೂವರೂ ಕೆಳಕ್ಕೆ ಇಳಿದರು. ವೀರನು ಆಪರಿಜನರಿಗೆ ಯಥೋಚಿತವಾಗಿ ಪಾರಿತೋಷಿಕವನ್ನು ಕೊಟ್ಟು "ಎಲ್ಲೈ ನೀವಿನ್ನು ಹಿಂದಿರುಗಿ ಹೋಗಬಹುದು." ಎಂದು

ಬೆಸಸಿ ಆಶ್ರಮದ ಕಡೆಗೆ ಪಾದಚಾರಿಯಾಗಿ ನಡೆದನು. ಅವನ ಜತೆಗಾರರಿಬ್ಬರೂ ಅವನನ್ನು ಹಿಂಬಾಲಿಸಿದರು.

ಈ ತಪೋವನವು ದೂರದೃಷ್ಟಿಗೆ ಸಣ್ಣದೊಂದು ಉಪವನದಂತೆ ಕಾಣುತ್ತಿದ್ದಿತು. ಅಲ್ಲಿ ಎಲ್ಲಾ ಋತುಗಳ ಫಲಗಳೂ ಪುಷ್ಪಗಳೂ ಎಲ್ಲಿ ನೋಡಿದರಲ್ಲಿ ಕಂಗೊಳಿಸುತ್ತಿದ್ದುವು. ಇದರ ಸುತ್ತಲೂ ಕೊತ್ತಳದಂತೆ ಎತ್ತರವಾದ ಪರ್ವತಶ್ರೇಣಿಗಳಿದ್ದುವು. ಈ ಬೆಟ್ಟಗಳಿಂದ ಜನಿಯುತ್ತಿದ್ದ ನಿರ್ಮಲವಾದ ನೀರು ಅಲ್ಲಿ ಅಲ್ಲಲ್ಲಿ ದೊಡ್ಡ ದೊಡ್ಡ ಕಾಲುವೆಗಳಾಗಿ ಹರಿಯುತ್ತಿದ್ದಿತು.

ಬ್ರಹ್ಮಚಾರಿಗಳು ಸಮಿತ್ಕುಶಗಳನ್ನು ತೆಗೆದುಕೊಂಡು ತಮ್ಮ ತಮ್ಮ ಪರ್ಣಶಾಲೆಗಳಿಗೆ ಹೋಗುತ್ತಿದ್ದರು. ಆಕಳುಗಳು ಆ ಕಾಡಿನಲ್ಲಿ ಬೇಕಾದಷ್ಟು ಮೇದು ಹಿಂದಿರುಗಿ ತಮ್ಮ ತಮ್ಮ ಕರುಗಳನ್ನು ಅರಸಿಕೊಂಡು ಆಶ್ರಮಕ್ಕೆ ಬಂದು ಸೇರುತ್ತಿದ್ದುವು. ಅಲ್ಲಿಯ ಶುಕ ಶಾರಿಕಾದಿ ಪಕ್ಷಿಗಳು ಸಂಧ್ಯಾವಂದನೆಯ ಮಂತ್ರವನ್ನು ಉಚ್ಚರಿಸುತ್ತಾ ತಮ್ಮ ತಮ್ಮ ಗೂಡುಗಳ ಸುತ್ತ ಮುತ್ತಲೂ ಹಾರಾಡುತ್ತಿದ್ದುವು. ಕಾಡು ಮೃಗಗಳೆಲ್ಲವೂ ತಮ್ಮ ತಮ್ಮ ಸ್ವಾಭಾವಿಕವಾದ ವೈರವನ್ನು ಬಿಟ್ಟು ಒಡಹುಟ್ಟಿದುವುಗಳಂತೆ ಪರಸ್ಪರ ಸಾಹಾಯ್ಯಮಾಡುತ್ತಾ ಆಶ್ರಮ ವಾಟಿಯಲ್ಲಿ ನಿರ್ಭಯವಾಗಿ ಓಡಾಡುತ್ತಿದ್ದುವು.

ಆ ತಪೋವನದ ನಡುವೆ ನೀಳವಾದ ಕೊಂಬೆಗಳ ಸಮ್ಮೇಳನದಿಂದ ದೊಡ್ಡ ಕಪ್ಪಾನೆ ಕೊಡೆಯಂತೆ ಒಂದು ಸೀಮಾಪನ ಮರಗಳ ತೋಪು ಇದ್ದಿತು. ಇದರ ಕೆಳಗೆ ಸುಮಾರು ಎಂಟು ಹತ್ತು ಪರ್ಣಶಾಲೆಗಳು ಅಲ್ಲಲ್ಲಿ ಕಾಣುತ್ತಿದ್ದುವು.

ಇವುಗಳ ಮಧ್ಯದಲ್ಲಿದ್ದ ಪರ್ಣಶಾಲೆಯ ಮುಂದುಗಡೆ ದೊಡ್ಡದೊಂದು ಪಸಾರೆ ಇದ್ದಿತು. ಇದರ ಮುಂದುಗಡೆ ಮೂರು ಅಗ್ನಿ ಕುಂಡಗಳಿದ್ದುವು. ಇವುಗಳಿಂದ ಏಳುತ್ತಿದ್ದ ಹೊಗೆಯು,

ಆ ಸಮಯದಲ್ಲಿ ಸ್ವಾಭಾವಿಕವಾಗಿ ಗಾಳಿಯು ಮಂದವಾಗಿದ್ದುದರಿಂದ, ದೊಡ್ಡ ದೊಡ್ಡ ಕಂಬಗಳಂತೆ ಕಾಣುತ್ತಿದ್ದುವು.

ಆ ವಸಾರೆಯಲ್ಲಿ ದರ್ಭಾಸನದ ಮೇಲೆ ಅತಿ ವೃದ್ಧರಾದ ತಾಪಸಿಗಳೊಬ್ಬರು ಜಪಮಾಲೆಯನ್ನು ತಿರುಗಿಸುತ್ತಾ ಪದ್ಮಾಸನದಲ್ಲಿ ಕುಳಿತುಕೊಂಡಿದ್ದರು.

ಇವರಿಗೆ ವಯಸ್ಸು ಎಷ್ಟಾಗಿದ್ದಿತೋ ನಿರ್ಧರಿಸುವುದಕ್ಕೆ ಅಸದಳವಾಗಿದ್ದಿತು; ಗಡ್ಡವು ಎದೆಗೂಡಿನಮೇಲೂ ತೊಡೆಗಳ ಮೇಲೂ ಬಿಳಿದಾದ ಸಣಬಿನಂತೆ ಜೋಲಾಡುತ್ತಿದ್ದಿತು; ಜಟಾಮಂಡಲವು ಹಂಬಿನಂತೆ ಅವರ ಮೈಯ್ಯಮೇಲೆ ಹರಿದು ಸುತ್ತಲೂ ನೆಲದಮೇಲೆ ಬಿದ್ದಿದ್ದಿತು; ಕೈ ಕಾಲುಗಳ ಉಗುರುಗಳು ವಿಪರೀತವಾಗಿ ಬೆಳದು ಗುಂಗುರು ಕಟ್ಟಿಕೊಂಡಿದ್ದುವು.

ಇವರ ಸುತ್ತಲೂ ಸ್ವಲ್ಪ ಹೆಚ್ಚು ಕಡಿಮೆ ಇವರಿಗೆ ಸಮಾನ ವಯಸ್ಸಿನವರಾದ ಹಲವು ತಾಪಸರು ಸಮಾಧಿಯಲ್ಲಿ ಕುಳಿತುಕೊಂಡಿದ್ದರು.

ವೀರನು ಈ ತಾಪಸಿಗಳನ್ನು ನೋಡಿ ತನ್ನ ಜತೆಗಾರನನ್ನು ಕುರಿತು “ ಎಲೈ ! ಮಿತ್ರನೇ ! ಈ ಮಹಾಯೋಗಿಗಳು ತಮ್ಮ ಯೋಗಪ್ರಭಾವದಿಂದ ಮತ್ತೊಂದು ಜಗವನ್ನು ನಿರ್ಮಾಣಮಾಡುವುದಕ್ಕೆ ಸಮರ್ಥರಾದಾಗ್ಯೂ ಪುತ್ರ ಮಿತ್ರ ಕಳತ್ರಾದಿ ಸರ್ವಸಂಗವನ್ನು ಪರಿತ್ಯಾಗಮಾಡಿ ಬ್ರಹ್ಮಚರ್ಯದಿಂದ ಈ ಮಹಾರಣ್ಯದಲ್ಲಿ ದಿಗಂಬರರಾಗಿ ನಿದ್ರಾಹಾರಾದಿಗಳನ್ನು ಬಿಟ್ಟು ಯೋಗಾಸನದಲ್ಲಿ ಕುಳಿತು ಯೋಗೀಶನನ್ನು ಜಾನಿಸುತ್ತಾ ಆನಂದ ಬಾಷ್ಪವನ್ನು ಸುರಿಸುತ್ತಿರುವರು. ಮಾನವರಿಗೆ ಈ ಕರ್ಮಭೂಮಿಯಲ್ಲಿ ಇದಕ್ಕಿಂತಲೂ ಪೆರದಾದ ಸುಖವಾವುದು ? ಇವರಿಗೇ ಭೂಸುರರೆಂಬ ಹೆಸರು ಸಲ್ಲತಕ್ಕುದು ’ ಎಂದು ಅತಿವಿನೀತಭಾವದಿಂದ

ಮುಂದರಿದು “ ಈ ಸನ್ಧ್ಯಾಕಾಲದಲ್ಲಿ ತಾವು ಒಮ್ಮೆಸೊದ್ದಮ್ಮೆ ಶಾಂತವಾದ ಆಶ್ರಮದೊಳಕ್ಕೆ ಪ್ರವೇಶಮಾಡಿದರೆ ಆ ಮುನಿಗಳು ಮುನಿವರೋ ಏನೋ ” ಎಂದು ಸಂದೇಗಪಡುತಾ ಹಿನ್ದ ಮುನ್ದೆ ನೋಡುತ್ತಿರುವಷ್ಟರಲ್ಲಿಯೇ ಆ ಪರ್ಣಶಾಲೆಯಿಂದ ಭೈರಾಗಿಯೊಬ್ಬನು ಹೊರ ಹೊರಟನು. ಮೊದಲನೆಯ ಸವಾರನು ಅವನನ್ನು ಕಣ್ದು “ ಒಡೆಯನೇ ! ಮೊನ್ನೆ ನಿನಗೆ ರಾಯ್ದ ಸನನ್ನು ತಂದುಕೊಟ್ಟ ತಾಪಸಿಯು ಇತ್ತಲೇ ಬರುವಂತಿದೆ ” ಎಂದನು.

ಕೊಡಲೇ ವೀರನು ಆ ತಪಸ್ವಿಯನ್ನು ನೋಡಿದನು. ಅದೇ ಸಮಯದಲ್ಲಿ ಆ ತಪಸ್ವಿಯೂ ವೀರನನ್ನು ನೋಡಿದನು. ಆಕ್ಷಣವೇ ಒಬ್ಬನ ಮುಖದಲ್ಲಿ ವಿಕಾಸವೂ ಮತ್ತೊಬ್ಬನ ಮುಖದಲ್ಲಿ ವಿಕಾರವೂ ಏಕಕಾಲದಲ್ಲಿ ಕ್ರಮವಾಗಿ ಉಂಟಾದುವು. ವಿಕಾಸ ಉಂಟಾದುದಕ್ಕೆ ಕಾರಣವನ್ನು ಸುಲಭವಾಗಿ ಊಹಿಸಬಹುದು; ವಿಕಾರ ಉಂಟಾದುದಕೆ ಕಾರಣವನ್ನು ಕಂಡು ಹಿಡಿಯಬೇಕಾಗಿದೆ.

ತಪಸ್ವಿಯು ಉತ್ತರಕ್ಷಣದಲ್ಲಿಯೇ ತನ್ನ ಮುಖಭಾವವನ್ನು ಸೌಮ್ಯವಾಗಿ ಮಾಡಿಕೊಂಡು ವೀರನಹತ್ತಿರಕ್ಕೆ ಬಂದು “ಓಹೋ! ಇದೇನು ಈಗಲೇ ಬರುತ್ತಿರುವಹಾಗಿದೆ. ಇಷ್ಟು ವಿಳಂಬವಾಗುವುದಕ್ಕೆ ಕಾರಣವೇನು ? ನೀವು ಇಂದು ಬೆಳಗಿನ ಜಾವದಲ್ಲಿಯೇ ಇಲ್ಲಿಗೆ ಬರಬೇಕಾಗಿತ್ತಲ್ಲಾ ! ದಾರಿಯಲ್ಲಿ ನಿಮಗೆ ಏನಾದರೂ ಅಪಾಯ ಸಂಭವಿಸಿತೋ ? ” ಎಂದು ಕೇಳಿದನು.

ಅದಕ್ಕೆ ವೀರನು “ ಶ್ರೇಯಸ್ಕರವಾದ ಕಾರ್ಯಗಳು ವಿಘ್ನ ವಿಘಾತಗಳಿಲ್ಲದೇ ಆಗುವುದಿಲ್ಲವಷ್ಟೆ. !” ಎನ್ನಲು ತಾಪಸಿಯು ತವಕಗೊಂಡು “ ಅಂತಹ ವಿಘ್ನ ವಿಘಾತಗಳಿಗೆ ಕಾರಣ

ವೇನು ? ದಾರಿಯಲ್ಲಿ ಕಾಕಪೋಕರಾರಾದರೂ ಮೇಲೆ ಬಿದ್ದರೋ ? '' ಎಂದು ಕೇಳಿದನು.

ವೀರನದಕ್ಕೆ '' ಪೂಜ್ಯರೇ । ತಾವು ಮೊದಲು ದಯೆಮಾಡಿ ನಮಗೆ ಮಹಾನುಭಾವರಾದ ಕುಶನಾಭರ ಪಾದದರುಶನವನ್ನು ಮಾಡಿಸಿದರೆ, ಬಳಿಕ ನಾನು ತಮಗೆ ನಡೆದ ಸಂಗತಿಯನ್ನೆಲ್ಲಾ ವಿವರವಾಗಿ ಅರಿಕೆ ಮಾಡುವೆನು '' ಎಂದನು.

ಒಡನೆಯೇ ಆ ತಪಸ್ವಿಯು ವಿವರ್ಣವಾದ ತನ್ನ ಮುಖವನ್ನು ಹಿಂದಿರುಗುವ ನೆವದಿಂದ ಮರೆಮಾಜಿಕೊಂಡು '' ಒಳ್ಳೆಯದು! ಬನ್ನಿ '' ಎಂದು ಪರ್ಣಶಾಲೆಯಕಡೆಗೆ ಹೊರಟನು. ವೀರಮುಖ್ಯರು ಆವರನ್ನು ಹಿಂಬಾಲಿಸಿದರು.

ನಮ್ಮ ವಾಚಕಮಹಾಶಯರು ಈ ತಾಪಸಿಯನ್ನು ಮತ್ತಾರೋ ಮಹರ್ಷಿಯೆಂದು ತಿಳಿಯಲಾಗದು. ಈ ಉಪಾಖ್ಯಾನದ ಮೊದಲನೆಯ ಪ್ರಕರಣದಲ್ಲಿ, ಹೊಳೆಯನ್ನು ದಾಟುವಾಗ್ಗೆ ನೀರಿನಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಂಡು ಗುಣಗಾಡುತ್ತಾ ಕಾಡದಾರಿ ಹಿಡಿದು ಹೋಗುತ್ತಿದ್ದನೆಂದು ಹೇಳಲ್ಪಟ್ಟ ಆ ಮಹಾತ್ಮರಾದ ಬೈರಾಗಿಯು, ಇವರೇ ಇವರು.

ಬೈರಾಗಿಯು ನೆಟ್ಟಗೆ ಆ ಒಪ್ಪಾರದಲ್ಲಿ ಕುಳಿತಿದ್ದ ವೃದ್ಧಮೌನಿಗಳ ಸನಿಹಕ್ಕೆ ಹೋಗಿ ಮರ್ಯಾದೆಗೆ ತಕ್ಕಷ್ಟು ದೂರದಲ್ಲಿ ನಿಂತು ಕೈಜೋಡಿಸಿಕೊಂಡು ''ಪೂಜ್ಯರೇ! ಧರ್ಮವರ್ಮನಕುಮಾರನು ಬಂದಿದಾನೆ ಎಂದು ಗಟ್ಟಿಯಾಗಿ ಹೇಳಿದನು.

ಕೂಡಲೇ ಅವರು ಕಣ್ದೆತ್ತಿ ವೀರನನ್ನು ನೋಡಿದರು. ಆಗ ವೀರನು ಅವರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದನು.

ಕುಶನಾಭರು ಅದನ್ನು ಕಂಡು ಕೈ ಎತ್ತಿ ವೀರನನ್ನು ''ದೀರ್ಘಾಯುರ್ಭವ ! ದೀರ್ಘಾಯುರ್ಭವ !! ಎಂದು '' ಹರಸಿ ವತ್ಸಾ ನಿನಗೆ ಸುಖಾಗಮನವೆ ? ಎಂದು ಕೇಳಿದರು.

ವೀರ.—ಮಹಾನುಭಾವರ ಚರಣಾನುಗ್ರಹಕ್ಕೆ ಪಾತ್ರರಾದವರಿಗೆ ಅಸುಖವೆಲ್ಲಿಯದು ?

ಕುಶನಾಭ.—ಆ ಮಾತಿಗೆ ಮಂದಹಾಸದಿಂದ ತಲೆದೂಗುತ್ತಾ ವೀರನನ್ನು ನಿಟ್ಟಿಸಿನೋಡುತ್ತಿರಲು ಆ ಓರೆಪಾಕದಲ್ಲಿಯೇ ಕುಳಿತಿದ್ದ ಮತ್ತೊಬ್ಬ ತಪಸ್ವಿಗಳು 'ಈ ಯುವಕನನ್ನು ನೋಡಿದರೆ, ಆ ಧರ್ಮವರ್ಮನೇ ಸಾಕ್ಷಾತ್ತಾಗಿ ಬಂದು ನಿಂತಹಾಗಿದೆ, ಎಂದರು.

ಆದಕ್ಕೆ ಕುಶನಾಭರು 'ಪ್ರತಿಬಿಮ್ಬವು ಬಿಮ್ಬದಂತೆ ಕಾಣುವುದೇನಚ್ಚರಿಯಲ್ಲ.' ಎಂದು ವೀರನನ್ನು ಕುರಿತು "ವತ್ಸಾ! ನಮಗೀಗ ಸಾಯಂತನದ ಸಂಧ್ಯಾವಂದನಾದಿಗಳಿಗೆ ವೇಳೆಯಾಯಿತು. ಇನ್ನು ನಿನ್ನೊಡನೆ ಮಾತನಾಡುವುದಕ್ಕೆ ನನಗೀಗ ವಿರಾಮವಾಗುವುದಿಲ್ಲ. ಆದುದರಿಂದ ನೀನೀ ಇರುಳು ನಮ್ಮ ಆಶ್ರಮದಲ್ಲಿಯೇ ಇದ್ದು ದಣಿವಾರಿಸಿಕೊಂಡು ನಾಳೆ ನಮ್ಮ ಮಾಧ್ಯಾಹ್ನಿಕವು ಮುಗಿದ ಬಳಿಕ ಇಲ್ಲಿಗೆ ಬಂದು ನನಗೆ ಭೇಟಿಕೊಡು" ಎಂದು ಬೈರಾಗಿಯ ಮುಖವನ್ನು ನೋಡಿ "ಎಲೈ ಈ ರಾಜಕುಮಾರರನ್ನು ನಿಮ್ಮ ಬ್ರಹ್ಮಸದನಕ್ಕೆ ಕರದುಕೊಂಡು ಹೋಗಿ ಈದಿನ ರಾತ್ರಿ ಇವರಿಗೆ ತಕ್ಕ ಸತ್ಕಾರವನ್ನು ಮಾಡುವುದು" ಎಂದು ಬೆಸಸಿದರು.

ಕೂಡಲೇ ಬೈರಾಗಿಯು ಕುಶನಾಭರ ಪರ್ಣಶಾಲೆಗೆ ಹಿಂದುಗಡೆ ಅತಿಥಿಗಳಿಗೂ ಅಭ್ಯಾಗತರಿಗೂ ಅನುಕೂಲವಾಗುವಂತೆ ಕಟ್ಟಲ್ಪಟ್ಟಿದ್ದ ಬ್ರಹ್ಮಸದನವೆಂಬ ಪರ್ಣಶಾಲೆಗೆ ಕರದುಕೊಂಡು ಹೋದನು.

ಆ ತಪೋವನವನ್ನು ಪ್ರವೇಶಮಾಡಿದ್ದು ಮೊದಲು, ವಿಶೇಷವಾಗಿ ಆ ಬ್ರಹ್ಮಸದನದೊಳಕ್ಕೆ ಹೋದದ್ದು ಮೊದಲು

ನಮ್ಮ ವೀರಮುಖ್ಯರ ಕ್ಷತ್ರಿಯೋಚಿತವಾದ ವೀರ್ಯಶೌರ್ಯಾದಿ ರಜೋಗುಣಗಳೆಲ್ಲವೂ ಎಲ್ಲಿಯೋ ಅಡಗಿ ಹೋದುವು; ಕೇವಲ ತಪಸ್ವಿಗಳಿಗೆ ಉಚಿತವಾದ ಭಕ್ತಿ ವೈರಾಗ್ಯಾದಿ ಸಾತ್ವಿಕಗುಣ ಗಳು ಪ್ರಾಬಲ್ಯವನ್ನು ಹೊಂದಿದುವು. ಇದೇನಾಶ್ಚರ್ಯವಲ್ಲ; ಏತಕ್ಕೆಂದರೆ, ತೀರ್ಥಕ್ಷೇತ್ರಾದಿಗಳಲ್ಲಿಯೂ ಮಹಾತ್ಮರ ವಾತಾ ವರಣದಲ್ಲಿಯೂ ದುರಾಚಾರಿಗಳು ಆಚಾರಶೀಲರಾಗುವುದೂ ಲೋ ಭಿಗಳು ಔದಾರ್ಯಶಾಲಿಗಳಾಗುವುದೂ ನಾಸ್ತಿಕ್ಯರಿಗೆ ಆಸ್ತಿಕ್ಯ ಬುದ್ಧಿಯುಂಟಾಗುವುದೂ ನಿರ್ದಯರಾದವರು ದಯಾಳುಗಳಾಗು ವುದೂ ಸಾಮಾನ್ಯವಾಗಿ ಎಲ್ಲರ ಅನುಭವದಿಂದ ತಿಳಿಯಬಹು ದಾದಷ್ಟು ಸಹಜವಾಗಿಯೂ ಶಾಸ್ತ್ರಸಿದ್ಧವಾಗಿಯೂ ಇವೆ. ಆದು ದರಿಂದಲೇ ಆರ್ಯರು ತೀರ್ಥಕ್ಷೇತ್ರಗಳ ಯಾತ್ರೆಯನ್ನೂ ಮಹಾತ್ಮರುಗಳ ಸಂದರ್ಶನವನ್ನೂ ಅದ್ಯಾಪಿ ಆದರಾತಿಶಯದಿಂದ ಮಾಡುತ್ತಿರುವರು.

ಆರಾತ್ರಿ ವೀರಮುಖ್ಯರು ಮಾರ್ಗಾಯಾಸದಿಂದ ಅಷ್ಟು ಶ್ರಾಂತರಾಗಿದ್ದಾಗ್ಯೂ, ಆ ಪರ್ಣಶಾಲೆಯಲ್ಲಿ ಹಠಯೋಗ ವನ್ನು ಅಭ್ಯಾಸಮಾಡುತ್ತಿದ್ದ ಬ್ರಹ್ಮಚಾರಿಗಳನ್ನೂ ಸಾಮ ಗಾನ ವನ್ನು ಮಾಡುತ್ತಿದ್ದ ಬಾಲ ವಟುಗಳನ್ನೂ ನೋಡುತ್ತಾ ನಿದ್ರೆ ಯನ್ನು ಮರೆತುಹೋದರು.

ಮಾರನೆಯ ದಿನ ವೀರನು ಭೋಜನಾನಂತರ ತನ್ನ ಜತೆ ಗಾರರೊಡನೆ ನಿಯಮಿತವಾದ ಕಾಲಕ್ಕೆ ಸರಿಯಾಗಿ ಕುಶನಾಭರ ಸಂದರ್ಶನಕ್ಕೆ ಸಮಯವನ್ನರಿತು ಹೋದನು.

ಅದು ಆ ಮಹಾತ್ಮರಿಗೆ ವಿರಾಮಕಾಲವಾದುದರಿಂದ ಅವ ರಿಗೆ ಆಗತಾನೆ ವೀರನ ನೆನಪು ಬಂದಿದ್ದಿತು. ವೀರಮುಖ್ಯರು ಸನ್ನಿಹಕ್ಕೆ ಹೋಗಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿದರು.

ಕುಶನಾಭರು ಅವರನ್ನು ನೋಡಿ "ಎಲ್ಲೈ, ಇಲ್ಲಿ ಬಂದು ಕುಳಿತುಕೊಳ್ಳಿರಿ." ಎಂದು ಕೈನೀಡಿ ತಮ್ಮ ಬಲಗಡೆಯಲ್ಲಿ ಅಣಿ ಮಾಡಿದ್ದ ದರ್ಭಾಸನವನ್ನು ತೋರಿಸಿದರು.

ಮೂವರೂ ಅವರ ಆಜ್ಞಾನುಸಾರವಾಗಿ ಅದರ ಮೇಲೆ ಹೋಗಿ ಕುಳಿತುಕೊಂಡರು.

# ಏಳನೆಯ ಪ್ರಕರಣ.

---

## ರಹಸ್ಯಾರ್ಥ ಪ್ರಕಟನ.

ಈಗಿನ ಕಾಲದಲ್ಲಿ ಹಲವು ವ್ಯಕ್ತಿಗಳು ಮಹಾತ್ಮರಂತೆ ನಟಿಸುತ್ತಾ ಸಾತ್ವಿಕರನ್ನು ಮೋಸಗೊಳಿಸಿ ತಮ್ಮ ಜೀವನವನ್ನೂ ಗೌರವವನ್ನೂ ಅನಾಯಾಸವಾಗಿ ಜರುಗಿಸಿಕೊಳ್ಳುತ್ತಿರುವರು. ಮಹಾತ್ಮರು ತಮ್ಮ ಮಾಹಾತ್ಮೆಯನ್ನು ಎಂದಿಗೂ ಅಂಗಡಿ ಇಡುವುದಿಲ್ಲ. ಅವರು ಬಹುಶಃ ಜನಗಳಿದ್ದೆಡೆಯಲ್ಲಿ ಇರುವುದೇ ಇಲ್ಲ ; ಒಂದು ವೇಳೆ ಇದ್ದರೂ, ಏನೂ ಅರಿಯದ ಮರುಳರಂತೆಯೂ ಮಂಕರಂತೆಯೂ ಕಾಣುತ್ತಿರುವರು ; ತಮ್ಮ ದಿವ್ಯದೃಷ್ಟಿಯನ್ನು ಲೌಕಿಕ ವ್ಯವಹಾರಕ್ಕಾಗಿ ಸಾಮಾನ್ಯವಾಗಿ ಉಪಯೋಗಿಸಿಕೊಳ್ಳುವುದಿಲ್ಲ.

ಮಹಾತ್ಮರಾದ ಕುಶನಾಥರು ಸಾಮಾನ್ಯರಂತೆ ವೀರಮುಖ್ಯರನ್ನು ಕೊಂಚ ಹೊತ್ತು ದಿಟ್ಟಿಸಿನೋಡಿ ವೀರನನ್ನು ಕುರಿತು ''ಆರವರೀರ್ವರು ?'' ಎಂದು ಅವನ ಜತೆಗಾರರನ್ನು ನೋಡಿದರು.

ವೀರ:—ಕೈಎತ್ತಿ ತನ್ನ ಮೊದಲನೆಯ ಸವಾರನನ್ನು ತೋರಿ ''ಮಹಾಸ್ವಾಮಿ, ಈತನು ನಮ್ಮ ಮಂತ್ರಿಯಾದ ಸೋಮದತ್ತನ ಮಗನು; ಇವನ ಹೆಸರು ಸುಮಂತ್ರ; ಇವನೇ ನಮ್ಮ ಸೇನಾನಾಯಕನು. '' ಎಂದು ಎರಡನೆಯ ಸವಾರನನ್ನು ತೋರಿ ''ಈತನು ನಮ್ಮ ನ್ಯಾಯಾಧಿಪತಿಯ ಮಗನು; ಇವನ ಹೆಸರು ವಿಕ್ರಮಸಿಂಹ, ಈತನು ನನ್ನ ಪರಮಾಪ್ತನಾದ ಸ್ನೇಹಿತನು. ಇವರೀರ್ವರೂ ನನಗೆ ಮೈಗಾವಲಾಗಿ ಬಂದಿರುವರು.''

ಕುಶನಾಭ:—ತಲೆದೂಗಿ "ನಾನು ನಮ್ಮ ಶಿಷ್ಯನ ಕೈಲಿ ಕಳುಹಿಸಿಕೊಟ್ಟಿದ್ದ ಕಾಗದವು ನಿನಗೆ ಕಾಲಕ್ಕೆ ಸರಿಯಾಗಿ ಬಂದು ತಲಪಿತೋ ! "

ವೀರ:—ಮೊನ್ನೆ ಮಧ್ಯಾಹ್ನವೇ ತಲಪಿತು.

ಕುಶನಾಭ:—ಅದರಲ್ಲಿ ಬರೆದಿದ್ದುದೇನು ?

ವೀರ:—"ಈ ಪತ್ರವನ್ನು ನೋಡಿದ ಕೂಡಲೇ ತಡ ಮಾಡದೇ ನಿನ್ನ ಜಾತಕವನ್ನು ತೆಗೆದುಕೊಂಡು ನಮ್ಮ ಆಶ್ರಮಕ್ಕೆ ಬರಬೇಕು" ಎಂದು ಬರೆದಿದ್ದಿತು.

ಕುಶನಾಭ:—ನಿನ್ನ ಜಾತಕವನ್ನು ತಂದಿರುವೆಯೋ ?

ವೀರ:—"ಇದುವೇ ನನ್ನ ಜಾತಕ." ಎಂದು ಎದ್ದು ತನ್ನ ಕೈಯಲ್ಲಿದ್ದ ಕಾಗದವನ್ನು ಅವರ ಮುಂದಿರಿಸಿದನು.

ಕುಶನಾಭ:—ಅದನ್ನು ಕೈಗೆ ತೆಗೆದುಕೊಂಡು ಓದಿನೋಡಿ ತಮ್ಮ ಇದಿರಿನಲ್ಲಿದ್ದ ವ್ಯಾಸಪೀಠವನ್ನು ಹತ್ತಿರಕ್ಕೆ ಎಳದುಕೊಂಡು ಅದರಮೇಲಿದ್ದ ಪುಸ್ತಕದ ಹಾಳೆಗಳನ್ನು ಹಿಂದಕ್ಕೂ ಮುಂದಕ್ಕೂ ತಿರುವಿಹಾಕಿ ಹುಡುಕಿ ಅದರಲ್ಲಿದ್ದ ಒಂದು ಕಾಗದವನ್ನು ಕೈಗೆ ತೆಗೆದುಕೊಂಡು ಅದಕ್ಕೂ ವೀರನ ಜಾತಕಕ್ಕೂ ತಾಳೆ ನೋಡುವಂತೆ ಮನಸ್ಸಿನಲ್ಲಿಯೇ ಅದನ್ನೂ ಇದನ್ನೂ ಓದಿಓದಿ ನೋಡಿ, ಅವುಗಳನ್ನು ಯಥಾಪ್ರಕಾರ ವ್ಯಾಸಪೀಠದ ಮೇಲಿರಿಸಿ ಮಂದಸ್ಮಿತದಿಂದ ವೀರನ ಮೊಗವನ್ನು ನೋಡಿ "ವತ್ಸಾ, ಪ್ರಕೃತ ಕಾರ್ಯವನ್ನು ಹೇಳುವುದಕ್ಕೆ ಮೊದಲು ನಿನಗೆ ನಾನೊಂದು ಇತಿಹಾಸವನ್ನು ಹೇಳುವೆನು ; ಅದನ್ನು ನೀನು ಸಾವಧಾನವಾಗಿ ಕೇಳು. ಈಗ್ಗೆ ಸುಮಾರು ಇಪ್ಪತ್ತು ವರ್ಷದ ಕೆಳಗೆ ನಮ್ಮ ಆಶ್ರಮಕ್ಕೆ ವಾಯುವ್ಯದಲ್ಲಿ ಪ್ರವಹಿಸುತ್ತಿರುವ ಮಹಾನದಿಯ ತಡಿಯಲ್ಲಿ ಅರವಿನ್ದಬಾಂಧವರೆಂಬ ರಾಜರ್ಷಿಗಳೊಬ್ಬರು ವಾಯು

ಭಕ್ಷಣೆಯನ್ನು ಮಾಡಿಕೊಂಡು ಉಗ್ರತರವಾದ ತಪಸ್ಸನ್ನು ಮಾಡುತ್ತಿದ್ದರು. ಭೂಲೋಕದಲ್ಲಿ, ಸಾಧಾರಣವಾಗಿ, ಶ್ರೇಯಸ್ಕರವಾದ ಕಾರ್ಯಗಳಿಗೆಯೇ ಎಷ್ಟೋ ವಿಘ್ನಗಳುಂಟಾಗುತ್ತವೆ ; ಇನ್ನು, ನಿಃಶ್ರೇಯಸಕ್ಕೆ ಸಾಧಕವಾದ ತಪಸ್ಸಿಗೆ ವಿಘ್ನಗಳುಂಟಾಗುವುದೇನಚ್ಚರಿಯು ? ಆ ಮಹಾತ್ಮರ ಅಂತಹ ತಪಸ್ಸನ್ನು ಸೌಗಂಧಿಕೆಯೆಂಬ ಅಪ್ಸರೆಯೊಬ್ಬಳು ಬಹು ಸಾಹಸಪಟ್ಟು ಭಂಗಪಡಿಸಿದಳು. ಅವರು ಮೋಹಗೊಂಡು ಆ ದಿವ್ಯನಾರಿಯೊಂದಿಗೆ ಹಲವು ಕಾಲ ವಿಷಯಲಂಪಟರಾಗಿದ್ದರು. ಆ ಸುರಸುಂದರಿಯು, ಕಾಲಕ್ರಮದಿಂದ ಗರ್ಭವನ್ನು ಧರಿಸಿ ಒಂದು ಕನ್ಯಾರತ್ನವನ್ನು ಹೆತ್ತಳು. ಆ ಪಸುಳೆಯು ತನ್ನ ಅನ್ವಯಕ್ಕೆ ಅನುರೂಪವಾಗಿ ಮಹಾ ಸೌಂದರ್ಯ ಶಾಲಿಯಾಗಿದ್ದಿತು.

ಅರವಿಂದಬಾನ್ಧವರ ಮೋಹಿನಿಯು ತನ್ನ ಮುದ್ದು ಮಗುವನ್ನು 'ಜಗನ್ಮೋಹಿನೀ' ಎಂದು ಕರೆಯುತ್ತಿದ್ದಳು. "ಹೆತ್ತವಳಿಗೆ ಹೆಗ್ಗಣ ಮುದ್ದು" ಎಂಬಂತೆ ಇದು ಕೇವಲ ಮುದ್ದಿನಿಂದ ಇಟ್ಟ ಹೆಸರಲ್ಲ ; ಅದು ಹೊರತು ಆ ಕನ್ಯೆಗೆ ಮತ್ತಾವ ಹೆಸರೂ ಅಷ್ಟು ಅನ್ವರ್ಥಕವಾಗಲಾರದೆಂದು ಆ ತಪೋವನವಾಸಿಗಳಾದ ತಾಪಸಿಗಳೆಲ್ಲರೂ ಏಕವಾಕ್ಯರಾಗಿ ಒಪ್ಪಿಕೊಂಡು, ತಾವುಗಳೂ ಆ ಮಗುವನ್ನು "ಜಗನ್ಮೋಹಿನೀ, ಜಗನ್ಮೋಹಿನೀ," ಎಂದು ಕೂಗಿ ಮುದ್ದಿಸುತ್ತಿದ್ದರು. ಅರವಿಂದಬಾನ್ಧವರು ಹೆತ್ತವಳ ಹಿತಕ್ಕೂ ಇಷ್ಟ ಜನರ ಅಭಿಪ್ರಾಯಕ್ಕೂ ಅನುಸಾರವಾಗಿ ಆ ಕನ್ಯಾಮಣಿಗೆ 'ಜಗನ್ಮೋಹಿನೀ' ಎಂದೇ ಹೆಸರಿಟ್ಟರು. ಆದರೆ ಈ ಮಹಾಯೋಗಿಗಳ ಅನುಸಂಧಾನವು ಬೇರೆಯಾಗಿದ್ದಿತು ; ಅದೇನೆಂದರೆ, 'ಜಗನ್ಮೋಹಿನೀ' ಎಂಬುದು, ಮಹಾ ವಿಷ್ಣುವು ದಾನವರನ್ನು ಮೋಹಗೊಳಿಸುವುದಕ್ಕೋಸ್ಕರವಾಗಿ ಮಾಡಿದ ಅವತಾರವಾದುದ

ರಿಂದ ಆ ಹೆಸರನ್ನು ತನ್ನ ಪ್ರಾಣಪ್ರಿಯಳಾದ ಮಗಳಿಗಿಟ್ಟು ಕರೆವುದು ಶ್ರೇಯಸ್ಕರವೆಂದು ಭಾವಿಸಿಕೊಂಡಿದ್ದರು.

ಆ ಕುವರಿಯು ಸ್ವಾಭಾವಿಕವಾಗಿ ಕಾಲಕ್ರಮದಿಂದ ಯೌವನಸ್ಥಳಾದಳು. ಕೌಮಾರಾವಸ್ಥೆಯಲ್ಲಿಯೇ ಅಷ್ಟು ಸೌಂದರ್ಯಶಾಲಿನಿಯಾಗಿದ್ದ ಆ ಹೆಣ್ಣಿನ ಸೌಂದರ್ಯವನ್ನು ಯೌವನಾವಸ್ಥೆಯಲ್ಲಿ ಬಣ್ಣಿಸಬೇಕೆ? ಮೊಗ್ಗಿನಲ್ಲಿಯೇ ಮನೋಹರವಾಗಿದ್ದ ಹೂವು ಇನ್ನರಳಿದ ಮೇಲೆ ಹೇಗಿರಬಹುದು! ಹೆತ್ತತಾಯಿಯಾದ ಆ ಅಪ್ಸರೆಯು ತ್ರಿಲೋಕಸುಂದರಿಯಾದ ತನ್ನ ಮಗಳ ಸೌಂದರ್ಯವನ್ನು ನೋಡಿ ನಾಚಿಕೆಗೊಂಡವಳಂತೆ ಅವಳನ್ನು ಅಟಮಟಿಸಿ ಅಲ್ಲಿಯೇ ಬಿಟ್ಟು ಸ್ವಸ್ಥಾನಕ್ಕೆ ಹೊರಟುಹೋದಳು. ಆ ಹೆಂಗಸಿನ ಹೃದಯವು ಎಷ್ಟು ಕಠಿಣವಾದುದೋ ಕಾಣೆ! ಅಷ್ಟು ಪ್ರೇಮದಿಂದ ಸಾಕಿದ, ತನ್ನ ಹೊಟ್ಟೆಯಲ್ಲಿ ಹುಟ್ಟಿದ, ಅಂತಹ ಮುದ್ದುಮಗುವನ್ನು ನಟ್ಟಡವಿಯಲ್ಲಿ ಬಿಟ್ಟು ಹೋಗುವುದಕ್ಕೆ ಹೇಗೆ ಮನ ಬಂದಿತೋ! ಅದೆಂತಹ ದೈವಸಂಕಲ್ಪವೋ! ಅದು ಹಾಗಿರಲಿ. ಬಳಿಕ ಮಾತೃವಿಯೋಗದಿಂದ ಮರುಗುತ್ತಿದ್ದ ಮಗಳನ್ನು ನೋಡಿ ಮರುಕದಿಂದ ಕನಸುಕಂಡೆದ್ದವನಂತೆ ತಟ್ಟನೆ ತನ್ನ ಪೂರ್ವೋತ್ತರವನ್ನು ಜ್ಞಾನದೃಷ್ಟಿಯಿಂದ ತಿಳಿದು ಆ ಸಂಗತಿಯಿಂದ ತಮಗೆ ಉಂಟಾದ ತಪೋಭಂಗಕ್ಕಾಗಿಯೂ, ಮರುಕವಿಲ್ಲದ ಆ ಸುರನಾರಿಯ ನಿರ್ಗಮನಕ್ಕಾಗಿಯೂ, ಪಶ್ಚಾತ್ತಾಪಗೊಂಡು ಅಂತಹ ಅಂಗಭೋಗಕ್ಕೆ ಮನಸೋತ ತನ್ನ ಶರೀರವನ್ನು ಯೋಗಾಗ್ನಿಯಿಂದ ಸುಟ್ಟು ಭಸ್ಮಮಾಡಬೇಕೆಂದು ನಿಶ್ಚಯಿಸಿಕೊಂಡರು. ಆದರೆ, ಆ ಸೌಂದರ್ಯನಿಧಿಯಾದ ತನ್ನ ಆತ್ಮಜೆಯನ್ನು ಆ ಕಾಡುಪಾಲು ಮಾಡುವುದಕ್ಕೆ ಕೃಪಾನಿಧಿಗಳಾದ ಆ ಮಹಾಮುನಿಗಳ ಮನವು ಒಡಂಬಡಲಿಲ್ಲ.

ಆ ವೇಳೆಗೆ ಧರ್ಮಾರಣ್ಯಕ್ಕೆ ಬೇಟೆಯಾಡುವುದಕ್ಕೆ ಬಂದಿದ್ದ ರಾಜಕುಮಾರರೂ ಹಲವು ಯಕ್ಷರಾಕ್ಷಸರೂ ಆ ಬಾಲೆಯ ಮೇಲೆ ಕಣ್ಣು ಹಾಕಿದ್ದರು. ಆದರೆ, ಆ ತಪೋವನದಲ್ಲಿ ಅಂತಹ ಲೌಕಿಕೋದ್ದೇಶದಿಂದ ಕಾಲು ಹಾಕುವುದಕ್ಕೆ ಯಾರಿಗೂ ಧೈರ್ಯವಿರಲಿಲ್ಲ. ಅಗ್ನಿಕುಂಡದಲ್ಲಿ ಕಟ್ಟಿರುವೆಗಳು ಕಾಲಿಡಲಾಪುವೆ ?

ಆಗ ಅವರು ಈ ಧರ್ಮ ಸಂಕಟಕ್ಕೆ ಮಾಡುವುದೇನೆಂದು ಜಾನಿಸಿನೋಡಿ ಸಮೀಪಸ್ಥವಾದ ಲವಣ ಸಮುದ್ರವನ್ನು ಪ್ರವೇಶ ಮಾಡುವ ಆ ಮಹಾನದಿಯ ಮುಖಜ ಭೂಪ್ರದೇಶದಲ್ಲಿ ತಮ್ಮ ಯೋಗ ಶಕ್ತಿಯಿಂದ ದೊಡ್ಡದೊಂದು ಪದ್ಮಾಕಾರವಾದ ದ್ವೀಪವನ್ನು ನಿರ್ಮಾಣಮಾಡಿ ಅದಕ್ಕೆ "ಪದ್ಮದ್ವೀಪ" ಎಂಬ ಅನ್ವರ್ಥಕವಾದ ಹೆಸರನ್ನು ಇಟ್ಟು ಅದರಲ್ಲಿ ಸಪ್ತಾಂಗಗಳಿಂದ ಕೂಡಿದ ರಾಜ್ಯವನ್ನು ಏರ್ಪಾಡು ಮಾಡಿ ಅದಕ್ಕೆ ತಮ್ಮ ಮೋಹದ ಮಗಳಾದ ಮೋಹಿನಿಯನ್ನು ಪಟ್ಟದ ಮಹಿಷಿಯನ್ನಾಗಿ ಮಾಡಿದರು.

ಆ ನಗರದ ನಟ್ಟನಡುವೆ ಸಪ್ತಪ್ರಾಕಾರಗಳಿಂದ ಕೂಡಿದ ಕೋಟೆಯೊಂದಿದೆ. ಇದರ ಮಧ್ಯದಲ್ಲಿ ಸುರಮಂದಿರದಂತೆ ಭಾಸುರವಾದ ಅರಮನೆ ಇದೆ. ಇದರಲ್ಲಿ ನವನಿಧಿಗಳು ನೆಲೆಗೊಂಡಿವೆ. ಅಕ್ಷಯಗಳಾದ ಸಕಲ ಭೋಗ್ಯ ವಸ್ತುಗಳೂ ತುಂಬಿವೆ ; ದೇವಯೋನಿಗಳಂತೆ ಪರಿಶುದ್ಧರಾದ ಅನೇಕ ಪರಿಜನರಿದಾರೆ ; ಮನೋಹರಗಳಾದ ಉಪವನಗಳು ಹೇರಳವಾಗಿವೆ. ಆ ನಾಗರಿಕರೆಲ್ಲರೂ ಪರಮ ಸಾತ್ವಿಕರಾಗಿಯೂ ನಿಷ್ಕಪಟವಾದ ರಾಜಭಕ್ತಿಯುಳ್ಳವರಾಗಿಯೂ ಸಕಲೈಶ್ವರ್ಯ ಸಂಪನ್ನರಾಗಿಯೂ ದಾನಶೌಂಡರಾಗಿಯೂ ತಪೋನಿಷ್ಠರಾಗಿಯೂ ಇರುವರು.

ಬಳಿಕ, ಕಾಲಜ್ಞಶಿಖಾಮಣಿಗಳಾದ ಆ ಮುನಿಗಳು ಆ

ಮೋಹಿನಿಯನ್ನು ಆಳುವ ಅರಸನನ್ನು ಬ್ರಹ್ಮನು ಎಲ್ಲಿ ನಿರ್ಮಿಸಿರುವನೋ ಎಂದು ಕೌತುಕದಿಂದ ಅವಳ ಜಾತಕವನ್ನು ಗುಣಿಸಿ ನೋಡಿ ಅವಳನ್ನು ಪಾಣಿಗ್ರಹಣ ಮಾಡಿಕೊಳ್ಳುವವನ ಜಾತಕವನ್ನು ಕೂಡ ಪರಿಷ್ಕಾರವಾಗಿ ಬರೆದಿಟ್ಟು ಬಳಿಕ ನನ್ನನ್ನು ತಮ್ಮ ಬಳಿಗೆ ಬರಮಾಡಿಕೊಂಡು ಪೂರ್ವವೃತ್ತಾಂತವನ್ನೆಲ್ಲಾ ನನಗೆ ತಿಳಿಯ ಹೇಳಿ ಆ ಜಾತಕಗಳನ್ನು ನನ್ನ ಕೈಗೆ ಕೊಟ್ಟು "ನಿಮ್ಮ ಮಗು, ಜಗನ್ಮೋಹಿನಿಯು, ಜನಿಸುವುದಕ್ಕಿಂತ ಆರುವರ್ಷ ಮುಂಚೆ ಪುಣ್ಯಭೂಮಿಯಲ್ಲಿ ಮಾಳವದೇಶಾಧಿಪತಿಯಾದ ಧರ್ಮವರ್ಮನ ಪತ್ನಿಯಾದ, ಮಾಲ್ಯವತಿಯ ಗರ್ಭದಲ್ಲಿ ರವಿವರ್ಮನೆಂಬ ಪುಣ್ಯಪುರುಷನೊಬ್ಬನು ಜನಿಯಿಸಿರುವನು. ಆ ಪುಣ್ಯಶ್ಲೋಕನು ಈಗ ಪ್ರಾಪ್ತವಯಸ್ಕನಾಗಿ ಧರ್ಮರಾಯನ ಅಪರಾವತಾರನೆಂಬಂತೆ ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಾ ಧರ್ಮಸಂಗ್ರಹವನ್ನು ಮಾಡಿಕೊಳ್ಳುತ್ತಿರುವನು. ನನ್ನ ಕನ್ಯಾರತ್ನವು ಆ ಯುವಕನ ಕೈಸೇರತಕ್ಕದಾಗಿದೆ. ಆದುದರಿಂದ ತಾವು ನನ್ನಲ್ಲಿ ಪರಮಾನುಗ್ರಹ ಮಾಡಿ ಆ ರಾಜಕುಮಾರನನ್ನು ಕ್ಷಿಪ್ರದಲ್ಲಿ ತಮ್ಮಲ್ಲಿಗೆ ಬರಮಾಡಿಕೊಂಡು ಅತನಿಗೆ ನಮ್ಮ ಜಗನ್ಮೋಹಿನಿಯನ್ನು ಕೊಟ್ಟು ವಿವಾಹಮಾಡಿಸಬೇಕು." ಎಂದು ಬೆಸಸಿದರು. ಆ ಮಹದಾಜ್ಞೆಯನ್ನು ನಾನು ಶಿರಸಾವಹಿಸಲು ಸತ್ಯಸಂಕಲ್ಪರಾದ ಆ ಮಹಾಯೋಗಿಗಳು ತಮ್ಮ ಸಂಕಲ್ಪವನ್ನು ನೆರವೇರಿಸುವುದಕ್ಕಾಗಿ ಹಿಮಗಿರಿಯ ಕಾನ್ತಾರಪ್ರಾಂತಕ್ಕೆ ಹೊರಟು ಹೋದರು. ಅವರ ನಿರೂಪಕ್ಕೆ ಅನುಸಾರವಾಗಿ ನಾನು ನಿನ್ನನ್ನು ಇಲ್ಲಿಗೆ ಕರೆಯ ಕಳುಹಿಸಿದೆನು. ನಾನು ನಿನ್ನನ್ನು ಎಂದೂ ನೋಡಿರಲಿಲ್ಲವಾದುದರಿಂದ, ಈ ಕಲಿಗಾಲದ ಮೋಸಗಳಿಗೆ ಅವಕಾಶವಿಲ್ಲದಂತೆ, ನೀನು ತರುವ ನಿನ್ನ ಜಾತಕಕ್ಕೂ ಅರವಿಂದಬಾನ್ಧವರು ನನ್ನ ಕೈಗೆ ಕೊಟ್ಟಿರುವ ನಿನ್ನ ಜಾತಕಕ್ಕೂ ತಾಳೆ ನೋಡಿ ನಿನ್ನನ್ನು ಸರಿಯಾಗಿ

ಗುರುತು ಹಿಡಿಯಬೇಕೆಂಬ ಆಶಯದಿಂದ, ನೀನು ನಿನ್ನ ಜಾತಕವನ್ನು ತರುವಂತೆ ಕಾಗದವನ್ನು ಬರೆದು ಕಳುಹಿಸಿದ್ದೆನು ನಿಮ್ಮ ತಂದೆಯಾದ ಧರ್ಮವರ್ಮನು ಜೀವನ್ತನಾಗಿದ್ದರೆ, ಈ ಕಾರ್ಯಕ್ಕಾಗಿ ನಾನಿಷ್ಟು ಪ್ರಯತ್ನ ಪಡಬೇಕಾದ ಆವಶ್ಯಕವಿರುತ್ತಿರಲಿಲ್ಲ. ಅದೇತಕೆಂದರೆ, ಆ ಮಹಾವೀರನು ನನ್ನ ಪರಮಾಪ್ತನಾದ ಮಿತ್ರನು—ಮಿತ್ರ ಶಬ್ದಾರ್ಥಕ್ಕೆ ಅನುಗುಣನಾದ ಮಿತ್ರನಿಗೆ ಮನವೆ ಮಾಡಿಕೊಂಡ ಕಾರ್ಯವು ಎಂದಿಗೂ ನೆರವೇರದೇ ಇರುವುದಿಲ್ಲವಷ್ಟೆ. ಪ್ರಕೃತ, ನೀನು ಆ ಮಹಾ ಯೋಗಿಗಳಾದ ಅರವಿನ್ದ ಬಾನ್ಧವರ ಸಂಕಲ್ಪಾನುಸಾರವಾಗಿ ಅವರ ಪ್ರಿಯಪುತ್ರಿಯಾದ ಜಗನ್ಮೋಹಿನಿಯನ್ನು ವಿವಾಹಮಾಡಿಕೊಂಡು ಅವರ ಮನೋರಥವನ್ನು ಸಿದ್ಧಿಗೊಳಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು. ಈ ಸಮ್ಬಂಧವು ನಿನಗೂ ನಿನ್ನ ಸಂತತಿಗೂ ಪರಮ ಶ್ರೇಯಸ್ಕರವಾದುದು. '' ಎಂದು ಹೇಳಿದರು.

ಕುಶನಾಭರು ತಮ್ಮ ಸಂಭಾಷಣೆಯು ಮುಗಿಯುವವರೆಗೂ ಅನ್ತರ್ಗತವಾದ, ಅಪರಿಮಿತವಾದ ಜ್ಞಾನವನ್ನು ಪ್ರಕಟಿಸುತಿದ್ದ ತಮ್ಮ ವಿಶಾಲವಾದ ಲಲಾಟದ ಮೇಲೆ, ಪೂರ್ಣಾಧಿಕವಾದ ವಯಸ್ಸಿಗೆ ಸಾಕ್ಷಿಭೂತವಾಗಿ, ಮಡಿಕೆ ಮಡಿಕೆಯಾಗಿ, ಒಂದರಮೇಲೊಂದು ಪದರುಗಟ್ಟಿಕೊಂಡಿದ್ದ ಸುಕ್ಕುಗಳು ಹುರಿಯಾಗುವಂತೆ ಜೋಲು ಹುಬ್ಬುಗಳನ್ನು ಮೇಲಕ್ಕೆ ನೀಡಿ, ವಾರ್ಧಕ್ಯದಶೆಯಿಂದ ಸಂಕುಚಿತವಾಗಿದ್ದ ವಿಶಾಲವಾದ ಕಣ್ಣುಗಳನ್ನು ಪ್ರಯತ್ನಪೂರ್ವಕವಾಗಿ ತೆರದು ನಮ್ಮ ಕಥಾನಾಯಕನ ಮುಖವನ್ನೇ ಸೌಮ್ಯವಾಗಿ ನಿಟ್ಟಿಸಿ ನೋಡುತ್ತಿದ್ದರು. ಅದೇತಕ್ಕೆಂದರೆ, ಮುಖಭಾವದಿಂದ ಮನೋಭಾವವನ್ನು ಊಹಿಸುವ ಕಲಾಕೋವಿದರಲ್ಲ ಅಗ್ರೇಸರರಾದ ಅವರು, ರವಿವರ್ಮನು ತನ್ನ ಅಭಿಪ್ರಾಯವನ್ನು ಕಂಠೋ

ಕ್ತಿಯಿಂದ ಹೇಳುವಷ್ಟರೊಳಗಾಗಿ ಆವನ ಮನೋಗತವನ್ನು ತಿಳಿದುಕೊಳ್ಳಬೇಕೆಂದು ತವಕ ಪಡುತ್ತಿದ್ದರು.

ರವಿವರ್ಮನು ಕುಶನಾಭರ ಕಡೆಯ ವಾಕ್ಯಗಳನ್ನು ಕೇಳಿದ ಕೂಡಲೇ, ಪ್ರತ್ಯುತ್ತರವೇ ತೋರದವನಂತೆ ಚಿಂತಾಸಾಗರದಲ್ಲಿ ಮುಳುಗಿ ತಲೆಯನ್ನು ಬಗ್ಗಿಸಿಕೊಂಡು ಕುಳಿತುಕೊಂಡನು. ಗೋಕ್ಷೀರದಂತೆ ಬಿಳುಪಾಗಿ, ಶಮದಮಾದಿ ಸಾತ್ವಿಕ ಗುಣಗಳನ್ನು ವ್ಯಕ್ತಪಡಿಸುತ್ತಿದ್ದ ಅವನ ಕಪೋಲಗಳು ಕೆಂದಾವರೆಯಂತೆ ಕೆಂಪಾದುವು; ಹುಬ್ಬಿನ ಬಳ್ಳಿಗಳು ಸಂಕುಚಿತವಾದುವು; ದೃಷ್ಟಿಯು ಅಧೋಮುಖವಾಯಿತು; ಅಂಗೈ ಅಂಗಾಲುಗಳು ಬೆವರಿಟ್ಟುವು; ಕಟ್ಟಿಕೊಂಡು ಬರುತ್ತಿದ್ದ ಗಣ್ಣಲನ್ನು ಭೀತಭೀತನಾಗಿ ಮೆತ್ತ ಮೆತ್ತಗೆ ಕೆಮ್ಮಿ ಸರಿಮಾಡಿಕೊಂಡನು.

ಆಗಳಾ ತಪಸ್ವಿಗಳು ಅವನನ್ನು ನೋಡಿ ಅವನ ಮನೋಗತವನ್ನು ತಿಳಿದವನ ಮುಖಭಾವದಿಂದಲೂ ಕಂಠಸ್ವರದಿಂದಲೂ "ವತ್ಸಾ, ಇದಕ್ಕೆ ನೀನಿಷ್ಟು ಯೋಚಿಸುತ್ತಿರುವುದೇಕೆ? ಈ ವಿಷಯವಾಗಿ ನೀನು ನಿನ್ನ ಅಭಿಪ್ರಾಯವನ್ನು ಸಂಕೋಚಪಡದೇ ನಿರ್ಭಯವಾಗಿ ಹೇಳು. ತಪಸ್ವಿಗಳ ಸಂಗಡ ಮಾತನಾಡುತ್ತಿರುವೆನೆಂದು ನೀನು ರವೆಯಷ್ಟಾದರೂ ಭಯಪಡಬೇಕಾದುದಿಲ್ಲ; ಅದೇತಕ್ಕೆಂದರೆ ನಾನೀಗ ವಾನಪ್ರಸ್ಥಾಶ್ರಮದಲ್ಲಿದ್ದಾಗ್ಯೂ ಆ ಮಹಾನುಭಾವರಾದ ಅರವಿಂದಬಾಂಧವರ ಮಹದಾಜ್ಞೆಯನ್ನು ನೆರವೇರಿಸುವುದಕ್ಕೋಸುಗ ಗೃಹಸ್ಥನಂತೆ ವ್ಯವಹರಿಸುತ್ತಿರುವೆನು. ಆದ ಪ್ರಯುಕ್ತ ನನ್ನ ಯೋಗಸಿದ್ಧಿಗಳನ್ನು ಈ ಲೌಕಿಕವ್ಯವಹಾರಕ್ಕಾಗಿ ಉಪಯೋಗಿಸಿಕೊಳ್ಳುವುದಿಲ್ಲ, ಆದುಕಾರಣ, ನೀನು ನನ್ನನ್ನು ಸಾಮಾನ್ಯನಾದ ಕ್ಷತ್ರಿಯ ಗೃಹಸ್ಥನಂತೆ ಭಾವಿಸಿಕೊಂಡು ನನ್ನೊಡನೆ ನಿರ್ಭಯವಾಗಿ ಮಾತನಾಡಬಹುದು." ಎಂದು ಹೇಳಿದರು.

ರವಿವರ್ಮ:—ಮಹಾಸ್ವಾಮಿ, ಮನ್ನಿಸಬೇಕು; ಬ್ರಹ್ಮಚರ್ಯಾಶ್ರಮವು ಇತರ ಆಶ್ರಮಗಳಿಗಿಂತಲೂ ಈ ಕರ್ಮಭೂಮಿಯಲ್ಲಿ ಧರ್ಮಸಾಧನೆಗೆ ಉತ್ತಮವಾಗಿರುವಂತೆ ನನಗೆ ಕಾಣುತ್ತಿದೆ. ಆದುದರಿಂದ, ನಾನು ನನ್ನ ಜೀವಮಾನವನ್ನು ಬ್ರಹ್ಮಚರ್ಯದಲ್ಲಿಯೇ ಕಳೆಯಬೇಕೆಂದು ಆಶಿಸುತ್ತೇನೆ.

ಕುಶನಾಭ:—ವತ್ಸಾ, ಆಶ್ರಮಗಳಲ್ಲಿ ಯಾವುದಾದರೂ ಒಂದು ಸರ್ವೋತ್ತಮವಾದುದೆಂದು ಹೇಳಬೇಕಾದರೆ, ಎಲ್ಲಾ ಆಶ್ರಮಗಳನ್ನೂ ಪೂರ್ತಿಯಾಗಿ ಅನುಭವಿಸಿದವನಿಗೆ ಮಾತ್ರ ಸಾಧ್ಯವೇ ಹೊರತು ಇತರರಿಗೆ ಸರ್ವಥಾ ಸಾಧ್ಯವಲ್ಲ. ಹೀಗಿರುವಲ್ಲಿ, ಬಾಲಪಟುವಾದ ನಿನ್ನ ನಿರ್ಧಾರಣೆಯು ಎಷ್ಟು ಸಮಂಜಸವಾದುದೋ ನೀನೇ ಯೋಚಿಸಿ ನೋಡು. ಈ ಕಲಿಗಾಲದಲ್ಲಿ ನಿನ್ನಂತಹ ಕ್ಷತ್ರಿಯ ಯುವಕನಿಗೆ ಅತಿ ಕೃಚ್ಛ್ರವಾದ ಬ್ರಹ್ಮಚರ್ಯದಲ್ಲಿ ಇಷ್ಟು ಅಭಿರುಚಿ ಇರುವುದು ಶ್ಲಾಘ್ಯವೇ ಸರಿ; ಆದರೆ, ಪ್ರಜಾಪರಿಪಾಲನೆಯಲ್ಲಿ ಬದ್ಧಕಂಕಣನಾದ ಕ್ಷತ್ರಿಯ ವೀರನಿಗೆ ಆಬಾಲ್ಯ ಬ್ರಹ್ಮಚರ್ಯವು ಹೇಯವಾದುದು. ಮಹಾಯಜ್ಞಾದಿ ಸತ್ಕರ್ಮಗಳಿಗೂ, ಸತ್ಕರ್ಮಗಳನ್ನು ಮಾಡತಕ್ಕವರುಗಳಿಗೂ, ಅನುಕೂಲವಾದ ಗೃಹಸ್ಥಾಶ್ರಮವು ಮಾನವ ಸಾಮಾನ್ಯರಿಗೆ ಅತ್ಯವಶ್ಯಕವಾದುದು. ಇಂತಹ ಗಾರ್ಹಸ್ಥ್ಯವನ್ನು ಬಿಟ್ಟು ಭೀಕ್ಷ್ಮಪ್ರತಿಜ್ಞೆಯನ್ನು ಮಾಡುವುದು ಸಾಮಾನ್ಯರಿಗೆ ಸಾಧ್ಯವೆ? ಸಾಮಾನ್ಯವಾಗಿ ಅಸ್ಥಿರಬುದ್ಧಿಗಳಿಗೆ, ವಿಶೇಷವಾಗಿ ಯೌವನಸ್ಥರಿಗೆ, ಸಂಸರ್ಗದಿಂದ ಗಗನ ಪ್ರಾಸಾದ ನಿರ್ಮಾಣದಂತಹ ವಿವಿಧವಾದ ಮನೋರಥಗಳೂ, ಸ್ಮಶಾನ ವೈರಾಗ್ಯದಂತಹ ವೈರಾಗ್ಯಗಳೂ ಉಂಟಾಗುವುದುಂಟು; ಆದರೆ ಇವುಗಳು ಚಿರಸ್ಥಾಯಿಗಳೂ ಅಲ್ಲ; ಸುಸಾಧ್ಯವಾದುವುಗಳೂ ಅಲ್ಲ—ಬುದ್ಧಿದ

ಗಳಂತೆ ಹುಟ್ಟಿದ ಸ್ಥಳದಲ್ಲಿಯೇ ವಿಲೀನವಾಗಿ ಹೋಗುತ್ತವೆ. ಆದರಂತೆಯೇ, ಈ ಆಶ್ರಮದಲ್ಲಿರುವ ಬ್ರಹ್ಮಚಾರಿಗಳ ಸಂಸರ್ಗದಿಂದ ಈಗ ನಿನ್ನ ಮೃದುವಾದ ಮಿದುಳಿನಲ್ಲಿ ಬ್ರಹ್ಮಚರ್ಯದ ಉನ್ಮಾದವು ಅಂಕುರಿತವಾಗಿದೆ. ಆದುದರಿಂದು ವಿವೇಕಶಾಲಿಯಾದ ನೀನು ಅಂತಹ ಉನ್ಮಾದದ ವೃದ್ಧಿಗೆ ಅವಕಾಶಕೊಡದೆ ನಿನ್ನ ಕುಲಧರ್ಮಗಳಲ್ಲಿಯೂ, ಗುರುಜನರ ಅನುಶಾಸನದಲ್ಲಿಯೂ ಗೌರವವನ್ನಿಟ್ಟು, ನಿನ್ನ ಕಾಲ, ದೇಶ, ವಯಸ್ಸುಗಳಿಗನುಗುಣವಾಗಿ ನಿನ್ನ ಹಿರಿಯರ ಮಾರ್ಗವನ್ನು ಅವಲಂಬಿಸುವುದು ನಿನಗೆ ಧರ್ಮವಾಗಿದೆ. ಇದಲ್ಲದೇ, ನೀನು ಹಾಗೆ ಬ್ರಹ್ಮಚಾರಿಯಾಗತಕ್ಕದ್ದು ನಿನ್ನ ಕರ್ಮಫಲವಾಗಿದ್ದರೆ, ತ್ರಿಕಾಲಜ್ಞಾನಿಗಳಾದ ಅರವಿಂದಬಾಂಧವರು ತಮ್ಮ ಕುಮಾರಿಯನ್ನು ನಿನಗೆ ಕೊಟ್ಟು ವಿವಾಹ ಮಾಡಬೇಕೆಂದು ನನಗೆ ಅಪ್ಪಣೆ ಕೊಡಿಸುತ್ತಿದ್ದರೆ ? ನೀನೇ ಕೊಂಚ ಯೋಚಿಸಿನೋಡು. ಮಹಾತ್ಮರು ಸತ್ಯಸಂಕಲ್ಪರು ; ಅವರ ಸಂಕಲ್ಪವು ಎಂದಿಗೂ ನಿರರ್ಥಕವಾಗುವುದಿಲ್ಲ. ಆದಪ್ರಯುಕ್ತ, ನಾನು ನಿನಗೆ ಮತ್ತೊಂದಾವೃತ್ತಿ ಒತ್ತಿ ಹೇಳುವುದೇನಂದರೆ, ನೀನು ವೃದ್ಧನಾದ ನನ್ನ ಮಾತನ್ನು ಅಸಡ್ಡೆ ಮಾಡದೆ ಆ ಯೋಗೀಶನನ್ದಿನಿಯನ್ನು ಪಾಣಿಗ್ರಹಣ ಮಾಡಿಕೊಂಡು ಸ್ವರ್ಗಕ್ಕೆ ಸಮಾನವಾದ ಆ ಪದ್ಮದ್ವೀಪದ ಆಧಿಪತ್ಯವನ್ನು ಕೈಕೊಳ್ಳುವುದು ನಿನಗೆ ಇಹಪರದಲ್ಲಿಯೂ ಶ್ರೇಯಸ್ಕರವಾದುದು.

ರವಿವರ್ಮ:—ಮಹಾಸ್ವಾಮಿ, ನನ್ನ ಎದುರುತ್ತರವನ್ನು ಮನ್ನಿಸಬೇಕು. ನನಗೆ ಈ ಬ್ರಹ್ಮಚರ್ಯ ವ್ರತಾಭಿಲಾಷೆಯು ಹಠಾತ್ತಾಗಿ ಹುಟ್ಟಲಿಲ್ಲ—ಮೃತ್ಯುವು ನಿರ್ಘೃಣನಾಗಿ ನಿತ್ಯವೂ ವಿವಿಧಗಳಾದ ಆಧಿವ್ಯಾಧಿಗಳ ಸೇನೆಯಿಂದ

ಸಮೇತನಾಗಿ ಕಿರಾತನಂತೆ ಪ್ರಾಣಿವರ್ಗವನ್ನು ಬೇಟೆಯಾಡು ತ್ತಿದ್ದಾಗ್ಯೂ ಮಾಯಾ ವಿಮೋಹಿತರಾದ ಮಾನವರು ನರಕ ವಾಸದಂತೆ ಮಲಮೂತ್ರಾದಿಗಳಲ್ಲಿ ವ್ಯರ್ಥವಾಗುವ ಬಾಲ್ಯ ದಿಂದಲೂ, ಪರಿಣಾಮದಲ್ಲಿ ವಿರಸವಾದ ಸ್ರಕ್ಚಂದನವನಿತಾದಿ ವಿಷಯಾಭಿಲಾಷೆಯಲ್ಲಿ ವ್ಯರ್ಥವಾಗುವ ಯೌವನದಿಂದಲೂ, ತಲೆನರತು, ಹಲ್ಲುಬಿದ್ದು, ಚೊಲ್ಲುಸುರಿದು, ಕುಗ್ಗಿ, ಬಗ್ಗಿ, ನೆಗ್ಗಿ, ವಿಕಾರವಾಗಿ ಇಂದ್ರಿಯ ಪಾಟವವಿಲ್ಲದೇ ಒರಗಿ, ನೊರಗಿ ಪುತ್ರ, ಪೌತ್ರ ಕಳತ್ರಾದಿಗಳಿಂದಲೂ ಕೂಡಾ ಪರಿಹಸಿತವಾದ ಲೌಕಿಕವಸ್ತುಗಳಲ್ಲಿ ಅಪಾರವಾದ ಆಶೆಯನ್ನು ಸೂಚಿಸುವ ಅಸ್ಫುಟ ವಚನಗಳಿಂದ ಅಸಹ್ಯವಾದ, ವಾರ್ಧಕ್ಯದಿಂದಲೂ, ಒಡಕು ಮಡಿ ಕೆಯಲ್ಲಿ ತುಂಬಿಟ್ಟ ನೀರಿನಂತೆ ಪ್ರತಿಕ್ಷಣವೂ ಪರಿಕ್ಷೀಣವಾಗು ತ್ತಿರುವ ಆಯುಸ್ಸಿನಿಂದಲೂ ಕೂಡಿರುವ ಅನಿತ್ಯವಾದ ಶರೀರದ ಮೇಲಣ ಮಮತೆಯನ್ನು ಬಿಡದೇ ಹೊಡೆದಾಡುತ್ತಿರುವುದನ್ನು ನೋಡಿ ನೋಡಿ ನನಗೆ ಐಹಿಕವಿಷಯಗಳಲ್ಲಿ ಜುಗುಪ್ಸೆಯುಂಟಾಗಿ ರುವುದರಿಂದ, ನಾನು ಈ ಜನ್ಮವನ್ನು ಬ್ರಹ್ಮಚರ್ಯ ವ್ರತದಲ್ಲಿಯೇ ಕಳೆಯಬೇಕೆಂದು ಸಂಕಲ್ಪಮಾಡಿಕೊಂಡಿರುವೆನು.

ಕುಶನಾಭರು, ಆದಿತ್ಯವರ್ಮನ ನೀತಿವಚನಗಳನ್ನು ತಲೆ ದೂಗುತ್ತಾ ಮಂದಹಾಸದಿಂದ ಕೇಳಿ " ಎಲೈ, ನೀನು ಸಾಕ್ಷಾ ದ್ಭಾಗ್ಗತಮನ ಅಪರಾವತಾರದಂತೆ ಕಾಣುತ್ತೀಯೆ. ಮಹಾ ತಪಸ್ವಿ ಗಳಾದ ವಿಶ್ವಾಮಿತ್ರಾದಿ ಮಹರ್ಷಿಗಳು ತಮ್ಮ ಅಪರವಯಸ್ಸಿನಲ್ಲಿ ಯೂ ಕೂಡಾ ವಿಷಯೋಪ ಭೋಗಗಳ ಲೋಭನೆಯನ್ನು ನಿವಾ ರಣೆ ಮಾಡಲಾರದೇ ಸುರಸುಂದರಿಯರ ದಾಸಾನುದಾಸರಾದರು. ಅಂಥವರ ಪಾಡೇ ಹಾಗಾದಮೇಲೆ, ನಿನ್ನಂತಹ ಬಾಲಕನ ಮಾತೇ ನು ? ದೈವಸಂಕಲ್ಪಕ್ಕೆ ಪ್ರತಿಕೂಲವಾಗಿ ಆವನು ತಾನೇ ಪ್ರವರ್ತಿ

ಸಲಾಪನು? ಮಾನವರನೇಕರು ಇಂತಹ ಅಸಾಧ್ಯವಾದ ಪ್ರತಿಜ್ಞೆಗಳನ್ನು ಮಾಡಿ ಸಾಧಿಸಲಾರದೇ ಕಡೆಗೆ ಉಭಯ ಭ್ರಷ್ಟರಾಗಿ ಹೋದುದನ್ನು ನಾವು ಕಣ್ಣಾರ ಕಂಡಿರುವೆವು. ಒಳ್ಳೆಯದು, ನಾನಿನ್ನು ನಿನ್ನನ್ನು ಆ ವಿಷಯವಾಗಿ ಬಲಾತ್ಕಾರ ಪಡಿಸುವುದಿಲ್ಲ. ಆದುದರಿಂದ, ನಾನು ಕೊಟ್ಟ ತೊಂದರೆಯನ್ನು ಮನ್ನಿಸಿ ನೀನು ನಿನ್ನ ರಾಷ್ಟ್ರಕ್ಕೆ ಹಿಂದಿರುಗಿ ಹೋಗಬಹುದು.

ರವಿವರ್ಮ:—ಮಹಾಸ್ವಾಮಿ, ಅಪ್ಪಣೆಯಾದರೆ ಈ ಇರುಳು ಇಲ್ಲಿಯೇ ಇದ್ದು ಹೊತ್ತಿನಂತೆ ಎದ್ದು ಪಯಣ ಮಾಡುವೆನು.

ಕುಶನಾಭ:—'ಒಳ್ಳೆಯದು' ಎಂದು ಎದ್ದು ಪರ್ಣಶಾಲೆಯ ಒಳಕ್ಕೆ ಹೊರಟುಹೋದರು.

ಈ ಪರ್ಣಶಾಲೆಯು ದಟ್ಟವಾದ ನೆಳಲಿನಲ್ಲಿ ಕಟ್ಟಲ್ಪಟ್ಟಿದ್ದಾಗ್ಯೂ ಇದರಲ್ಲಿ ಆದಿತ್ಯಾದಿ ಗ್ರಹಗಳು ಪ್ರತ್ಯಕ್ಷವಾಗಿದ್ದುವು.

ಹಿನ್ದೆ ಮಹಾರಾಜನೊಬ್ಬನು ಕಾಡಿನಲ್ಲಿ ಬೇಟೆಯಾಡುತ್ತಿದ್ದಾಗ ಮಳೆ ಬರಲು ಅಲ್ಲಿದ್ದ ಒಂದು ಮರದ ಬುಡಕ್ಕೆ ಹೋದರು. ಅಲ್ಲಿ ಮಹಾತ್ಮರೊಬ್ಬರು ಸಮಾಧಿಸ್ಥರಾಗಿ ಕುಳಿತುಕೊಂಡಿದ್ದರು. ರಾಜನ ಕುದುರೆಯ ಖುರಪುಟದ ಶಬ್ದದಿಂದ ಅವರು ಎಚ್ಚರಗೊಂಡರು. ಆಗ ರಾಜನು ಅತಿವಿನೀತಭಾವದಿಂದ ಅವರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದನು. ಅವರು ಆತನನ್ನು ಕೃಪಾವಲೋಕನದಿಂದ ಆಶೀರ್ವದಿಸಲು ಮಹಾರಾಜನು ಎದ್ದು ನಿಂತು ಬದ್ಧಾಂಜಲಿಯಾಗಿ "ಮಹಾಸ್ವಾಮಿ, ಬಲವಾಗಿ ಮಳೆ ಬರುವನ್ತಿದೆ; ಆದುದರಿಂದ, ತಾವು ಮಳೆಗೆ ಮುಂಚಿತವಾಗಿ ತಮ್ಮ ಪರ್ಣಶಾಲೆಗೆ ಬಿಜಯಮಾಡುವುದು ಒಳ್ಳೆಯದಲ್ಲವೆ? ಎಂದು ಕೇಳಿದನು. ಅದಕ್ಕೆ ಆ ಯೋಗಿಗಳು "ಅಯ್ಯೋ! ಈ ಚರ್ಮಶಾಲೆಯಿಂದ

ನಿವೃತ್ತನಾದ ಮೇಲಲ್ಲವೇ ಮತ್ತೊಂದು ಶಾಲೆಯ ವಿಚಾರ ಎಂದರು. ಮಹಾರಾಜನದಕ್ಕೆ "ಮಹಾಸ್ವಾಮಿಾ, ಪರ್ಣಶಾಲಾದಿ ಆವಾಸಗಳ ನಿರ್ಮಾಣದ ಉದ್ದೇಶವು ಈ ಚರ್ಮಶಾಲೆಯನ್ನು ಕಾಪಾಡುವುದಕ್ಕಲ್ಲವೇ ?" ಎಂದು ಕೇಳಲು ಆ ಮಹನೀಯರು ನಕ್ಕು "ಭೋಗಿಗೆ ಯೋಗಿ ಮರುಳು ; ಯೋಗಿಗೆ ಭೋಗಿ ಮರುಳು' ಎಂಬ ಗಾದೆಯು ಅನುಭವಸಿದ್ಧವಾಗಿದೆ. ಆದುದರಿಂದ ನಿನ್ನ ಪ್ರಶ್ನೆಗೆ ನಾನು ಕೊಡುವ ಉತ್ತರವು ನಿನಗೆ, ಸಾಮಾನ್ಯವಾಗಿ ಲೌಕಿಕರಿಗೆ, ಸಮರ್ಪಕವಾಗಿರಲಾರದು. ಆದಾಗ್ಯೂ, ನನ್ನ ಮನಸ್ಸಾಕ್ಷಿಗೆ ಸಮರ್ಪಕವಾಗಿ ನಾನು ಉತ್ತರವನ್ನು ಕೊಟ್ಟೇ ಕೊಡಬೇಕು. ಆದುದರಿಂದ ಹೇಳುವೆನು ಕೇಳು ಈ ಪಾಂಚಭೌತಿಕವಾದ ಶಾಲೆಯನ್ನು ಪರ್ಣಶಾಲೆಯಾಗಲೀ, ಸ್ವರ್ಣಶಾಲೆಯಾಗಲೀ, ಮತ್ತಾವ ಶಾಲೆಯಾಗಲೀ, ಯಾವ ವಿಧದಿಂದಲೂ, ಎಷ್ಟುಮಟ್ಟಿಗೂ ಕಾಪಾಡಲಾರದು; ಪಂಜರದಲ್ಲಿರುವ ಪಕ್ಷಿಯು ತನ್ನ ಪಂಜರವನ್ನು ಕಾಪಾಡಿಕೊಳ್ಳಲಾಪುದೆ ? ಭಗವಂತನಿಂದ ನಿರ್ಮಿತವಾಗಿ ಭಗವಂತನಿಂದಲೇ ರಕ್ಷಿತವಾದ ಶಾಲೆಯನ್ನು ರಕ್ಷಿಸುವುದಕ್ಕೆ ಮತ್ತೊಂದು ಶಾಲೆಗೆ ಹೋಗುವುದು ನನಗೆ ಯುಕ್ತವಾಗಿ ತೋರುವುದಿಲ್ಲ." ಎಂದು ಹೇಳಿದರು.

ಈ ಐತಿಹ್ಯದಿಂದ ತಪಸ್ವಿಗಳು ತಮ್ಮ ಆವಾಸಗಳನ್ನು ವಿಶೇಷವಾಗಿ ಲಕ್ಷ್ಯಮಾಡುತ್ತಿರಲಿಲ್ಲವೆಂಬುದು ಗೊತ್ತಾಗುತ್ತದೆ. ಆದುದರಿಂದ, ಕುಶನಾಭರ ಪರ್ಣಶಾಲೆಯು ಆ ರೀತಿಯಾಗಿದ್ದುದು ಅಸಾಧಾರಣವಲ್ಲ.

ಅಲ್ಲಿ ವ್ಯಾಘ್ರಾಜಿನದ ಮೇಲೆ ಕುಳಿತುಕೊಂಡಿದ್ದ ವೃದ್ಧತಾಪಸಿಗಳೊಬ್ಬರು ಕುಶನಾಭರನ್ನು ಕಂಡು "ಏನು ತಮ್ಮ ಪೌರೋಹಿತ್ಯವು ಮುಗಿದ ಹಾಗೆ ಕಾಣುತ್ತದೆ ?" ಎಂದು ಕೇಳಿದರು.

ಕುಶನಾಭ.—"ಏನು ಪೌರೋಹಿತ್ಯವೋ ಕಾಣೆ" ಎಂದು ಅಲ್ಲಿದ್ದ ಒಂದು ದರ್ಭಾಸನದ ಮೇಲೆ ಕುಳಿತುಕೊಂಡು ನನ್ನ ಸಾಹಸವಂತು ಕಾರ್ಯಕರವಾಗಲಿಲ್ಲ.

ತಪಸ್ವಿ.—ಕುಲಪುರೋಹಿತರ ಸಾಹ್ಯವಿಲ್ಲದಮೇಲೆ, ಸ್ಥಳ ಪುರೋಹಿತರ ಪ್ರಯತ್ನವು ನೆರವೇರುವುದೇ ?

ಕುಶನಾಭ:—ಆರವರ ಕುಲಪುರೋಹಿತರು ?

ತಪಸ್ವಿ.—ಇದೇನು ತಾವು ಅವರನ್ನು ಮರತೇ ಹೋದ ಹಾಗಿದೆ ? ವಿಶೇಷವಾಗಿ ಕ್ಷತ್ರಿಯ ಯುವಕರಿಗೆ ಸಾಧಾರಣವಾಗಿ ಯುವಕಜನರಿಗೆಲ್ಲಾ, ಪೂಜ್ಯರಾದ ಪ್ರದ್ಯುಮ್ನಾಚಾರ್ಯರಲ್ಲವೇ ಕುಲಪುರೋಹಿತರು ?

ಕುಶನಾಭ.—"ಓಹೊ ! ಚನ್ನಾಗಿ ಹೇಳಿದಿರಿ ! ಚನ್ನಾಗಿ ಹೇಳಿದಿರಿ !!" ಎಂದು ನಕ್ಕು, "ಈ ಕುಮಾರನು ವಿಲಕ್ಷಣನಾಗಿ ಕಾಣುತ್ತಾನೆ; ಇವನಿಗೆ ಸಾಕ್ಷಾದ್ಭೀಷ್ಮಾಚಾರ್ಯರೇ ಪುರೋಹಿತರಾಗಿರುವಂತೆ ಕಾಣುತ್ತದೆ."

ತಪಸ್ವಿ.—ಪ್ರದ್ಯುಮ್ನಾಚಾರ್ಯರು ಅನುಗ್ರಹಮಾಡದೇ ಇರುವವರೆಗೂ ಭೀಷ್ಮಾಚಾರ್ಯರ ಪೌರೋಹಿತ್ಯವೇ; ಆಮೇಲೆ ಭೀಷ್ಮಾಚಾರ್ಯರ ಪೌರೋಹಿತ್ಯವೂ ಜರಗುವುದಿಲ್ಲ, ಬೃಹಸ್ಪತ್ಯಾಚಾರ್ಯರ ಪೌರೋಹಿತ್ಯವೂ ಜರಗುವುದಿಲ್ಲ. ಫಾಲಾಕ್ಷನ ಹೊರತು ಅವರ ಮಹಾ ಪ್ರಯೋಗವನ್ನು ಇದಿರಿಸುವಷ್ಟು ಎದೆಯುಳ್ಳ ವೀರರಾರೂ ಇಲ್ಲ. ಒಳ್ಳೆಯದು, ಆ ಹುಡಗನ ಅಭಿಪ್ರಾಯವೇನು?

ಕುಶನಾಭ.—ಅವ್ಯವಸ್ಥಿತ ಬುದ್ಧಿಗಳಾದ ಬಾಲಕರಿಗೆ, ದೇಶಕಾಲವರ್ತಮಾನಗಳಿಗನುಗುಣವಾಗಿ ವಿವಿಧವಾದಕ್ಷಣಿಕ ವೈರಾಗ್ಯಗಳು ಉಂಟಾಗುವುದು ಸಹಜವಾಗಿಯೇ ಇದೆ. ಆದರಂತೆಯೇ

ಇವನಿಗೂ ಈ ತಪೋವನದ ಪ್ರಭಾವದಿಂದ ಬ್ರಹ್ಮಚರ್ಯವೈರಾಗ್ಯ ಉಂಟಾಗಿದೆ. ಆದ ಪ್ರಯುಕ್ತ ಅವನು ಅಭಿನವ ಭೀಷ್ಮಾಚಾರ್ಯರಂತೆ ಮಾತನಾಡುತ್ತಾನೆ.

ತಪಸ್ವಿ.—ಓಹೋ! ಇಸ್ಟೇತಾನೆ? ತನ್ನ ಕಾರ್ಯನಿರ್ವಾಹಕ್ಕೆ ಇದೊಂದು ಪ್ರತಿಬಂಧಕವಲ್ಲ. ಸಾಮಾನ್ಯವಾಗಿ, ಯುವಕರು ವಿವಾಹ ಪ್ರಸ್ತಾಪ ಮಾಡಿದಾಗ, ಲಜ್ಜಾವಶದಿಂದ ಇಂತಹ ಅಸಂಭಾವ್ಯವಾದ ಮಾತುಗಳನ್ನು ಆಡುವುದುಂಟು. ಇದು ಹಾಗಿರಲಿ, ಈತನನ್ನು ವಿವಾಹಮಾಡಿಕೊಳ್ಳತಕ್ಕ ವಿಷಯದಲ್ಲಿ ಆ ಕನ್ಯೆಯ ಅಭಿಪ್ರಾಯವೇನು? ವಿಚಾರಿಸೋಣವಾಗಿದೆಯೆ?

ಕುಶನಾಭ.— ಕನ್ಯಾಪಿತೃಗಳಾದ ಅರವಿಂದ ಬಾಂಧವರೇ ಅನುಮೋದಿಸಿರುವಾಗ, ನಾವು ಆ ಬಾಲೆಯ ಅಭಿಪ್ರಾಯವನ್ನು ತಿಳಿಯಬೇಕಾದ ಅವಶ್ಯಕತೆ ಏನಿದೆ?

ತಪಸ್ವಿ.— ಮಹಾಸ್ವಾಮಿ, ತಾವು ಯುಗಾಂತರದ ಧರ್ಮವನ್ನು ಅನುಸರಿಸಿ ಮಾತನಾಡೋಣವಾಗುತ್ತದೆ. ಈ ಕಲಿಯುಗದಲ್ಲಿ, ಕನ್ಯೆಯರ ಅಭಿಪ್ರಾಯವನ್ನು ತಿಳಿಯಬೇಕಾದುದು ಪುರೋಹಿತರ ಪ್ರಥಮ ಕರ್ತವ್ಯ. ಇಲ್ಲದೇ ಹೋದರೆ, ಚಂದ್ರಕಳಾ ಪರಿಣಯದಂತೆ, ಸರ್ವರ ಸರ್ವ ಸಾಹಸವೂ ರಸಾಭಾಸದಲ್ಲಿ ಪರ್ಯವಸಾನವಾಗುತ್ತದೆ.

ಕುಶನಾಭ.—ವರನೇ ವಿರಕ್ತನಾಗಿರುವಾಗ ವಧುವಿನ ಅಭಿಪ್ರಾಯವನ್ನು ತಿಳಿವುದರಿಂದ ಫಲವೇನು?

ತಪಸ್ವಿ.—ನಕ್ಕು,'ಮನ್ನಿಸಬೇಕು ಮಹಾಸ್ವಾಮಿ; ತಮಗೆ ಪೌರೋಹಿತ್ಯದ ಮರ್ಮವೇ ಗೊತ್ತಿಲ್ಲ. ವರನನ್ನು ಹೇಗಾದರೂ ಒಪ್ಪಿಸಬಹುದು; ವಧುವನ್ನು ಒಪ್ಪಿಸುವುದು ಸಾಮಾನ್ಯವಲ್ಲ. ಆದುದರಿಂದ, ಮೊದಲು ನಾವು ಕನ್ಯೆಯ ಅಭಿಪ್ರಾಯ

ವನ್ನು ತಿಳಿದುಕೊಳ್ಳೋಣವಾಗಲಿ; ತರುವಾಯ ತಮಗೆ ನಾನು ಮುಂದಣ ಪೌರೋಹಿತ್ಯದ ಕ್ರಮವನ್ನು ಹೇಳಿಕೊಡುವೆನು.

ಕುಶನಾಭ.—ತಾವೂ ದಯವಿಟ್ಟು ನನ್ನ ಜೊತೆಯಲ್ಲಿ ದಯ ಮಾಡಿಸುವ ಹಾಗಿದ್ದರೆ, ಈಗಲೇ ನಾವಿಬ್ಬರೂ ಪದ್ಮದ್ವೀಪಕ್ಕೆ ಹೋಗಿ ಆ ಯುವತಿಯ ಮನೋಗತವನ್ನು ತಿಳಿದು ಬರೋಣ.

ತಪಸ್ವಿ.—"ಹಾಗಾದರೆ ಹೊರಡೋಣ; ದಯಮಾಡೋಣ ವಾಗಲಿ." ಎಂದು ತಟ್ಟನೆ ಎದ್ದು ಮುಂದರಿದು ಹೊರಟರು.

ಕುಶನಾಭರು ಅವರನ್ನು ಹಿಂಬಾಲಿಸಿದರು.

—— o ——

# ಎಂಟನೆಯ ಪ್ರಕರಣ.

---

## ಪದ್ಮದ್ವೀಪ.

ಪದ್ಮದ್ವೀಪವು ಆಕಾರದಲ್ಲಿ ಪದ್ಮವನ್ನು ಹೋಲುತ್ತಿದೆ ಎಂದು ನಮ್ಮ ವಾಚಕಮಹಾಶಯರಿಗೆ ಆಗಲೇ ತಿಳಿದಿದೆಯಷ್ಟೆ; ಅದು ರಾಮಣೀಯಕದ ವಿಷಯದಲ್ಲಿ ಪದ್ಮಕ್ಕಿಂತ ಲೇಶಮಾತ್ರವೂ ಕಡಿಮೆಯಾಗಿಲ್ಲ.

ಇದರ ನಿವಾಸಿಗಳೆಲ್ಲರೂ ಭೂವ್ಯವಸಾಯದಿಂದ ಜೀವನ ಮಾಡುತ್ತಿದ್ದುದರಿಂದ ಅಲ್ಲಿ ಎತ್ತನೋಡಿದರತ್ತ ತೋಟತೊಡವುಗಳೂ, ಹೊಲ ಗದ್ದೆಗಳೂ, ಪಯ್ರು ಪಚ್ಚೆಗಳಿಂದ ನಳನಳಿಸುತ್ತಿದ್ದುವು.

ಈಗ, ನಡುಮಳೆಗಾಲವಾಗಿದ್ದಾಗ್ಯೂ ಕಾಲವೈಚಿತ್ರ್ಯದಿಂದ ಆ ದ್ವೀಪದಲ್ಲಿ ಮಳೆಯು ಹಿಂದೆಗೆದಿತ್ತು. ದೇವಮಾತೃಕವಾದ ಪಯ್ರುಗಳೆಲ್ಲವೂ ಬಿಸಲಿನ ಬೇಗೆಯಿಂದ ಬೆಂದು ಬೆಳ್ಳಗಾಗಿ ಉರ್ವರೆಗೆ ಮೊರೆಯಿಡುವಂತೆ ತಲೆವಾಗಿದ್ದುವು. "ಮಳೆಯಿಲ್ಲದ ಪಯ್ರೂ ಮಾತೆಯಿಲ್ಲದ ಮಕ್ಕಳೂ ಸಮ" ಎಂದು ಹೇಳಲ್ಪಟ್ಟಿದೆ; ಆದರೆ, ಇದು, ನದೀ ಮಾತೃಕಗಳ ವಿಷಯದಲ್ಲಿ ಮಾತ್ರ ಸಮನ್ವಯವಾಗುತ್ತದೆ. ಅಲ್ಲದೆ, ದೇವಮಾತೃಕಗಳಲ್ಲಿ ಸಮನ್ವಯಿಸುವುದಿಲ್ಲ. ದೇವಮಾತೃಕಗಳನ್ನು, ಏರಕ್ಷಾಮದಿಂದ ಹೊಟ್ಟೆಗಿಲ್ಲದೆ ಕಂಗೆಟ್ಟ ಬಡಪ್ರಾಣಿಗಳಿಗೆ ಚನ್ನಾಗಿ ಹೋಲಿಸಬಹುದೆಂದು ತೋರುತ್ತದೆ. ಕ್ಷೇತ್ರಿಯರೆಲ್ಲರೂ ತಾವಿಟ್ಟ ಪಯ್ರುಗಳು ನೀರಿಲ್ಲದೆ ಒಣಗುತ್ತಿರುವುದನ್ನು ಕಣ್ಣೆತ್ತಿ ನೋಡಲಾರದೆ ಯಾವಾಗಲೂ ಆಕಾಶವನ್ನೇ ನೋಡುತ್ತಿದ್ದರು. ಬೆಳಿಗ್ಗೆ ತುಷಾರ

ವೃಷ್ಟಿಯೂ, ಮಧ್ಯಾಹ್ನದ ಹೊತ್ತಿನಲ್ಲಿ ಮೇಘಗಳ ಆಡಂಬರವೂ, ಬೇಸಿಗೆ ಕಾಲದಂತೆ ಬಿಸಲಿನಬೇಗೆಯೂ, ಸಾಯಂಕಾಲದಲ್ಲಿ ನಿರ್ಮಲವಾದ ಆಕಾಶವೂ, ರಾತ್ರಿವೇಳೆ ಋತುಧರ್ಮಕ್ಕೆ ಅನುಗುಣವಾಗಿ ಕಳೆಯೇರಿ ಬೆಳಗುತ್ತಿದ್ದ ಬೆಳದಿಂಗಳೂ, ಕಾಣುತ್ತಿದ್ದುವಲ್ಲದೆ ಸಸ್ಯಕ್ಕೆ ಆಪ್ಯಾಯನವಾದ ವೃಷ್ಟಿಯು ಬರಲೇ ಇಲ್ಲ. ಮುಂಗಾರು ಪೈರುಗೆಇನ್ನೂ ಒಂದೆರಡುಹದ ಮಳೆ ಬೇಕಾಗಿದ್ದಿತು; ಹಿಂಗಾರು ಪೈರುಗಳುಮಾತ್ರ ಇನ್ನು ಕೆಲವು ದಿನಗಳು ಮಳೆ ಬಾರದೇ ಹೋದರೆ, ಸುತರಾಮ್ ಒಣಗಿಹೋಗುವ ಸ್ಥಿತಿಯಲ್ಲಿದ್ದುವು.

ಈ ಸಮಯದಲ್ಲಿ ಮಹಾರಾಣಿಯು ವೃಷ್ಟಿಪ್ರದವಾದ ಯಜ್ಞಾದಿಗಳನ್ನು ಮಾಡಿಸುವುದಕ್ಕೋಸ್ಕರವಾಗಿ ಪ್ರಜಾಪ್ರತಿನಿಧಿಗಳನ್ನೆಲ್ಲಾ ಕರೆಯಕಳುಹಿಸಿದ್ದಳು.

ಮಧ್ಯಾಹ್ನ ಸುಮಾರು ಮೂರು ಘಂಟೆಯ ಹೊತ್ತಿಗೆ ಪುರಜನರೆಲ್ಲರೂ ಅರಮನೆಯ ಆಸ್ಥಾನ ಮಂಟಪದ ಸುತ್ತಮುತ್ತಲೂ ಮಹಾರಾಣಿಯ ಆಗಮನವನ್ನು ನಿರೀಕ್ಷಿಸಿಕೊಂಡು ನೆರದಿದ್ದರು. ಆದಿನ ರಾಣಿವಾಸದಲ್ಲಿ ಪುರಾಣಿಕರು ಸೀತಾಕಲ್ಯಾಣವನ್ನು ಹೇಳುತ್ತಿದ್ದುದರಿಂದ ಮಹಾರಾಣಿಯು ಬರುವುದಕ್ಕೆ ಇನ್ನೂ ಕೊಂಚ ಹೊತ್ತಾಗಬಹುದೆಂದು ಅಲ್ಲಿಯ ಜನರು ಅಂದುಕೊಳ್ಳುತ್ತಿದ್ದರು. ಈ ಸಮಯದಲ್ಲಿ, ವೃದ್ಧ ತಪಸ್ವಿಗಳಿಬ್ಬರು ನೆಟ್ಟಗೆ ಅರಮನೆಯ ಮಹಾದ್ವಾರದಮುಂದೆ ಬಂದು ನಿಂತರು. ಅವರನ್ನು ಕಂಡಕೂಡಲೇ, ದ್ವಾರಪಾಲಕನು ಆ ಸುದ್ದಿಯನ್ನು ಮಹಾರಾಣಿಗೆ ಅರಿಕೆ ಮಾಡಿದನು. ಒಡನೆಯೇ ರಾಣಿಯು ಬಂದು ಅವರುಗಳಿಗೆ ಅಭಿವಂದಿಸಿ, ಅವರುಗಳ ಪಾದರಜಸ್ಸನ್ನು ಕಣ್ಣಿಗೆ ಸವರಿಕೊಂಡು, ಅವರುಗಳನ್ನು ಮನ್ನಣೆಯಿಂದ ಮನೆಯೊಳಕ್ಕೆ ಕರೆದುಕೊಂಡು

ಹೋಗಿ ಆದರಿಸಿ ಯೋಗ್ಯವಾದ ಆಸನಗಳಲ್ಲಿ ಕುಳ್ಳಿರಿಸಿದಳು. ಈ ಮುನಿಗಳು, ಪೂಜ್ಯರಾದ ಕುಶನಾಭರು ಮತ್ತು ಅವರ ಸಹವಾಸಿಗಳಾದ ತಪಸ್ವಿಗಳು ಅಲ್ಲದೆ ಮತ್ತಾರೂ ಅಲ್ಲ.

ಮಹಾರಾಣಿಯು ಈ ತಪೋನಿಧಿಗಳನ್ನು ಯಥಾವಿಧಿಯಾಗಿ ಪೂಜಿಸಿ ಅವರಿದಿರಿಗೆ ವಿಧೇಯಳಾಗಿ ವಿನಯದಿಂದ ಕೈ ಕಟ್ಟಿಕೊಂಡು ನತಶಿರಳಾಗಿ ನಿಂತು "ಮಹಾಸ್ವಾಮಿ, ಇಂದು ತಮ್ಮ ಪಾದೋದಕದಿಂದ ನನ್ನ ಜನ್ಮವು ಸಾರ್ಥಕವಾಯಿತು; ಇಂದು ತಮ್ಮ ಪಾದಧೂಳಿಯ ಸಂಪರ್ಕದಿಂದ ಈ ಪದ್ಮದ್ವೀಪವು ಪವಿತ್ರವಾಯಿತು; ಇಂದು ನಮ್ಮ ಪ್ರಜೆಗಳೆಲ್ಲರೂ ಪುನೀತರಾದರು." ಎಂದಳು.

ಕುಶನಾಭ:—ವತ್ಸೇ, ನೀನು ಅಸಮ್ಬದ್ಧಪ್ರಲಾಪವನ್ನು ಮಾಡುತ್ತಿರುವೆ. ಆದರೆ, ಇದು ನಿನ್ನ ದೋಷವೆಂದು ನಾವು ಭಾವಿಸುವುದಿಲ್ಲ; ಅದೇತಕ್ಕೆಂದರೆ, ಸಜ್ಜನರು ಕಾರುಣ್ಯಾತಿಶಯದಿಂದ ತಮ್ಮ ಇಷ್ಟ ಜನರಲ್ಲಿ ಇಲ್ಲದ ಗುಣಗಳನ್ನು ಕಣ್ಡು ಕೊಂಡಾಡುವುದು ಸಹಜವಾಗಿದೆ. ಸ್ವಭಾವತಃ ಪಾವನವಾದ ವಸ್ತುಗಳು ಮತ್ತಾವುದರಿಂದಲೂ ಶುದ್ಧಿಯನ್ನು ಹೊಂದುವುದಿಲ್ಲ. ಗಂಗಾಜಲವು ಮತ್ತಾವ ಕಾರಣದಿಂದಲಾದರೂ ಶುದ್ಧವಾಯಿತು ಎನ್ನಬಹುದೆ ? ಆ ಮಹಾತ್ಮರಾದ ಅರವಿನ್ದ ಬಾನ್ಧವರ ತಪಃಪ್ರಭಾವದಿಂದ ನಿರ್ಮಿತವಾದ ಈ ಪುಣ್ಯದ್ವೀಪವು ಸ್ವಭಾವತಃ ಪರಿಶುದ್ಧವಾದುದು. ಹೀಗಿರುವಲ್ಲಿ, ಅವರ ಔರಸಪುತ್ರಿಯಾದ ನಿನ್ನ ಪಾರಿಶುದ್ಧ್ಯಕ್ಕೆ ಎಣೆಯುಂಟೆ

ಜಗನ್ಮೋಹಿನೀ:—ಪಿತೃವಿನ ಪಾಣ್ಡಿತ್ಯದಿಂದ ಪುತ್ರನು ಪಣ್ಡಿತನೆನ್ನಿಸಿಕೊಳ್ಳುವುದಿಲ್ಲ.

ಕುಶನಾಭ:—ಸಿಂಹದ ಉದರದಲ್ಲಿ ಸಿಂಹವಲ್ಲದೇ ತೋಳವು ಜನಿಸುವುದೇ ?

ಜಗನ್ಮೋಹಿನೀ:—ಪ್ರಾಣಿವರ್ಗಕ್ಕೆ ಆಕಾರವು ಪ್ರತ್ಯೇಕವೆಂತಲೂ ಬುದ್ಧಿಯು ಕರ್ಮಾನುಗುಣವಾದುದೆಂತಲೂ ಶಾಸ್ತ್ರಸಿದ್ಧವಾಗಿಲ್ಲವೆ ?

ಕುಶನಾಭ:—ಸಾಧು ! ಸಾಧು !! ನಿನ್ನ ಸಂಸ್ಕಾರವು ಬಹಳ ಶ್ಲಾಘ್ಯವಾಗಿದೆ. ಈ ದಿನ ನಿನ್ನನ್ನು ನೋಡಿದ್ದರಿಂದ ನಮಗೆ ಬಹಳ ಸಂತೋಷವಾಯಿತು—ಪೂಜ್ಯರಾದ ಅರವಿನ್ದಬಾನ್ಧವರನ್ನು ನೋಡಿದಂತೆಯೇ ಆಯಿತು.

ಜಗನ್ಮೋಹಿನೀ:—ತಾತ, ತಮ್ಮ ತಪಸ್ಸು ನಿರ್ವಿಘ್ನವಾಗಿ ನಡಿಯುತ್ತಿದೆಯೆ ?

ಕುಶನಾಭ:—ಸರ್ವವಿಘ್ನ ವಿನಾಶಕರಾದ ನಮ್ಮ ಗುರುಗಳು ಸರ್ವದಾ ನಮ್ಮ ಹೃದಯದಲ್ಲಿರುವಾಗ ನಮಗೆ ವಿಘ್ನವೆಲ್ಲಿಯದು ?

ಜಗನ್ಮೋಹಿನೀ:—ತಾತ, ತಾವುಗಳು ಇಬ್ಬರೂ ತಮ್ಮಗಳ ನಿರಂತರವಾದ ತಪಸ್ಸನ್ನು ಬಿಟ್ಟು ಅಕಸ್ಮಾತ್ತಾಗಿ, ಏಕ ಕಾಲದಲ್ಲಿ, ಅಶ್ವಿನೀ ದೇವತೆಗಳಂತೆ, ಈ ದಾಸಳನಿವಾಸಕ್ಕೆ ಬಿಜಮಾಡಿದ ಕಾರಣವನ್ನು ತಿಳಿಯಬೇಕೆಂದು ನನ್ನ ಮನವು ಆತುರಪಡುತ್ತಿದೆ.

ಕುಶನಾಭ.—ವತ್ಸೇ, ನಮ್ಮ ಗುರುಸಮಾನರಾದವರ ಪುತ್ರಿಯಾದ ನಿನ್ನ ಯೋಗಕ್ಷೇಮವನ್ನು ವಿಚಾರಿಸುವುದು ನಮ್ಮ ಕರ್ತವ್ಯವಲ್ಲವೆ ?

ಜಗನ್ಮೋಹಿನೀ.—ನಮ್ಮ ತೀರ್ಥರೂಪರ ತರುವಾಯ ತಾವುಗಳಲ್ಲದೇ ಈ ಅನಾಥಳ ಯೋಗಕ್ಷೇಮವನ್ನು ವಿಚಾರಿಸುವವರಾರು ?

ಕುಶನಾಭ:—ನಿನ್ನನ್ನು ಸನಾಥಳನ್ನಾಗಿ ಮಾಡಬೇಕೆಂಬುದೇ ನಮ್ಮ ಉದ್ದೇಶ.

ಈ ಮಾತನ್ನು ಕೇಳಿದ ಕೂಡಲೇ ಜಗನ್ಮೋಹಿನಿಯ ಮನದಲ್ಲಿ ಲಜ್ಜೆಗೆ ಅನಿವಾರ್ಯವಾದ ಕಾರಣವು ತಲೆದೋರಿತು; ವಿನಯದಿಂದ ಅಧೋಮುಖವಾಗಿದ್ದ ಅವಳ ತಲೆಯು ಮತ್ತಷ್ಟು ಬೊಗ್ಗಿತು; ಅವಳ ಕಪೋಲಗಳ ಮೇಲೆ, ಕುಂಕುಮವು ಉದರಿದಂತೆ, ಕೆಂಪು ಛಾಯೆಯು ಕಾಣಬನ್ದಿತು; ಕಂಠಸ್ವರವು ಅವ್ಯಕ್ತವಾಗಿ ಮಾರ್ಪಟ್ಟಿತು. ಇವಳ ಈ ವಿಕಾರಗಳನ್ನು ಕುಶನಾಭರ ಹಿಂಬಾಲಕರಾದ ತಪಸ್ವಿಗಳು ಗಮನಿಸಿದರು.

ಜಗನ್ಮೋಹಿನಿಯು ಆ ಲಜ್ಜೆಯ ಏಳಿಗೆಗೆ ಅವಕಾಶಕೊಡದೆ ಚಟ್ಟನೆ ಪ್ರಕೃತಿತ್ವವನ್ನು ಹೊಂದಿ "ಜೀಯ್ಯಾ, ಸಾಧುಗಳ ಜೀವಿತಾಶೆಗೆ ಪರೋಪಕಾರವೇ ಮುಖ್ಯೋದ್ದೇಶ." ಎಂದಳು.

ಕುಶನಾಭ:—ವತ್ಸೇ, ನಿನ್ನ ನಾಥನವಿಷಯದಲ್ಲಿ ನಿನಗೇನಾದರೂ ಮನದಟ್ಟಿದೆಯೇ ?

ಜಗನ್ಮೋಹಿನೀ:—ಇಲ್ಲ ಮಹಸ್ವಾಮಿ.

ಕುಶನಾಭ:— ನಿಮ್ಮ ತೀರ್ಥರೂಪರು ಹಿಮಗಿರಿಗೆ ಹೊರಟು ಹೋಗುವಾಗ ನಿನಗೆ ಅವರು ಹೇಳಿದ ಬುದ್ಧಿವಾದವೇನು ?

ಜಗನ್ಮೋಹಿನೀ:—ಏನು ! ನಮ್ಮ ತಂದೆಗಳು ಹಿಮಗಿರಿಗೆ ಹೊರಟುಹೋದರೆ ! ಅವರು ಅಲ್ಲಿಗೆ ಹೋಗುವ ಸಂಗತಿಯು ನನಗೆ ಗೊತ್ತೇಇಲ್ಲ. ನಾನು ಈ ಭವನಕ್ಕೆ ಬಂದಮೇಲೆ ಬಂದು ದಿನ ನಾನು ನಮ್ಮ ತಾಯಿಯ ವಿಯೋಗ ವ್ಯಥೆಯನ್ನು ಸಹಿಸಲಾರದೆ ಮರುಗಿ ಕಣ್ಣೀರಿಡುತ್ತಿದ್ದುದನ್ನು ಕಂಡು ಅವರು ನನ್ನ ತಲೆಯಮೇಲೆ ಕೈತಡವಿ "ವತ್ಸೇ, ಲೌಕಿಕರಂತೆ, ಸಮಾಗಮಕ್ಕೆ ಸಂತೋಷಪಡುವುದೂ, ವಿಯೋಗಕ್ಕೆ ವ್ಯಥೆಪಡುವುದೂ, ಮುನಿಕುಮಾರಿಯಾದ ನಿನಗೆ ಸರಿಯಲ್ಲ. ನೀನು ಭಗವದ್ಗೀತೆಯನ್ನು ಓದಿದುದಕ್ಕೆ ಫಲವೇನು ? ಶ್ರೀ ಕೃಷ್ಣನು, ಮುನಿಗೆ ಏನು

ಲಕ್ಷಣವನ್ನು ಹೇಳುತ್ತಾನೆ ? ಅದನ್ನು ನೆನಪಿಗೆ ತಂದುಕೊಂಡು ಸಂತೈಸಿಕೋ. ನೀನು ಈ ದ್ವೀಪಕ್ಕೆ ಮಹಾರಾಣಿಯಾಗಿ ನಿನ್ನ ವಿರಾಮಕಾಲಗಳಲ್ಲೆಲ್ಲಾ ಭಗವದ್ಗೀತೆಯನ್ನು ಪಾರಾಯಣಮಾಡು ತ್ತಿರು. ದೇವರು ನಿನ್ನನ್ನು ಕಾಪಾಡುತ್ತಾನೆ. ಹೆದರಬೇಡ. '' ಎಂದು ಓಮ್ಮಿಂದೊಮ್ಮೆ ಅದೃಶ್ಯರಾದರು. ಅವರನ್ನು ನಾನು ಏನೇನೋ ಕೇಳಬೇಕೆಂದು ಎಷ್ಟೋತಡವೆ ಪ್ರಯತ್ನಪಟ್ಟೆನು ; ಒಂದುತಡವೆಯಾದರೂ ನಿರ್ಭಾಗ್ಯಳಾದ ನನಗೆ ಅವರಿದಿರಿಗೆ ನಿಂತು ಮಾತನಾಡುವುದಕ್ಕೆ ನಾಲಿಗೆಯೇ ಏರಲಿಲ್ಲ. ಅವರು ನನ್ನಸಂಗಡ ಆವಾಗಲೂ ಮತ್ತಾವ ವಿಷಯವಾಗಿಯೂ ಏನೂ ಹೇಳಲಿಲ್ಲ. ಅವರ ಸುದ್ದಿಯನ್ನು ತಿಳಿಯಬೇಕೆಂದು ಅಂದಿನಿಂದಲೂ ಆತುರ ಪಡುತ್ತಿರುವೆನು; ಆದರೆ, ಇದುವರೆಗೂ ಅವರ ಸಂಗತಿಯನ್ನು ತಿಳಿದು ಹೇಳುವ ಮಹಾತ್ಮರ ಸಮಾಗಮವೇ ನನಗೆ ದುರ್ಲಭ ವಾಗಿದ್ದಿತು. ಇಂದು ದೈವ ಯೋಗದಿಂದ ತಮ್ಮ ಸಮಾಗಮದ ಪುಣ್ಯವು ಲಭಿಸಿರುವುದರಿಂದ ತಮ್ಮಿಂದ ನಮ್ಮ ತಂದೆಗಳ ಸಮಾ ಚಾರವನ್ನು ತಿಳಿಯಬೇಕೆಂದು ನನ್ನ ಮನವು ತವಕಪಡುತ್ತಿದೆ. ಆದುದರಿಂದ, ತಾವು ನನ್ನಲ್ಲಿ ಅನುಗ್ರಹಮಾಡಿ ನಮ್ಮ ತಂದೆಗಳ ಇತಿ ವೃತ್ತವನ್ನು ನನಗೆ ವಿವರವಾಗಿ ಹೇಳಬೇಕು.

ಕುಶನಾಭ:—ವತ್ಸೇ, ನಿಮ್ಮ ತಂದೆಗಳು ತಮ್ಮತಪಸ್ಸನ್ನು ಪರಿಸಮಾಪ್ತಿಮಾಡುವುದಕ್ಕೆ ಸಲುವಾಗಿ ಹಿಮವತ್ಪ್ರಾಂತಕಾಂತಾ ರಕ್ಕೆ ಹೊರಟುಹೋದರು. ಹೋಗುವುದಕ್ಕೆ ಮುಂಚಿತವಾಗಿ ತಮ್ಮ ಆಶ್ರಮದಲ್ಲಿ ನನ್ನನ್ನು ಕರೆದು '' ನಮ್ಮ ಮೋಹನೆಯನ್ನು ಧರ್ಮವರ್ಮನ ಮಗನಾದ ರವಿವರ್ಮನಿಗೆ ಕೊಟ್ಟು ವಿವಾಹಮಾ ಡಿಸು.'' ಎಂದು ಅಪ್ಪಣೆಕೊಡಿಸಿದರು. ಆ ಮಹದಾಜ್ಞೆಯನ್ನು ನೆರ ವೇರಿಸುವುದಕ್ಕೋಸ್ಕರವಾಗಿಯೇ ಆ ರಾಜಕುಮಾರನನ್ನು ನನ್ನ

ಆಶ್ರಮಕ್ಕೆ ಕರತರಿಸಿಕೊಂಡಿರುವೆನು. ನೀನು ನಿಮ್ಮ ತಂದೆಗಳ ಅಪ್ಪಣೆಯಂತೆ ಆವನ ಕೈ ಹಿಡಿದು ಸನಾಥಳಾಗುವುದಕ್ಕೆ ಅನುಮೋದಿಸಿದರೆ, ನಾನು ಈಗಲೇ ನಿನ್ನ ವಿವಾಹ ಮಹೋತ್ಸವಕ್ಕೆ ತಕ್ಕ ಕಾರ್ಯಭಾಗವನ್ನು ಪ್ರಾರಂಭಿಸುವೆನು. ಇದಕ್ಕೆ ನಿನ್ನ ಅಭಿಪ್ರಾಯವೇನು? ಇದನ್ನು ತಿಳಿಯಲೋಸುಗವೇ ಇಂದು ನಾವು ನಿನ್ನ ಭವನಕ್ಕೆ ಬಂದುದು.

ಜಗನ್ಮೋಹಿನೀ:—ಜೀಯಾ, ಹುಟ್ಟಿದಂದಿನಿಂದ ನಾರುಬಟ್ಟೆಗಳನ್ನುಟ್ಟು, ದಿನಂಪ್ರತಿ ನಾಲ್ಕಾರುತಡವೆ ನದೀಜಲದಲ್ಲಿ ಸ್ನಾನಮಾಡುತ್ತಾ ಭಸ್ಮಧಾರಣೆಯನ್ನು ಮಾಡಿಕೊಂಡು ನನ್ನ ಜಟೆಗಳಿಂದ ನಿರ್ಝರವಾರಿಯಂತೆಸೋರುತ್ತಿದ್ದ ನೀರನ್ನು ಕೂಡಾ ಒದರಿಕೊಳ್ಳುವುದಕ್ಕೆ ವಿರಾಮವಿಲ್ಲದೇ ಗುರುಜನರ ಶುಶ್ರೂಷೆಯನ್ನು ಇದುವರೆಗೂ ಮಾಡುತಿದ್ದುದನ್ನು ತಾವೆಲ್ಲರೂ ಕಣ್ಣಾರೆ ನೋಡಿರುವಿರಿ. ನನ್ನ ತಾಯಿಯು ಸ್ವರ್ಗಸ್ಥಳಾದ ಬಳಿಕ ನಮ್ಮ ತಂದೆಗಳು ನನ್ನಲ್ಲಿ ಪ್ರೇಮಾತಿಶಯದಿಂದ ವಿಶ್ವಾಮಿತ್ರರಂತೆ, ತಮ್ಮ ಯೋಗಬಲದಿಂದ ಈ ಪದ್ಮದ್ವೀಪವನ್ನು ನಿರ್ಮಾಣಮಾಡಿ ಅನಭ್ಯಸ್ತವಾದ ಈ ವಿಷಯ ಸುಖಗಳಿಗೆ ನನ್ನನ್ನು ಗುರಿಮಾಡಿದರು. ಬಾಲ್ಯಾರಭ್ಯ ಅಭ್ಯಸ್ತವಾದ ಮುನಿವೃತ್ತಿಯು ನನಗೆ ಸ್ವಾಭಾವಿಕವಾಗಿದೆ; ಆದುದರಿಂದ ಈ ನಾನಾ ವಿಧವಾದ ಐಹಿಕಸುಖಗಳಲ್ಲಿ ನನಗೆ ಇನ್ನೂ ಮನಸ್ಸು ಒಗ್ಗಲಿಲ್ಲ. ಆ ಮಹಾನುಭಾವರ ಆಜ್ಞೆಯನ್ನು ಉಲ್ಲಂಘಿಸಲಾರದೇ ನಾನು ಈಗೀಗ ಈ ಸುಖಗಳನ್ನು ಅಭ್ಯಾಸ ಮಾಡಿಕೊಳ್ಳುತ್ತಿರುವೆನು. ಆಶ್ರಮದ ಹೊರಗಣ ಪ್ರಪಂಚವನ್ನೇ ಕಾಣದ ನನಗೆ ಮಹಾನುಭಾವರಾದ ನಮ್ಮ ತಂದೆಗಳ ಭ್ರೂವಿಲಾಸ ಮಂತ್ರದಿಂದ ಐಂದ್ರಜಾಲಿಕದಂತೆ ನಿರ್ಮಿತವಾದ ಈ ದ್ವೀಪವೂ ಈ ಪ್ರಾಸಾದವೂ

ಇದರಲ್ಲಿರತಕ್ಕ ಅಪರಿಮಿತವಾದ ಭೋಗ್ಯವಸ್ತುಗಳೂ, ಈ ಪರಿಜನರು ಮಾಡುತ್ತಿರುವ ಪರಿ ಪರಿಯ ಉಪಚಾರಗಳೂ, ಇವುಗಳೆಲ್ಲಾ ನನಗೆ ಇನ್ನೂ ಸ್ವಪ್ನಪ್ರಾಯವಾಗಿಯೇ ಕಾಣುತ್ತಿವೆ. ಈ ಸ್ಥಿತಿಯಲ್ಲಿ ತಾವು ಅಪ್ಪಣೆ ಕೊಡಿಸುವ ವಿವಾಹ ಪ್ರಸ್ತಾಪವು ನನಗೆ ಸ್ವಪ್ನದಲ್ಲಿ ಒಂದು ಉಪಸ್ವಪ್ನದಂತೆ ಕಾಣುತ್ತಿದೆ. ಹೀಗಿರುವಲ್ಲಿ ನಾನು ತಮ್ಮ ಪ್ರಶ್ನೆಗೆ ಏನು ಉತ್ತರವನ್ನು ಕೊಡಬೇಕೋ ಕಾಣೆ; ಆದುದರಿಂದ, ಈ ರೀತಿಯಾಗಿ ಚದರಿ ಹೋಗಿರುವ ನನ್ನ ಮನಸ್ಸು ಸ್ವಾಸ್ಥ್ಯವನ್ನು ಹೊಂದುವವರೆಗೂ ತಾವು ದಯೆ ಇಟ್ಟು ನನಗೆ ವ್ಯವಧಾನವನ್ನು ಕೊಟ್ಟರೆ, ಬಳಿಕ ನಾನು ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ನಿರ್ಧರವಾಗಿ ಅರಿಕೆ ಮಾಡುವೆನು, ಈ ಸ್ಥಿತಿಯಲ್ಲಿ ನನ್ನ ಮನಕ್ಕೆ ಈ ಕೆಟ್ಟಸ್ತ್ರೀಜನ್ಮದಲ್ಲಿಯೇ ಜುಗುಪ್ಸೆಯುಂಟಾಗಿದೆ. ಸ್ತ್ರೀಯರಿಗೆ ಪ್ರಪಂಚದಲ್ಲಿ ವಿವಾಹಾದಿಗಳಿಂದ ಉಂಟಾಗುವ ಸಾಂಸಾರಿಕ ಸುಖದುಃಖಗಳನ್ನು ಯೋಚಿಸಿಕೊಂಡರೆ ನನಗೆ ಭಯದಿಂದ ರೋಮಾಂಚ ಉಂಟಾಗುತ್ತದೆ. ಅಪ್ಪಣೆಯಾದ ಪ್ರಯುಕ್ತ ಧೈರ್ಯವನ್ನು ಅವಲಂಬಿಸಿ ತಮ್ಮ ಚರಣ ಸನ್ನಿಧಾನದಲ್ಲಿ ನಿಂತು ನನ್ನ ಮನೋಗತವನ್ನು ಹೊರಪಡಿಸಿರುವೆನು. ಇದರಮೇಲೆ, ವಿಧೇಯಳಾದ ನಾನು ತಮ್ಮ ಆಜ್ಞಾನುಸಾರವಾಗಿ ನಡೆದುಕೊಳ್ಳುವುದಕ್ಕೆ ಸಿದ್ಧಳಾಗಿರುವೆನು.

ಕುಶನಾಭ:—" ವತ್ಸೇ, ಈ ಕಲಿಗಾಲದಲ್ಲಿ, ಕನ್ಯಾಪಿತೃಗಳಿಗೆ ಕನ್ಯಾದಾನದ ಸ್ವಾತಂತ್ರ್ಯವು ಕ್ರಮೇಣ ತಪ್ಪಿಹೋಗುತ್ತಾ ಬರುತ್ತಿದೆ. ಆದುದರಿಂದ, ಇನ್ನು ಮೇಲೆ ಕನ್ಯಾದಾನವೆಂಬ ಶಬ್ದಕ್ಕೆ ಕನ್ಯೆಯು ಒಪ್ಪಿದ ವರನಿಗೆ ಕನ್ಯೆಯನ್ನು ಕೊಟ್ಟು ವಿವಾಹ

ಮಹೋತ್ಸವವನ್ನು ಮಾಡುವುದು, ಎನ್ದು ವ್ಯಾಖ್ಯಾನಮಾಡಬೇಕಾಗಿ ಬನ್ದಿದೆ. ಆದುದರಿಂದ, ನಿಮ್ಮ ತನ್ದೆಗಳಾದ ಅರವಿನ್ದಬಾನ್ಧವರು ಕೂಡಾ ಈ ವಿಷಯದಲ್ಲಿ ನಿನಗೆ ಆಜ್ಞೆಯನ್ನು ಮಾಡುವುದು ಅಲೌಕಿಕವೆಂದು ಭಾವಿಸುತ್ತಿದ್ದರು. ಈ ವಿಷಯದಲ್ಲಿ ವಿಷಯಸೂಚನೆ ಮಾತ್ರ ನಮ್ಮ ಕರ್ತವ್ಯವಾಗಿರುವಂತೆಯೂ ಉಳಿದ ಕಾರ್ಯಭಾಗವು ಭವಿತವ್ಯತೆಗೆ ಸೇರಿದುದಾಗಿಯೂ ಕಾಣುತ್ತದೆ. ಬುದ್ಧಿಯೂ ಸಹಾಯಗಳೂ ಭವಿತವ್ಯತೆಗೆ ವಿರೋಧವಾಗಿ ಎನ್ದಿಗೂ ಉಂಟಾಗುವುದಿಲ್ಲ. ಕರ್ಮವಿಪಾಕ ಕಾಲವು ಬನ್ದರೆ ಆಗಬೇಕಾದ ಕಾರ್ಯಗಳು ಸ್ವತಯೇವ ಆಗುತ್ತವೆ. ಒಳ್ಳೆಯದು ಈಗ ಸನ್ಧ್ಯಾಕಾಲವು ಸಮೀಪವಾಯಿತು. ನಾವಿನ್ನು ನಮ್ಮ ಆಶ್ರಮಕ್ಕೆ ಹೊರಡುವೆವು. '' ಎನ್ದು ಮೇಲಕ್ಕೆ ಎದ್ದರು.

ಜಗನ್ಮೋಹಿನಿಯು ಅವರಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದಳು. ಮುನಿಗಳು '' ನಿನಗೆ ಕಲ್ಯಾಣವಾಗಲಿ '' ಎನ್ದು ಹರಸಿ ಹೊರಟು ಹೋದರು.

ಹಾದಿಯಲ್ಲಿ ಕುಶನಾಭರು ತಪಸ್ವಿಗಳನ್ನು ಕುರಿತು '' ಪೂಜ್ಯರೇ, ಇದೇನಾಶ್ಚರ್ಯ ! ಈ ಕಾಲಕ್ಕೆ ವಿರೋಧವಾಗಿ ವಧೂವರರಿಬ್ಬರೂ ಏಕರೀತಿಯಾಗಿ ವಿರಕ್ತರಾಗಿರುವರು. ಇವರಿಬ್ಬರನ್ನೂ ವಿಧಿಯು ಹೇಗೆ ಗಂಟು ಹಾಕುವನೋ ಕಾಣೆ. '' ಎಂದರು.

ತಪಸ್ವಿ:—ಓಹೋ ಇದೇನು, ಕಾರ್ಯಭಾರವನ್ನೆಲ್ಲಾ ವಿಧಿಯ ಮೇಲೆಯೇ ಹಾಕಿಬಿಡೋಣವಾಯಿತು ! ತಮ್ಮ ಮಧ್ಯಸ್ಥಿಕೆಯು ಇಲ್ಲಿಗೇ ಪರಿಸಮಾಪ್ತಿಯಾದ ಹಾಗೆ ಕಾಣುತ್ತದೆ.

ಕುಶನಾಭ:—ಅವರುಗಳ ವೈರಾಗ್ಯವನ್ನೂ ಬ್ರಹ್ಮಚರ್ಯ

ವ್ರತಾಭಿಲಾಷೆಯುನ್ನೂ ಭಂಗ ಮಾಡುವುದಕ್ಕೆ ಫಾಲಾಕ್ಷನಿಂದಲೂ ಆಗುವ ಹಾಗೆ ಕಾಣುವುದಿಲ್ಲ.

ತಪಸ್ವಿ:—ಫಾಲಾಕ್ಷನಿಗೇ ಸಾಧ್ಯವಾಗದೇ ಹೋದ ಸಂಕಲ್ಪವನ್ನು ಭಂಗಮಾಡುವುದಕ್ಕೆ ಫಾಲಾಕ್ಷನಿಂದ ಆದೀತೆ ? ಆ ಫಾಲಾಕ್ಷನ ತಪೋಭಂಗವನ್ನು ಮಾಡಿದ ಅನಂಗನಿಂದಲ್ಲದೇ ಇಂತಹ ಕಾರ್ಯಗಳು ಮತ್ತಾರಿಂದಲೂ ಆಗಲಾರದು; ಆ ಮಹಾವೀರನ ಪಂಚಬಾಣಗಳಿಗೆ ಇದಿರುಂಟೆ !

ಕುಶನಾಭ:—ಇಲ್ಲಿ ಅನಂಗನಿಗೆ ಅವಕಾಶವೆಲ್ಲಿದೆ ?

ತಪಸ್ವಿ:—ಆತನಿಗೆ ಅವಕಾಶವನ್ನು ಉಂಟುಮಾಡಿ ಕೊಡುವುದು ಮಧ್ಯಸ್ಥಿಕೆಯ ಮೊದಲನೆಯ ಕಾರ್ಯಭಾಗ.

ಕುಶನಾಭ:—ಆ ಭಾಗದಲ್ಲಿ ನನಗೆ ಪರಿಶ್ರಮವಿಲ್ಲವಲ್ಲ ಮಾಡುವುದೇನು ?

ತಪಸ್ವಿ:—ಆ ಕಾರ್ಯಭಾಗವು ತಮ್ಮ ಶಿಷ್ಯನಾದ ನನಗಿರಲಿ.

ಕುಶನಾಭ:—ಹಾಗಾದರೆ, ನಾನು ಕೃತಕೃತ್ಯನಾದೆನು.

ತಪಸ್ವಿ:—ಓಹೋ ! ತಾವು ಹಾಗೆ ತಪ್ಪಿಸಿಕೊಳ್ಳಲಾಗದು ಮಹಾಸ್ವಾಮಿ. ಈ ವಿಷಯದಲ್ಲಿ ನಾನು ತಮಗೆ ತಕ್ಕ ಉಪಾಯವನ್ನು ಮಾತ್ರ ಹೇಳಿ ಕೊಡಬಲ್ಲೆನು; ಕಾರ್ಯನಿರ್ವಾಹವು ತಮ್ಮಿಂದಲೇ ಆಗಬೇಕು.

ಕುಶನಾಭ:—ಒಳ್ಳೆಯದು ! ಅದೆಂತಹ ಉಪಾಯವೋ ನೋಡೋಣ; ಹೇಳೋಣಾಗಲಿ.

ತಪಸ್ವಿ:—ನಾವು ಏನಾದರೂ ಒಂದುಪಾಯದಿಂದ ಈ ಲೋಕವಿಲಕ್ಷಣರಾದ ವಧೂವರರಿಗೆ ಬೇಟಿ ಮಾಡಿಸಿದರೆ, ಅನಂಗ

ನಿಗೆ ಅವಕಾಶ ಉಂಟುಮಾಡಿ ಕೊಟ್ಟಹಾಗಾಯಿತು.—ಮುಂದಣ ಕಾರ್ಯವನ್ನೆಲ್ಲಾ ಅಸಹಾಯಶೂರನಾದ ಅವನೇ ನೋಡಿಕೊಳ್ಳುತ್ತಾನೆ.

ಕುಶನಾಭ:—ಇವರ ಸಮಾಗಮವು ನೆರವೇರುವ ಬಗೆಹೇಗೆ?

ತಪಸ್ವಿ:—ಇದು ವೆಚ್ಚವಿಲ್ಲದೇ ಆಗತಕ್ಕ ಕೆಲಸವಲ್ಲ ತಮ್ಮ ತಪೋಧನವನ್ನು ಕೊಂಚ ಕೈ ಬಿಟ್ಟು ಖರ್ಚುಮಾಡಿದರೆ, ಈ ಸಮಾಗಮವು ಸುಲಭವಾಗಿ ಆಗುತ್ತದೆ.

ಕುಶನಾಭ:—ಈ ಮಹತ್ಕಾರ್ಯವನ್ನು ಸಾಧಿಸುವುದಕ್ಕಾಗಿ ನಾನು ನನ್ನ ಸರ್ವಸ್ವವನ್ನೂ ವೆಚ್ಚಮಾಡುವುದಕ್ಕೆ ಹಿಂಜರಿಯುವುದಿಲ್ಲ.

ತಪಸ್ವಿ:—ಹಾಗಾದರೆ, ಈದಿನ ನಮ್ಮ ಸನ್ಧ್ಯಾವನ್ದನಾದಿ ಸಾಯಂಕಾಲದ ವಿಧಿಗಳು ಮುಗಿದ ಬಳಿಕ, ಯೋಗಬಲದಿಂದ ಪದ್ಮದ್ವೀಪದಲ್ಲಿ ಈ ವಧೂವರರಿಗೆ ಪರಸ್ಪರ ಭೇಟಿ ಮಾಡಿಸಿ ಇವರ ಮನೋದಾರ್ಢ್ಯವನ್ನು ಪರೀಕ್ಷಿಸಿ ನೋಡುವ.

ಕುಶನಾಭ:—ಹಾಗೆಯೇ ಆಗಲಿ; ಭಾಪು ! ಭಾಪು !! ಇದು ಒಳ್ಳೆಯ ವಿನೋದ.

# ಒಂಬತ್ತನೆಯ ಪ್ರಕರಣ.

---

## ಸ್ವಪ್ನಾನುರಾಗ.

ಸರಿರಾತ್ರಿಯ ಸಮಯವಾಗಿದೆ:— ಪದ್ಮದ್ವೀಪವು ನಿದ್ರಾ ಮಹಾರಾಣಿಯ ಆಳ್ವಿಕೆಯಲ್ಲಿ, ಕಾಮ, ಕ್ರೋಧ, ಲೋಭ, ಮೋಹ ಮದ, ಮತ್ಸರಗಳನ್ನು ಮರೆತು ಸುಖ ದುಃಖಗಳನ್ನೂ ಆಧಿ ವ್ಯಾಧಿಗಳನ್ನೂ ಲೆಕ್ಕಿಸದೇ, ಸಮಾಹಿತ ಚಿತ್ತರಾದ ಮುನಿಜನರ ಮನೋವೃತ್ತಿಯಂತೆ ಪ್ರಶಾಂತವಾಗಿದ್ದಿತು.

ಪತ್ತನದ ಕಾವಲುಗಾರರು ರಾಜಬೀದಿಗಳಲ್ಲಿ ಹೆಜ್ಜೆ ಹೆಜ್ಜೆಗೂ ನಿದ್ರೆಯೊಂದಿಗೆ ಹೆಣಗಾಡುತ್ತಾ ತಮ್ಮ ತಮ್ಮ ಕಾರ್ಯಗಳಲ್ಲಿ ಅಪ್ರಮತ್ತರಾಗಿದ್ದರು.

ಆಗ ಬಾನ್ಬಳದಲ್ಲಿ ಚಂದ್ರನು ಬೆಳಗುತ್ತಿದ್ದಾಗ್ಗೂ ಮೋಡ ವಾಡುತ್ತಿದ್ದುದರಿಂದ ಬೆಳದಿಂಗಳು ಅಷ್ಟು ಶೋಭಾಯಮಾನವಾಗಿರಲಿಲ್ಲ. ಅರಮನೆಯ ಚಂದ್ರಶಾಲೆಯ ಮೇಲಿನ ದೀಪಾವಳಿಗಳು ರಾಜಮಾರ್ಗದಲ್ಲಿ ನಿಂತು ನೋಡುವವರ ಕಣ್ಣಿಗೆ ಭೂಮಣ್ಡಲಕ್ಕೆ ಇಳಿಯುತ್ತಿರುವ ನಕ್ಷತ್ರ ಮಣ್ಡಲದಂತೆ ಕಂಗೊಳಿಸುತ್ತಿದ್ದುವು.

ಈ ಶಾಲೆಯ ನಟ್ಟನಡುವೆ ಅತಿ ರಮಣೀಯವಾಗಿದ್ದ ಶಯ್ಯಾಗೃಹ ಒಂದಿದ್ದಿತು. ಮಳೆಗಾಲವಾದುದರಿಂದ ಇದರ ಕಿಟಕಿಗಳ ಕನ್ನಡಿಯ ಕದಗಳೆಲ್ಲವೂ ಮುಚ್ಚಲ್ಪಟ್ಟಿದ್ದುವು. ಇದರ ಸುತ್ತಲೂ ಬಿಚ್ಚುಕತ್ತಿಯ ಕಾವಲುಗಾರರು ಒನ್ನಿನಮೇಲೆ ತಿರುಗಾಡುತ್ತಿದ್ದರು.

ಈ ಗೃಹದ ನಡುವೆ ಹಂಸತೂಲಿಕಾತಲ್ಪದಿಂದ ಪರಿಷ್ಕೃತವಾಗಿದ್ದ ನವರತ್ನದ ಮಂಚ ಒಂದಿದ್ದಿತು ಇದರಮೇಲೆ ಯುವತಿಯೊಬ್ಬಳು ಕುಸುಮ್ಬೆ ಬಣ್ಣದ ಹಸನಾದ ಶಾಲನ್ನು ಅಸಡ್ಡೆಯಾಗಿ ಹೊದ್ದುಕೊಂಡು ಮಲಗಿ ಮೈಮರೆತು ನಿದ್ರೆ ಮಾಡುತ್ತಿದ್ದಳು.

ಇವಳ ಮಂಚದ ಸುತ್ತಲೂ ಸ್ವಲ್ಪ ದೂರದಲ್ಲಿ ಚಕ್ರಾಕಾರವಾಗಿ ಹಾಕಲ್ಪಟ್ಟಿದ್ದ ಚಿಕ್ಕ ಚಿಕ್ಕ ಪರ್ಯಂಕಗಳ ಮೇಲೆ ದೇವಕನ್ಯೆಯರಂತೆ ರೂಪಲಾವಣ್ಯ ಸಮ್ಪನ್ನೆಯರಾದ, ಇನ್ನೂ ಕನ್ಯಾವಸ್ಥೆಯು ಮೀರಿತೋ ಮೀರಲಿಲ್ಲವೋ ಎಂಬ ಸಂಶಯಕ್ಕೆ ಆಸ್ಪದವಾದ ವಯಸ್ಸಿನ ಕನ್ಯೆಯರು ಮಲಗಿದ್ದರು.

ಈ ವೇಳೆಯಲ್ಲಿ, ಆ ಕೊಠಡಿಯ ದೇವಮೂಲೆಯಲ್ಲಿ ಒಮ್ಮೆನ್ದೊಮ್ಮೆ ಇಬ್ಬರುಮುನೀಶ್ವರರು ಹೇಗೋ ಬನ್ದುನಿಂತರು.

ಇವರು ಆಕಾರದಲ್ಲಿ ಸುಮಾರು ಏಳಡಿ ನೀಳವಾಗಿದ್ದಾಗ್ಯೂ ಕೃಶವಾಗಿ ಅಸ್ಥಿಪಂಜರಗಳನ್ತೆ ಕಾಣುತ್ತಿದ್ದರು. ಇವರ ತಲೆಯಿನ್ದ ಪಾದದವರೆಗೂ ಕಮ್ಬಳೀ ಕೊಪ್ಪೆ ಹಾಕಿಕೊಣ್ಡಿದ್ದಂತೆ ಲಮ್ಬಾಯಮಾನವಾದ ಜಟೆಗಳು ಜೋಲಾಡುತ್ತಿದ್ದುವು. ಇವರ ಬಿಳೀ ಗಡ್ಡವು ಇವರ ಎದೆಗೂಡಿಗೆ ಹೊದಿಕೆಯನ್ತೆ ಕಾಣುತ್ತಿದ್ದಿತು. ಮೈಗೆಲ್ಲಾ ದಟ್ಟವಾಗಿ ಭಸ್ಮವನ್ನು ಬಳದುಕೊಂಡಿದ್ದರು. ಇವರ ಶುಭ್ರವಾದ ಕೋವಣವು ಕಾಣದೇ ಹೋಗಿದ್ದರೆ, ಅವರು ದಿಗಮ್ಬರರಾಗಿದ್ದರೆಂದೇ ಹೇಳಬೇಕಾಗಿತ್ತು.

ಈ ಜಟಾಧಾರಿಗಳಾದ ಮುನೀಶ್ವರರಾರೋ ಎನ್ದು ರಸಿಕರಾದ ನಮ್ಮ ವಾಚಕಮಹಾಶಯರು ಕೊಂಚವಾದರೂ ಯೋಚಿಸಬೇಕಾದುದಿಲ್ಲ. ಇವರು ಹಿನ್ದಿನ ಪ್ರಕರಣದಲ್ಲಿ ಆಖ್ಯಾತರಾದ ಕುಶನಾಭರು ಮತ್ತು ಅವರ ಜತೆಗಾರರಾದ ತಪಸ್ವಿಗಳು ಅಲ್ಲದೆ ಮತ್ತಾರೂ ಅಲ್ಲ.

ಕುಶನಾಭರು ತಮ್ಮ ಸಂಗಡಿಗರನ್ನು ಕುರಿತು, "ಈಮಧ್ಯದಲ್ಲಿ ಮಲಗಿರುವವಳೇ ಪೂಜ್ಯರಾದ ಅರವಿನ್ದಬಾನ್ಧವರ ಮಗಳು; ಇವಳ ಸುತ್ತಲೂ ಮಲಗಿರುವ ಕನ್ನಿಕೆಯರೆಲ್ಲರೂ ಇವಳ ದಾಸಿಯರು." ಎನ್ದು ಹೇಳಿದರು.

ತಪಸ್ವಿ:—ಅವರನ್ನು ನಿಟ್ಟಿಸಿ ನೋಡಿ "ಈ ಮುನಿಕುಮಾರಿಗೆ ಗಾಢನಿದ್ರೆ ಬನ್ದಿರುವ ಹಾಗೆ ಕಾಣುತ್ತದೆ. ಸಮಾಧಿಯಲ್ಲಿರುವ ಯೋಗಿಯನ್ತೆ, ಅರೆಬಿರಿದ ಈ ಕನ್ನಿಕೆಯರ ಕಣ್ಣುಗಳನ್ನೂ ಇವರು ಮಲಗಿರುವ ರೀತಿಯನ್ನೂ ನೋಡಿದರೆ, ಇವರು ತಮ್ಮೊಡತಿಯ ಸೇವೆಯಲ್ಲಿ ಜಾಗರೂಕವಾದ ಮನಸ್ಸಿನಿಂದ ಮಲಗಿರುವ ಹಾಗೆ ಕಾಣುತ್ತದೆ. ಯಾವುದಾದರೂ ಒಂದು ಮಕ್ಷಿಕೆಯು ಪಕ್ಷವನ್ನು ಒದರಿದ್ದೇ ಆದರೆ, ಗದರಿಸಿ ಎಚ್ಚರಿಸಿದನ್ತೆ ತಟ್ಟನೆ ಎಚ್ಚರಗೊಳ್ಳುವರು. ಆದುದರಿಂದ, ತಾವು ಮೊಟ್ಟಮೊದಲು ತಮ್ಮ ತಪೋಬಲದಿನ್ದ ಇವರಿಗೆಲ್ಲಾ ಗಾಢನಿದ್ರೆಹತ್ತುವನ್ತೆ ಮಾಡಿ ಬಳಿಕ ಆ ಧರ್ಮವರ್ಮನ ಮಗನಾದ ಅಭಿನವ ಭೀಷ್ಮಾಚಾರ್ಯರ ಮಂಚವನ್ನು ತರಿಸಿ ಈ ತಪಸ್ವಿನಿಯ ಪರ್ಯಂಕದ ಪಕ್ಕದಲ್ಲಿ ಇರಿಸುವನ್ತೆ ಮಾಡಿಸಬೇಕು.

ಕುಶನಾಭ:—ಮನ್ದಹಾಸದಿನ್ದ, "ಅಹಾ ಯಾತಕ್ಕಾಗಬಾರದು!" ಎಂದು ಮೇಲಕ್ಕೆ ತಲೆಯೆತ್ತಿ ನೋಡಿದರು.

ಕೂಡಲೇ, ಆ ಉಪ್ಪರಿಗೆಯ ಮಾಳಿಗೆಯಲ್ಲಿ ಫಳಫಳನೆ ಮಿಂಚುಗಳು ಹೊಳದಂತಾಗಿ ಅಲ್ಲಿಂದ ಆದಿತ್ಯವರ್ಮನ ಮಂಚವು ವಿಮಾನದಂತೆ ಕೆಳಕ್ಕೆ ಇಳಿದು ಆ ಜಗನ್ಮೋಹಿನಿಯ ಮಂಚದ ಮಗ್ಗುಲಿಗೆ ಸರಿಯಾಗಿ ಬಂದು ನಿಂತಿತು.

ಆಗ ಕುಶನಾಭರು ತಪಸ್ವಿಗಳನ್ನು ಕುರಿತು, "ಮತ್ತೇನಾಗಬೇಕು?" ಎನ್ದರು. ಅದಕ್ಕೆ ತಪಸ್ವಿಗಳು "ಈಗಲೇ ಬ್ರಹ್ಮ

ಚಾರಿಯನ್ನು ಎಚ್ಚರಗೊಳಿಸೋಣವಾಗಲಿ.'' ಎನ್ನದರು. ಕುಶನಾಭರು ಮುಗುಳು ನಗೆಯಿಂದ ಅವನನ್ನು ನೋಡಿದರು.

ಕೂಡಲೆ ರವಿವರ್ಮನು ಎಚ್ಚರಗೊಂಡು ಕಣ್ಣುಬಿಟ್ಟು ಥಟ್ಟನೆ ಮಂಚದಮೇಲೆ ಎದ್ದು ಕುಳಿತು ಕಕ್ಕುಬಿಕ್ಕಿಯಾಗಿ ದಿಕ್ಕುಗಳನ್ನು ನೋಡಿ ಕೆಳಗಿಳದು ಸುತ್ತಮುತ್ತಲೂ ಓಡಾಡಿ ''ಏನಿದಾಶ್ಚರ್ಯ! ಆ ಕುಶನಾಭರ ತಪೋವನವೆಲ್ಲಿ ? ಆ ಮಹಾಯೋಗಿಗಳೆಲ್ಲಿ ! ವೇದಾಭ್ಯಾಸವನ್ನು ಮಾಡುತ್ತಿದ್ದ ಪರಮ ದಯಾಳುಗಳಾದ ಆ ಬ್ರಹ್ಮಚಾರಿಗಳೆಲ್ಲಿ? ಈ ದಿವ್ಯಭವನವಾರದು! ಅಹಹ! ಈ ಭೂಮಂಡಲದಲ್ಲಿ ನಾನಿಂತಹ ಮನೋಜ್ಞವಾದ ಭವನವನ್ನು ಎಲ್ಲಿಯೂ ನೋಡಲಿಲ್ಲ. ಈ ರತ್ನಮಯವಾದ ಕಮ್ಬಗಳನ್ನೂ ಚನ್ದ್ರಮಣ್ಡಲದನ್ತೆ ಸೌಮ್ಯವಾದ ಈ ದೀಪಗಳನ್ನು ಹಿಡಿದುಕೊಂಡು ನಿಂತಿರುವ ಸ್ಫಟಿಕ ಶಿಲಾಪ್ರತಿಮೆಗಳನ್ನೂ ಮಾನವ ಶಿಲ್ಪಕಾರನು ನಿರ್ಮಿಸಲಾಪನೆ ! ಎನ್ದು ಮುನ್ದರಿದು ಆ ಪ್ರತಿಮೆಗಳನ್ನು ನಿಟ್ಟಿಸಿ ನೋಡಿ ''ಆಹಾ! ಇವುಗಳನ್ನು ಪ್ರತಿಮೆಗಳು ಎನ್ನಬಹುದೇ ! ಗಂಧರ್ವ ಕನ್ಯೆಯರಂತೆ ಮನ್ದಹಾಸದಿಂದ ನನ್ನೊಡನೆ ಮಾತನಾಡಲು ಮುನ್ದರಿಯುವಂತೆ ಕಾಣುತ್ತಿವೆಯಲ್ಲಾ ! ಇದೇನಾಶ್ಚರ್ಯ! ಓಹೋ! ಪುರಾಣೇತಿಹಾಸಗಳಲ್ಲಿ ವರ್ಣಿಸಲ್ಪಟ್ಟ ಇಂದ್ರಭವನವೆಂಬುದು ಇದೇ ಆಗಿರಬಹುದು. ಛೆ! ಛೆ!! ಮರುಳೆ! ನರನೆಲ್ಲಿ ಸುರಲೋಕವೆಲ್ಲಿ! ಆ ಇಂದ್ರಭವನವನ್ನು ಬಲ್ಲವರಾರು ?'' ಎಂದು ಆ ಭವನದ ಗೋಡೆಗಳ ಮೇಲೆ ಬರೆಯಲ್ಪಟ್ಟಿದ್ದ ಚಿತ್ರಗಳನ್ನು ನೋಡಿ ''ಆಹಾ! ಇಲ್ಲಿ ಮಹಾವಿಷ್ಣುವಿನ ದಶಾವತಾರಗಳು ಎಷ್ಟು ಹೃದಯಂಗಮವಾಗಿ ಚಿತ್ರಿಸಲ್ಪಟ್ಟಿವೆ! ಏಕಕಾಲದಲ್ಲಿ, ಪ್ರಹ್ಲಾದನಿಗೆ ಆಹ್ಲಾದಕರವಾಗಿಯೂ ಹಿರಣ್ಯಕಶಿಪುವಿಗೆ ಹೃದಯಭೇದಕ

ವಾಗಿಯೂ ಕಾಣುತ್ತಿರುವ ಭಕ್ತವತ್ಸಲನಾದ ಮಹಾವಿಷ್ಣುವಿನ ಈ ನಾರಸಿಂಹಾಕೃತಿಯನ್ನು ನೋಡಿದರೆ ರೋಮಹರ್ಷವಾಗುತ್ತದೆ. ಈ ಚಿತ್ರಪಟಗಳ ಮೇಲೆ ಜೋಲಾಡುತ್ತಿರುವ ಪೂಮಾಲೆಗಳಲ್ಲಿ ಕಟ್ಟಲ್ಪಟ್ಟಿರುವ ಜಾಜಿಮಲ್ಲಿಗೆಯು ಈಗತಾನೆ ಅರಳುತ್ತಿರುವನ್ತೆ ಮಗಮಗಿಸುತ್ತಿದೆ. ಇದೇನು! ನಾನೀ ನೋಟವನ್ನು ಸ್ವಪ್ನದಲ್ಲಿ ಕಾಣುತ್ತಿರುವೆನೋ? ಅಥವಾ ನನ್ನ ದುಷ್ಕರ್ಮವಿಪಾಕದಿಂದ ಒಮ್ಮಿಂದೊಮ್ಮೆ ನನ್ನ ಬುದ್ಧಿಯೇ ಹೀಗೆ ಭ್ರಮೆಗೊಂಡಿದೆಯೋ? ಅಥವಾ, ಇವುಗಳೆಲ್ಲಾ ಯಥಾರ್ಥವಾದ ಪದಾರ್ಥಗಳೋ?'' ಎನ್ದು ಕೊಂಡು ಮುನ್ದರಿದು ಅಲ್ಲಿ ಅಲ್ಲಲ್ಲಿ ವಿಚಿತ್ರತರವಾದ ಚಿತ್ರಕಸೂತಿಗಳಿನ್ದ ಅಲಂಕೃತವಾಗಿದ್ದ ಮಂಚಿಕೆಗಳ ಮೇಲೆ ಇಡಲ್ಪಟ್ಟಿದ್ದ ಉಪಭೋಗ್ಯ ವಸ್ತುಗಳನ್ನು ಮುಟ್ಟಿ ಮುಟ್ಟಿ ನೋಡಿ, 'ಛೀ! ಛೀ!! ಇವುಗಳೆಲ್ಲವೂ ಸತ್ಯವಾಗಿ ಯಥಾರ್ಥವಾದುವುಗಳೇ! ಸ್ವಪ್ನವೆಂಬುದು ಶುದ್ಧ ಅಸಂಗತ! ಇದಲ್ಲದೇ ಪರಿಶುದ್ಧವಾದ ತಪಸ್ವಿಗಳ ಸಾನ್ನಿಧ್ಯದಲ್ಲಿ ಇಂತಹ ಸ್ವಪ್ನಗಳಿಗೆ ಅವಕಾಶವುಂಟೇ?'' ಎನ್ದು ಕೊಂಚ ಯೋಚಿಸಿ, ''ಇದಾವುದಾದರೂ ಒಂದು ಗನ್ಧರ್ವನಗರವೆಂಬುದಾಗಿರಬಹುದೇ! ಒಳ್ಳೆಯದು, ಇದು ಗನ್ಧರ್ವಭವನವಾದರೂ ಆಗಲಿ; ಇಂದ್ರಭವನವಾದರೂ ಆಗಲಿ; ಆ ಮಹರ್ಷಿಗಳ ಪರ್ಣಕುಟೀರದಲ್ಲಿದ್ದ ನಾನು ಹಠಾತ್ತಾಗಿ ಇಲ್ಲಿಗೆ ಬನ್ದಬಗೆ ಹೇಗೆ!'' ಎನ್ದು ಮತ್ತೊಂದೆರಡಡಿ ಮುಂದಕ್ಕೆ ಇಟ್ಟು ಅಲ್ಲಿ ಮಲಗಿದ್ದ ದಾಸಿಯರ ಸಂದಣಿಯನ್ನು ನೋಡಿ ವಿಸ್ಮಿತನಾಗಿ ಒಂದೂ ತೋಚದೇ, ಒಂದೆರಡಡಿ ಹಿಂದಕ್ಕೆ ಹೋಗಿ ತಟತಟನೆ ಹಾರತೊಡಗಿದ್ದ ತನ್ನೆದೆಯ ಮೇಲೆ ಕೈಯಿಟ್ಟುಕೊಂಡು ಧೈರ್ಯ

ಗೊಂಡು, ಆ ಸ್ತ್ರೀಕದಮ್ಬಕವನ್ನು ಪರಿಶೋಧಕ ಬುದ್ಧಿಯಿನ್ದ ನಿಟ್ಟಿಸಿ ನೋಡಿ, "ಆಹಾ ! ಇಲ್ಲಿ ಇಂತಹ ಸ್ತ್ರೀ ರತ್ನರಾಶಿ ಎತ್ತಣದು?" ಎನ್ದು ಮತ್ತೊಂದು ಎರಡು ಮೂರಡಿ ಅವಶನಾಗಿ ಮುಂದಕ್ಕೆ ಹೋಗಿ ಜಗನ್ಮೋಹಿನಿಯನ್ನು ಕಂಡು ಬೆಕ್ಕನ ಬೆರಗಾಗಿ, "ಆಹಾ ! ನಕ್ಷತ್ರಮಣ್ಡಲದ ನಡುವೆ ಪ್ರಕಾಶಿಸುವ ಪೂರ್ಣಚನ್ದ್ರನಂತೆ, ಈ ಕನ್ನಿಕೆಯರ ಕದಮ್ಬದ ನಡುವೆ ಕಾಣುತ್ತಿರುವ ಈ ನಾರೀಮಣಿಯು ಯಾರಾಗಿರಬಹುದು ? ಅಹಹಾ ! ಈಕೆಯು ಎಷ್ಟು ಸೌಂದರ್ಯಶಾಲಿಯಾಗಿರುವಳು ! ಈಕೆಯು ಸೌಂದರ್ಯನಿಧಿಯಾಗಿರಬಹುದೇ ? ಅಥವಾ ಈಕೆಯು ಕವಿಗಳು ಕಾವ್ಯಗಳಲ್ಲಿ ಸುನ್ದರಿಯರಿಗೆ ಉಪಮಾನವಾಗಿ ಹೇಳುವ ಆ ಮದನಮೋಹನೆಯಾಗಿರಬಹುದು. ಯಾರಾದರೂ ಆಗಲಿ ಈಕೆಯು ಸರ್ವಥಾ ಮಾನವಿಯಾಗಿ ಕಾಣುವುದಿಲ್ಲ ; ಮಾನವಿಗೆ ಇಂತಹ ರೂಪಲಾವಣ್ಯಗಳೆತ್ತಣದು! ಎನ್ದು" ಮತ್ತೊನ್ದಡಿ ಮುಂದಿಟ್ಟು ದಿಟ್ಟಿಸಿನೋಡಿ, "ಚಿತ್ರಕಲಾ ಕೋವಿದ ನಾರಾದರೂ ತನ್ನ ಕಲಾ ಕೌಶಲ್ಯವನ್ನೆಲ್ಲಾ ಲೋಕಕ್ಕೆ ತೋರಿಸುವುದಕ್ಕೆ ಸಲುವಾಗಿ ಈ ಕನ್ನಿಕೆಯರ ನಡುವೆ ಈ ಲೋಕೈಕ ಸುಂದರಿಯನ್ನು ನಿರ್ಮಾಣಮಾಡಿರುವನೋ ? ಅಥವಾ ಈ ಸುನ್ದರಿಯರಿಂದ ಕೂಡಿದ ಈ ಮನ್ದಿರವು ವಿವಿಧವಾದ ವರ್ಣಗಳಿನ್ದ ಚಿತ್ರಿತವಾದ ರಂಗಸ್ಥಳದೊಂದು ಪಡದೆಯೋ ? " ಎಂದು ಮೆಲ್ಲನೆ ತುದಿಗಾಲಿನಮೇಲೆ ಮೋಹಿನಿಯ ಮಂಚದ ಕಡೆಗೆ ಮತ್ತೊನ್ದಡಿ ಇಟ್ಟು ತಲೆಬಗ್ಗಿಸಿ ಕಿವಿಗೊಟ್ಟು ಕೇಳಿ, ಈ ಸುಂದರಿಯು ಸಮನಾಗಿ ಶ್ವಾಸಬಿಡುತ್ತಾ ಇರುವಂತಿದೆಯಲ್ಲಾ ಇಂತಹ ವ್ಯಕ್ತಿಯನ್ನು ಪಾಂಚಾಲಿಕೆ ಎನ್ನಲಾಗದು." ಎನ್ದು ಕೊಂಚ ಯೋಚಿಸಿ, "ಓಹೋ ! ಸಂಶಯ ಪಡಲೇಕೆ ! ಈ

ದಿವ್ಯಭವನವೇ ಆ ಶಂಬರಾರಿಯ ಅರಮನೆ; ಈಕೆಯೇ ಆತನ ಪಟ್ಟದ ರಾಣಿ; ಇಲ್ಲಿರುವ ಸುದತಿಯರೇ ಆತನ ಪರಿವಾರದ ಅಪ್ಸರಿಯರು.'' ಎನ್ನುತ್ತ ಮೆಲ್ಲ ಮೆಲ್ಲಗೆ ತುದಿಗಾಲಿನಮೇಲೆಯೇ ಶ್ವಾಸವನ್ನು ಕೂಡಾ ಗಟ್ಟಿಯಾಗಿ ಬಿಡದೇ ಕುತೂಹಲದಿಂದ ಮೋಹಿನಿಯ ಮಂಚದ ಸರಿಸಕ್ಕೆ ಹೋಗಿ ಅವಳ ಮುಖವನ್ನು ಕಣ್ಣಾರ ನೋಡಿ ತಟ್ಟನೆ ಎರಡು ಮೂರಡಿ ಹಿಂದಕ್ಕೆ ಬಂದು, '' ಇದೇನಚ್ಚರಿ ! ಈ ಲಾವಣ್ಯಸಮುದ್ರವು ನನ್ನ ಮನವನ್ನು ಮೋಹಗೊಳಿಸಿ ನನ್ನನ್ನು ಆಕರ್ಷಿಸುತ್ತಿದೆ ! ನಾರೀಜನರನ್ನು ಮಾತೃಗೌರವದಿನ್ದ ಕಾಣುತ್ತಿರುವ ನನ್ನ ಮನದಲ್ಲಿ ಈ ಲಲನಾಮಣಿಯ ಮುಖವನ್ನು ನೋಡಿದ ಕೂಡಲೇ ಅನಿರ್ವಾಚ್ಯವಾದ, ಅಪೂರ್ವವಾದ, ಕುತುಕವು ಅಂಕುರಿತವಾಗಿದೆ. ವಿವೇಕಶಾಲಿಯಾದ ವಿಧಿಯು ಸ್ತ್ರೀಯರ ರೂಪ ಲಾವಣ್ಯಗಳಲ್ಲಿ ಇಂತಹ ಮೋಹಕ ಶಕ್ತಿಯನ್ನು ಇಡದೇ ಹೋಗಿದ್ದರೆ, ಈ ಲೋಕದಲ್ಲಿ ಸೃಷ್ಟಿಸ್ಥಿತಿ ಮುಂತಾದುವುಗಳು ಜರುಗುತ್ತಿದ್ದುವೆ ? ಮಹಾತ್ಮರಾದ ಕುಶನಾಭರು ಅಪ್ಪಣೆ ಕೊಡಿಸಿದಂತೆ ವಿಶ್ವಾಮಿತ್ರನೇ ಮೊದಲಾದ ಮಹಾ ತಪಸ್ವಿಗಳು ಕೂಡಾ ಮಹಿಳೆಯರ ಮೋಹಪಾಶಕ್ಕೆ ಸಿಲುಕಿ ಸುರಸುನ್ದರಿಯರ ಪರಿಚಾರಕರಾದುದೇನೂ ಆಚ್ಚರಿಯಲ್ಲ. ಇಂತಹ ಸುನ್ದರಿಯರ ಸಮಾಗಮ, ಸಮ್ಭಾಷಣ ಮೊದಲಾದುವು ಹಾಗಿರಲಿ, ಇವರ ಸೇವೆ ದೊರಕುವುದೊನ್ದು ಅನೇಕ ದಿವ್ಯಸಹಸ್ರವರ್ಷಗಳ ತಪಃ ಫಲವಲ್ಲದೇ ಬೇರೆಯಲ್ಲ. ಪೂಜ್ಯರಾದ ಕುಶನಾಭರು ಹೇಳಿದ ಜಗನ್ಮೋಹಿನೀ ಎನ್ನುವಳು ಈಕೆಯೇ ಆಗಿದ್ದರೆ, ನಾನು ಯಾವಜ್ಜೀವವೂ ಈಕೆಯ ಸೇವೆಯನ್ನಾದರೂ ಮಾಡಿಕೊಂಡಿರುವುದಕ್ಕೆ ಬಹಳ ಕೃತಜ್ಞನಾಗಿ ಒಪ್ಪಿಕೊಳ್ಳುತ್ತಿದ್ದೆನು. ಓಹೋ ! ನಾನೀರೀತಿ

ಯಾಗಿ ಸ್ವಪ್ನದಲ್ಲಿ ಮಾತನಾಡಿಕೊಳ್ಳುತ್ತಿರುವೆನೋ ಏನೋ ? ಈ ನನ್ನ ಅಸಂಬದ್ಧ ಪ್ರಲಾಪವು ಆ ಮಹಾತ್ಮರ ಕಿವಿಗೆ ಬಿದ್ದರೆ, ನನಗೆ ಏನು ಶಾಪವನ್ನು ಕೊಡುವರೋ ಕಾಣೆ. ಏನಾದರೂ ಆಗಲಿ, ಸ್ವಪ್ನದಲ್ಲಾದರೂ ಇಂತಹ ಯುವತಿಯನ್ನು ನೋಡಿದೆ ನಲ್ಲಾ! ಈಗಲೀಗ ನನ್ನ ಜನ್ಮವು ಸಾರ್ಥಕವಾಯಿತು. '' ಎಂದು ಕೊಳ್ಳುತ್ತಿದ್ದಾಗ ತಪಸ್ವಿಗಳು ಮಂದಹಾಸದಿಂದ ಕುಶನಾಭರ ಮುಖವನ್ನು ನೋಡಿ '' ಮಹಾಸ್ವಾಮಿ, ಇನ್ನು ನಾವು ಈ ಬ್ರಹ್ಮಚಾರಿಯನ್ನು ಬಹಳ ಹೊತ್ತು ಹೀಗೆಯೇ ಬಿಡುವುದು ಯುಕ್ತವಲ್ಲ. ಈ ಯುವಕನ ಬ್ರಹ್ಮಚರ್ಯವ್ರತಾಭಿಲಾಷೆಯು ವ್ಯಕ್ತವಾಯಿತಷ್ಟೇ ? ಇನ್ನು ಇವನಿಗೆ ಯಥಾಪ್ರಕಾರ ಗಾಢನಿದ್ರೆ ಬರುವಂತೆ ಮಾಡಿ ಮುನಿಕುಮಾರಿಯನ್ನು ಎಚ್ಚರಗೊಳಿಸೋಣವಾಗಲಿ; ಆಕೆಯ ಮನೋದಾರ್ಢ್ಯವನ್ನು ನೋಡೋಣ.'' ಎಂದರು.

ರವಿವರ್ಮನ ಆತ್ಮಸಂಭಾಷಣೆಯನ್ನು ಕೇಳಿ ಬೆರಗಾಗಿದ್ದ ಕುಶನಾಭರು ತಮ್ಮ ಮಿತ್ರರ ಮಾತನ್ನು ಕೇಳಿ '' ಓಹೋ! ಈ ರಂಗವು ಇಲ್ಲಿಗೆ ಮುಗಿಯಿತೋ ? ಮತ್ತೊಂದು ರಂಗವು ಪ್ರಾರಂಭವಾಗಬೇಕೋ ! ಒಳ್ಳೆಯದು. '' ಎಂದು ರವಿವರ್ಮನನ್ನು ನೋಡಿದರು. ಕೂಡಲೇ ಅವನು ಯಥಾಪ್ರಕಾರ ತನ್ನ ಮಂಚಿಕೆಯಮೇಲೆ ಮಲಗಿ ನಿದ್ರೆಹೋದನು. ಬಳಿಕ ಅವರು ಜಗನ್ಮೋಹಿನಿಯ ಕಡೆಗೆ ನೋಡಿದರು.

ಕೂಡಲೇ ಮೋಹಿನಿಯು ಎಚ್ಚತ್ತು ಮಂಚದಮೇಲೆ ಎದ್ದು ಕುಳಿತು ಕಣ್ಣುಗಳನ್ನು ಶೆರಗಿನಿಂದ ಒರಸಿಕೊಂಡು ಅತ್ತಿತ್ತ ನೋಡಿ, '' ಏನಿದಚ್ಚರಿ! ಇನ್ನೂ ಇವರೆಲ್ಲರೂ ಮಲಗಿಯೇ

ಇರುವರು. ನನ್ನನ್ನು ಎಬ್ಬಿಸಿದವರಾರು ? " ಎಂದು ಸುತ್ತಲೂ ತನ್ನ ದಾಸಿಯರ ಮಂಚಗಳ ಕಡೆಗೆ ನೋಡಿ, " ರಾಜೇಶ್ವರೀ, ರಾಜೇಶ್ವರೀ, " ಎಂದು ಕೂಗಿ, " ಇನ್ನೂ ನನ್ನ ಸ್ನಾನದ ವೇಳೆಯಾದ ಹಾಗೆ ಕಾಣುವುದಿಲ್ಲ. ಇಲ್ಲದಿದ್ದರೆ, ರಾಜೇಶ್ವರಿಯು ಎಂದಿಗೂ ಹೀಗೆ ಮೈಮರೆತು ನಿದ್ರೆ ಮಾಡುತ್ತಿರಲಿಲ್ಲ. ಅಷ್ಟೇಕೆ, ಸ್ನಾನಕಾಲವಾಗಿದ್ದರೆ ವೈತಾಳಿಕರು ಸುಮ್ಮನಿರುತ್ತಿದ್ದರೇ! ಓಹೋ! ಈ ದೀಪಗಳೆಲ್ಲವೂ ಇನ್ನೂ ಬಹು ಪ್ರಕಾಶವಾಗಿ ಉರಿಯುತ್ತಲೇ ಇವೆ. ಈಗ ಇನ್ನೂ ಹನ್ನೆರಡು ಗಂಟೆಯು ಮೇಲಾಗಿರಲಾರದು; ನಾನು ಏನೋ ಕನಸು ಕಂಡುದರಿಂದ ನನಗೆ ಹೀಗೆ ಅವೇಳೆಯಲ್ಲಿ ತಟ್ಟಿ ಎಬ್ಬಿಸಿದ ಹಾಗೆ ಎಚ್ಚರವಾಯಿತು. ಇನ್ನು ನನಗೆ ನಿದ್ರೆ ಬರುವಹಾಗೆ ಕಾಣುವುದಿಲ್ಲ; ಮಾಡಲೇನು? " ಎಂದು ಕೊಂಚ ಯೋಚಿಸಿ, " ಒಳ್ಳೆಯದು ! ಈ ಕುಮಾರಿಯರನ್ನೆಲ್ಲಾ ಎಬ್ಬಿಸಿ ಇವರೊಡನೆ ಸಲ್ಲಾಪವನ್ನಾದರೂ ಮಾಡುತ್ತಾ ವಿನೋದಿಸುವೆನು. " ಎಂದು ತಟ್ಟನೆ ತನ್ನ ಮಂಚವನ್ನು ಬಿಟ್ಟು ಕೆಳಗಿಳಿದು, " ಓಹೋ ! ಬೆಳಗಿನ ಜಾವದಿಂದ ಸರಿರಾತ್ರಿಯುವರೆಗೂ ನನ್ನ ಸೇವೆಯಲ್ಲಿ ಪರಿಶ್ರಾಂತರಾಗಿ ಮಲಗಿರುವ ಈ ಕುಮಾರಿಯರ ನಿದ್ರೆಯನ್ನು ನನ್ನ ವಿನೋದಕ್ಕಾಗಿ ಭಂಗಮಾಡುವುದು ನನಗೆ ಧರ್ಮವಲ್ಲ. ಆದುದರಿಂದ, ಕಲಕಂಠೆಯಾದ ಕಲ್ಪಲತೆಯನ್ನು ಮಾತ್ರ ಎಬ್ಬಿಸಿ ಈ ಕಾಲಕ್ಕೆ ತಕ್ಕ ರಾಗದಲ್ಲಿ ಗಜೇಂದ್ರಮೋಕ್ಷವನ್ನು ಗಾನಮಾಡಿಸುವೆನು. " ಎಂದು ನೆಟ್ಟಗೆ ರವಿವರ್ಮನು ಮಲಗಿದ್ದ ಮಂಚದ ಒಳಿಗೆ ಹೋಗಿ, " ಕಲ್ಪಲತೇ, ಕಲ್ಪಲತೇ, ಏಳು ಏಳು ! " ಎಂದು ಅವನ ಮೈ ತಟ್ಟಿ, ಸರ್ಪವನ್ನು ಹಗ್ಗವೆಂದು ಮುಟ್ಟಿದವಳಂತೆ, ಬೆಚ್ಚಿಬಿದ್ದು ಹಿಂದಕ್ಕೆ

ಹೋಗಿ, " ಇದೇನಾಶ್ಚರ್ಯ! ಕಲ್ಪಲತೆಯ ದೇಹವು ಕಲ್ಲಿನಂತೆ ಇಷ್ಟು ಕಠಿಣವಾಗಿರುವುದು. " ಎಂದು ಕೊಂಚ ಯೋಚಿಸಿ, " ಒಳ್ಳೆಯದು, ಈ ದಾಸಿಯರನ್ನೆಲ್ಲಾ ಎಬ್ಬಿಸಿ ಇದಕ್ಕೆ ಕಾರಣವೇನಿರಬಹುದೋ ಪರೀಕ್ಷಿಸಿ ನೋಡುವೆನು. " ಎಂದು ಅಲ್ಲಿದ್ದ ಮಂಚಗಳ ಕಡೆಗೆ ನೋಡಿ " ಯಶೋಧರೇ, ಮನ್ವಾರಿಕೇ, ವಾರುಣೀ, ಏಳಿ ! ಏಳಿರಿ !! ಅದೇಕೆ, ನೀವೆಲ್ಲರೂ ಈ ರಾತ್ರಿ ಎಷ್ಟು ಕೂಗಿದರೂ ಎಚ್ಚರಗೊಳ್ಳದೇ ಮತ್ತರಾಗಿ ಮಲಗಿರುವಿರಿ ? " ಎಂದು ಸುತ್ತಲೂ ನೋಡಿ ಯಾರೂ ಮಾತನಾಡದೇ ಹೇಗಿದ್ದವರು ಹಾಗೆಯೇ ಮಲಗಿದ್ದುದನ್ನು ಕಂಡು ಗಾಬರಿಗೊಂಡು, " ಈ ಕನ್ನಿಕೆಯರೆಲ್ಲರೂ ಯಾರಾದರೂ ಮಹರ್ಷಿಗಳ ಶಾಪದಿಂದ ಅಹಲ್ಯೆಯಂತೆ ಕಲ್ಲಾಗಿ ಹೋದರೋ ? ಎಂದು ಕೊಂಚ ಯೋಚಿಸಿ " ಒಳ್ಳೆಯದು, ನಾನೇ ಮತ್ತೊಂದು ತಡವೆ ಕಲ್ಪಲತೆಯನ್ನೇ ಎಬ್ಬಿಸಿ ನೋಡುವೆನು. " ಎಂದು ಧೈರ್ಯವನ್ನು ತಾಳಿ ಮುಂದರಿದು ಮರಳಿ ರವಿವರ್ಮನ ಮಂಚದ ಹತ್ತಿರಕ್ಕೆ ಹೋಗಿ, " ಕಲ್ಪಲತೇ, ಕಲ್ಪಲತೇ, ಛೇ ! ಛೇ !! ಏಳು ಏಳು. " ಎಂದು ಅವನು ಮುಸುಗು ಹಾಕಿಕೊಂಡಿದ್ದ ಶಾಲನ್ನು ಶಳದಳು; ಮೇಘಗಳ ಆವರಣದಿಂದ ಬಿಡಲ್ಪಟ್ಟ ಅಕಳಂಕನಾದ ಚನ್ದ್ರನಂತೆ ಪ್ರಕಾಶಮಾನವಾದ ರವಿವರ್ಮನ ಮುಖವು ಮೋಹಿನಿಯ ಕಣ್ಣಿಗೆ ಬಿದ್ದಿತು.

ಕಲ್ಪಲತೆಯ ತಲ್ಪದಲ್ಲಿ ದೇದೀಪ್ಯಮಾನವಾದ ದಿವ್ಯಪುರುಷಾಕೃತಿಯನ್ನು ಕಂಡಕೂಡಲೇ ಮೋಹಿನಿಯು ರೋಮಾಂಚಕಂಚುಕಿತಳಾಗಿ ಬೆಚ್ಚಿ ಬೆರಗಾಗಿ, ಬೆವತು, ಬೆಂಡಾಗಿ ಒಂದೂ ತೋಚದೇ ಒಂದು ನಿಮಿಷ ಸ್ತಂಭೀಭೂತಳಾಗಿ ನಿಂತಳು. ಅಷ್ಟರಲ್ಲಿಯೇ

ಚೇತರಿಸಿಕೊಂಡು ತನ್ನ ಮುಖದಮೇಲೆಯೂ, ಕಂಠದ ಮೇಲೆಯೂ; ಮುಂಗೈಗಳ ಮೇಲೆಯೂ, ಉಕ್ಕುತ್ತಿದ್ದ ಬೆವರನ್ನು ತನ್ನ ಶರಗಿನ ಕೊನೆಯಿಂದ ಒರಸಿಕೊಳ್ಳುತ್ತಾ ಧೈರ್ಯವನ್ನು ಅವಲಂಬಿಸಿ ರವಿವರ್ಮನ ಮುಖವನ್ನು ದೂರದಿಂದಲೇ ಚೆನ್ನಾಗಿ ನೋಡಿ, “ ಇದೇನು ಐಂದ್ರಜಾಲಿಕವೋ ? ಭ್ರಾಂತಿಯೋ ? ಕಲ್ಪಲತೆಯು ಕಮನೀಯವಾದ ರೂಪಾಂತರವನ್ನು ಹೊಂದಿರುವಳು. ರೂಪವೆಂದರೆ ಸಾಮಾನ್ಯವಾದ ರೂಪವಲ್ಲ; ಲೋಕೋತ್ತರವಾದ ದಿವ್ಯಪುರುಷಾಕೃತಿಯು. ಈ ಸುವ್ಯಕ್ತವಾದ ಪುರುಷವ್ಯಕ್ತಿಯು ಕಲ್ಪಲತೆಯ ರೂಪಾಂತರವೆಂಬುದು ಶುದ್ಧ ಅಸಂಭವ. ಇವನಾರೋ ಮಹಾ ಪುರುಷನಾಗಿ ಕಾಣುತ್ತಾನೆ; ಮಾನವ ಸಾಮಾನ್ಯನಂತೂ ಸರ್ವಥಾ ಅಲ್ಲ; ಮಾನವರಿಗೆ ಇಷ್ಟು ಸೌಂದರ್ಯವೆತ್ತಣದು? ದೇವಯೋಗಿಗಳಲ್ಲಿಯೂ ಸಾಮಾನ್ಯನಾಗಿರಲಾರನು; ಮಹಾ ಸೌಂದರ್ಯಶಾಲಿ ಎಂದು ಕವಿಗಳಿಂದ ವರ್ಣಿತನಾದ, ಮನ್ಮಥನೋ ಇನ್ದ್ರನೋ, ಚಂದ್ರನೋ, ಉಪೇನ್ದ್ರನೋ ಆಗಿರಬೇಕು. ಅಹಹಾ ! ಏನಿದು ಸೋಜಿಗ !! ಮದನಕೋಟಿ ಸೌಂದರ್ಯಶಾಲಿಯಾದ ಈ ಯೌವನಸ್ಥನ ಮುಖಮಣ್ಡಲವು ಚನ್ದ್ರಮಣ್ಡಲದಂತೆ ಅಮೃತ ವೃಷ್ಟಿಯಿಂದ ನನ್ನ ಹೃದಯವನ್ನು ಆನಂದಗೊಳಿಸುತ್ತಿದೆ ! ” ಎಂದು ರವಿವರ್ಮನ ಮಂಚದ ಸಮೀಪಕ್ಕೆ ಹೋಗಿ ಆವನನ್ನು ಎವೆ ಇಕ್ಕದೇ ನೋಡುತ್ತಾ ನಿಂತಳು.

ಮೊಟ್ಟಮೊದಲು ಕಲ್ಪಲತೆಯ ಮಂಚದಮೇಲೆ ಪುರುಷಾಕೃತಿಯನ್ನು ಕಂಡ ಕೂಡಲೇ ಭಯದಿಂದ ಬೂದಿಯಂತೆ ಬಿಳುಪಾಗಿದ್ದ ಮೋಹಿನಿಯ ಮುಖವು ಈಗ ಪ್ರಭಾಕರನ ಉದಯವನ್ನು ಕಂಡು ವಿಕಸಿಸುವ ಕೆಂದಾವರೆಯಂತೆ ವಿಕಾಸವನ್ನು

ಹೊಂದಿತು; ಕಪೋಲಗಳು ಕ್ರಮವಾಗಿ ಕೆಂಪೇರಿದುವು; ವಿಶಾಲವಾದ ಕಣ್ಣುಗಳು ಸ್ವಭಾವಕ್ಕೆ ತಕ್ಕಹಾಗೆ ಚಂಚಲವಾದುವು; ರವಿವರ್ಮನ ಕಠಿಣವಾದ ಶರೀರವನ್ನು ಮುಟ್ಟಿದಾಗ ಬೆಚ್ಚಿ ಸ್ವಭಾವಕ್ಕೆ ವಿರುದ್ಧವಾಗಿ ಕೊಂಚ ಹಿಂದಕ್ಕೆ ಬಾಗಿದ್ದ ಅವಳ ಶರೀರದ ಮೇಲಣ ಭಾಗವು ಯಥಾಪ್ರಕಾರವಾಗಿ ಕೊಂಚ ಮುಂದಕ್ಕೆ ಬೊಗ್ಗಿತು; ಅರಿವಿಲ್ಲದೇ ಮುಂದು ಮುಂದಕ್ಕೆ ಮೆಲ್ಲಡಿಗಳನ್ನಿಟ್ಟಳು.

ಒಂದು ನಿಮಿಷದಮೇಲೆ ಮೋಹಿನಿಯು ಕೊಂಚ ಹಿಂದಕ್ಕೆ ಬಂದು, “ ಓಹೋ ! ಈ ಯೌವನಸ್ಥನ ವಿಷಯವಾಗಿ ಈಗಲೀಗ ನನ್ನ ಬುದ್ಧಿಗೆ ಹೊಳೆಯಿತು; ತಪೋಬಲದಿಂದ ಬ್ರಹ್ಮಸೃಷ್ಟಿಗೆ ಪ್ರತಿಸೃಷ್ಟಿಯನ್ನು ಮಾಡತಕ್ಕ ಶಕ್ತಿಯುಳ್ಳ ನಮ್ಮ ತಂದೆಯು ತನ್ನ ಪ್ರಿಯಪುತ್ರಿಯಾದ ನನಗೆ ಅನುರೂಪನಾದ ವರನು ಬ್ರಹ್ಮಸೃಷ್ಟಿಯಲ್ಲಿ ಇಲ್ಲವೆಂದು ಈ ಪದ್ಮದ್ವೀಪವನ್ನು ನಿರ್ಮಾಣಮಾಡಿದಂತೆ ಈ ಸೌಂದರ್ಯನಿಧಿಯನ್ನು ನಿರ್ಮಿಸಿ ನನಗೊಪ್ಪಿಸಿರುವನು. ಇಲ್ಲದಿದ್ದರೆ ದೇವದೇವಾದಿ ದೇವತೆಗಳಿಗೂ ಕೂಡ ಪ್ರವೇಶಮಾಡಲು ಅಸಾಧ್ಯವಾದ ಈ ಪದ್ಮದ್ವೀಪದೊಳಕ್ಕೆ ತತ್ರಾಪಿ ನನ್ನ ಅಂತಃಪುರದೊಳಗೆ, ನನ್ನ ಮಂಚದ ಪಕ್ಕದಲ್ಲಿ ಈ ಯೌವನಸ್ಥನು ಹೇಗೆ ಬರುತ್ತಿದ್ದನು ? ” ಎಂದಂದುಕೊಂಡು ಏನನ್ನೋ ನೆನಪು ಮಾಡಿಕೊಂಡವಳಂತೆ ತಟ್ಟನೆ ತಿರುಗಿ ಅಲ್ಲಿ ಸುತ್ತಲೂ ಮಂಚಗಳ ಮೇಲೆ ಮಲಗಿದ್ದ ತನ್ನ ದಾಸಿಯರನ್ನೆಲ್ಲಾ ಒಬ್ಬೊಬ್ಬರನ್ನಾಗಿ ಪರಿಕಿಸಿ ನೋಡಿ, “ ಓಹೋ ! ನನ್ನ ಊಹೆಯು ಯಥಾರ್ಥವಾದುದೆಂಬ ವಿಷಯದಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ನನ್ನ ದಾಸಿಯರೆಲ್ಲರೂ ತಮ್ಮ ತಮ್ಮ ಮಂಚಗಳ

ಮೇಲೆಯೇ ಯಥಾಪ್ರಕಾರವಾಗಿ ಸುಖನಿದ್ರೆಮಾಡುತ್ತಿರುವರು. ಕಲ್ಪಲತೆಯು ಮಂಚದಮೇಲೆ ಕಲ್ಪಲತೆಯೇ ಮಲಗಿರುವಳು. ನಾನು ನಿದ್ದೆಗಣ್ಣಿನಲ್ಲಿ ಎದ್ದು ಈ ಪುರುಷರತ್ನವನ್ನು ಚತುರಿಕೆ ಎಂಬ ಭ್ರಾಂತಿಯಿಂದ ಮುಟ್ಟಿದೆನು. ಮುಟ್ಟಿದ ಕೂಡಲೆ ಈತನು ತಟ್ಟನೆ ಎಚ್ಚರಗೊಂಡಿದ್ದರೆ ಏನಾಗುತ್ತಿದ್ದಿತೋ ? ಅಹಹಾ ! ನಿನ್ನೆ ಸಾಯಂಕಾಲ ಆ ಕುಶನಾಭರ ಮಾತಿನಂತೆ ನಾನು ಆ ರವಿವರ್ಮನನ್ನು ವಿವಾಹಮಾಡಿಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದರೆ, ಎಂಥಾ ಪ್ರಮಾದವಾಗುತ್ತಿದ್ದಿತು! ನಮ್ಮ ತಂದೆಯ ಮನೋರಥಕ್ಕೆ ವಿರೋಧವಾಗಿ ನಡೆದ ಮಹಾಪಾತಕಕ್ಕೆ ಗುರಿಯಾಗುತ್ತಿದ್ದೆನಲ್ಲಾ ! '' ಎಂದು ಕೈಜೋಡಿಸಿಕೊಂಡು ಧ್ಯಾನದೃಷ್ಟಿಯಿಂದ ಮೇಲೆ ನೋಡಿ, '' ತಂದೆಯೇ, ನಿನ್ನ ತಪೋಬಲವು ಅಪರಿಮಿತವಾದುದು ! ಅತ್ಯಾಶ್ಚರ್ಯಕರವಾದುದು ! ಮಹಾನುಭಾವನಾದ ನಿನ್ನ ಮಗಳಾಗಿ ಹುಟ್ಟುವುದಕ್ಕೆ ನಾನು ಅನೇಕಕೋಟಿ ಜನ್ಮಗಳಲ್ಲಿ ಬಹು ತಪಸ್ಸು ಮಾಡಿದ್ದೆನು. ನೀನು ನನ್ನಲ್ಲಿ ಪ್ರೇಮಾತಿಶಯದಿಂದ ನನಗೆ ಮಾಡಿರುವ ಮಹೋಪಕಾರಗಳಿಗಾಗಿ ನಾನು ನಿನಗೆ ಬಹು ಕೃತಜ್ಞಳಾಗಿರುವೆನು. ನೀನು ನನ್ನಲ್ಲಿ ಕರುಣಿಸಿ ದಯಪಾಲಿಸಿರುವ ವರನನ್ನು ನಾನು ಮನಮುಟ್ಟಿ ವರಿಸಿರುವೆನು. ಈ ಅಮಾನುಷ ರೂಪಲಾವಣ್ಯಶಾಲಿಯಾದ, ಈ ಯೌವನಸ್ಥನನ್ನು ನೋಡಿದ ಕೂಡಲೇ ನನ್ನ ಮನವು ಈತನಲ್ಲಿ ನೆಲೆಗೊಂಡಿತು. ತಂದೆಯೇ, ಇಂತಹ ಶ್ರೇಯಸ್ಕರವಾದ ಕಾರ್ಯಗಳಿಗೆ ಅನೇಕ ವಿಘ್ನಗಳು ಸಂಭವಿಸುವುದು ಸಹಜವಾದುದರಿಂದ ನೀನು ನನ್ನಲ್ಲಿ ದಯೆಯಿಟ್ಟು ಅಂತಹ ವಿಘ್ನ ವಿಘಾತಗಳಿಗೆ ಅವಕಾಶಕೊಡದೇ ನಮ್ಮಗಳ ಪಾಣಿಗ್ರಹಣ ಮಹೋತ್ಸವವು ಕ್ಷಿಪ್ರದಲ್ಲಿಯೇ ನೆರವೇರುವಂತೆ ಮಾಡಿಸಬೇಕು. ಪಿತನೇ, ನೀನು ನನಗೆ

ಅದೃಶ್ಯನಾಗಿದ್ದಾಗ್ಯೂ ನಾನು ನಿನ್ನನ್ನು ಪ್ರತ್ಯಕ್ಷ ದೇವತೆಯಂತೆ ಭಾವಿಸಿಕೊಂಡಿರುವೆನು." ಎನ್ನುತ್ತಿದ್ದಾಗ ತಪಸ್ವಿಗಳು ಕುಶನಾಭರನ್ನು ಕುರಿತು ಈ ತಾಪಸಕುಮಾರಿಯ ಮನೋದಾರ್ಢ್ಯವೂ ಮಹಾಸ್ವಾಮಿಯ ಚಿತ್ತಕ್ಕೆ ವೇದ್ಯವಾಯಿತಷ್ಟೆ ; ಇನ್ನೇಕೆ ನಾವು ವೃಥಾ ಯುವತಿಜನರ ಸ್ವೇಚ್ಛಾಲಾಪವನ್ನು ಕೇಳಬೇಕು ? ತಮ್ಮ ಪೌರೋಹಿತ್ಯವೂ ಇಲ್ಲಿಗೆ ಮುಗಿದಹಾಗೆಯೇ ಆಯಿತು. ಮುಂದಣ ಕಾರ್ಯಭಾಗಗಳನ್ನು ಕುಲಪುರೋಹಿತರೇ ನೋಡಿಕೊಳ್ಳುತ್ತಾರೆ. ಈಗಾಗಲೇ ಬ್ರಾಹ್ಮ್ಯವ ುಹೂರ್ತವು ಸಮೀಪವಾಯಿತು. ಇನ್ನು ಇಲ್ಲಿ ನಿಲ್ಲುವುದಕ್ಕೆ ನಮಗೆ ವ್ಯವಧಾನವಿಲ್ಲ. ಆದುದರಿಂದ ಈ ವಧೂವರರು ತಮ್ಮತಮ್ಮ ಸ್ಥಾನಗಳಲ್ಲಿ ಯಥಾಪ್ರಕಾರ ನಿದ್ರೆಮಾಡುವಂತೆ ಮಾಡೋಣವಾಗಲಿ." ಎಂದರು. ಕುಶನಾಭರು ಅದಕ್ಕೆ "ಹಾಗೆಯೇ ಸರಿ" ಎಂದು ನಮ್ಮ ಕಥಾನಾಯಕೀ ನಾಯಕರನ್ನು ನೋಡಿದರು.

ಕೂಡಲೇ, ರವಿವರ್ಮನ ಮಂಚವು ಅಂತರಿಕ್ಷಮಾರ್ಗವಾಗಿ ಪುಷ್ಪಕವಿಮಾನದಂತೆ ಹೊರಟಿತು. ಮೋಹಿನಿಯು ಹೋಗಿ ಯಥಾಪ್ರಕಾರ ತನ್ನ ಮಂಚದ ಮೇಲೆ ಮಲಗಿ ನಿದ್ರೆ ಹೋದಳು. ಬಳಿಕ ಆ ಮುನೀಶ್ವರರಿಬ್ಬರೂ ಯೋಗ ಮಾರ್ಗದಿಂದ ತಮ್ಮ ಆಶ್ರಮಕ್ಕೆ ಹೋಗಿ ಸೇರಿದರು.

ಆ ವೇಳೆಗೆ ಅರುಣಸಾರಥಿಯು ಆ ತಪೋವನದ ತರುಗಳ ನಡುವೆ ತನ್ನ ನಿಡುವಾದ ಕರಗಳನ್ನು ಚಾಚಿ ಪ್ರಾತಃಸ್ನಾನಕ್ಕೋಸ್ಕರವಾಗಿ ಸರೋವರಗಳಿಗೂ ಹೊಳೆಗಳಿಗೂ ಹೋಗುತ್ತಿದ್ದ ವೃದ್ಧ ತಪಸ್ವಿಗಳಿಗೆ ದಾರಿಯನ್ನು ತೋರಿಸುತ್ತಿದ್ದನು. ಆಗ ತಾನೆ ಕಣ್ಣು ಬಿಟ್ಟು ಪಕ್ಷಿಗಳನ್ನು ಒದರಿಕೊಳ್ಳುತ್ತಾ ಕೊಂಬೆಯಿಂದ ಕೊಂಬೆಗೆ

ಹಾರಾಡುತ್ತಿದ್ದ ಸಾರಿಕಾದಿ ಪಕ್ಷಿಗಳ ಕಾಕಲಿಯು, ಆಗಾಗಲೇ ಸ್ನಾನ ಮಾಡಿ ಸಾಮವೇದವನ್ನು ಗಾನಮಾಡುತ್ತಿದ್ದ ವಟುಗಳ ಮನೋಹರವಾದ ಕಂಠ ಸ್ವರಕ್ಕೆ ಹಿಂಮೇಳದಂತೆ ಕೇಳಬರುತ್ತಿದ್ದಿತು.

ನಮ್ಮ ರಾಜಕುಮಾರನಿಗೆ ಆ ರೀತಿಯಾಗಿ ಜಾಗರವಾಗಿದ್ದಾಗ್ಯೂ ಆ ತಪಸ್ವಿಗಳ ಗದ್ದಲದಿಂದ ಕ್ಲುಪ್ತಕಾಲಕ್ಕೆ ಮುಂಚಿತವಾಗಿಯೇ ಎಚ್ಚರವಾಯಿತು.

ರವಿವರ್ಮನು ಎದ್ದೊಡನೆಯೇ ಏನನ್ನೊ ಕಳದು ಕೊಂಡವನಂತೆ ಆ ಪರ್ಣಶಾಲೆಯ ಒಳಗೂ, ಹೊರಗೂ, ಸುತ್ತಮುತ್ತಲೂ ಅಲ್ಲಿದ್ದ ತಪಸ್ವಿಗಳನ್ನೂ ತನ್ನ ಪರಿವಾರವನ್ನೂ ನೋಡಿದನು ಸ್ವಾಭಾವಿಕವಾಗಿ, ಅರಳುತ್ತಿದ್ದ ಕೆಂದಾವರೆಯಂತೆ ಸುಂದರವಾಗಿದ್ದ ಇವನ ಮುಖವು ಅಂದಗೆಟ್ಟು ವಿಕಾರವಾಗಿದ್ದಿತು; ಕಣ್ಣುಗುಡ್ಡೆಗಳು ಕೆಂಪಾಗಿದ್ದವು; ಕಡೆಗಣ್ಣುಗಳು ಸಂಕುಚಿತವಾಗಿದ್ದುವು; ಮೂಗು ಮಿಣುಗುಟ್ಟುತ್ತಿದ್ದಿತು, ಕಪೋಲಗಳು ಕಳೆಗುಂದಿ ಬೆಳ್ಳಗಾಗಿದ್ದುವು.

ಸುಮಂತ್ರನು ರವಿವರ್ಮನ ಅಲಸ್ಯಕ್ಕೂ ವಿಕಾಸಕ್ಕೂ ಕಾರಣವನ್ನು ಕಾಣದೇ, ತಟ್ಟನೆ ವಿಚಾರಿಸಲು ಮನಬಾರದೇ, ಒಂದೂ ತೋಚದೆ ‘‘ಒಡನೇ, ಈ ದಿನ ಬೆಳಗಿನಜಾವದಲ್ಲಿಯೇ ಇಲ್ಲಿಂದ ಪಯಣಮಾಡಬೇಕೆಂದು ನಿನ್ನೆ ನಿಶ್ಚಯಿಸಿಕೊಂಡಿರಲಿಲ್ಲವೆ ? ನೀನದೇಕೆ, ಇಷ್ಟು ಹೊತ್ತಾದರೂ ಸುಮ್ಮನೇ ಇರುವೆ ? ಎಲ್ಲವೂ ಸಿದ್ಧವಾಗಿದೆ ; ನಡೆ ಹೊರಡೋಣ.’’ ಎಂದನು.

ರವಿವರ್ಮನು ಅದಕ್ಕೆ ಶೂನ್ಯ ದೃಷ್ಟಿಯಿಂದ, ‘‘ಆ ದಿವ್ಯ ಭವನವು ಇಲ್ಲಿಗೆ ಎಷ್ಟು ದೂರದಲ್ಲಿದೆ ?’’ ಎಂದು ಕೇಳಿದನು.

ಸುಮಂತ್ರ :—ದಿವ್ಯಭವನವಾವುದು ?

ರವಿವರ್ಮ :— ನಾನು ಅಲ್ಲಿಂದ ಹಿಂದಿರುಗಿ ಬಂದುದು ಹೇಗೆ?

ಸುಮಂತ್ರ :—"ಮಹಾರಾಜನೇ, ಮನ್ನಿಸಬೇಕು; ನೀನದೇಕೆ ಈ ದಿನ ಇಷ್ಟು ಅಸಂಬದ್ಧವಾಗಿ ಮಾತನಾಡುತ್ತಿರುವೆ? ನೀನಿನ್ನೂ ನಿದ್ದೆಗಣ್ಣಿನಲ್ಲಿರುವಂತಿದೆ. ನಿನ್ನೆ ರಾತ್ರಿ, ವಟುಗಳ ವೇದಾಧ್ಯಯನದ ಗಲಭೆಯಲ್ಲಿ ನಿನಗೆ ಚನ್ನಾಗಿ ನಿದ್ರೆ ಬಂದಹಾಗೆ ಕಾಣುವುದಿಲ್ಲ. ಅತ್ತನೋಡು; ಆಗಲೇ ಹೊತ್ತೇರಿತು; ಇನ್ನು ಹೊತ್ತು ಗಳೆಯಲಾಗದು. ನಡೆ ಹೊರಡೋಣ." ಎಂದು ಆತನ ಪ್ರಯಾಣದ ಉಡುಗೆ ತೊಡುಗೆಗಳನ್ನು ಆತನ ಕೈಗೆ ಕೊಟ್ಟನು.

ರವಿವರ್ಮನು ಅವುಗಳನ್ನು ತೆಗೆದುಕೊಂಡು ಬೇಸರದಿಂದ ಉಟ್ಟು ತೊಟ್ಟು ಮಾತನಾಡದೇ ಆಶ್ರಮವನ್ನು ಬಿಟ್ಟು ಮುಂದಕ್ಕೆ ಪ್ರಯಾಣಮಾಡಿದನು. ಅವನ ಹಿಂಬಾಲಕರೂ ಅವನನ್ನು ಹಿಂಬಾಲಿಸಿದರು.

——o——

# ಹತ್ತನೆಯ ಪ್ರಕರಣ.

## ಬಳಸಂಚು.

ಶರತ್ಕಾಲವು ತಲೆದೋರಿತು: ಸ್ವಭಾವವು ಶರದೃತುವಿನಲ್ಲಿ ಶೋಭಿಸುವಂತೆ ಮತ್ತಾವ ಋತುವಿನಲ್ಲಿಯೂ ಶೋಭಿಸುವುದಿಲ್ಲ. ಹೇಮಂತ ವಸಂತ ಮುಂತಾದ ಋತುಗಳೂ ತಮ್ಮ ತಮ್ಮ ಅಸಾಧಾರಣವಾದ ಫಲಪುಷ್ಪ ಮೊದಲಾದವುಗಳಿಂದ ಮನೋಜ್ಞವಾಗಿದ್ದಾಗ್ಯೂ ಅವುಗಳಲ್ಲಿ ಜನಗಳಿಗೆ ಅಸಹ್ಯವಾದ ಕೆಲ ಗುಣಗಳು ಇದ್ದೇಇವೆ. ಶರದೃತುವಿ

ನಲ್ಲಿ ಅಂತಹ ಅಸಹ್ಯವಾದ ಗುಣವಾವುದೂ ಇಲ್ಲವೇಇಲ್ಲವೆಂದು ಹೇಳ ಬಹುದು.

ವ್ಯವಸಾಯಗಾರರು ಶರತ್ಕಾಲಕ್ಕೆ ಸ್ವಾಗತವನ್ನು ಹೇಳುವ ಹಾಗೆ ಮತ್ತಾವಕಾಲಕ್ಕೂ ಹೇಳುವುದಿಲ್ಲ; ಅದೇತಕ್ಕೆಂದರೆ, ಇತರ ಕಾಲಗಳಲ್ಲಿ ಮಾಡಿದ ವ್ಯವಸಾಯಕ್ಕೆಲ್ಲಾ ಇದುನೇ ಫಲಗಾಲ. ಹೊಲಗಳಲ್ಲಿಯೂ ಗದ್ದೆಗಳಲ್ಲಿಯೂ ಪಯಿರು ಪಚ್ಚೆಗಳು ತಮ್ಮ ವ್ಯವ ಸಾಯಗಾರರ ಶ್ರಮಕ್ಕೆ ತಕ್ಕ ದವಸ ಧಾನ್ಯವನ್ನು ತಲೆಯಮೇಲೆ ಹೊತ್ತುಕೊಂಡು ಹೋಗಿ ಕೊಡುವಂತೆ ಸುವರ್ಣಛಾಯೆಯಿಂದ ಮಿನು ಗುತ್ತಿದ್ದ ತೆನೆಗಳಭಾರದಿಂದ ತಂಗಾಳಿಗೆ ತೂಗಾಡುತ್ತಿದ್ದುವು. ತೋಟಗ ಳಲ್ಲಿ ಫಲವೃಕ್ಷಗಳು ಫಲಭರದಿಂದ ನೆಲಕ್ಕೆ ಬೊಗ್ಗಿದ್ದುವು. ಹೊಲಗಳೂ, ಗದ್ದೆಗಳೂ, ತೋಟಗಳೂ ಕೆಲಸಮಾಡುವವರ ಕಲಕಲಧ್ವನಿಯಿಂದ ಝೇಂಕರಿಸುತ್ತಿದ್ದುವು. ಮಹೋದಯದಿಂದ ಕುಶನಾಭರ ತಪೋವನಕ್ಕೆ ಹೋಗುವ ಹಾದಿಯಲ್ಲಿಯ ಹಳ್ಳಿಪಳ್ಳಿಗಳು ಕೇವಲ ಬೆಟ್ಟಗಳ ಸಾಲಿನ ಸಮೀಪದಲ್ಲಿರುವುದರಿಂದ ಅಲ್ಲಿ ಕರ್ಷಕರು ಕಾಲಕ್ಕೆ ಕೊಂಚ ಮುಂಚಿತ ವಾಗಿಯೇ ಹೊಲಗಳನ್ನು ಬಿತ್ತುತ್ತಾರೆ. ಮುಂದೆ ಬಿತ್ತಿದ ಹೊಲ ಗಳು ಸ್ವಾಭಾವಿಕವಾಗಿ ಮುಂದಾಗಿಯೇ ಕೊಯಿಲಿಗೆ ಬರುತ್ತವೆ. ಅದು ಕಾರಣ, ಈ ಪ್ರಾಂತ್ಯದಲ್ಲಿ ಈಗಾಗಲೇ ಹೊಲಗಳನ್ನು ಕೊಯ್ಯು ತ್ತಿದ್ದರು.

ಈ ಹೊಲಾ ಕೊಯ್ಯುವ ಹಳ್ಳಿಯಾಳುಗಳ ಕಣ್ಣೆದಿರಿಗೆ ನಾಗ ರಿಕರಾರಾದರೂ ಬಂದರೆ, ಮಾಡುವ ಕೆಲಸವನ್ನು ಬಿಟ್ಟು ಅವರನ್ನು ಕಾಡುಕಪಿಗಳಂತೆ ನೋಡುತ್ತಾ ಒಬ್ಬರ ಸಂಗಡ ಒಬ್ಬರು ಗುಸಗುಸನೆ ಮಾತಾಡಿಕೊಂಡು ನಿಲ್ಲುವರು. ತಥಾಪಿ, ಈ ಪ್ರಾಂತ್ಯದ ಜನರಿಗೆ

ಕಳ್ಳರ ಹೆದರಿಕೆಯು ಹೆಚ್ಚಾಗಿದ್ದುದರಿಂದ ಹೊಸಬರನ್ನು ಕಂಡರೆ ಕಾತರಿಸುತ್ತಿದ್ದರು.

ಮೂರು ಸಂಜೆಯಹೊತ್ತಿನಲ್ಲೊಂದುದಿನ ಇವರ ನೋಟಕ್ಕೆ ಅಪೂರ್ವನಾದ ಪುರುಷನೊಬ್ಬನು ವಿಷಯನಾದನು.

ಈತನ ಆಕಾರವು ನಿಡುವಾಗಿಯೂ, ಗಡುತರವಾಗಿಯೂ ಇದ್ದಿತು; ಇವನು ತನ್ನ ಕೆನ್ನೆ ಮೀಸೆಗಳನ್ನು ಎಡಗೈ ಬೆರಳುಗಳಿಂದ ಕೆದರಿಕೊಳ್ಳುತ್ತಿದ್ದನು; ಬಲಗೈಯಲ್ಲಿ ಕುದುರೆಯ ಸವಾರನಂತೆ ನಿಡುವಾದ ಚಾವಟಿಯನ್ನು ಹಿಡಿದುಕೊಂಡಿದ್ದನು; ಕಿನಕಾಪಿನ ಕವಚವನ್ನೂ ಪಾಯಿಜಾಮೆಯನ್ನೂ ಹಾಕಿಕೊಂಡಿದ್ದನು ತಲೆಗೆ ಜಂಗಾವಿಯಪೇಟವನ್ನು ಬೆನ್ನಮೇವೆ ಬಾರುದ್ದಜುಂಗುಬಿಟ್ಟು ನೀಟಾಗಿ ಸುತ್ತಿಕೊಂಡಿದ್ದನು. ಇವನು ದಾರಿಗಾಣದವನಂತೆ ಹಳ್ಳಗಳನ್ನೂ, ತಿಟ್ಟುಗಳನ್ನೂ ದಾಟಿಕೊಂಡು ಕಣ್ಡ ಕಣ್ಡ ಗಿಡಗಣ್ಟಿಗಳನ್ನು ಚಾವಟಿಯಿಂದ ಹೊಡೆಯುತ್ತಾ ಮಿಗುಲುವೇಗದಿಂದ ಮುಂದರಿದು ಹೋಗುತ್ತಿದ್ದನು.

ನೋಡುತ್ತಿದ್ದಹಾಗೆಯೇ ಇವನು ಅಲ್ಲಿಬಿದ್ದು ಇಲ್ಲಿಬಿದ್ದು ರಾಜಮಾರ್ಗಕ್ಕೆ ಹೋಗಿಸೇರಿದನು

ಅಲ್ಲಿ ದಾರಿಗಡ್ಡವಾಗಿ ಕಟ್ಟಲ್ಪಟ್ಟಿದ್ದ ಸಣ್ಣದೊಂದು ಸೇತುವೆಯ ಎಡಪಾರ್ಶ್ವದ ಮೋಟುಗೋಡೆಯ ಕಡೆಯಕಲ್ಲಿನಮೇಲೆ ಕಾಲುಗಳನ್ನು ಇಳಿಬಿಟ್ಟುಕೊಂಡು ಕೂತು ಕರವಸ್ತ್ರದಿಂದ ಕಾಲಗಳ ಮೇಲಣ ಧೂಳಿಯನ್ನು ಜಾಡಿಸುಕೊಂಡು ಸುತ್ತುಮುತ್ತಲೂ ನೋಡಿ ಆ ಮಾರ್ಗದ ಮಗ್ಗುಲಲ್ಲಿ ಕಾಣುತ್ತಿದ್ದ ಮಾವಿನ ತೋಪಿನ ಕಡೆಗೆ ಹೊರಟನು.

ಆ ತೋಪಿನಮಧ್ಯೆ ಮರಗಳ ಮರೆಯಲ್ಲಿ ಹಾಳುಮಣ್ಟಪ ಒಂದಿದ್ದಿತು. ಇದರ ಮುನ್ದುಗಡೆ ಕಲ್ಲು ಕಟ್ಟಿದ ದೊಡ್ಡದೊಂದು ಕೊಳ

ವಿದ್ದಿತು; ಈ ಕೊಳದ ತುಂಬಾ ತರಗೆಲೆಗಳು ಬಿದ್ದಿದ್ದುದರಿಂದ ನೋಡಿದ ಕೂಡಲೆ ಅದರಲ್ಲಿ ನೀರಿದ್ದುದೂ ಇಲ್ಲದಿದ್ದುದೂ ಗೊತ್ತಾಗುತ್ತಿರಲಿಲ್ಲ.

ಆ ಮನುಷ್ಯನು ಈ ಭಾವಿಯ ದಡದ ಸುತ್ತಲೂ ಓಡಾಡುತ್ತಾ ಮೂಡಣದೆಶೆಯ ಕಡೆಗೆ ನೋಡಿ ತುಟಿಯನ್ನು ಕಚ್ಚಿಕೊಂಡು ಎಡಗಾಲಿನಿಂದ ಭೂಮಿಯನ್ನು ಜಾಡಿಸಿ ಒದ್ದು ಮೀಸೆಯನ್ನು ಹುರಿಮಾಡಿಕೊಳ್ಳುತ್ತಾ, "ಛೇ! ಛೇ!! ಹೊತ್ತುಗೊತ್ತರಿಯದ ತೊತ್ತಿನ ಮಕ್ಕಳ ಸಹವಾಸ ಮಾಡುವುದು ಸರಿಯಲ್ಲ." ಎಂದು ಮುಂದಕ್ಕೆ ಮೂರುನಾಲ್ಕು ಅಡಿ ಇಟ್ಟು ಬಹುದೂರದಲ್ಲಿ ಬರುತ್ತಿದ್ದಂತೆ ಕಾಣುತ್ತಿದ್ದಯಾರನ್ನೋ ನೋಡಿ ಒಬ್ಬನನ್ನು ಕಂಡು ಅವನನ್ನೇ ನಿಟ್ಟಿಸಿ ನೋಡುತ್ತಾ ಅಲ್ಲಿಯೇ ನಿಂತನು. ನೋಡುತ್ತಿದ್ದಹಾಗೆಯೇ ಆ ಮನುಷ್ಯನು ಮುಂದರಿದು 'ಓಹೋ! ಇದೇನು, ಈ ದಿನ ಭೈರವಾನನ್ದನೊಬ್ಬನೇ ಬಂದಿರುವಹಾಗಿದೆ.' ಎನ್ದೆಂದುಕೊಂಡು ಅವನ ಸನಿಹಕ್ಕೆ ಬನ್ದನು.

ಭೈರವಾನನ್ದ.—ಅವನನ್ನು ದುರದುರನೆ ನೋಡಿ "ಎಲವೋ, ಸೋಮಾರೀ, ನೀನು ನಿನ್ನ ಭೈರಾಗಿಯ ವೇಷಕ್ಕೆ ಸರಿಯಾಗಿಯೇ ಇರುವೆ. ನಿನ್ನನ್ನಾ ಮಟ್ಟಾಳನನ್ನು ನೆಚ್ಚಿ ಯಾವ ಕೆಲಸವನ್ನಾದರೂ ಮಾಡಬಹುದೆ? ಈಗ ಹೊತ್ತೆಷ್ಟಾಗಿದೆ ನೋಡು."

ಭೈರಾಗಿ.—ಒಡೆಯನೆ, ಕೈಕಾಲುಗಳನ್ನು ಕಟ್ಟಿ ಕೆಡವಿ ಓಡಿಬಾ ಎನ್ದರೆ ಬರುವದಕ್ಕಾದೀತೆ? ಪರಾಧೀನದಲ್ಲಿರುವ ನಾನು ನಿನ್ನ, ಹೊತ್ತು ಗೊತ್ತಿಗೆ ಸರಿಯಾಗಿ ಬರುವುದು ಹೇಗೆ ಕೊಂಚ ಯೋಚಿಸಿ ನೋಡು. ಸನ್ಧ್ಯಾಕಾಲದಲ್ಲಿ ಅಲ್ಲದೆ ಮತ್ತಾವ ಕಾಲದಲ್ಲಿಯೂ ನನಗೆ

ವಿರಾಮವಾಗುವುದಿಲ್ಲವೆಂಬುದು ನಿನಗೆ ಗೊತ್ತೇ ಇದೆ. ಸನ್ಧ್ಯಾಕಾಲವು ಇನ್ನೂ ಅತಿಕ್ರಮಿಸಲಿಲ್ಲ. ಅದೋ ನೋಡು ಸೂರ್ಯನು ಈಗ ತಾನೆ ಮುಣುಗುತ್ತಿದಾನೆ. ಮೇಲಾಗಿ, ತಪ್ಪಿತವೆಲ್ಲವೂ ನಿನ್ನದಾಗಿರುವಾಗ ಬಂದು ನನ್ನ ಮೇಲೆ ಕೋಪಿಸಿಕೊಳ್ಳುವುದೇಕೆ? ನಿನ್ನ ಕಟ್ಟಾಜ್ಞೆಯಂತೆ ನಾನು ಹೊಟ್ಟೆಗಿಲ್ಲದೇ, ಬಟ್ಟೆ ಬರೆ ಇಲ್ಲದೇ ದಿಗಮ್ಬರನಾಗಿ ಹೀಗೆ ಕತ್ತೆಯಂತೆ ಬೂದಿಯಲ್ಲಿ ಬಿದ್ದು ಹೊರಳಾಡುತ್ತಾ ಈ ಹೆಣಭಾರದ ರುದ್ರಾಕ್ಷ ಮಾಲೆಗಳನ್ನು ಕತ್ತಿನ ಮೇಲೆ ಹೊತ್ತುಕೊಂಡು ನಿದ್ದೆಗೆಟ್ಟು ಈ ಕಾವೀ ಬಟ್ಟೆಯನ್ನು ಉಟ್ಟು ಕಷ್ಟ ನಿಷ್ಟುರಗಳನ್ನು ಸಹಿಸಿಕೊಂಡು ಆ ಮುದಿ ಕಾಡು ಮನುಷ್ಯರ ಸೇವೆ ಮಾಡಿ ಮಾಡಿ ಸವೆದು ಚಿಪ್ಪಾಗಿ ಗೋಪ್ಯದಿಂದ ಅವರ ಗುಟ್ಟನ್ನು ಕಂಡು ಹಿಡಿದು ಕಾಲಕ್ಕೆ ಸರಿಯಾಗಿ ತಿಳಿಸಿದ್ದಕ್ಕೆ ಫಲವೇನಾಯಿತು ? ನಾನು ಪಟ್ಟ ಕಷ್ಟವೆಲ್ಲವೂ ನೀರಿನಲ್ಲಿ ಮಾಡಿದ ಹೋಮದಂತಾಯಿತು. ವ್ಯರ್ಥವಾಗಿ ನೀನು ನನಗೆ ದುರಾಶೆಹುಟ್ಟಿಸಿ ಈ ಪರಿ ಕಷ್ಟಕ್ಕೆ ಗುರಿಮಾಡಿದ್ದಕ್ಕೆ ನಾನು ನಿನ್ನ ಮೇಲೆ ಕೋಪಿಸಿಕೊಳ್ಳಬೇಕಾದುದು ನ್ಯಾಯವಾಗಿದೆ. ಬಡವನಕೋಪ ದವಡೆಗೆ ಊನವೆಂಬುದು ನನಗೆ ಗೊತ್ತಿಲ್ಲದಿದ್ದರೆ ಕೋಪಿಸಿಕೊಳ್ಳುತ್ತಿದ್ದೆನೋ ಏನೋ ? ಅಂದು ರಾತ್ರಿ ನಾನು ದುರ್ಗಕ್ಕೆ ಬಂದು ಕುಶನಾಭರು ಆದಿತ್ಯವರ್ಮನಿಗೆ ನನ್ನ ಕೈಲಿ ಬರದು ಕಳುಹಿಸಿ ಕೊಟ್ಟಿದ್ದ ಗುಟ್ಟಾದಕಾಗದದ ಅಭಿಪ್ರಾಯವನ್ನು ನಿನಗೆ ಉಂಟಾಗಿಮಾಡಿದಾಗ ನೀನು ಹೇಳಿದುದೇನು ? “ ನಾನು ಒಂದು ನಿಮಿಷದಲ್ಲಿ ಆದಿತ್ಯವರ್ಮನನ್ನೂ, ಇವನ ಹಿಂಬಾಲಕರನ್ನೂ ಕೈಸೆರೆ ಹಿಡಿದು ಅವರಲ್ಲಿದ್ದ ಜಾತಕವನ್ನೂ ಅವರ ಉಡುಗೆ ತೊಡಿಗೆಗಳನ್ನೂ ಕಿತ್ತುಕೊಂಡು ಅವರ ವೇಷದಿಂದ ಕುಶನಾಭರನ್ನು ಮೋಸಗೊಳಿಸಿ ಜಗನ್ಮೋಹಿನಿಯನ್ನೂ,

ಪದ್ಮದ್ವೀಪವನ್ನೂ ಸಂಪಾದಿಸಿ, ನಿನಗೆ ಪದ್ಮದ್ವೀಪದ ಮುಖ್ಯ ಮಂತ್ರಿಯ ಪದವಿಯನ್ನು ಕೊಡುವೆನು. '' ಎಂದಲ್ಲವೆ. ? ಆ ಮಾತು ಏನಾಯಿತು ? ನಿನ್ನೆ ಬೆಳಿಗ್ಗೆ ರವಿವರ್ಮನು ಆಶ್ರಮದ ಹತ್ತಿರಕ್ಕೆ ಬರುವವರೆಗೂ ನೀನೇ ಆ ವೇಷದಿಂದ ಬರುತ್ತಿರುವೆ ಎಂದು ಎಷ್ಟೋ ಸಂತೋಷದಿಂದ ಇದಿರುನೋಡುತ್ತಿದ್ದೆನು. ಹತ್ತಿರಕ್ಕೆಹೋಗಿ ಅವನ ಮುಖವನ್ನು ಚನ್ನಾಗಿ ನೋಡಿದ ಕೂಡಲೆ ನನ್ನ ಎದೆಯಲ್ಲಿ ಧಗ್ಗಂದಿತು. ಅವನ ಧ್ವನಿಯನ್ನು ಕೇಳಿದ ಕ್ಷಣವೇ ನನ್ನ ಗುಂಡಿಗೆಯು ಹಾರಿಹೋಯಿತು; ಕೈಕಾಲುಗಳು ಕುಸಿದುಬಿದ್ದು ಹೋದುವು; ನಾಲಿಗೆಯು ಒಣಗಿಹೋಯಿತು. ರಣವೀರರಾದ ಆ ರಾಜಪುತ್ರರು ನಿನ್ನನ್ನೂ, ನಿನ್ನ ಕಡೆಯವರನ್ನೂ ಸಂಹರಿಸಿಬಿಟ್ಟರೋ ಏನೋ; ನಮ್ಮ ಗುಟ್ಟು ಬೈಲಾಗಿಹೋಯಿತೋ ಏನೋ ; ನನ್ನನ್ನು ಏನುಮಾಡುವರೋ. ಎಂಬ ಯೋಚನೆಯಿಂದ ಒಂದು ನಿಮಿಷ ನನಗೆ ಒಂದೂ ತೋಚದೇ ಹೋಯಿತು. ನನ್ನ ಮುಖವಿಕಾರದಿಂದಲೂ, ನನ್ನ ತೊದಲು ಮಾತುಗಳಿಂದಲೂ, ಆ ರಾಜಕುಮಾರನಿಗೆ ನನ್ನಲ್ಲಿ ಸಂಶಯವು ಉಂಟಾಯಿತು ಎಂಬುದನ್ನು ನಾನು ಆತನ ಮುಖಭಾವದಿಂದ ತಿಳಿದೂ ತಿಳಿಯದವನಂತೆ ನಟಿಸಿದೆನು. ಒಡನೆಯೇ ನಿನ್ನನ್ನು ಬಂದುನೋಡಿ ಇಲ್ಲಿನ ಸಂದರ್ಭವನ್ನು ತಿಳಿಸಬೇಕೆಂಬ ಕುತುಕವು ಅಸಹ್ಯವಾಗಿದ್ದಾಗ್ಯೂ, ಅಲ್ಲಿನ ಸಂಗತಿಯನ್ನು ತಿಳಿಯಬೇಕಾದುದು ನನ್ನ ಮುಖ್ಯಕರ್ತವ್ಯವಾದುದರಿಂದ ನಾನು ಅಲ್ಲಿಯೇ ನಿಲ್ಲಬೇಕಾಯಿತು. ಇದಲ್ಲದೇ ಆ ಸಮಯದಲ್ಲಿ ನಾನು ಅಲ್ಲಿಂದ ಹಟಾತ್ತಾಗಿ ಹೊರಟು ಬಂದಿದ್ದರೆ ಆ ಮುನಿಗಳಿಗೆ ನನ್ನ ಮೇಲೆ ಮುನಿಸುಬಾರದೇ ಇರುತ್ತಿರಲಿಲ್ಲ. ಇದು ಹಾಗಿರಲಿ, ನೀನು ಹಿಡಿದ ಕೆಲಸವನ್ನು ಸಾಧಿಸದೇ ಬಿಡುವುದಕ್ಕೆ ಕಾರಣವೇನು ?

ಭೈರವಾನನ್ದ:—ಬಾವಾ, ನಾನು ಈಕೆಲಸವು ಸುಸಾಧ್ಯವೆಂದು ತಿಳಿದು ಬುದ್ಧಿಯಿಲ್ಲದೇ ಇದನ್ನು ನಮ್ಮ ಪಾರಪತ್ಯಗಾರನಿಗೆ ವಹಿಸಿದೆನು. ಆ ಮುಟ್ಠಾಳನು ಕಾರ್ಯವನ್ನು ಹಾಳುಮಾಡಿಬಿಟ್ಟನು.

ಭೈರಾಗಿ:—ಅದು ಹೇಗೆ?

ಭೈರವಾನನ್ದ:—ಆ ಹಾಳಾದ ಕಥೆಯನ್ನು ಹೇಳುವುದಕ್ಕೆ ನನಗೀಗ ಮನಬರುವುದಿಲ್ಲ. ಆದುದರಿಂದ ಆ ವಿಷಯವು ಹಾಗಿರಲಿ, ನನ್ನ ಮನಸ್ಸಿಗೆ ಸಮಾಧಾನ ಉಂಟಾದ ಬಳಿಕ ಅದನ್ನೆಲ್ಲಾ ನಿನಗೆ ವಿವರವಾಗಿ ಹೇಳುವೆನು. ಸದ್ಯಕ್ಕೆ ಕೆಟ್ಟುಹೋದ ಕಾರ್ಯವನ್ನು ನೆಟ್ಟಗೆ ಮಾಡಿಕೊಳ್ಳುವ ಪ್ರಯತವನ್ನು ಮಾಡುವ. ಅದುಕಾರಣ ಅಲ್ಲಿನ ಸ್ಥಿತಿ ಹೇಗಿದೆ ಮುಂಚೆ ಹೇಳು.

ಭೈರಾಗಿ:—ಈಕಾರ್ಯಕ್ಕೆ ನಮಗೆ ದೇವರೇ ಸಹಾಯಮಾಡುತ್ತಿರುವನ್ತಿದೆ.

ಭೈರವಾನನ್ದ:—ಅದು ಹೇಗೆ? ಅದು ಹೇಗೆ?

ಭೈರಾಗಿ:—ಆ ರಾಜಕುಮಾರನು ವಿವಾಹಮಾಡಿಕೊಳ್ಳುವುದಕ್ಕೆ ಒಪ್ಪಲಿಲ್ಲ.

ಭೈರವಾನನ್ದ:—ಇದೇನು ಸೋಜಿಗವಾಗಿದೆ. ಕಾರಣವೇನು?

ಭೈರಾಗಿ:—ಅವನು ಭೀಷ್ಮನಂತೆ ಬ್ರಹ್ಮಚಾರಿಯಾಗಿರುತ್ತಾನನ್ತೆ.

ಭೈರವಾನನ್ದ:—ಓಹೋ! ಹಾಗಾದರೆ ನಮ್ಮರೊಟ್ಟಿಯು ತುಪ್ಪದಲ್ಲಿ ಬಿದ್ದಿತು. ಅದಕ್ಕೆ ಕುಶನಾಭರು ಏನನ್ದರು?

ಭೈರಾಗಿ:—ತಮ್ಮ ಮಾತಿಗೆ ಬದಲು ಹೇಳಿದ್ದರಿಂದ ಅವರು ನಕಲಿ ಆ ಪ್ರಸ್ತಾಪವನ್ನೇ ಬಿಟ್ಟುಬಿಟ್ಟರು.

ಭೈರವಾನನ್ದ:—ಹಾಗಾದರೆ, ಈಗ ರವಿವರ್ಮನು ಎಲ್ಲಿರುವನು?

ಭೈರಾಗಿ:—ಅವನು ತನ್ನ ಪಟ್ಟಣಕ್ಕೆ ಇವತ್ತು ಬೆಳಿಗ್ಗೆ ಹೊರಟೇ ಹೋದನು.

ಭೈರವಾನನ್ದ:—ಕುಶನಾಭರು ಮುನ್ದೆ ಏನು ಮಾಡಬೇಕೆಂದಿರುವರು?

ಭೈರಾಗಿ:—ಅವರೂ ಈ ಹೊತ್ತು ಬೆಳಿಗ್ಗೆ ಬದರಿಕಾಶ್ರಮಕ್ಕೆ ಹೊರಟುಹೋದರು.

ಭೈರವಾನನ್ದ:—'ಆಹಾ! ಅದೊಂದು ಒಳ್ಳೆಯ ಕೆಲಸವೇ ಆಯಿತು.' ಕೊಂಚಯೋಚಿಸಿ "ರವಿವರ್ಮನು ಜಗನ್ಮೋಹಿನಿಯನ್ನು ವಿವಾಹಮಾಡಿಕೊಳ್ಳದೇ ಇರುವುದಕ್ಕೆ ಅವನು ಹೇಳಿದಕಾರಣವು ಸಮಂಜಸವಾಗಿಲ್ಲ. ಜಗನ್ಮೋಹಿನಿ ಎಮ್ಬ ಹೆಸರೇ ಜಗನ್ಮೋಹಕವಾಗಿದೆ. ಸ್ವರ್ಗಕ್ಕಿಂತಲೂ ಹೆಚ್ಚಾದ ಆ ಪದ್ಮದ್ವೀಪದ ಆಧಿಪತ್ಯವನ್ನೂ, ಅದಕ್ಕಿಂತಲೂ ಹೆಚ್ಚಾದ ಆ ಸುರಸುನ್ದರಿಯ ಕರಕಮಲವನ್ನೂ ಎನ್ತಹ ಮಹಾಯೋಗಿಯಾದರೂ ತಿರಸ್ಕರಿಸುವನೆ ? ಆ ರಾಜಕುಮಾರನು ಯುವಕರಿಗೆ ಸ್ವಾಭಾವಿಕವಾದ ನಾಚಿಕೆಯಿಂದ ಹಾಗಂದಿರಬಹುದು; ಅದನ್ನು ಆ ವೃದ್ಧ ತಪಸ್ವಿಗಳು ಪರಮಾರ್ಥವೆಂದು ನಮ್ಬಿದರು.

ಭೈರಾಗಿ:—ಅಹುದಹುದು ! ನೀನು ಹೇಳುವುದು ಸರಿಯಾಗಿರುವ ಹಾಗೆ ಕಾಣುತ್ತದೆ. ಆದೇತಕ್ಕೆನ್ನುವಿಯೋ, ಇನ್ದು ಬೆಳಿಗ್ಗೆ ಆ ರವಿವರ್ಮನು ಆಶ್ರಮದಿಂದ ಹಿಂದಿರುಗಿ ಹೋಗುವಾಗ ಬಹಳ ವ್ಯಾಕುಲಿತನಾಗಿದ್ದಹಾಗೆ ಕಾಣಿಸಿದನು.

ಭೈರವಾನನ್ದ:—ಈಗಲೀಗ ನಮ್ಮ ಕಾರ್ಯಕ್ಕೆ ಕೇಡು ಮೊಳೆ

ಯಿತು. ಇನ್ನು ಕಾಲವನ್ನು ಕಳೆಯದೇ ಹಿಡದ ಕಾರ್ಯವನ್ನು ಸಾಧಿಸುವುದಕ್ಕೆ ತಕ್ಕಪ್ರಯತ್ನವನ್ನು ಮಾಡಬೇಕು.

ಬೈರಾಗಿ:—ಉಗರಿನಿಂದ ಆಗುವ ಕಾರ್ಯಕ್ಕೆ ಚಂದ್ರಾಯುಧವನ್ನು ತೆಗೆಯಬೇಕಾಯಿತು! ಸಮಯ ಒದಗಿದಾಗ ಶ್ರಮಪಟ್ಟು ಸಾಧಿಸದೇ ಬಿಟ್ಟ ಕೆಲಸವು ಕೈಗೂಡುವುದು ಕಷ್ಟ.

ಭೈರವಾನನ್ದ:—ಚಂದ್ರಾಯುಧದಿಂದ ಆಗುವ ಕಾರ್ಯದಲ್ಲಿದ್ದ ಉತ್ಸಾಹವು ಬೈರವಾನಂದನಿಗೆ ಮಾತ್ರವುದರಲ್ಲಿಯೂ ಇಲ್ಲ. ಹಿಡದ ಕಾರ್ಯವನ್ನು ನಾನು ಎಂದಿಗೂ ಸಾಧಿಸದೇ ಬಿಡುವುದಿಲ್ಲ. ಬೇಕಾದರೆ, ಮೂರುಗಳಿಗೆಯಲ್ಲಿ ಪದ್ಮದ್ವೀಪವನ್ನು ಸೂರೆಗೊಂಡು ಆ ಜಗನ್ಮೋಹಿನಿಯನ್ನು ಸಾಗಿಸಿಕೊಂಡು ಬರಲಾಪೆನು. ಆದರೆ ಈ ಸರಸವಾದ ಕಾರ್ಯವು ವಿರಸವಾಗಿ ಹೋಗುವುದೆಂದು ಹಿಂಜರಿಯುತ್ತೇನೆ. ಬರೆಮಾತಿನಿಂದ ಫಲವೇನು ? ನಡೆ ನಾವಿನ್ನು ಜಾಗ್ರತೆಯಾಗಿ ನಮ್ಮ ಪಾಳೆಯಕ್ಕೆ ಹೋಗಿ ಕಾರ್ಯನಿರ್ವಾಹಕ್ಕೆ ತಕ್ಕ ಯೋಚನೆಯನ್ನು ಮಾಡುವ, ಎನ್ದು ಹಿಂದಿರುಗಿದನು.

ಬೈರಾಗಿಯೂ ಹಿಂದೆಯೇ ಹೊರಟನು.

——o——

## ಹನ್ನೊಂದನೆಯ ಪ್ರಕರಣ.

### ಸ್ವ ಪ್ನಾ ರ್ಥ ನಿ ರ್ಣ ಯ .

ಸೂರ್ಯೋದಯಕಾಲ—ಈ ಕಾಲದಲ್ಲಿ ಪದ್ಮದ್ವೀಪದ ಪ್ರಾಸಾದಗಳಮೇಲು ಮಾಳಿಗೆಯಮೇಲೆ ನಿಂತು ಸುತ್ತಮುತ್ತಲೂ ನಡೆಯುತ್ತಿರುವ ಭಗವನ್ತನ ಜಗದ್ವ್ಯಾಪಾರ ಕ್ರಮದ ಲೇಶಮಾತ್ರವನ್ನು ನೋಡುವ

ಎಂತಹ ನಾಸ್ತಿಕರಿಗಾದರೂ ಆಸ್ತಿಕ್ಯ ಬುದ್ಧಿಯುಂಟಾಗದೇ ಇರದು: ಸಮುದ್ರ ಮಧ್ಯದಲ್ಲಿ, ಒಂದು ಕಡೆ ಬಡಬಾಗ್ನಿಯ ಶಿಖೆಯೋ, ಜ್ವಾಲಾಮುಖಿಯೋ ಎನ್ನುವಂತೆ ಉದಯೋನ್ಮುಖನಾದ ಸೂರ್ಯನು ಕಾಣುತ್ತಿದ್ದನು. ಮತ್ತೊಂದುಕಡೆ, ಅಸ್ತೋನ್ಮುಖನಾದ ಚಂದ್ರನು ಕಂದಿ, ಕುಂದಿ, ಕಳೆಗೆಟ್ಟು ತರಂಗಗಳಮೇಲೆ ನೊರೆಯಂತೆ ತೇಲಾಡುತ್ತಿದ್ದನು. ಸಮುದ್ರದಿಂದ ಏಳುತ್ತಿದ್ದ ಆವಿಯು ಧೂಮಸ್ತೋಮದಂತೆ ಆಕಾಶವನ್ನು ಆವರಿಸುತ್ತಿದ್ದಿತು. ರಾತ್ರಿ, ಸೀತರಶ್ಮಿಗಳ ಸಂಬಂಧದಿಂದ ಉಕ್ಕಿ ಸೊಕ್ಕಿ, ಸಾಕಾಗಿ ಸೌಮ್ಯವಾಗಿದ್ದ ಸಮುದ್ರದ ಅಲೆಗಳಮೇಲೆ ಅರುಣ ಕಿರುಣಗಳು ಆಲುತ್ತಿದ್ದುವು. ಸುತ್ತಮುತ್ತಲೂ ಹೇರಳವಾಗಿದ್ದ ಕಬ್ಬಿನ ತೋಟಗಳಲ್ಲಿ ಇಬ್ಬನಿಯಿಂದ ಮುಚ್ಚಲ್ಪಟ್ಟಿದ್ದ ಕಬ್ಬಿನ ಗರಿಗಳು ಪಟ್ಟಣದ ಸುತ್ತಲೂ ದಟ್ಟಯಿಸಿದ್ದ ಪದಾತಿಗಳ ಒರೆಗಳಚಿದಕತ್ತಿಗಳಂತೆ ಎಳಬಿಸಿಲಿನಲ್ಲಿ ಥಳಥಳಿಸುತ್ತಿದ್ದುವು.

ಅಷ್ಟುಹೊತ್ತಿಗಾಗಲೆ ಪಟ್ಟಣದ ಪಂಚಖಾತೆಯವರು ರಾಜಬೀದಿಗಳನ್ನೆಲ್ಲಾ ಚೊಕ್ಕಟವಾಗಿ ಗುಡಿಸಿ ಧೂಳಡಗುವಂತೆ ನೀರು ಚಲ್ಲಿಸುತ್ತಿದ್ದರು. ಪೌರನಾರಿಯರು ತಮ್ಮ ತಮ್ಮ ಮನೆಗಳ ಬಾಗಿಲುಗಳ ಮುಂದುಗಡೆ ಸೆಗಣಿನೀರು ಚಲ್ಲಿ ಸಾರಿಸಿ ವಿಚಿತ್ರಕರವಾದ ರಂಗವಲ್ಲಿಗಳನ್ನು ಹಾಕುತ್ತಿದ್ದರು. ಪ್ರಯಾಣಿಕರ ಟಪ್ಪಾಲುಗಾಡಿಗಳು ಅಲ್ಲಲ್ಲಿ ಧಡಧಡನೆ ಓಡಾಡುತ್ತಿದ್ದುವು.

ಅರಮನೆಯಲ್ಲಿ ಹಗಲು ಚಾಕರಿಯ ಆಳುಗಳು ಆಗಲೇ ಬಂದು ಕಿಟಕಿಗಳ ಬಾಗಿಲುಗಳನ್ನು ತೆಗದು ಕನ್ನಡಿಯ ಕದಗಳ ಮೇಲಣ ಧೂಳಿಯನ್ನು ಕರವಸ್ತ್ರಗಳಿಂದ ಒರಿಸುತ್ತಿದ್ದರು. ಮಹಾದ್ವಾರದ ಮುಂದುಗಡೆಯ ಉದ್ಯಾನದಲ್ಲಿ ಮಾಲಿಗಳು ಚಿತ್ರವಿಚಿತ್ರಗಳಾದ ನಾನಾ

ಬಗೆಯ ಹೂವಿನ ಗಿಡಗಳಿಗೆ ಹೂಜಿಗಳಿಂದ ನೀರೆರೆಯುತಿದ್ದರು.

ಈವೇಳೆಯಲ್ಲಿ ರಾಣಿವಾಸದ ಪರಿಚಾರಿಕೆಯರು ಒಬ್ಬೊಬ್ಬರಾಗಿ ಹೊರಹೊರಟು ಅಲ್ಲಲ್ಲಿ ಮರೆಮರೆಯಾಗಿ ನಿಂತು ಗುಸುಗುಸನೆ ಏನೋ ಮಾತನಾಡಿಕೊಳ್ಳುತಿದ್ದರು.

ಅಷ್ಟರಲ್ಲಿ ಮಹಾರಾಣಿಯ ಖಾಸಾ ಪರಿವಾರದವರಲ್ಲಿ ಒಬ್ಬಳು ಉಪ್ಪರಿಗೆಯ ಸೋಪಾನಮಾರ್ಗದಿಂದ ಸರಸರನೆ ಕೆಳಕ್ಕೆ ಇಳಿದು ಮಹಾದ್ವಾರದ ಹತ್ತಿರಕ್ಕೆ ಬಂದಳು.

ಅಲ್ಲಿ ಗುಂಪುಗಟ್ಟಿಕೊಂಡು ಮಾತನಾಡುತಿದ್ದ ಪರಿಚಾರಿಕೆಯರು ಅವಳನ್ನು ಕಂಡು ತಟ್ಟನೆ ಮುಂದರಿದು ಅವಳ ಹತ್ತಿರಕ್ಕೆ ಹೋಗಿ ಕೌತುಕದಿಂದ, 'ಎಲೇ, ಮನ್ದಾರಿಕೆ, ಅದೇನೇ ನೀನಿಂದು ಕಣ್ಣೆದಿರಿಗೆ ನಿಂತಿರುವ ನಮ್ಮನ್ನು ಕಂಡೂ ಕಾಣದಹಾಗೆ ಮಾತನಾಡದೆ ಹೋಗುತ್ತಿರುವೆ ? ಕೊಂಚ ನಿಲ್ಲಬಾರದೆ ? ' ಎಂದರು.

ಮನ್ದಾರಿಕೆ:— ಅವರನ್ನು ಕಣ್ಣೆತ್ತಿ ಕೂಡಾ ನೋಡದೇ, " ಕೊಂಚತಾಳಿ; ಕೊಂಚತಾಳಿ " ಎಂಬಂತೆ ಎಡಗೈಯಿಂದ ಸೈಗೆಮಾಡಿ, ನಡಾಕಟ್ಟಿಕೊಂಡು ನಿಂತಿದ್ದ ಕಂಚುಕಿಯನ್ನು ನೋಡಿ, " ಎಲೈ, ನೀನು ಜಾಗರ್ರ್ತೆಯಾಗಿ ಅರಮನೆಯ ಕುದುರೆಯ ಗಾಡಿಯನ್ನು ಕಟ್ಟಿಸಿಕೊಂಡು ಹೋಗಿ, ನಮ್ಮ ಮಂತ್ರಿಯ ಹೆಂಡತಿಯಾದ ಚಿತ್ರಲೇಖೆಯನ್ನು ಮಹಾರಾಣಿಯ ಅಪ್ಪಣೆಯಾಗಿದೆ ಎಂದು ಹೇಳಿ, ಕರದುಕೊಂಡು ಬಾ " ಎನ್ದು ಹೇಳಿ ಹಿಂದಿರುಗಿ ಹೋಗುತ್ತಿದ್ದ ಮನ್ದಾರಿಕೆಯನ್ನು ಆಹೆಂಗಸರು ಕೈಹಿಡಿದು ನಿಲ್ಲಿಸಿ, ವಿಶೇಷವರ್ತಮಾನವೇನು ? ಎನ್ದು ಕೇಳಿದರು.

ಮನ್ದಾರಿಕೆ:—ಅಯ್ಯೋ! ಏನುಹೇಳಲಿ ! ನಮ್ಮ ಮಹಾರಾಜ

ಣಿಯು ಇನ್ನು ಬೆಳಗಿನ ಜಾವದಿಂದ ಒಂದು ಮಾದರಿಯಾಗಿದಾಳೆ. ಆದುದರಿಂದ, ನಮಗೆ ಒಂದೂ ತೋಚದೆ ಕೈಕಾಲಾಡುವುದಿಲ್ಲ.

ಪರಿಚಾರಿಕೆಯರಲ್ಲಿ ಒಬ್ಬಳು.—ಒಂದು ಮಾದರಿಯೆಂದರೇನು? ಜ್ವರವೋ? ಚಳಿಯೋ?

ಮಂದಾರಿಕೆ.—ಅಯ್ಯೋ! ಜ್ವರವೂ ಇಲ್ಲ; ಚಳಿಯೂ ಇಲ್ಲ; ಸರ್ವಸಾದಾರಣವಾಗಿ ಜ್ವರ ಚಳಿ ಬಂದಿದ್ದರೆ, ಇಷ್ಟು ಕಳವಳ ಪಡ ಬೇಕೇ? ಕೂತಕಡೆ ಕೂಡದೆ ನಿಂತಕಡೆ ನಿಲ್ಲದೆ ಹುಚ್ಚುಹಿಡಿದವಳಂತೆ ಹಲುಬಿಕೊಳ್ಳುತ್ತಾ ಕಣ್ಣುಮುಚ್ಚಾಟದ ಹುಡುಗಿಯಂತೆ ಮನೆಮೂರು ಸುತ್ತಲೂ ಹುಡುಕಾಡಿ ಕಕ್ಕಾಬಿಕ್ಕಿಯಾಗಿ ದಿಕ್ಕುಗಳನ್ನು ನೋಡಿ ಸೂ ಯ್ಯಲದಸೂನಿ ಮರಳಿ ಮಂಚದಮೇಲೇರಿ ಕುಳಿತು ಕಣ್ಣೀರನ್ನು ಕಾಲು ವೆಯಾಗಿ ಸುರಿಸುವಳು. ಒಂದೊಂದು ವೇಳೆ ಇದ್ದವಳು ಇದ್ದಹಾ ಗೆಯೇ ಎದ್ದು ಹೋಗಿ ಸುತ್ತಮುತ್ತಲ ಕಿಟಕಿಗಳನ್ನು ತೆಗೆದು ಅತ್ತಿತ್ತ ತೊಂಗಿನೋಡಿ ತಟ್ಟನೆ ಹಿಂದಿರುಗಿ ಅಲ್ಲಿದ್ದ ದಾಸಿಯರನ್ನು ಕುರಿತು "ಎಲೇ, ರಾತ್ರಿ ನೀವೆಲ್ಲರೂ ಎಲ್ಲಿದ್ದಿರಿ? ನಾನು ಹೋಗಿದ್ದುದೆಲ್ಲಿಗೆ? ಇಲ್ಲಿಗೆ ಬಂದಿದ್ದವರಾರು? ಇಲ್ಲಿದ್ದ ಮಂಚಿಕೆಯೆಲ್ಲಿ? ಇಲ್ಲಿ ರಾತ್ರಿ ಮತ್ತಾರು ಮಲಗಿದ್ದರು" ಎಂದು ಉತ್ತರಕ್ಕೆ ಕಿವಿಗೊಡದೇ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಮಾಡುವಳು. ಆರಾದರೂ ಧೈರ್ಯಗೊಂಡು ಉತ್ತರ ವನ್ನು ಒತ್ತಿಹೇಳಿದರೆ ಅವರನ್ನು ಕಡುಕೋಪದಿಂದ, "ಛೆ! ಛೇ!! ತಿಳಿಗೇಡಿ. ಪ್ರತ್ಯಕ್ಷಾಪಲಾಪವನ್ನು ಮಾಡುತ್ತಾ ನನ್ನಿದಿರಿಗೆ ನಿಲ್ಲಬೇಡ ನಡೆ." ಎಂದು ಗದರಿಸುವಳು. ಏನೋ ದೈವಯೋಗದಿಂದ ಈಗತಾನೆ ಕೊಂಚ ಶಾನ್ತಮನಸ್ಕಳಾಗಿ ನನ್ನನ್ನು ಎನ್ನಿದನಂತೆ ಕೂಗಿ, "ಎಲೈ, ಚಿತ್ರ ಲೇಖೆಯನ್ನು ಜಾಗ್ರತೆಯಾಗಿ ಕರೆಯ ಕಳುಹಿಸು" ಎನ್ನು ಬೆಸಸಿ ದಳು. ಆದುದರಿಂದಲೇ ನಾನಿಷ್ಟು ಆತುರಪಡುತ್ತಿರುವೆನು.

ಮತ್ತೊಬ್ಬ ಪರಿಚಾರಿಕೆ.—ಕೊಂಚ ಮುಂದಕ್ಕೆ ಬಂದು ಅತ್ತಿತ್ತ ನೋಡಿ ಮೆತ್ತಗೆ, "ನೀವು ಏನಾದರೂ ಹೇಳಿ; ಅದೇನೋ ನನಗೆ ಗೃಹಚೇಷ್ಟೆಯಾಗಿ ಕಾಣುತ್ತದೆ. ಮೊನ್ನೆ ನಮ್ಮ ಸುಮಿತ್ರೆಯ ಮಗಳಾದ ತಾರೆಗೆ ಹೀಗೆಯೇ ಆಗಿರಲಿಲ್ಲವೆ? ಅದಕ್ಕೆ ಬನ್ದಬನ್ದ ಮಹಾ ವೈದ್ಯರೆಲ್ಲರೂ ಒಂದೊಂದು ಹೆಸರಿಟ್ಟು ಕಣ್ದ ಕಣ್ದ ಮದ್ದುಗಳನ್ನೆಲ್ಲಾ ಮಾಡಿದರು. ಯಾವುದರಿಂದಲೂ ಎಳ್ಳಷ್ಟೂ ಗುಣವಾಗಲಿಲ್ಲ. ಕಡೆಗೆ ಯಾರೋ ಒಬ್ಬ ಮಂತ್ರವಾದಿಯು ಒಂದು ವಾರದ ವರೆಗೂ ದಿನ ಕ್ಕೊನ್ದು ವಿಧವಾದ ಪೂಜೆಯನ್ನು ಹಾಕಿ ಯಂತ್ರವನ್ನು ಕಟ್ಟಿದ ಮೇಲೆ ಕೊಂಚ ಲಘುವಾಯಿತು. ಅಂಥವರನ್ನು ಯಾರನ್ನಾದರೂ ಜಾ ಗ್ರತೆಯಾಗಿ ಕರದುಕೊಂಡು ಬಂದು ತೋರಿಸಬೇಕು.

ಮತ್ತೊಬ್ಬಳು:—ಚಿಕ್ಕಪ್ರಾಯದ ಹೆಂಗಸರು ಮೂರು ಸಂಜೆ ಯವೇಳೆಯಲ್ಲಿ ಗಿಡಗಳ ಕೆಳಗೂ, ಮರಗಳ ಕೆಳಗೂ ತೋಟ ತೊಡವುಗ ಳಲ್ಲಿ ಓಡಾಡಬಾರದು. ನಮ್ಮ ಮಹಾರಾಣಿಯು ಅಂಥಾ ಹೊತ್ತಿನ ಲ್ಲಿಯೇ ಪ್ರತಿನಿತ್ಯವೂ ಉದ್ಯಾನದಲ್ಲಿ ಓಡಾಡುತಾಳೆ. ಅಂಥಾ ಹೊತ್ತಿ ನಲ್ಲಿ ನಮ್ಮಂತವರು ಏನಾದರೂ ಹೇಳಿದರೆ ಅವರಮೇಲೆ ಆಗ್ರಹ ಮಾಡು ತ್ತಾಳೆ; ಈಗತಾನೆ ಅದರ ಫಲ ಗೊತ್ತಾಗಬೇಕು.

ಮತ್ತೊಬ್ಬಳು:—ಸಿಟ್ಟುಗೊಂಡು, 'ಈ ಮುದುಕಿಯ ಬಾಯಿ ಸುಮ್ಮನಿರುವುದಿಲ್ಲ; ಬಾಯಿಗೆ ಬಂದದ್ದನ್ನೆಲ್ಲಾ ಬೊಗಳುತ್ತಾಳೆ. ಇದು ನುತ್ತಾರ ಕಿವಿಗಾದರೂ ಬಿದ್ದರೆ, ನಮ್ಮೆಲ್ಲರಿಗೂ ಒಟ್ಟಿಗೆ ಅರ್ಧಚಂದ್ರ ಪ್ರಯೋಗವಾಗುತ್ತದೆ.

ಮನುದೊಬ್ಬಳು.—ಅಯ್ಯೋ ನಿಮಗೊಂದು ಹುಚ್ಚು ; ಕೆಂ

ಡಕ್ಕೆ ಇರುವೆ ಮುತ್ತುವುದೆಲ್ಲಾದರೂ ಉಂಟೆ ? ತಪೋನಿಷ್ಠಳಾದ ಋಷಿ ಕುಮಾರಿಯ ಗಾಳಿಗೆ ಯಾವ ಗೃಹತಾನೆ ನಿಂತೀತು ?

ಅವರು ಈ ರೀತಿಯಾಗಿ ಮಾತನಾಡಿಕೊಳ್ಳುತ್ತಿರುವಾಗ ಗಾಡಿಯ ಕುದುರೆಗಳ ಖುರಪುಟದ ಶಬ್ದವು ಕೇಳಬಂದಿತು. ಅದನ್ನು ಅವರು ಆಲಿಸಿ, "ಚಿತ್ರಲೇಖೆಯು ಆಗಲೇಬಂದುಬಿಟ್ಟಹಾಗಿದೆ." ಎಂದು ಪ್ರಾಕಾರದ ಬಾಗಿಲಕಡೆಗೆ ನೋಡುವಷ್ಟರಲ್ಲಿ, ನಾಲ್ಕುಕುದುರೆಯ ಗಾಡಿಯೊಂದು ಅರಮನೆಯ ಮುಖಮಂಟಪದೊಳಕ್ಕೆ ಅತಿವೇಗದಿಂದ ಬಂದು ನಿಂತಿತು.

ಕೂಡಲೇ ಪಡಸಾಲೆಯಲ್ಲಿದ್ದ ದೌವಾರಿಕರು ಆ ಗಾಡಿಯ ಬಾಗಿ ಲನ್ನು ತೆಗೆದರು. ಒಡನೆಯೇ ಚಿತ್ರಲೇಖೆಯು ಗಾಡಿಯಿಂದ ಕೆಳಕ್ಕೆ ಇಳಿದು ಸಡಗರದಿಂದ ನೆಟ್ಟಗೆ ಉಪ್ಪರಿಗೆಯ ಸೋಪಾನಗಳನ್ನು ಹತ್ತಿ ಹೊರಟಳು.

ಅಲ್ಲಿ ಮಹಾರಾಣಿಯ ಶಯ್ಯಾಗೃಹದ ಬಾಗಿಲಲ್ಲಿದ್ದ ದಾಸಿಯು ಚಿತ್ರಲೇಖೆಯ ಮೊಗವನ್ನು ನೋಡಿದಕೂಡಲೇ ಅವಳ ಆಗಮನವನ್ನು, ಯಥಾವಿಧಿಯಾಗಿ ಮಹಾರಾಣಿಗೆ ಅರಿಕೆಮಾಡಲು ಒಳಕ್ಕೆಹೋದಳು. ಚಿತ್ರಲೇಖೆಯು ಅಪ್ಪಣೆಯನ್ನು ನಿರೀಕ್ಷಿಸದೇ ನೆಟ್ಟಗೆ ಒಳಕ್ಕೆಹೋದಳು.

ಆ ಸಮಯದಲ್ಲಿ ಜಗನ್ಮೋಹಿನಿಯು ಮಣಿಮಯಮಂಚದ ಮೇಲೆಕಾಲಿಳಿಬಿಟ್ಟುಕೊಂಡು ಕೂತುಕೊಂಡಹಾಗೆಯೇ ಮಂಚದಮೇಲಿನ ಒರಗುದಿಂಬಿನಮೇಲೆ ಮುಖವನ್ನಿಟ್ಟು ಒರಗಿಕೊಂಡು ನಿದ್ರೆಹತ್ತಿದವಳಂತೆ ಮೈಮರತಿದ್ದಳು. ಲವಿಾಯಮಾನವಾದ ಗುಂಗುರು ಗೂದಲಿನಿಂದ ಮುಚ್ಚಲ್ಪಟ್ಟಿದ್ದ ಈಕೆಯ ಮುಖಮಂಡಲವು ಚದರಿದ ಕಾರ್ಮುಗಿಲಿನಿಂದ ಮುಚ್ಚಲ್ಪಟ್ಟಿದ್ದ ಚಂದ್ರಮಂಡಲದಂತೆ ಕಾಣುತ್ತಿದ್ದಿತು.

ಚಿತ್ರಲೇಖೆಯು ಆಕೆಯ ಹತ್ತಿರ ಹೋಗಿನಿಂತು, ಚಿತ್ರಲಿಖಿತ ಪ್ರತಿಮೆಯಂತೆ ಕಾಣುತ್ತಿದ್ದ ಆಕೆಯ ಆಕಾರವನ್ನು ಎವೆಯಿಕ್ಕದೇ ಒದುನಿಮಿಷ ನೋಡುತ್ತನಿಂತು, ಬಳಿಕ ತಟ್ಟನೆಮುಂದರಿದು ಆ ಸುರಸುನ್ದರಿಯ ಹಾರಿಹೋಗಿದ್ದ ಸೀರೆಯ ಸೆರಗನ್ನು ಸರಿಯಾಗಿ ಹೊದಿಸಿ, ಮುಖದಮೇಲೆ ಬಿದ್ದಿದ್ದ ಮುಂಗುರುಳುಗಳನ್ನು ನೇವರಿಸಿ, ಆಗಿನಕಾಲವನ್ನು ಅಧಿಕರಿಸಿ ಮಧುರವಾದ ಒಂದು ಗಾನವನ್ನು ಮಾಡತೊಡಗಿದಳು. ಅದನ್ನು ಕೇಳಿ ಮೋಹಿನಿಯು ಸನ್ಧ್ಯಾಕಾಲದ ಕೆಂದಾವರೆಯನ್ತೆ ಕೆಂಪಾಗಿಯೂ, ಸಂಕುಚಿತವಾಯೂ ಇದ್ದ ಕಣ್ಣುಗಳನ್ನು ಬಿಟ್ಟು ಚಿತ್ರಲೇಖೆಯ ಮುಖವನ್ನು ನೋಡಿ, ತಟ್ಟನೆ ಎದ್ದು ಕುಳಿತು, ಸಿಡಿಮಿಡಿಗೊಂಡು, " ಎಲೇ, ನೀನೀವೇಳೆಯಲ್ಲಿ ಇಲ್ಲಿಗೆ ಬಂದುದೇಕೆ ? " ಎನ್ದು ಗದರಿಸಿ ಕೇಳಿದಳು.

ಚತುರಳಾದ ಚಿತ್ರಲೇಖೆಯು ಮುಖ ವಿಕಾರಗಳಿಂದ ಮೋಹಿನಿಯ ಮನೋಭಾವವನ್ನು ತಿಳಿದು, ಅವಳಮಾತಿಗೆ ರನೆಯುಪ್ಪಾದರೂ ವಿಷಾದಪಡದೇ ಗಂಭೀರವಾಗಿ, "ಒಡತಿಯೇ, ನಾನು ನಿನ್ನ ದಾಸಿಯರಲ್ಲಿ ಒಬ್ಬಳಾಗಿದಾಗ್ಯೂ ಅನನ್ಯಲಭ್ಯವಾದ ನಿನ್ನ ಮೈತ್ರಿಯ ಗೌರಕ್ಕೆ ಪಾತ್ರಳಾಗಿರುವುದರಿಂದ ಈಗಿನ ನಿನ್ನ ಅವಸ್ಥೆಯಲ್ಲಿ ಯಾವಾಗಲೂ ನಿನ್ನನ್ನು ಬಿಟ್ಟು ಅಗಲದೇ ಇರುವುದಕ್ಕೆ ಬಾಧ್ಯತೆಯು ನನಗೆ ಉಂಟು. ಆದುದರಿಂದ ನನ್ನ ಸ್ವಾತಂತ್ರ್ಯವನ್ನು ನೀನು ಕ್ಷಮಿಸಬೇಕು. " ಎಂದಳು.

ಮೋಹಿನಿಯು ಇವಳ ಮಾತುಗಳನ್ನು ಕಿವಿಯಮೇಲೆ ಹಾಕಿಕೊಳ್ಳದೇ, ನಿಟ್ಟುಸುರು ಬಿಟ್ಟು ಆಕಾಶವನ್ನು ನೊಡಿ ಕೈ ಕೈ ಮರಿದುಕೊಳ್ಳುತ್ತಾ, "ಆಹಾ ! ಏನಿದಾಶ್ಚರ್ಯ ! ಒಂದುನಿಮಿಷದಲ್ಲಿ ಸಮು

ಸ್ತುವೂ ಶೂನ್ಯವಾಗಿಹೋಯಿತಲ್ಲಾ ! ಮುನ್ದೇನುಗತಿ ? ಮುಂದೇನು ಗತಿ ? '' ಎಂದು ಪುನಃ ಆ ಒರಗು ದಿಮ್ಬಿನಮೇಲೆ ಪ್ರಜ್ಞೆತಪ್ಪಿದವಳಂತೆ ಬಿದ್ದಳು.

ಮೋಹಿನಿಯು, ಮಂಚದಕೊನೆಗೆ ಕಾಲಿಳಿಬಿಟ್ಟುಕೊಂಡು ಕೂತಿದ್ದುದರಿಂದ, ಈ ಸಮಯದಲ್ಲಿ ಚಿತ್ರಲೇಖೆಯು ಹತ್ತಿರ ಇಲ್ಲದೇಹೋಗಿದ್ದರೆ, ಮಂಚದಿಂದ ಕೆಳಕ್ಕೆ ಬಿದ್ದೇಹೋಗುತ್ತಿದ್ದಳು. ದೈವಯೋಗದಿನ್ದ ಆಕೆಯು ಆ ಅರಿವಿಲ್ಲದ ಅವಸ್ಥೆಯಲ್ಲಿ, ಮಂಚದ ಕೊನೆಯಲ್ಲಿದ್ದ ಒರಗು ದಿಂಬಿನಮೇಲೆ ಬಿದ್ದಳು ; ಕೂಡಲೇ ಆಕೆಯ ಉತ್ತಮಾಂಗವು ಕಚಭಾರದಿಂದ ಕೆಳಕ್ಕೆ ಸೆಳೆಯಲ್ಪಟ್ಟುದರಿಂದ ಅಲ್ಲಿಂದ ಜಾರಿ ಪೂರ್ವಕಾಯದೊಂದಿಗೆ ಅಧೋಮುಖವಾಯಿತು ; ಅಷ್ಟರಲ್ಲಿಯೇ ಚಿತ್ರಲೇಖೆಯು ಆ ಸುಕುಮಾರಿಯನ್ನು ತನ್ನ ನಳಿತೋಳುಗಳಮೇಲೆ ಹಿಡಿದು ಮಂಚದಮೇಲೆ ಸರಿಯಾಗಿ ಮಲಗಿಸಿದಳು. ಮಂಚದ ಆಸರೆ ಅಷ್ಟುಮಟ್ಟಿಗೆ ಇಲ್ಲದೇಹೋಗಿದ್ದರೆ, ಆ ವೇಳೆಯಲ್ಲಿ ಮೋಹಿನಿಯನ್ನು ಅಷ್ಟು ಸುಲಭವಾಗಿ ಎತ್ತಿ ಮಂಚದಮೇಲೆ ಮಲಗಿಸುವುದಕ್ಕೆ ಚಿತ್ರಲೇಖೆಯಿಂದ ಆಗುತ್ತಿರಲಿಲ್ಲ.

ಜಗನ್ಮೋಹಿನಿಯ ಮುಖವು ಬೆವರಿತು ; ಬೆವರಿನ ಹನಿಗಳು ಎಳಬಿಸಲಿನ ಜಳದಲ್ಲಿ ವಿಕಾಸೋನ್ಮುಖವಾದ ಕೆಂದಾವರೆಯಮೇಲಣ ಹಿಮ ತುಂತುರಗಳನ್ತೆ ಕಾಣಬನ್ದುವು ; ಕೆನ್ದಾವರೆಯಂತೆ ಮನೋಹರವಾಗಿದ್ದ ಆಕೆಯ ಮುಖಕಾಂತಿಯು ಒಮ್ಮೆನ್ದೊಮ್ಮೆ ಬಿಳಿದಾವರೆಯನ್ನು ಹೋಲಿತು.

ಚಿತ್ರಲೇಖೆಯು ಮೋಹಿನಿಯ ಸ್ಥಿತಿಯನ್ನು ನೋಡಿ ಆಕೆಯ ಮುಖವನ್ನು ತನ್ನ ಸೀರೆಯ ಶರಗಿನಿಂದ ಒರಸಿ ಗಾಳಿಹಾಕುತ್ತಾ, "ಮೋಹಿನೀ, ಮೋಹಿನೀ, ಅದೇಕೆ ನೀನಿನ್ನು ಇಷ್ಟುಹೊತ್ತಾದರೂ

ಸ್ನಾನಕ್ಕೆ ಏಳಲಿಲ್ಲ? ಏಳು, ಏಳು.'' ಎಂದಳು. ಮೋಹಿನಿಯು ಅದನ್ನು ಕೇಳಿ ತಟ್ಟನೆದ್ದು ಕುಳಿತು, ಚಿತ್ರಲೇಖೆಯ ಮುಖವನ್ನು ನೋಡಿ, 'ಎಲೇ, ನೀನು ಬರುವುದಕ್ಕೆ ಇಷ್ಟು ಹೊತ್ತೇಕಾಯಿತು?' ಎಂದು ಕೇಳಿದಳು.

ಚಿತ್ರಲೇಖೆ:—ರಾಜ್ಞಿಯ ಅಪ್ಪಣೆಯನ್ನು ಕೇಳಿದಕೂಡಲೇ ಹೊರಟುಬಂದೆನು. ಅಷ್ಟು ತ್ವರೆಯಾಗಿ ನನ್ನನ್ನು ಕರೆಯಕಳುಹಿಸಿದ ಕಾರಣವನ್ನು ನಾನು ತಿಳಿಯಬಹುದೇ?

ಮೋಹಿನೀ:—''ಚಿತ್ರಲೇಖೆ, ಕೆಳಗೇಕೆ ನಿಂತಿರುವೆ? ಮಂಚದ ಮೇಲೇರಿ ಕೂಡು ಬಾ.'' ಎಂದು ಅವಳ ಕೈ ಹಿಡಿದು ಸೆಳೆದಳು.

ಚಿತ್ರಲೇಖೆ:— ಕೊಂಚ ಓರೆಯಾಗಿ ನಿಂತು, '' ಒಡತಿಯೇ, ನಿನ್ನ ಪಾದಪೀಠದ ಸಾನ್ನಿಧ್ಯವನ್ನು ಬಿಟ್ಟರೆ, ಈ ನಿನ್ನ ದಾಸಿಗೆ ಮತ್ತಾವುದೂ ಗೌರವಕ್ಕೆಡೆಯಿಲ್ಲ.

ಮೋಹಿನೀ:—ಚಿತ್ರಲೇಖೆಯಾಡಿದ ಮಾತು ಸಮಂಜಸವಾದುದಲ್ಲವೆಂಬ ಭಾವವನ್ನು ವ್ಯಕ್ತಪಡಿಸುವಂತೆ ಮುಗುಳುನಗೆ ನಕ್ಕು, ''ಎಲೇ ನನ್ನ ಪ್ರಾಣಸಖಿಯಾದ ನೀನು ರಾಜಕೀಯ ವ್ಯವಹಾರಗಳಲ್ಲಿ ಮಾತ್ರ ನನ್ನ ವಿಷಯದಲ್ಲಿ ಇಂತಹ ತಾರತಮ್ಯಗಳಿಗೆ ಗಮನಕೊಟ್ಟು ನಡೆದುಕೊಳ್ಳಬೇಕಲ್ಲದೇ ಏಕಾಂತದಲ್ಲಿ ನನ್ನನ್ನು ನೀನು ಸಹೋದರಿಯಂತೆ ಭಾವಿಸಬೇಕೆಂದು ನಾನು ನಿನಗೆ ಅನೇಕ ಸಂದರ್ಭಗಳಲ್ಲಿ ಹೇಳಿದ್ದಾಗ್ಯೂ ನೀನೇಕೆ ಇಷ್ಟು ಸಂಕೋಚಪಡುತ್ತಿರುವೆ? ಇಂತಹ ಸಂದರ್ಭದಲ್ಲಿಯೂ ನೀನು ನಿನ್ನ ಮರ್ಯಾದೆಯನ್ನು ರವಷ್ಟಾದರೂ ಮೀರಿ ನಡೆಯುವುದಿಲ್ಲವಲ್ಲಾ! ನಿನ್ನ ರಾಜಭಕ್ತಿಯು ಅಸಾಧಾರಣವಾದುದು. ಒಳ್ಳೆಯದಿರಲಿ; '' ನೀನೀಗ ಮಂಚದಮೇಲೇರಿ ಕುಳಿತುಕೊ

ಳ್ಳಬೇಕು.'' ಎನ್ದು ನಾನು ನಿನಗೆ ಆಜ್ಞಾಪಿಸಿರುವೆನು : ಇದಕ್ಕೆ ನೀನು ಏನುಹೇಳುವಿಯೋ ನೋಡುವೆನು.

ಆ ಮಹದಾಜ್ಞೆಯನ್ನು ಕೇಳಿದ ಕೂಡಲೇ ಚಿತ್ರಲೇಖೆಯು ಮಂಚದಮೇಲೇರಿ ಜಗನ್ಮೋಹಿನಿಯ ಮಗ್ಗುಲಲ್ಲಿ ಕುಳಿತುಕೊಂಡಳು. ಮಹದಾಜ್ಞೆಗೆ ವಿಧೇಯತೆಯೇ ಪ್ರತ್ಯುತ್ತರ.

ಚಿತ್ರಲೇಖೆಯು ಮಗ್ಗುಲಲ್ಲಿ ಕುಳತುಕೊಂಡ ಕೂಡಲೇ ಜಗನ್ಮೋಹಿನಿಯು ತನ್ನ ನಳಿತೋಳನ್ನು ಅವಳ ಹೆಗಲಮೇಲೆ ಹಾಕಿ ಅವಳನ್ನು ಆಲಿಂಗಿಸಿ, ''ಪ್ರಿಯಸಖಿಯೇ, ಈಗಲೀಗ ನನ್ನ ಮನಸ್ಸು ಕೊಂಚ ಸ್ವಾಸ್ಥ್ಯವನ್ನುಹೊಂದಿತು. 'ಸ್ನೇಹಿತನೊಬ್ಬನಿದ್ದರೆ, ದಿವ್ಯೌಷಧಗಳಿಂದ ಫಲವೇನು ? ' ಎನ್ದು ಹೇಳುವ ಮಹಾಕವಿಯಮಾತು ಈಗಲೀಗ ನನಗೆ ಅನುಭವಕ್ಕೆ ಬನ್ದಿತು. '' ಎನ್ದು ಅವಳ ಎದೆಯಮೇಲೆ ತಲೆಇಟ್ಟು, ನಿಟ್ಟುಸಿರುಬಿಟ್ಟು, ''ಪ್ರಿಯೇ, ಚಿತ್ರಲೇಖೆ, ಈಪ್ರಪಂಚವೆಲ್ಲವೂ ನನಗೆ ಮಾಯಾಮಯವಾಗಿ ಕಾಣುತ್ತಿದೆ. '' ಎನ್ದು ನಿದ್ರೆಹತ್ತಿದವಳಂತೆ ಸುಮ್ಮನಾದಳು.

ಚಿತ್ರಲೇಖೆಯು ಮೋಹಿನಿಯ ಚದರಿಹೋಗಿದ್ದ ಚೂರ್ಣಕುಂತಳವನ್ನು ನೇವರಿಸಿ, ಮುಡಿಗಟ್ಟಿ ತನ್ನ ಎದೆಯಮೇಲೆ ವಿಶ್ರಾಂತವಾಗಿದ್ದ ಅವಳ ಉತ್ತಮಾಂಗವು ಕೆಳಕ್ಕೆ ಜಾರದಂತೆ ಅವಳನ್ನು ತಬ್ಬಿಕೊಣ್ದು, ಮೋಹಿನೀ, ನೀನೀಹೊತ್ತು ಇಷ್ಟು ವ್ಯಾಕುಲಳಾಗಿರುವುದಕ್ಕೆ ಕಾರಣವೇನು ? '' ಎನ್ದು ಕೇಳಿದಳು.

ಮೋಹಿನಿಯ ಕಣ್ಣೀರು ಚಿತ್ರಲೇಖೆಯ ಎದೆಯಮೇಲೆ ಕಾಲುವೆಯಾಗಿ ಹರಿಯಿತು. ಅಳುವ ಶಬ್ದವು ತನ್ದೆಯ ಕಿವಿಗೆಬಿದ್ದರೆ ಬನ್ದು ಹೊಡೆಯುವನೆಮ್ಬ ಭಯದಿಂದ ತಾಯಿಯ ಮೈಯ್ಮೇಲೆ ಬಿದ್ದು ಅಳುವ

ಮುದ್ದು ಮಗುವಿನನ್ತೆ ಮೋಹಿನಿಯು ಬಿಕ್ಕಿಬಿಕ್ಕಿ ಅತ್ತಳು. ಚಿತ್ರಲೇಖೆಯು ಅದನ್ನು ಕೇಳಿ, "ಜಗನ್ಮೋಹಿನೀ, ಇನ್ನು ನೀರೀತಿಯಾಗಿ ಸಂತಾಪ ಪಡುವುದಕ್ಕೆ ಕಾರಣವೇನು ? ಮನೋಗತವಾದ ದುಃಖವು ಆಪ್ತ ಜನರಲ್ಲಿ ಹೇಳಲ್ಪಡುವವರೆಗೂ ವೃದ್ಧಿಯನ್ನುಹೊನ್ದಿ ಕೊನೆಗೆ ಬುದ್ಧಿಯನ್ನು ಕೆಡಿಸುವುದು. ಆದುದರಿಂದ ನೀನಿನ್ನು ತಡಮಾಡದೇ ನಿನ್ನ ಮನೋಗತವನ್ನು ನನ್ನೊಡನೆಹೇಳು." ಎನ್ದಳು.

ಆಗ ರಾಣಿಯು ಎದ್ದು ಕುಳಿತು ತನ್ನ ಶರಗಿನಿನ್ದ ಕಣ್ಣುಗಳನ್ನು ಒರಸಿಕೊಂಡು ಬಾಗಿಲಹತ್ತಿರ ನಿಂತಿದ್ದ ದಾಸಿಯರನ್ನು ನೋಡಿ "ಎಲೇ, ಬಾಗಿಲನ್ನು ಮುಚ್ಚಿಕೊಂಡು ನೀವೆಲ್ಲರೂ ಕೊಂಚ ಹೊತ್ತು ಹೊರಗೆ ನಿಂತಿರಿ." ಎಂದಳು.

ಕೂಡಲೇ, ಅಲ್ಲಿ ಕಿಟಕಿಯ ಕದಗಳ ಮರೆಯಲ್ಲಿಯೂ ಬಾಗಿಲುಗಳ ಮರೆಯಲ್ಲಿಯೂ ಸದ್ದುಮಾಡದೇ ನಿಂತಿದ್ದ ದಾಸಿಯರೆಲ್ಲರೂ ಒಬ್ಬೊಬ್ಬರಾಗಿ ಹೊರಹೊರಟರು. ಬಾಗಿಲುಗಳು ಮುಚ್ಚಲ್ಪಟ್ಟುವು.

ಆಗ ಜಗನ್ಮೋಹಿನಿಯು ಚಿತ್ರಲೇಖೆಯ ಹೆಗಲಮೇಲೆ ಕೈಯಿಟ್ಟು, "ಎಲೇ, ಚಿತ್ರಲೇಖೇ, ನಿನಗಿಂತಲೂ ನನಗೆ ಆಪ್ತರ್ಯ ಮತ್ತಾರೂ ಇಲ್ಲ ; ಆದರೂ ನಿನ್ನಲ್ಲಿಯೂ ಕೂಡ ನನ್ನ ಮನೋಗತವನ್ನು ಒಡೆದುಹೇಳಲು ನನಗೆ ಮನಬಾರದು ; ಹೇಳದೆಇದ್ದರೆ ಯತ್ನವಿಲ್ಲ ; ಏನು ಮಾಡಲಿ ? ಹೇಗೆ ಸಹಿಸಲಿ ? ಒಳ್ಳೆಯದು ! ಏನಾದರೂ ಆಗಲಿ ; ನಾಚಿಕೆಯನ್ನು ಬಿಟ್ಟು ನಿನ್ನೊಡನೆ ಇದ್ದ ಸಂಗತಿಯನ್ನು ಹೇಳುವೆನು ಕೇಳು. ನಿನ್ನೆಯ ರಾತ್ರಿ ಬೆಳಗಿನ ಜಾವದಲ್ಲಿ, ಈ ನನ್ನ ಮಂಚದ ಇದಿರಿನಲ್ಲಿ ಆದರಂತಹ ಮತ್ತೊಂದು ಮಂಚವಿದ್ದಿತು : ಅದರ ಮೇಲಣ ಹಾಸಿಗೆ, ಹೊದಿಗೆ, ಪರದೆ ಮೊದಲಾದುವು ನನ್ನ ಮಂಚದಲ್ಲಿ

ಇರುವಂಥಾವುಗಳ ಹಾಗೆಯೇ ಇದ್ದುವು. ಆ ಮಂಚದಮೇಲೆ,-ನಾನು ಏನೆಂದು ಹೇಳಲಿ ! ಮನ್ಮಥಕೋಟಿ ಸೌಂದರ್ಯಶಾಲಿಯಾದ ಯೌವನಸ್ಥನೊಬ್ಬನು ಮಲಗಿ ಸುಖನಿದ್ರೆಮಾಡುತ್ತಿದ್ದನು. ಆತನ ರೂಪಲಾವಣ್ಯಗಳನ್ನು ಯಾವ ಭಾಷೆಯೂ ಬಣ್ಣಿಸಲಾರದು ಯಾವ ಮಹಾ ಕವಿಯೂ ಅವನನ್ನು ಅತಿಶಯೋಕ್ತಿಯಿಂದ ವರ್ಣಿಸಲಾರನು ; ಅದೇತಕ್ಕೆಂದರೆ, ಆತನ ವರ್ಣನೆಯ ವಿಷಯದಲ್ಲಿ ಅತಿಶಯೋಕ್ತಿಗಳೆಲ್ಲವೂ ಸ್ವಭಾವೋಕ್ತಿಯ ಮೇರೆಯನ್ನು ಮೀರಿ ರೇಖಾಮಾತ್ರವಾದರೂ ಮುಂದರಿಯಲಾರವು. ಆತನನ್ನು ನೋಡಿದಕೂಡಲೆ ನನ್ನ ಮನವು ಮದಿಸಿದ ಆನೆಯಂತೆ ನಿರಂಕುಶವಾಗಿ ಪ್ರವರ್ತಿಸಿತು. ಆಪರಿಯಿಂದ ಚದರಿದ್ದ ನನ್ನ ಮನವನ್ನು ನಾನು ನಿಗ್ರಹಿಸಿಕೊಳ್ಳಲು ಸಾಹಸಪಡುತ್ತಿರುವಾಗ ಆ ಮೋಹನಾಂಗನು ನನ್ನ ಮನವನ್ನು ಸೂರೆಗೊಂಡು ಎತ್ತಲೋ ಮಾಯವಾದನು. ಆತನು ಈ ಪಾಪಿ ಕಣ್ಣಿಗೆ ಅದೃಶ್ಯನಾದುದು ಮೊದಲು ನನ್ನ ಮನದಲ್ಲಿ ಅನಿರ್ವಾಚ್ಯವಾದ ಕುತೂಹಲವು ತಲೆದೋರಿ ಕ್ಷಣೇಕ್ಷಣೇ ವೃದ್ಧಿಯಾಗುತ್ತಲೇ ಇದೆ. ಆತನು ಮಲಗಿದ್ದ ಆ ಮಂಚವೆತ್ತಣದೊ ? ಆತನಾರೋ ? ಆ ಮಂಚವೀಗ ಎಲ್ಲಿಹೋಯಿತೋ ? ಆ ಭುವನಮೋಹನ ನೆತ್ತಪೋದನೊ ? ಇದೇನು ಮಾಯೆಯೋ ? ಮನೋಮೋಹವೊ ? ಇಂದ್ರಜಾಲವೋ ? ಸ್ವಪ್ನವೋ ? ನಾನರಿಯೆ. ಏನಾದರೂ ಆಗಲಿ : ಆ ದಿವ್ಯಪುರುಷನ ತೇಜೋಮಯವಾದ ಬಿಮ್ಬವು ನನ್ನ ಕಣ್ಣಿಗೆ ಕಟ್ಟಿದಹಾಗಿದೆ. ಆತನಿಲ್ಲದ ಈ ಭವನವು ನನ್ನ ಕಣ್ಣಿಗೆ ಭಯಂಕರವಾದ ಅರಣ್ಯದಂತೆ ಕಾಣುತ್ತಿದೆ. ಆತನನ್ನು ನೋಡಿ ಮಾತಾಡುವವರೆಗೂ ನನ್ನ ಮನವು ಸಮಾಧಾನವನ್ನು ಹೊಂದುವುದಿಲ್ಲ. ಇದಕ್ಕೆ ಏನುಮಾಡಲಿ ?'' ಎಂದಳು.

ಚಿತ್ರಲೇಖೆ:—ಮೋಹಿನೀ, ಸಕಲಕಲಾಪ್ರವೀಣಳಾದ ನೀನು ಈ ಸರ್ವಸಾಧಾರಣವಾದ ಸಣ್ಣ ಒಗಟನ್ನು ಒಡೆಯಲಾರದೇ ಇಷ್ಟು ವ್ಯಾಕುಲಳಾಗಿರುವುದು ನೋಡಿದರೆ ಆಶ್ಚರ್ಯವಾಗುತ್ತದೆ. ಓಹೋ! ಸರ್ವಜ್ಞನಿಗೂ ಸ್ವವಿಷಯದಲ್ಲಿ ಸಂಶಯವು ಸಹಜವಾಗಿದೆ. ಆದುದರಿಂದ ನಾನು ನಿನ್ನ ವಿಷಯದಲ್ಲಿ ಆಶ್ಚರ್ಯಪಡಬೇಕಾದುದಿಲ್ಲ. ನಾನು ಈ ನಿನ್ನ ವ್ಯಾಕುಲತೆಗೆ ಏನೋ ಮಹತ್ಕಾರಣವಿರಬಹುದೆಂದು ತಿಳಿದಿದ್ದೆನು. ಇದು ಸರ್ವಸಾಧಾರಣವಾದ ಸ್ವಪ್ನವಲ್ಲದೇ ಬೇರೆಯಲ್ಲ. ಇದಕ್ಕೆ ನೀನಿಷ್ಟು ಕಾತರಪಡಬೇಕೇ ?

ಮೋಹಿನೀ :—ಚಿತ್ರಲೇಖೆಯ ಭಾಷಣದಿಂದ ಕೊಂಚ ಸಮಾಹಿತಚಿತ್ತಳಾಗಿ, " ಲೇಖೇ, ಈ ವಿಷಯವನ್ನು ಸ್ವಪ್ನವೆಂದು ನಿರ್ಧರಿಸುವುದು ಹೇಗೆ ? ಅಂತಹ ವಾಸನೆಯೇ ನನಗಿಲ್ಲವಲ್ಲ ! ಸ್ವಪ್ನವೆಲ್ಲಿಂದ ಬಂತು ? ಮನಸ್ಸಿನವಾಸನೆಯಲ್ಲವೇ ಸ್ವಪ್ನಕ್ಕೆ ಮುಖ್ಯಕಾರಣ ?

ಚಿತ್ರಲೇಖೆ:—ಸ್ವಪ್ನಕ್ಕೆ ವಾಸನೆಯೊಂದೇ ಕಾರಣವಲ್ಲ. ಅದಕ್ಕೆ ಅನೇಕಕಾರಣಗಳಿವೆ. ರಕ್ತಪರಿಚಲನೆಯ ವ್ಯತ್ಯಾಸದಿಂದಲೂ ಅಜೀರ್ಣದಿಂದಲೂ ಸ್ವಪ್ನಗಳಾಗುವುದುಂಟು. ಆದರೆ, ಈ ಕಾರಣಗಳಿಂದ ಉಂಟಾದ ಸ್ವಪ್ನವು ನಿರರ್ಥಕವಾದುದು ; ಶರೀರ ಸಂಬಂಧವಾದ ಕಾರಣಗಳಿಲ್ಲದೆ ಆಗುವ ಸ್ವಪ್ನಗಳು ಸಾಧಾರಣವಾಗಿ ಆಸ್ತಿಕರಾಗಿಯೂ, ಸದಾಚಾರಿಗಳಾಗಿಯೂ, ಭೂತದಯೆಯುಳ್ಳವರಾಗಿಯೂ, ಇರುವ ಸಾಧುಗಳಿಗೆ ಆಗುವುವು. ತತ್ರಾಪಿ, ಅಂತಹ ಸಾರ್ಥಕವಾದ ಸ್ವಪ್ನಗಳು ಎಚ್ಚರವಾದಮೇಲೆ ನೆನಪಿಗೆ ಬರಬೇಕಾದರೆ, ಬಹುಪುಣ್ಯವಿರಬೇಕು. ಇಂತಹ ಸ್ವಪ್ನದಲ್ಲಿ ಭೂತಭವಿಷ್ಯದ್ವರ್ತಮಾನಕಾಲಗಳ ಸಂಗತಿಗಳು ಪ್ರತ್ಯಕ್ಷವಾಗಿ ಕಾಣಬರುವುವು. ಜ್ಞಾನಿಗಳು ಇಂತಹ ಸ್ವಪ್ನಗಳಿಂದ

ತಮಗೆ ಸಂಭವಿಸುವ ಕೇಡುಗಳನ್ನು ತಿಳಿದು ಅವುಗಳನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ತಕ್ಕ ಸಾಧನಧರ್ಮಗಳನ್ನೂ, ಜಪಹೋಮಗಳನ್ನೂ ಮಾಡುತ್ತಾರೆ. ಒಬ್ಬನು ತನ್ನ ನೆರೆಹೊರೆಯವರಿಗಾಗಲೀ, ನೆಂಟರಿಷ್ಟರಿಗಾಗಲೀ ಸಂಭವಿಸುವ ಸಂಪತ್ತುಗಳನ್ನೂ, ವಿಪತ್ತುಗಳನ್ನೂ ಸ್ವಪ್ನದಲ್ಲಿ ಕಾಣುವುದುಂಟು.

ಮೋಹಿನೀ :— ಇದೇನು ಸೋಜಿಗ ! ಒಬ್ಬನು ಮತ್ತೊಬ್ಬರಿಗುಂಟಾಗುವ ಸುಖದುಃಖಗಳನ್ನು ಸ್ವಪ್ನದಲ್ಲಿ ಮುಂದಾಗಿ ಕಾಣುವುದ, ಹೇಗೆ ?

ಚಿತ್ರಲೇಖೆ:—ಜೀವಾತ್ಮನು ಇನ್ದ್ರಿಯಗಳ ಮುಖಾಂತರದಿಂದ ಕೆಲಸಮಾಡುವವರೆಗೂ ಅವನಿಗೆ ಅತೀನ್ದ್ರಿಯ ಪದಾರ್ಥಗಳನ್ನು ನೋಡುವುದಕ್ಕೆ ಚೈತನ್ಯವಿರುವುದಿಲ್ಲ. ನಿದ್ರಾವಸ್ಥೆಯಲ್ಲಿ, ಮರಣಾನಂತರ ಹೇಗೋ ಹಾಗೆ, ಜೀವನು ಇನ್ದ್ರಿಯಗಳನ್ನು ಬಿಟ್ಟಿರುವುದರಿಂದ ಅವನಿಗೆ ಅತೀನ್ದ್ರಿಯವಾದ ಪ್ರಪಂಚವೂ, ಅದರ ವ್ಯಾಪಾರಗಳೂ ಕಾಣಬರುವುವು. ಈ ವಿಷಯವಾಗಿ ಸ್ವಾನುಭವದ ಒಂದು ದೃಷ್ಟಾಂತವನ್ನು ಹೇಳುವೆನು ಕೇಳು. ಕೆಲವು ದಿನಗಳ ಹಿನ್ದೆ ನಾನೊನ್ದು ದಿನ ವೃದ್ಧಳಾದ ನಮ್ಮ ಹತ್ತಮ್ಮನ ಮಗ್ಗುಲಲ್ಲಿ ಮಲಗಿ ನಿದ್ರೆ ಮಾಡುತ್ತಿದ್ದೆನು. ಬೆಳಗಿನಜಾವದ ವೇಳೆಯಲ್ಲಿ, ಆಕೆಯು ಕೆಟ್ಟ ಸ್ವರದಿಂದ ಗಟ್ಟಿಯಾಗಿ ಅತ್ತಳು. ಆ ಶಬ್ದಕ್ಕೆ ನಾನು ಭಯಪಟ್ಟು ಎಚ್ಚರಗೊಂಡು ಆಕೆಯನ್ನು ತಟ್ಟಿ ಎಬ್ಬಿಸಿ ಅಳುವುದೇಕೆಂದು ಕೇಳಿದೆನು. ಅದಕ್ಕೆ, "ಅಯ್ಯೊ ಪಾಪ ! ಎಷ್ಟು ಸಾಹಸಪಟ್ಟರೂ, ಆ ಹುಡುಗಿಯನ್ನು ಈಚೆಗೆ ತರುವುದಕ್ಕೆ ಆಗಲೇ ಇಲ್ಲ, ಒಳಗೇ ಸುಟ್ಟು ಬೂದಿಯಾಗಿಹೋದಳು. ಅವಳ ತಾಯಿ ತನ್ದೆಗಳ ಗೋಳನ್ನು ಕೇಳುವುದಕ್ಕೆ ಆಗುವುದಿಲ್ಲ.' ಎನ್ದಳು.

ಅದಕ್ಕೆ ನಾನು, ಯಾರಾಹುಡುಗಿ? ಇದೇನು ಹೀಗೆ ನಿದ್ರೆಗಣ್ಣಿನಲ್ಲಿ ಅಸಮ್ಬದ್ಧವಾಗಿ ಮಾತನಾಡುತ್ತಿರುವೆ? ನೀನೇನು ಸ್ವಪ್ನವನ್ನು ಕಂಡೆಯೋ?'' ಎನ್ದು ಕೇಳಿದೆನು. ಅದಕ್ಕವಳು, "ಏಳನೆಯ ಪ್ರಾಕಾರದ ಬೀದಿಯಲ್ಲಿರುವ ಚನ್ದ್ರಸೇಖರರಾಯನ ಮನೆಯಲ್ಲಿ ಆತನ ಮಗಳ ಮದುವೆಯಾಯಿತು, ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಭಾರಿ ವಿವಾಹ ಮಂಟಪವನ್ನು ಕಟ್ಟಿಸಿದ್ದನು; ಬಹಳ ವೈಭವದಿನ್ದ ಮದುವೆಯಾಯಿತು; ಸಾವಿರಾರು ಜನ ಬಂಧು ಮಿತ್ರರು ಸೇರಿದ್ದರು; ನಿನ್ನೆ ನಾಕಬಲಿಯಾಯಿತು; ರಾತ್ರಿ ಇನ್ನೂ ಆರ್ತಿ ಅಕ್ಷತೆ, ಹಾಡುಹಸೆ, ನಡೆಯುತ್ತಿರುವಾಗಲೇ, ಆ ಮಂಟಪಕ್ಕೆ ಅಕಸ್ಮಾತ್ತಾಗಿ ಬೆಂಕಿಬಿದ್ದುಹೋಯಿತು; ಅದನ್ನು ಆರಿಸಬೇಕೆಂದು ಕೇರಿಯ ಜನರೆಲ್ಲರೂ ಸೇರಿ ಎಷ್ಟೋ ಸಾಹಸಪಟ್ಟರು; ಏನೂಪ್ರಯೋಜನವಾಗಲಿಲ್ಲ. ಅಯ್ಯೋ! ಮದವಣಿಗನು ಅದರೊಳಗೆಸಿಕ್ಕಿಸುಟ್ಟುಬೂದಿಯಾಗಿಹೋದನು. ದೇವರ ದಯದಿಂದ ಮತ್ತಾರಿಗೂ ಏನೂ ಅಪಾಯವಾಗಲಿಲ್ಲ. ಕೋಟ್ಯಾಂತರ ರೂಪಾಯಿಗಳ ಸಾಮಾನೂ, ಸರಂಜಾಮುಗಳೂ ಸುಟ್ಟುಹೋದವು. ಯಾವುದುಹೋದರೂ ಏನೂಚಿಂತೆಯಿಲ್ಲ; ವರನುಹೋದುದೀಗ ಬಹಳ ಶೋಚನೀಯವಾಗಿದೆ.'' ಎಂದಳು. ಅದಕ್ಕೆನಾನು "ಶಾನ್ತಂಪಾಪಮ್! ಶಾನ್ತಂಪಾಪಮ್!! ಛೇ! ಛೇ!! ಅವರ ಮನೆಯಲ್ಲಿ ಮದುವೆಎಲ್ಲಾಯಿತು? ನಾಳೆ ಮಾಘ ಶದ್ಧದಲ್ಲಿ ಮದುವೆಮಾಡಬೇಕೆಂದು ಯೋಚಿಸಿಕೊಂಡಿರುವರು. ಏಳು! ಏಳು!! ನಿನಗೆ ಸ್ವಪ್ನವಾಯಿತು.'' ಎಂದೆನು. ಅದಕ್ಕೆ ಆ ಮುದುಕಿಯು ಮುಸುಗುತೆಗೆದುನೋಡಿ "ಅಯ್ಯೋ! ನಾನೆಂತ ಹಕೆಟ್ಟಸ್ವಪ್ನವನ್ನು ಕಂಡೆನು! ಆ ಉತ್ಪಾತವನ್ನು ಈಗ ತಾನೆ ಪ್ರತ್ಯಕ್ಷವಾಗಿ ನೋಡಿಬಂದಹಾಗಿದೆಯಲ್ಲಾ!" ಎಂದು ನನ್ನನ್ನು ಕೂಗಿ ಹೊತ್ತೆ

ಪ್ನಾಗಿದೆ ಎಂದು ಕೇಳಿದಳು. ನಾನದಕ್ಕೆ, "ಬೆಳಗಿನಜಾವವಾಯಿತು ; ಆಗಲೇ ಮುಂಗೋಳಿ ಕೂಗಿತು." ಎಂದೆನು. ಅದನ್ನು ಕೇಳಿ ವೃದ್ಧಳು ಕೊಂಚಹೊತ್ತು ಸುಮ್ಮನಿದ್ದು, ನಿಟ್ಟುಸಿರುಬಿಟ್ಟು, "ಅಯ್ಯೊ! ಆ ಹುಡುಗಿಯ ಹಣೆಯಲ್ಲಿ ಏನು ಬರೆದಿದೆಯೋ! ದೇವರು ಆ ವಧೂವರರಿಗೆ ಮಂಗಳವನ್ನು ಮಾಡಲಿ!" ಎಂದು ಎಂದಿನಂತೆ, ದೇವರ ನಾಮವನ್ನು ಉಚ್ಚಾರಮಾಡುತ್ತಾ ಎದ್ದು ಸ್ನಾನಕ್ಕೆ ಹೊರಟು ಹೋದಳು. ಅವಳಾಡಿದ ಮಾತನ್ನು ಕೇಳಿ ಅವಳನ್ನು ಆ ಸ್ವಪ್ನದ ಫಲವನ್ನು ಕೇಳಿ ತಿಳಿದುಕೊಳ್ಳಬೇಕೆಂದು ನನಗೆ ಕುತೂಹಲ ಉಂಟಾಯಿತು ; ಆದರೂ, ನಿದ್ದೆಗಣ್ಣಿನಲ್ಲಿ ಆ ಕಿವಡು ಮುದುಕಿಯ ಸಂಗಡ ಮಾತನಾಡುವುದಕ್ಕೆ ಬೇಸರಗೊಂಡು ಸುಮ್ಮನಿದ್ದೆನು. ಇದಾದ ಸುಮಾರು ಹದಿನೈದು ದಿನಗಳ ಮೇಲೆ, ನಮ್ಮ ಹೆತ್ತವ್ವೆಯು ಸ್ವಪ್ನದಲ್ಲಿ ಕಂಡಂತೆಯೇ ಆ ಚಂದ್ರಸೇಖರರಾಯನ ಮನೆಯಲ್ಲಿ ಆ ವಿಪತ್ತು ಸಂಭವಿಸಿತು. ಆ ಸಮಾಚಾರವನ್ನು ನಾನು ಒಡನೆಯೇ ನಮ್ಮ ಅಜ್ಜಿಗೆ ತಿಳಿಸಿದೆನು. ಅದಕ್ಕವಳು ಪಶ್ಚಾತ್ತಾಪಪಟ್ಟು, "ಮಗುವೇ, ಇದೇನಾಶ್ಚರ್ಯವಲ್ಲ; ಆ ವೇಳೆಯಲ್ಲಿ ಕಂಡಂತಹ ಸ್ವಪ್ನವು ಬಹುಶಃ ಯಥಾರ್ಥವಾಗದೆ ಇರುವುದಿಲ್ಲ." ಎಂದು ಹೇಳಿದಳು. ಅದರ ಮೇಲೆ ನಾನು ಪರಿಶೋಧಕ ಬುದ್ಧಿಯಿಂದ ಅವಳೊಡನೆ ಚರ್ಚೆಮಾಡಲು ಅವಳು ಅಂತಹ ಯಥಾರ್ಥವಾದ ಸ್ವಪ್ನಗಳ ಅನೇಕ ನಿದರ್ಶನಗಳನ್ನು ಹೇಳಿದಳು. ಅವುಗಳನ್ನೆಲ್ಲಾ ನಾನು ನಿನಗೆ ಮತ್ತೊಂದು ತಡವೆ ವಿನೋದವಾಗಿ ಹೇಳುವೆನು.

ಮೋಹಿನಿ:— ಎಲೆ ಚಿತ್ರಲೇಖೇ, ಹಾಗಾದರೆ, ನನ್ನ ಈ ಸ್ವಪ್ನವು ಏನನ್ನು ಸೂಚಿಸಿರುತ್ತದೆ?

ಚಿತ್ರಲೇಖೆ:— ಒಡತಿಯೇ, ಇಂತಹ ಸ್ವಪ್ನಗಳ ವಿವರಣೆಯನ್ನು

ಜ್ಞಾನವೃದ್ಧರಾಗಿಯೂ, ವಯೋವೃದ್ಧರಾಗಿಯೂ ಇರುವವರಿಂದ ತಿಳಿದು ಕೊಳ್ಳಬೇಕು; ಏಕೆಂದರೆ, ಪ್ರಾಯಶಃ ಸ್ವಪ್ನಗಳು ಸಾಂಕೇತಿಕಗಳಾಗಿಯೇ ಇರುವುವು. ಆ ಸಂಕೇತಗಳಿಗೆ ಸರಿಯಾದ ಅರ್ಥವನ್ನು ಹೇಳಬೇಕಾದರೆ, ಬಹಳ ಅನುಭವವಿರಬೇಕು. ಅದು ಹೇಗೆಂದರೆ, ಸ್ವಪ್ನದಲ್ಲಿ ಸರ್ಪವು ದ್ರವ್ಯಲಾಭಸೂಚಕವೆಂತಲೂ, ಮರಣವು ಆರೋಗ್ಯಸೂಚಕವೆಂತಲೂ, ಕುದುರೆ, ಗಾಡಿ ಮುಂತಾದುವುಗಳು ಮರಣಸೂಚಕವೆಂತಲೂ ಹೀಗೆಯೇ ಅನೇಕ ಪದಾರ್ಥಗಳು ಅನೇಕ ವಿಷಯಗಳನ್ನು ಸೂಚಿಸುತ್ತವೆ ಎಂದು ಹಿರಿಯರು ಹೇಳುತ್ತಾರೆ. ಆದರೆ, ಈ ನಿನ್ನ ಸ್ವಪ್ನವು ಅಂತಹ ಗೂಢವಾದುದಲ್ಲ; ಬಹು ಸ್ಪಷ್ಟವಾಗಿದೆ. ಅದರ ಅರ್ಥವನ್ನು ನಾನೇ ದೃಢವಾಗಿ ಹೇಳುವೆನು ಕೇಳು. ನೀನು ಸ್ವಪ್ನದಲ್ಲಿ ಕಂಡ ಆ ಮಹಾಪುರುಷನು ನಮ್ಮ ಭಾವಮಹಾರಾಜನಲ್ಲದೇ ಬೇರೆ ಯಾರೂ ಅಲ್ಲ.

ಈ ಮಾತುಗಳು ಮೋಹಿನಿಯ ಕಿವಿಯಮೇಲೆ ಬಿದ್ದ ಕೂಡಲೇ, ನಿಸ್ತೇಜವಾಗಿ ಬಾಡಿ ಬಿಳುಪಾಗಿದ್ದ ಅವಳ ಕಪೋಲಗಳು ಕೆಂಪೇರಿದುವು; ಮೊಬ್ಬಾಗಿದ್ದ, ಇಂದೀವರದಳಗಳಂತೆ ಸುಂದರವಾಗಿದ್ದ ಅವಳ ಕಣ್ಣುಗಳ ಸ್ವಾಭಾವಿಕವಾದ ಚಾಂಚಲ್ಯವು ಎಚ್ಚರಗೊಂಡಿತು; ಸುಂದರವಾದ ಅವಳ ಚಂದುಟಿಗಳ ಹಿಂದುಗಡೆ ಅಡಗಿದ್ದ ಮಂದಹಾಸದ ಛಾಯೆಯು ಕುಂದಕುಟ್ಮಲಗಳಂತೆ ಅಂದವಾಗಿದ್ದ ಅವಳ ದಂತಪಙ್ಕ್ತಿಯಮೇಲೆ ಪ್ರತಿಫಲಿತವಾಗಿದ್ದಿತು.

ಮೋಹಿನಿಯು ಈ ವಿಚಾರಗಳನ್ನು ಸಿಥಿಲವಾಗಿದ್ದ ತನ್ನ ಕೇಶಪಾಶದಗಂಟನ್ನು ಬಿಚ್ಚಿ ಜಾಡಿಸಿ ನೇವರಿಸಿ ಮುಡಿಗಟ್ಟಿಕೊಳ್ಳುವುದು ನೆವದಿಂದಲೂ, ಸೀರೆಯ ಸೆರಗನ್ನು ಸರಿಮಾಡಿಕೊಳ್ಳುವ ನೆವದಿಂದಲೂ,

ಅಣಗಿಸಿಕೊಂಡು ಚಿತ್ರಲೇಖೆಯ ಮುಖವನ್ನು ನಿಟ್ಟಿಸಿ ನೋಡುವುದಕ್ಕೆ ಉಂಟಾದ ಲಜ್ಜೆಯನ್ನು ತನ್ನ ಸೀರೆಯ ಶೆರಗಿನ ಕೊನೆಯನ್ನು ನೋಡಿಕೊಳ್ಳುವ ನೆವದಿಂದ ಮರೆಮಾಜಿ, "ಇಷ್ಟು ನಿರ್ಧಾರವಾಗಿ ಹೇಳುವುದಕ್ಕೆ ನಿನಗೆ ಸಾಧಕಪ್ರಮಾಣವೇನಿದೆ?" ಎಂದು ಕೇಳಿದಳು.

ಚಿತ್ರಲೇಖೆ:—ಒಡತಿಯೇ, ಲೋಕಾನುಭವವು, ಅದಕ್ಕೆ ಅನಸಾರವಾದ ಶಾಸ್ತ್ರವು, ಇವೆರಡಕ್ಕಿಂತಲೂ ಬೇರೆ ಪ್ರಮಾಣವಾವುದಿರುವ್ರದು!

ಮೋಹಿನೀ:— ಅದು ಹೇಗೆ?

ಚಿತ್ರಲೇಖೆ:— ಸ್ವಪ್ನದಲ್ಲಿ ನಮ್ಮ ಮಹಾರಾಜನೇ ನಿನ್ನ ಸಮೀಪಕ್ಕೆ ಬಂದಿರಬಹುದು ಅಥವಾ ನೀನಾದರೂ ಆತನ ಸಮೀಪಕ್ಕೆ ಹೋಗಿರಬಹುದು.

ಮೋಹಿನಿ:—ಇದೇನಾಶ್ಚರ್ಯ! ಸಖಿಯೇ, ನಿನ್ನ ಮಾತುಗಳು ನನಗೆ ಗಗನ ಕುಸುಮಮಾಲೆಯ ಪ್ರಸಂಗದಹಾಗೆ ಕಾಣುತ್ತಿದೆ.

ಚಿತ್ರಲೇಖೆ:—ಈ ಸಂಗತಿಯು, ಅಂತಹ ಅಸಂಭವವಲ್ಲ! ನಿನ್ನ ಕರ್ಮಾನುಗುಣವಾಗಿ ಬ್ರಹ್ಮನಿಂದ ನಿನಗಿಂತಲೂ ಮುಂಚಿತವಾಗಿಯೇ ನಿರ್ಮಿಸಲ್ಪಟ್ಟಿರುವ ನಿನ್ನ ಪತಿಯನ್ನು ಮಹಾಯೋಗಿಗಳ ಔರಸಪುತ್ರಿಯಾದ ನೀನು ಲಗ್ನಕಾಲವು ಸಮೀಪಿಸಿದಾಗ ಕನಸಿನಲ್ಲಿ ಕಾಣುವುದು ಏನೋ ಆಶ್ಚರ್ಯವಲ್ಲ.

ಮೋಹಿನಿ:— ಎಲೇ, ಹಾಗಾದರೆ, ನನ್ನ ಮನಸನ್ನು ಸೂರೆಗೊಂಡ ಆ ಸುಂದರಾಂಗನಾರಾಗಿರಬಹುದು? ನಾನು ಸತ್ಯವಾಗಿ ಹೇಳುವೆನು ಕೇಳು; ಆ ತೇಜೋನಿಧಿಯು ಮಾನುಷವಿಗ್ರಹವೆಂದು ಹೇಳುವುದಕ್ಕೆ ಸರ್ವಥಾಆಗುವುದಿಲ್ಲ; ಮಾನವರಿಗೆ ಅಂತಹ ಭುವನಮೋಹಕವಾದ ಸೌಂದರ್ಯವೆತ್ತಣದು?

ಚಿತ್ರಲೇಖೆ:—ಮಹಾರಾಣಿಯೇ, ಮನ್ನಿಸಬೇಕು; ಲೋಕದಲ್ಲಿ ಸರ್ವರೂ ತಮತಮಗೆ ಪ್ರಿಯವಾದ ವಸ್ತುಗಳನ್ನು ಲೋಕೋತ್ತರವಾದುವುಗಳೆಂದು ಅಂದುಕೊಳ್ಳುವುದು ಸಾಜವಾಗಿದೆ. ಭುವನನಿರ್ಮಾಣಕಲಾಕೋವಿದನಾದ ವಿಧಿಯು, ಮನುಷ್ಯಯೋನಿಗಳಿಗೂ ವೈವಾಹಿಕಸಂಬಂಧವನ್ನು ಎಂದಿಗೂ ವಿಧಿಸುವುದಿಲ್ಲ. ಆದುದರಿಂದ ನೀನು ಸ್ವಪ್ನದಲ್ಲಿ ಕಂಡಾತನು ಆರೋ ನಿನಗೆ ಅನುರೂಪನಾದ ರಾಜಕುಮಾರನಲ್ಲದೇ ಬೇರೊಬ್ಬನಾಗಿರಲಾರನೆಂದು ನನ್ನ ಅಲ್ಪಮತಿಗೆ ತೋರುತ್ತಿದೆ.

ಮೋಹಿನೀ:—ಹಾಗಾದರೆ, ಆತನ ಸಮಾಗಮನವು ನನಗೆ ಆಗುವುದೆಂದಿಗೆ?

ಚಿತ್ರಲೇಖೆ:—ಇಷ್ಟುದಿನ ಇಲ್ಲದೇ ಇಂದು ನೀನು ಆತನನ್ನು ಸ್ವಪ್ನದಲ್ಲಿ ಕಂಡ ಕಾರಣ ನಿನಗೆ ಆತನ ಸಮಾಗಮವು ಕ್ಷಿಪ್ರದಲ್ಲಿಯೇ ಆಗುವುದೆಂದು ಸ್ಪಷ್ಟವಾಗಿತಿಳಿಯಬರುತ್ತದೆ. ಮುಂದೆ ಸಂಭವಿಸುವ ಸಂಗತಿಯ ಛಾಯೆಯು ಬಹಳ ಮುಂದಾಗಿ ಕಾಣಿಸುವುದಿಲ್ಲ.

ಮೋಹಿನೀ:—ಅದುವರೆಗೂ ನಾನು ಏನು ಮಾಡಲಿ?

ಚಿತ್ರಲೇಖೆ:—ಮಹಾನುಭಾವನಾದ ಬ್ರಹ್ಮನ ಅಘಟ್ಯಘಟನಾಶಕ್ತಿಯಲ್ಲಿ ನಂಬುಗೆ ಇಟ್ಟು, ಅಭೀಷ್ಟಶಿದ್ಧಿಯಾಗುವುದಕ್ಕೆ ಸಲುವಾಗಿ ನಿನ್ನ ಇಷ್ಟದೇವತೆಯನ್ನು ವ್ರತನಿಯಮಗಳಿಂದ ಸೇವಿಸುತ್ತಿರುವುದದಕ್ಕಿಂತಲೂ ಬೇರೆ ಮಾಡುವುದೇನು?

ಚಿತ್ರಲೇಖೆಯ ಭಾಷಣದಕಡೆಯ ವಾಕ್ಯವುಮುಗಿಯುವುದರೊಳಗಾಗಿ, ಕುಡಿಯನ್ತೆ ಕೋಮಲವಾಗಿದ್ದ ತಾಪಸ ಕುಮಾರಿಯ ಹುಬ್ಬುಗಳು ಕೂಡಿಕೊಂಡು ಹುರಿಯಾದುವು; ಮುಖಮಂಡಲವು ತನಿಗೆಣ್ಣದನ್ತೆ ಕೆಂಪಾದುದು; ಚನ್ದುಟಿಯು ಅಂದಗೆಟ್ಟು ಥರಥರನೆ ಅದ

ರಿತು. ಈ ರೀತಿಯಾಗಿ, ಒಮ್ಮೆನ್ನೊಮ್ಮೆ ಮೇರೆದಪ್ಪಿ ಉಕ್ಕುತ್ತಿದ್ದ ಕೋಪವನ್ನು ಆಕೆಯು ನಿಮಿಷಮಾತ್ರದಲ್ಲಿ ಅಡಗಿಸಿಕೊಂಡು ಚಿತ್ರ ಲೇಖೆಯಮುಖವನ್ನು ನಿಟ್ಟಿಸಿ ನೋಡಿ, "ಎಲೇ, ನೀನಂತಹ ಅದೃಷ್ಟ ವಾದಿ ಎಮ್ಬುದು ನನಗೆ ಮುನ್ದೆಯೇ ತಿಳಿದಿದ್ದರೆ, ನಾನು ನಿನ್ನನ್ನು ಬಹುಮರ್ಯಾದೆಯಿಂದ ಕಾಣುತ್ತಿದ್ದೆನು. ನಿನ್ನ ಯೋಗ್ಯತೆಯನ್ನು ತಿಳಿಯದೇ ನಿನ್ನೊಡನೆ ನಾನು ಅತುರಪಟ್ಟು ನನ್ನ ಮನೋಗತವನ್ನು ಒಡೆ ದು ಹೇಳಿದ್ದಕ್ಕಾಗಿ ನಾನು ಬಹಳ ಪಶ್ಚಾತ್ತಾಪಪಡುತ್ತೇನೆ" ಎನ್ದಳು.

ಆ ಮಾತಿಗೆ ಚಿತ್ರಲೇಖೆಯು ಆದರಿ, ಬೆದರಿ, ಬೆಣ್ಡಾಗಿ. ತಲೆ ಬಾಗಿ, "ಮಹಾರಾಣಿಯೇ" ಮನ್ನಿಸಬೇಕು! ಮನ್ನಿಸಬೇಕು!! ವೀರ ಕ್ಷತ್ರಿಯ ಕುಮಾರಿಯಾದ ನಿನ್ನ ವಾರಾವರಣದಲ್ಲಿ ಸರ್ವದಾ ವಾಸ ಮಾಡುತ್ತಿರುವ ಈ ನಿನ್ನ ಪಾದಸೇವಕಳು ಸೋಮಾರಿಗಳನ್ತೆ ಎನ್ದಿ ಗೂ ಅದೃಷ್ಟವಾದಿಯಾಗುವುದಿಲ್ಲ: ಆದರೆ, ಬ್ರಹ್ಮ ಘಟನೆಯಲ್ಲಿ ನಮ್ಬುಗೆ ಇಟ್ಟು ಅಭೀಷ್ಟಸಿದ್ಧಿಯಾಗುವುದಕ್ಕೆ ಇಷ್ಟದೇವತಾ ಪ್ರಾರ್ಥ ನೆಯನ್ನು ಮಾಡಬೇಕಾದುದು ನಮ್ಮ ಕರ್ತವ್ಯವೆಂದು ನಾನು ಅಭಿ ಪ್ರಾಯ ಪಟ್ಟೆನಲ್ಲದೇ ಆವಿಷಯವಾಗಿ ನಾವು ಪ್ರಯತ್ನವೇ ಮಾಡ ಬಾರದೆಂದು ದುರ್ವಾದವನ್ನು ಮಾಡಲಿಲ್ಲ.

ಚಿತ್ರಲೇಖೆಯ ಸಮಾಧಾನವು ಹಟಾತ್ತಾಗಿ ಏರಿದ್ದ ವೀರಕುಮಾ ರಿಯ ಕೋಪವನ್ನು ಜುವ್ವನೆ ಇಳಿಸಿತು. ಇದು ಸಹಜವೇಸರಿ; ಏತ ಕ್ಕೆಂದರೆ, ಶಾಪಾನುಗ್ರಹಶಕ್ತರಾದ ಋಷಿಗಳ ಕುಲದಲ್ಲಿ ಪ್ರಸೂತರಾದ ವರಿಗೆ ಕೋಪವು ಕ್ಷಣಿಕವಾಗಿರುವುದೇನೂ ಸ್ವಭಾವವಿರುದ್ಧವಲ್ಲ.

ಮೋಹಿನೀ:—ಸೌಮ್ಯಳಾಗಿ, "ಎಲೇ, ಚಿತ್ರಲೇಖೆ, ನನ್ನ ಮನೋಗತವನ್ನು ನಿನಗೆ ಮತ್ತೊಂದು ತಡವೆ ಒಡೆದು ಹೇಳುವೆನು

ಕೇಳು. ನಾನು ಸ್ವಪ್ನದಲ್ಲಿ ಕಂಡ ಆ ಭುವನ ಮೋಹನನ ಮುಖ ವನ್ನು ನೋಡುವವರೆವಿಗೂ ನನ್ನ ಮನವು ಶಾಂತಿಯನ್ನು ಹೊಂದುವು ದಿಲ್ಲ; ಶಾನ್ತನಲ್ಲದವರಿಗೆ ಸುಖವಿಲ್ಲವೆಂಬುವುದು ಶಾಸ್ತ್ರ ಸಿದ್ಧವಾಗಿದೆ. ಆದುದರಿಂದ ನಾವು ಇನ್ನು ಕಾಲವನ್ನು ಕಳೆಯದೇ ಆತನ ಸಮಾಗ ಮನಕ್ಕಾಗಿ ಮನುಷ್ಯ ಪ್ರಯತ್ನಗಳನ್ನೆಲಾ ಕಂಗಾಣಿಸಿ ಕಡೆಗೆ ಸಾಧ್ಯ ವಾಗದೇ ಹೋದರೆ, ಅಗ್ನಿಯಮುಖಾಂತರವಾಗಿ ಪರಲೋಕಕ್ಕೆ ಹೋಗಿ ಅಲ್ಲಾದರೂ ಆತನನ್ನು ಮತ್ತೊಂದು ತಡವೇ ಕಣ್ಣಾರ ನೋಡ ಬೇಕೆಂದು ನಿಶ್ಚಯಿಸಿಕೊಂಡಿರುವೆನು. ಆದರೂ, ನನಗೆ ಈ ವಿಷಯದಲ್ಲಿ ನನ್ನ ಬುದ್ಧಿಯು ಕೊಂಚವಾದರೂ ಮುನ್ದರಿಯುವುದಿಲ್ಲ. ನನ್ನ ಭರ ವಸವೆಲ್ಲವೂ ನಿನ್ನಲ್ಲಿ ವಿಶ್ರಾನ್ತವಾಗಿದೆ, ಅದೇತಕ್ಕೆನ್ದರೆ, ನಿನ್ನ ಅಸಾ ಧಾರಣವಾದ ಬುದ್ಧಿಪ್ರಭಾವವನ್ನೂ, ನಿನ್ನ ಕಾರ್ಯನಿರ್ವಾಹಕಶಕ್ತಿ ಯನ್ನೂ, ಮಿತ್ರಕೃತ್ಯದಲ್ಲಿ ನಿನಗಿರತಕ್ಕ ಆದರಾತಿಶಯವನ್ನೂ ನಾನು ಚೆನ್ನಾಗಿ ಬಲ್ಲೆನು. ಆಪನ್ನಳಾದ ನನಗೆ ಈ ವಿಷಯದಲ್ಲಿ ಕಡೆಯವರೆಗೂ ಸಹಾಯಮಾಡಬೇಕೆಂಬ ಧರ್ಮಬುದ್ಧಿಯು ನಿನ್ನ ಮನದಲ್ಲಿ ಅಂಕುರಿತ ವಾಗಿದ್ದರೆ, ನಾವು ಈಗ ಈ ಕಾರ್ಯದಲ್ಲಿ ಯಾವ ರೀತಿಯಾಗಿ ಪ್ರವರ್ತಿಸಬೇಕೋ ಜಾಗ್ರತೆಯಾಗಿಹೇಳು,

ಚಿತ್ರಲೇಖೆ :—ಒಡತಿಯೇ, ಈ ವಿಷಯದಲ್ಲಿ ನನ್ನ ಮನೋ ನಿಶ್ಚಯವನ್ನು ನಿನಗೆ ಅರಿಕೆ ಮಾಡುವುದರಲ್ಲಿ ಕಾಲವನ್ನು ಕಳೆವುದ ಕ್ಕಿಂತಲೂ ನಿನ್ನ ಮನದಾಜ್ಞೆಗೆ ಕಾರ್ಯವನ್ನೇ ಉತ್ತರವಾಗಿ ಮಾಡಿ ಕೃತಾರ್ಥಳಾಗುವೆನು. ನೀನು ನಿನ್ನ ಸ್ವಪ್ನದಲ್ಲಿ ಕಂಡ ನಿನ್ನ ವಲ್ಲಭ ನನ್ನು ನೀನು ಅನುಪಮರೂಪ ಸೌಂದರ್ಯಶಾಲಿ ಎಂದು ಅಪ್ಪಣೆ ಕೊಟ್ಟದ್ದಾಗ್ಗ್ಯೂ ನಾನು ಧೈರ್ಯಗೊಂಡು ಬಿನ್ನವಿಸಿದನ್ತೆ, ನಾವು

ಮೊಟ್ಟಮೊದಲು, ಆಮಹಾನುಭಾವನು ರಾಜಕುಮಾರರಲ್ಲಿ ಯಾರೋ ಒಬ್ಬನಾಗಿರಬೇಕೆಂದು ಸಹಜವಾದ ಗುಣವನ್ನು ಪರೀಕ್ಷಿಸಿ ನೋಡಿ, ಆ ಪರೀಕ್ಷೆಯು ನಿರರ್ಥಕವಾದರೆ, ಬಳಿಕ ಬೇರೇ ಪ್ರಯತ್ನವನ್ನು ಮಾಡುವ.

ಮೋಹಿನಿ ;—ಚಿತ್ರಲೇಖೆ —ಇದು ಸರಿಯೇ ; ಆದರೆ, ಈ ಕಾರ್ಯವನ್ನು ನೆರವೇರಿಸುವ ಬಗೆ ಹೇಗೆ ?

ಚಿತ್ರಲೇಖೆ ;—ಇದೇನು ಅಂತಹ ಅಸಾಧ್ಯವಾದ ಕೆಲಸವಲ್ಲ : ಅದು ಹೇಗೆನ್ನುವಿಯೋ ? ನಮ್ಮ ಸೋದರ ಮಾವನ ಮಗಳಾದ ರಾಜೇಶ್ವರಿಯ ಸ್ವಯಂವರಕ್ಕೆ ಈ ಭರತಖಂಡದ ರಾಜಕುಮಾರರೆಲ್ಲರೂ ಬನ್ದಿದ್ದರು ; ಆಗ ಅವರುಗಳನ್ನೆಲ್ಲಾ ಕಣ್ಣಾರೆ ನೋಡಿರುವೆನು ; ಅವರುಗಳಪೈಕಿ ಒಮ್ಬತ್ತುಜನ ಮಾತ್ರ ಬಹು ಸ್ಫುರದ್ರೂಪಿಗಳಾಗಿರುವರು. ಅವರ ದಿವ್ಯತರವಾದ ಆಕಾರಗಳು ನನ್ನ ಮನದಲ್ಲಿ ಕೆತ್ತಲ್ಪಟ್ಟಹಾಗಿವೆ. ಅವರನ್ನು ನಾನು ಒಬ್ಬೊಬ್ಬರನ್ನಾಗಿ ನಿನಗೀಗ ಚಿತ್ರಿಸಿ ತೋರಿಸುವೆನು, ಅವರಲ್ಲಿ ನಿನ್ನ ವಲ್ಲಭನಾರಾದರೂ ಆಗಿದ್ಧರೆ ಹೇಳು: ಬಳಿಕ ಮುನ್ದಣ ಪ್ರಯತ್ನವನ್ನು ಮಾಡುವ.

ಮೋಹಿನೀ:— ಸಾಧು ! ಚಿತ್ರಲೇಖೇ, ಸಾಧು !! ಇದೀಗ ಅನ್ವರ್ಥಕವಾದ ನಿನ್ನ ಹೆಸರಿಗೆ ತಕ್ಕಯೋಜನೆ ಇನ್ನು ತಡವೇಕೆ ? ಜಾಗ್ರತೆಯಾಗಿ ನಿನ್ನ ಕೆಲಸಕ್ಕೆ ಪ್ರಾರಂಭಿಸು ನೋಡುವ.

ಅದಕ್ಕೆ ಚಿತ್ರಲೇಖೆಯು, "ಅಪ್ಪಣೆಯಂತಾಗಲಿ" ಎಂದು, ಬಾಗಿಲಕಡೆಗೆ ನೋಡಿ, ಯಾರಲ್ಲಿ ? ಎಂದಳು. ಕೂಡಲೇ ಹೊರಗಿದ್ದ ದಾಸಿಯರಲ್ಲೊಬ್ಬಳು ಒಳಕ್ಕೆ ಬಂದು ಕೈಮುಗಿದು ತಲೆಬಾಗಿನಿನ್ದು "ಏನಪ್ಪಣೆ ? " ಎಂದಳು.

ಚಿತ್ರಲೇಖೆಯು:—ಅವಳನ್ನು ನೋಡಿ, "ಎಲೇ, ಜಾಗ್ರತೆಯಾಗಿ ನಮ್ಮ ಮನೆಗೆ ಹೋಗಿ ನನ್ನ ಚಿತ್ರದಸಾಮಾನುಗಳನ್ನೆಲ್ಲಾ ತೆಗೆದುಕೊಂಡುಬಂದು ಅವುಗಳನ್ನೆಲ್ಲಾ ಇಲ್ಲಿ ಚಿತ್ರಕರ್ಮಕ್ಕೆ ಅನುಕೂಲವಾಗಿ ಅಣಿಮಾಡು "ಎಂದು ಹೇಳಿದಳು

ಅದಕ್ಕೆ ಆ ದಾಸಿಯು, "ಅಪ್ಪಣೆಯಂತಾಗಲಿ" ಎಂದು ಹೊರಟುಹೋಗಲು ಚಿತ್ರಲೇಖೆಯು ಮಹಾರಾಣಿಯನ್ನು ಕುರಿತು, "ಒಡತಿಯೇ, ಚಿತ್ರಸಾಮಗ್ರಿಯು ಸಿದ್ಧವಾಗುವುದರೊಳಗಾಗಿ ನಾವು ನಮ್ಮ ಪ್ರಾತಃಸ್ನಾನಸಂಧ್ಯಾವಂದನಾದಿಗಳನ್ನು ತೀರಿಸಿಕೊಂಡುಬರುವ ಎನ್ನಲು ರಾಣಿಯು, "ಓಹೋ! ಸಂಧ್ಯಾಕಾಲವು ಆಗಲೇ ಮೀರಿಹೋದಹಾಗಿದೆ! ನಡೆ ಆ ಕೆಲಸವನ್ನು ಮುಂಚೆ ಮಾಡಿಕೊಂಡು ಬರುವ "ಎಂದು ಎದ್ದು ಸ್ನಾನಕ್ಕೆ ಹೊರಟಳು. ಚಿತ್ರಲೇಖೆಯೂ ಅವಳನ್ನು ಹಿಂಬಾಲಿಸಿದಳು.

---

## ಹನ್ನೆರಡನೆಯ ಪ್ರಕರಣ

### ವರಾನ್ವೇಷಣ.

ಮಧ್ಯಾಹ್ನದ ಒಳಗಾಗಿ ಮಹಾರಾಣಿಯ ಶಯ್ಯಾಗೃಹವು ಚಿತ್ರಲೇಖೆಯ ಚಿತ್ರಶಾಲೆಯಾಗಿ ಪರಿಣಮಿಸಿತು. ಜಗನ್ಮೋಹಿನಿಯ ಮಂಚದ ಇದಿರಿಗೆ ವಿಚಿತ್ರತರವಾದ ಚಿತ್ರಕಮ್ಬಳಿಯಿಂದ ಅಲಂಕೃತವಾಗಿದ್ದ ದೊಡ್ಡದೊಂಡು ಮೇಜು ಇಡಲ್ಪಟ್ಟಿದ್ದಿತು. ಇದರ ಮೇಲೆ ಚಿತ್ರಕಲೆಗೆ ಸಾಧಕಗಳಾದ ಸಾಮಾಗ್ರಿಗಳೂ ಸಿದ್ಧವಾಗಿದ್ದವು. ಇದರ

ಮುಭಾಗದಲ್ಲಿ ಎರಡು ಕುರ್ಚಿಗಳು ಒಂದರ ಮಗ್ಗುಲಲ್ಲೊಂದು ಇಡಲ್ಪಟ್ಟಿದ್ದುವು. ಅಲ್ಲಿಯ ದಾಸಿಯರೆಲ್ಲರೂ ಅಪ್ರಮತ್ತರಾಗಿ ಮಹಾರಾಣಿಯನ್ನು ನಿರೀಕ್ಷಿಸಿಕೊಂಡಿದ್ದರು.

ಸುಮಾರು ಒಂದು ಗಂಟೆಯ ಹೊತ್ತಿಗೆ ಮಹಾರಾಣಿಯೂ ಮತ್ತು ಚಿತ್ರಲೇಖೆಯೂ ಮಾಧ್ಯಾಹ್ನಿಕವನ್ನು ತೀರಿಸಿಕೊಂಡು ಅಲ್ಲಿಗೆ ಸಡಗರದಿಂದ ಬನ್ದು ಸೇರಿದರು. ಮೋಹಿನಿಯು ಆ ಮೇಜಿನ ಮುನ್ದುಗಡೆಯಲ್ಲಿದ್ದ ಒಂದು ಕುರ್ಚಿಯ ಮೇಲೆ ಕುಳಿತುಕೊಂಡು ಹಸನ್ಮುಖಿಯಾಗಿ ಚಿತ್ರಲೇಖೆಯ ಮುಖವನ್ನು ನೋಡಿ, "ಚಿತ್ರಲೇಖೇ, ಇನ್ನು ತಡವೇಕೆ? ಜಾಗ್ರತೆಯಾಗಿ ನಿನ್ನ ಆಸನವನ್ನು ಅಲಂಕರಿಸಿ ಪ್ರಕೃತ ಕಾರ್ಯವನ್ನು ಪ್ರಾರಂಭಿಸು" ಎನ್ದಳು.

ಆಗ ಚಿತ್ರಲೇಖೆಯು, "ಅಪ್ಪಣೆಯಂತಾಗಲಿ" ಎನ್ದು ಮಹಾರಾಣಿಯ ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಕುಳಿತುಕೊಂಡು ಮುನ್ದುಗಡೆಯ ಮೇಜಿನ ಮೇಲೆ ಸಿದ್ಧವಾಗಿದ್ದ ಕಾಗದಗಳಲ್ಲಿ ಒನ್ದು ಕಾಗದವನ್ನೂ, ತೂಲಿಕೆಯನ್ನೂ ಕೈಗೆ ತೆಗೆದುಕೊಂಡು ಜಗನ್ಮೋಹಿನಿಯ ಮುಖವನ್ನು ನೋಡಿ, "ಒಡತಿಯೇ, ನಾನು ಮೊಟ್ಟಮೊದಲು, ಕುನ್ತಳಾಧೀಶ್ವರನಾದ ಚಂದ್ರವಂಶದ ಸೋಮಶೇಖರರಾಯನ ಜ್ಯೇಷ್ಠಪುತ್ರನಾದ ತಾರಾಧೀಶನ ಪ್ರತಿರೂಪವನ್ನು ಚಿತ್ರಿಸುವೆನು" ಎನ್ದು ಚಿತ್ರವನ್ನು ಬರೆಯ ತೊಡಗಿದಳು. ಆಗ ಮೋಹಿನಿಯು ಅತಿಕೌತುಕದಿಂದ ಬರಿಯುವುದನ್ನು ನೋಡುವುದಕ್ಕೆ ಸಲುವಾಗಿ ತನ್ನ ಕುರ್ಚಿಯನ್ನು ಚಿತ್ರಲೇಖೆಯ ಕುರ್ಚಿಯ ಹತ್ತಿರಕ್ಕೆ ಸೆಳೆದುಕೊಂಡು ಕೂಡಲು, ಚಿತ್ರಲೇಖೆಯು ಅವಳನ್ನು ಕುರಿತು, "ಒಡತಿಯೇ, ಬರೆಯಲ್ಪಡುತ್ತಿರುವ ಚಿತ್ರವು ಪೂರ್ತಿಯಾಗುವುದಕ್ಕೆ ಮುಂಚೆ ಅಸ್ಪುಟದರ್ಶನೀಯವಾಗಿರುವು

ದಿಲ್ಲ; ಪೂರ್ತಿಯಾದಮೇಲೂ ಅದು ಬರೆಯಲ್ಪಡುತ್ತಿರುವಾಗ ನೋಡು ತ್ತಿದ್ದವರ ಕಣ್ಣಿಗೆ ಅಷ್ಟು ಸದೃಶವಾಗಿಯೂ ಕಾಣುವುದಿಲ್ಲ. ಆದುದ ರಿಂದ ನೀನು ಹೇಗಾದರೂ ನಿನ್ನ ಮನಸ್ಸನ್ನು ಬಿಗಿಹಿಡಿದು ಇದನ್ನು ಪೂರ್ತಿಯಾಗುವವರೆಗೂ ನೋಡದೇ ಇರುವುದು ಒಳ್ಳೆಯದು ''ಎ ನ್ದಳು.

ಆದಕ್ಕೆ ಮೋಹಿನಿಯು, ''ಹಾಗೆಯೇಆಗಲಿ''ಎಂದು ತನ್ನ ಕುರ್ಚಿ ಯನ್ನು ಕೊಂಚ ಹಿಂದಕ್ಕೆ ಜರುಗಿಸಿಕೊಂಡು ಕೂಡಲು ಚಿತ್ರಲೇಖೆಯು ಆಕೆಯ ವ್ಯತ್ಯಸ್ತವಾದ ಕಂಠಸ್ವರವನ್ನು ಕೇಳಿ ತಲೆಯೆತ್ತಿ ಆಕೆಯ ಮುಖವನ್ನು ನೋಡಿದಳು. ಮುಖವು ಕೊಂಚ ವಿವರ್ಣವಾಗಿದ್ದಿತು. ಅದನ್ನು ಕಂಡು ಆ ಚದುರೆಯು ತಾನು ಅವಶಳಾಗಿ ಆಡಿದಮಾತಿಗೆ ಮನದಲ್ಲಿ ಪಶ್ಚಾತ್ತಾಪಗೊಂಡು, ಒಡತಿಯೇ, ''ನಾನು ಈ ಚಿತ್ರವನ್ನು ಮುಗಿಸುವವರೆಗೆ ನಿನಗೆ ವಿನೋದಾರ್ಥವಾಗಿ ಈ ರಾಜಕುಮಾರನ ಚರಿ ತ್ರೆಯನ್ನು ಸಂಕ್ಷೇಪವಾಗಿ ಹೇಳುವೆನು ಕೇಳು. '' ಎಂದು, ವಿವಿಧವಾದ ವರ್ಣಸಮ್ಮೇಳನವನ್ನು ಮಾಡಿಕೊಂಡು ಚಿತ್ರಿಸುತ್ತಾ, ಈಗಿನಕಾಲದ ರಾಜಕುಮಾರರಲ್ಲೆಲ್ಲಾ ಈತನು ಅತಿಸುಂದರನೆಂದು ಯುವತಿಜನರಲ್ಲಿ ಪ್ರಖ್ಯಾತಿಯನ್ನು ಪಡೆದಿರುವನು. ಆದುದರಿಂದಲೇ, ನಾನು ಮೊಟ್ಟ ಮೊದಲು ಈತನಪ್ರತಿಕೃತಿಯನ್ನು ಚಿತ್ರಿಸಲು ಕೈಕೊಂಡೆನು. ಈತನ ಚಿತ್ರಪಟವಿಲ್ಲದ ರಾಜಕುಮಾರಿಯರ ಅಂತಃಪುರವೇಇಲ್ಲ. ಈಗಿನ ಕಾಲ ದಲ್ಲಿ ಈತನ ಭಾವಚಿತ್ರಕ್ಕೆ ಇರುವಬೆಲೆಯು ಮತ್ತಾವುದಕ್ಕೂ ಇಲ್ಲ. ನಮ್ಮ ಸೋದರಮಾವನ ಮಗಳಾದ ಪ್ರೇಮಲತೆಯು ಈತನ ಪ್ರತಿಕೃತಿ ಯನ್ನು ಚಿತ್ರಿಸಿದ್ದಳು ; ಅದನ್ನು ನಮ್ಮ ಸಾರ್ವಭೌಮನ ಮಗಳಾದ ಸೌದಾಮಿನಿಯು, ಕಳದ ತಿಂಗಳಲ್ಲಿ ಅಯೋಧ್ಯೆಯಲ್ಲಿ ನಡದ ಚಿತ್ರಕಲೆ

ಕೌಶಲ್ಯಪ್ರದರ್ಶನದಲ್ಲಿ ಒಂದು ಲಕ್ಷ ವರಾಹಕ್ಕೆ ಕೊಂಡುಕೊಂಡಳು. ಈತನಿಗೆ ಮದನಮೋಹನನೆಂಬ ಮತ್ತೊಂದು ಹೆಸರುಂಟು. ಈ ಹೆಸರು ಈತನಿಗೆ ಅನ್ವರ್ಥಕವಾಗಿರುವುದರಿಂದ ಈತನ ಬನ್ಧುಮಿತ್ರರೆಲ್ಲರೂ ಈತನನ್ನು 'ಮದನಮೋಹನ' ಎನ್ನಲೇಕರೆಯುವರು. ಈತನಿಗೆ ಈ ಹೆಸರು ಬನ್ದುದೊಂದು ಪರಮಾಶ್ಚರ್ಯಕರವಾದ ಇತಿಹಾಸವಾಗಿದೆ. " ಎನ್ದು ಕುರ್ಚಿಯಿಂದ ವರ್ಣಸಮ್ಮೇಳನವನ್ನು ಮಾಡುತ್ತಾ ಸುಮ್ಮನಾದಳು.

ಆಗ ಮೋಹಿನಿಯು, ಅತಿಕೌತುಕದಿಂದ, " ಚಿತ್ರಲೇಖೇ, ಆ ಇತಿಹಾಸವೇನು ? ಜಾಗ್ರತೆಯಾಗಿಹೇಳು. " ಎನ್ದು ಅವಳು ಬರಿಯುತ್ತಿದ್ದ ಚಿತ್ರವನ್ನು ನೋಡುವುದಕ್ಕೆ ಮುಂದಕ್ಕೆ ಬಗ್ಗಿದಳು.

ಆಗಚಿತ್ರಲೇಖೆಯು ಆಚಿತ್ರವನ್ನು ಮರೆಮಾಡಿ ಹಿಡಿದುಕೊಂಡು ಮುಗುಳುನಗೆಯಿಂದ, "ಒಡತಿಯೇ, ಕೊಂಚತಡೆ ಇನ್ನೊಂದು ನಿಮಿಷದಲ್ಲಿ ಇದನ್ನು ಮುಗಿಸುವೆನು. ಅಸಮಾಪ್ತವಾದ ಚಿತ್ರವನ್ನು ನೋಡಬಾರದೆಂದು ನಾನಾಗಲೇ ಬಿನ್ನವಿಸಲಿಲ್ಲವೆ "ಎನ್ದಳು. ಅದಕ್ಕೆ ಜಗನ್ಮೋಹಿನಿಯು ಲಜ್ಜಾಚ್ಛಾಯೆಯಿಂದ ಮನೋಹರವಾದ ಮಂದಹಾಸದಿಂದ, "ಅಹುದಹುದು ! ನಾನದನ್ನು ಆಗಲೇ ಮರೆತುಹೋದೆನು. ಒಳ್ಳೆಯದು ಆ ಇತಿಹಾಸವನ್ನಾದರೂ ಜಾಗ್ರತೆಯಾಗಿಹೇಳು " ಎನ್ದಳು.

ಚಿತ್ರಲೇಖೆ:—ಈ ಮದನಮೋಹನನು ಒಂದಾನೊನ್ದು ದಿನ ಹಿಮವತ್ಪ್ರಾನ್ತ ಕಾನ್ತಾರಕ್ಕೆ ಬೇಟೆಯಾಡುವುದಕ್ಕೆ ಹೋದನು. ಆಗ ಮೃಗವನ್ನು ಅಟ್ಟಿಕೊಂಡು ತಾನೊಬ್ಬನೇ ತನ್ನ ಹಿಂಬಾಲಕರನ್ನೆಲ್ಲಾ ಹಿಂದೆಬಿಟ್ಟು ಆ ಮಹಾರಣ್ಯದೊಳಕ್ಕೆ ಬಹುದೂರ ಹೊರಟು ಹೋದನು. ಅಲ್ಲಿಂದ ಹಿಂದಿರುಗಿ ಬರುವಾಗ ತೊಳಲಿ, ಬಳಲಿ, ಬಾಯಾರಿ, ಜಲಾರ್ಥಿಯಾಗಿ, ಅಲ್ಲಿ ಕೇಳಬರುತ್ತಿದ್ದ ಹಂಸಕಾರಂಡವಾದಿ ಜಲಚರಪಕ್ಷಿಗಳ

ಧ್ವನಿಯ ಗುರುತಿನ ಮೇಲೆ ಹೋಗಿ ಒಂದು ರಮಣೀಯವಾದ ಸರೋವರವನ್ನು ಸೇರಿದನು. ಅಲ್ಲಿ ಅಪ್ಸರಿಯರು ಜಲಕ್ರೀಡೆಯೇ ಮೊದಲಾದ ಸ್ವೇಛ್ಛಾವಿಹಾರವನ್ನು ಮಾಡುತ್ತಿದ್ದರು. ಅವರು ಈ ಸುಕುಮಾರನನ್ನು ನೋಡಿ, ತಮ್ಮ ಕುಲಗುರುವಾದ ಮನ್ಮಥನೇ ಸಾಕಾರನಾಗಿ ಬನ್ದಿರುವನೆಂದು ಮೋಹಗೊಂಡು ಇವನನ್ನು ಪ್ರಸನ್ನೀಕರಿಸಿಕೊಳ್ಳುವುದಕ್ಕೆ ನಾಮುನ್ದೆ ತಾಮುನ್ದೆ ಎನ್ದು ಆರಾಧಿಸಿ ತಮ್ಮ ಸಂಗೀತ, ಸಾಹಿತ್ಯ, ನರ್ತನ ಮೊದಲಾದುವುಗಳಿಂದ ಮೋಹಗೊಳಿಸ ತೊಡಗಿದರು.'' ಎನ್ದು ತೂಲಿಕೆಯಿಂದ ಆ ಪ್ರತಿಕೃತಿಯ ಅತಿಸೂಕ್ಷ್ಮವಾದಭಾವವನ್ನು ಚಿತ್ರಿಸುತ್ತಾ ಸುಮ್ಮನಾದಳು.

ಜಗನ್ಮೋಹಿನಿ:—ತವಕದಿಂದ, "ಆಮೇಲೇನಾಯಿತು ? ಆ ಮೇಲೇನಾಯಿತು ? "

ಚಿತ್ರಲೇಖೆ:—ಆ ವೇಳೆಗೆ ರಾಜಕುಮಾರನ ಪರಿವಾರದವರು ಅವನನ್ನು ಹುಡುಕಿಕೊಂಡು ಅಲ್ಲಿಗೆ ಬನ್ದರು.

ಮೋಹಿನಿ:—ಓಹೋ ! ರಸಾಭಾಸವಾಯಿತಲ್ಲ ! ಆಮೇಲೆ ಆಮೇಲೆ.

ಚಿತ್ರಲೇಖೆ:—ಆ ಕಿರಾತರಗುಂಪನ್ನು ನೋಡಿದಕೂಡಲೇ ಆ ಸುರಸುನ್ದರಿಯರು ಬೆದರಿ, ಚದರಿ ಅಲ್ಲಲ್ಲಿ ಮರಗಳ ಮರೆಯಲ್ಲಿ ಅಡಗಿಕೊಂಡು ರಾಜಕುಮಾರನಿಗೂ, ಅವನ ಪರಿವಾರದವರಿಗೂ ನಡೆದ ಸಮ್ಭಾಷಣೆಯನ್ನು ಕೇಳಿ ಆ ಯುವಕನನ್ನು ಮಾನವನೆಂದು ತಿಳಿದು ತಾವು ಮಾನವನನ್ನು ಕಂಡು ಮದನನೆಂದು ಮೋಹಗೊಂಡುದಕ್ಕೆ ಆಶ್ಚರಿಗೊಂಡು ಅನುಮಾನುಷವಾದ ಆತನ ರೂಪಲಾವಣ್ಯವನ್ನು ಕಣ್ಣಾರ ನೋಡಿ ಕೊಂಡಾಡಿ ಅವನಿಗೆ ಮದನಮೋಹನನೆಂಬ ಅನ್ವರ್ಥಕವಾದ

ಹೆಸರನ್ನು ಕೊಟ್ಟು ಪುಷ್ಪಕವನ್ನೇರಿ ಆತನ ಮೇಲೆ ಪುಷ್ಪವೃಷ್ಟಿಯನ್ನು ಕರೆಯುತ್ತಾ ಸುರನಗರಿಗೆ ತೆರಳಿದರು. ಈ ಚರಿತ್ರೆಯಿಂದ ನೀನು ಇವನನ್ನು ನಿರ್ಗಂಧಕುಸುಮದಂತೆ ಕೇವಲ ಸೌಂದರ್ಯಶಾಲಿಯೆಂದು ತಿಳಿಯಲಾಗದು: ಈತನು ಕ್ಷತ್ರಿಯೋಚಿತಗಳಾದ ಧೈರ್ಯಸ್ಥೈರ್ಯಾದಿ ಗುಣಗಣ ಪರಿಪೂರ್ಣನೆಂದೂ ಪ್ರಖ್ಯಾತನಾಗಿರುವನು. ನಿನ್ನಂಥವಳ ಮನಸ್ಸನ್ನು ಅಪಹರಿಸುವುದಕ್ಕೆ ಇವನ ಹೊರತು ಮತ್ತಾರೂ ಶಕ್ತರಾಗಿರಲಾರರು.

ಮೋಹಿನಿ:—"ಎಲೌ, ಚಿತ್ರಲೇಖೆ, ನೀನು ನನ್ನನ್ನು ಮಾತಿನಿಂದ ಮರುಳುಮಾಡಿ ನಿನ್ನ ಆಲಸ್ಯವನ್ನು ಮರೆಮಾಡುತ್ತಿರುವೆ. ನಿನ್ನ ಚಿತ್ರವು ಯುಗಾಂತ್ಯದಲ್ಲಿಯೂ ಮುಗಿಯುವ ಹಾಗೆ ಕಾಣುವುದಿಲ್ಲ. ಎಲ್ಲಿ? ಬರೆದಷ್ಟು ಸಾಕು; ತೋರಿಸು ನೋಡುವ "ಎನ್ನು ಚಿತ್ರಲೇಖೆಯು ಚಿತ್ರಿಸುತ್ತಿದ್ದ ಕಾಗದವನ್ನು ಕಿತ್ತುಕೊಳ್ಳುವುದಕ್ಕೆ ಕೈ ಚಾಚಿದಳು.

ಚಿತ್ರಲೇಖೆ:—ಚಿತ್ರವು ಮೋಹಿನಿಯ ಕೈಗೆ ಸಿಗದನ್ತೆ ಕೈಯೆತ್ತಿ ಮನ್ದಹಾಸದಿಂದ, "ಒಡತಿಯೇ, ಆಯಿತು, ಒನ್ದು ನಿಮಿಷತಡೆ. ನಿನ್ನ ಈ ಆತುರಭಾವವು. ಈತನೇ ನಿನ್ನ ಮಾನಸಾಪಹಾರಿಯೆಂದು ಸೂಚಿಸುತ್ತದೆ." ಎನ್ನು ಮೋಹಿನಿಯು ಕೊಂಚ ಹಿಂದಾಗಲು ತಾನು ಚಿತ್ರವನ್ನು ಬರೆಯುತೊಡಗಿದಳು. ಚಿತ್ರಲೇಖೆಯ ಮಾತನ್ನು ಕೇಳಿದ ಕೂಡಲೇ, ಮೋಹನಿಯ ಮನದಲ್ಲಿ, ಉತ್ತರಕ್ಷಣದಲ್ಲಿ ತಮ್ಮ ವಲ್ಲಭನನ್ನು ನೋಡುವ ಪ್ರತೀಕ್ಷೆಯುಳ್ಳ ಕನ್ನಿಕೆಯರಿಗೆ ಸಾಧಾರಣವಾಗಿ ಉಂಟಾಗುವ ಲಜ್ಜಾದಿವಿಕಾರಗಳು ಒಮ್ಮೆನ್ನೊಮ್ಮೆ ತಲೆದೋರಿದುವು. ಆದರೂ ಆತವಕೆಯು ಅದನ್ನು ಸಾಧ್ಯವಾದ ಮಟ್ಟಿಗೂ ಹೃದಯ

ದಲ್ಲಿಯೇ ಅಣಗಿಸಿಕೊಂಡು, "ಕಾಲವು ನಿರವಧಿಯಾಗಿದ್ದರೆ, ಕುಮ್ಭಾರನೂ ಚಿತ್ರವನ್ನು ಬರೆಯಲಾಪನು. ಇಷ್ಟು ಅಲಸಳಾದ ನಿನಗೆ 'ಚಿತ್ರಕಲಾಸಿಧಿ' ಎಂತಲೂ, 'ಚಿತ್ರಕಲಾಪಾರೀಣ'ಳೆಂತಲೂ ದೊಡ್ಡದೊಡ್ಡ ಪೊಳ್ಳುಬಿರುದುಗಳನ್ನು ಕಣ್ಣು ಮುಚ್ಚಿಕೊಂಡು ಯಾರು ಕೊಟ್ಟರೋ ಕಾಣೆ !"ಎನ್ದಳು.

ಚಿತ್ರಲೇಖೆ:—ನನಗೆ ಬಿರದುಕೊಟ್ಟ ಸಭೆಯಲ್ಲಿ ನೀನುತಾನೆ ಅಗ್ರಾಸನವನ್ನು ಅಲಂಕರಿಸಿದ್ದುದು. " ನಾನು ತಾಮ್ಬೂಲವನ್ನು ಹಾಕಿಕೊಳ್ಳುವಷ್ಟರೊಳಗಾಗಿ ನನ್ನನ್ನು ತಾಮ್ಬೂಲವನ್ನು ಹಾಕಿಕೊಳ್ಳುತ್ತಿರುವಂತೆ ಯಾರು ಚಿತ್ರಿಸುತ್ತಾರೆಯೋ ಅವರಿಗೆ ನನ್ನ ಕಂಠದಲ್ಲಿರುವ ರತ್ನಹಾರವನ್ನು ಕೊಡುತ್ತೇನೆ. "ಎನ್ದು ಹೇಳಿದಾಗ ಆ ಮೂಲ್ಯವಾದ ರತ್ನಹಾರಕ್ಕೆ ಯಾರು ಅರ್ಹರಾದರು ?

ಮೋಹಿನಿ:—ಎಲೌ, ನೀನು ಚಿತ್ರಕಲೆಗಿಂತಲೂ ಮರಳುಮಾತಿನಲ್ಲಿ ಅತಿಪ್ರವೀಣಳಾಗಿ ಕಾಣುತ್ತಿರುವೆ.

ಚಿತ್ರಲೇಖೆ:—'ಇದೋ ನಿನ್ನ ಚಿತ್ರವು ಮುಗಿಯಿತು ? " ಎನ್ದು ತನ್ನ ಕೈಲಿದ್ದ ತೂಲಿಕೆಯನ್ನು ಮೇಜಿನಮೇಲಿರಿಸಿ ಎರಡು ಕೈಗಳಿಂದಲೂ ಆ ಚಿತ್ರವನ್ನು ಹಿಡಿದುಕೊಂಡು ಕುತ್ತಿಗೆಯನ್ನು ಎತ್ತಿ ತಿರುಗಿಸಿ ತಿರುಗಿಸಿ ನೋಡಲಾರಂಭಿಸಿದಳು.

ಮೋಹಿನಿ:—ಸಿಟ್ಟುಗೊಂಡು, "ಎಲೇ, ಚಿತ್ರಲೇಖೇ, ನೀನು ನೋಡುವುದಕ್ಕಾಗಿಯೇ ಚಿತ್ರವನ್ನು ಬರೆದುಕೊಂಡಹಾಗಿದೆ. ಒಳ್ಳೆಯದು, ಸಾವಕಾಶವಾಗಿ ನೋಡು, ನೋಡು. "

ಚಿತ್ರಲೇಖೆ:— " ಒಡತಿಯೇ ಕೋಪಿಸಿಕೊಳ್ಳಬೇಡ. ಇದೋ ನೋಡು ; ಈ ಸುಕುಮಾರನೇ ಮದನಮೋಹನನೆಂಬ ರಾಜಕುಮಾರನು" ಎಂದು ತಾನು ಬರದ ಚಿತ್ರವನ್ನು [illegible]ರಿಸಿದಳು.

ಮೋಹಿನಿ:—ಆ ಪಠವನ್ನು ಒಂದುನಿಮಿಷ ನಿಟ್ಟಿಸಿನೋಡಿ, ಎಲೌ, ಚಿತ್ರಲೇಖೇ, ಮಧುಪಾನಮತ್ತರಾಗಿ ಸ್ವೇಛ್ಛಾವಿಹಾರವನ್ನು ಮಾಡುತ್ತಿದ್ದ ಆ ಸುರಕಾಮಿನಿಯರ ಕಣ್ಣಿಗೆ ಈತನು ಮನ್ಮಥನಂತೆ ಕಾಣಿಸಿದಮಾತ್ರಕ್ಕೆ ಲೋಕದಲ್ಲಿರುವ ಮಾನಿನಿಯರೆಲ್ಲರೂ ಈತನನ್ನು ಭುವನಮೋಹನನೆಂದು ಆರಾಧಿಸುವುದು ಶುದ್ಧ ಅಸಂಗತವಾಗಿದೆ. ಮಾನವಸ್ವಭಾವನ್ನು ಅರಿತವರಾರಾದರೂ ಈತನನ್ನು ಒಂದುಕ್ಷಣನೋಡಿದರೆ, ಈತನಮುಖದಮೇಲೆ ಸ್ಫುಟಾಕ್ಷರದಿಂದ ಬರೆದಂತೆ ಕಾಣುತ್ತಿರುವ ಈತನ ಅವಗುಣಗಳೆಲ್ಲವೂ ಅವರಿಗೆ ಗೋಚರವಾಗದೇ ಇರುವುದಿಲ್ಲ. ಇದೋನೋಡು—ಈತನ ಕಡೆಗಣ್ಣುಗಳಲ್ಲಿ ಕಾಡಿಗೆಸವರಿದಂತೆ ಕಾಣುತ್ತಿರುವ ಕಪ್ಪುಛ್ಛಾಯೆಯು ಕೇವಲ ಕಾಮುಕಭಾವವನ್ನುಸೂಚಿಸುತ್ತದೆ; ಶುಕನಾಸಿಕೆಯು ಸ್ವಾರ್ಥಪರತೆಯನ್ನೂ, ಸ್ವಾಭಿಮಾನವನ್ನೂ ಸೂಚಿಸುತ್ತಿದೆ ; ಸಂಕುಚಿತವಾದ ಭ್ರೂಲತೆಗಳು ತಾಪಕರವಾದ ಕೋಪಸ್ವಭಾವನ್ನು ಸೂಚಿಸುತ್ತದೆ ; ಒತ್ತಾದ ತುಟಿಗಳು ಅನರ್ಗತವಾದ ಕಾಪಟ್ಯವನ್ನು ಸೂಚಿಸುತ್ತಿದೆ ; ವಿಶೇಷೋಕ್ತಿಯಿಂದೇನು ? ನೀನುಮೊದಲಾಡಿದಂತೆ ಈಸೌಂದರ್ಯವು ನಿರ್ಗಂಧಕುಸುಮದಂತೆ ನಿರರ್ಥಕವಾಗಿ ಕಾಣುತ್ತಿದೆ. ಇಂತಹ ಅಲ್ಪಮಾನವನು ನನ್ನಂತಹ ರಾಜಋಷಿಕುಮಾರಿಯ ಮನವನ್ನು ಅಪಹರಿಸಲಾಪನೆ ? ಸಾಕು ! ಸಾಕು !! ಮತ್ತೊಬ್ಬನನ್ನು ಬರೆ ನೋಡುವ.'' ಎನ್ನುದ ಆ ಚಿತ್ರಪಠವನ್ನು ಕೆಳಕ್ಕೆ ಬೀಸಾಡಿದಳು.

ಆಗಚಿತ್ರಲೇಖೆಯು ಮೇಜಿನ ಮೇಲಿದ್ದ ಮತ್ತೊಂದು ಕಾಗದವನ್ನು ತೆಗದುಕೊಂಡು, “ಒಡತಿಯೇ, ನಾನೀಗ ಹೇಮನಗರದ ಮಹಾರಾಜನಾದ ಚಿತ್ರಸೇನನ ಹಿರಿಯುಮಗನಾದ ಸಂಗ್ರಾಮಸಿಂಹನೆಂಬ ರಾಜ

ಕುಮಾರನನ್ನು ಚಿತ್ರಿಸುವೆನು' ಎನ್ನು ಕುಚೀಯಿಂದ ವರ್ಣಸಂಮ್ಮೇಳನವನ್ನು ಮಾಡಿಕೊಂಡು ಬರೆಯಲಾರಂಭಿಸಿ, "ಒಡತಿಯೇ, ಈ ರಾಜಕುಮಾರನ ಚರಿತ್ರೆಯು ಬಹು ವಿನೋದಕರವಾಗಿರುವುದು; ಹೇಳುವೆನು ಕೇಳು; ಈತನು ಹನ್ನೆರಡು ವರುಷ ವಯಸ್ಸಿನವನಾಗಿದ್ದಾಗ ಪಾರಸೀಕರು ಹೇಮನಗರದಮೇಲೆ ಪಡೆತ್ತಿ ಬನ್ದರು: ಅಲ್ಲಿ ಆ ದೇಶದವರಿಗೂ, ಅವರಿಗೂ ಹನ್ನೆರಡು ದಿನ ಬೆಟ್ಟದ ಸಾಲಿನಲ್ಲಿ ಭಯಂಕರವಾದ ಯುದ್ಧವು ನಡೆಯಿತು. ಜಯಲಕ್ಷ್ಮಿಯು ಮಿಂಚಿನಂತೆ ಚಂಚಲಳಾಗಿ ಉಭಯ ಪಕ್ಷದಲ್ಲಿಯೂ ಹೊಳೆಯುತ್ತಿದ್ದಳು. ಆಗ ಈ ಬಾಲಕನು ಸ್ತ್ರೀವೇಷವನ್ನು ಹಾಕಿಕೊಂಡು ಪಂಚವರ್ಣದ ಕುದುರೆಯಮೇಲೆ ಏರಿಕೊಂಡು ಮಿಂಚಿನ ವೇಗದಿಂದ ಪಾರಸೀಕರಸಿಬಿರದೊಳಕ್ಕೆ ಪ್ರವೇಶಮಾಡಿದನು. ಜಗನ್ಮೋಹಿನಿಯಂತೆ ಲೋಕಮೋಹಕವಾದ ಈತನ ಆಕಾರಕ್ಕೆ ಅಲ್ಲಿಯ ದ್ವಾರಪಾಲಕಾದಿ ಸೈನಿಕರೆಲ್ಲರೂ ಬೆಕ್ಕಸಬೆರಗಾಗಿ ಬಾರಿಬಿಟ್ಟು ಓರೆಯೂ ಏನೂತೋಚದೇ ಸ್ತಬ್ಧರಾಗಿ ನಿಂತರು. ಬಾಲಕನು ಕುದುರೆಯನ್ನು ನೆಟ್ಟಗೆ ಮಹಾರಾಜನಿದ್ದೆಡೆಗೆ ಬಿಟ್ಟನು. ಮಹಾರಾಜನು ಈ ದಿವ್ಯ ಬಾಲಕಿಯನ್ನು ನೋಡಿ, ಆಶ್ಚರಿಗೊಂಡು, "ಎಲಾ ಕನ್ಯಾಮಣಿಯೇ, ನೀನಾರು?" ಎಂದು ಕೇಳಿದನು. ಆದಕ್ಕೆ ಬಾಲಕನು ಮೃದುಮಧುರ ಸ್ವರದಿಂದ ಗಂಭೀರವಾಗಿ, "ಎಲೈ, ನಾನು ಜಯಲಕ್ಷ್ಮಿಯು. ನೀನು ಹೇಮನಗರಿಯ ಸಿಂಹಾಸನವನ್ನು ಏರುವ ಮುಹೂರ್ತವು ಸಮೀಪವಾಗುತ್ತಾ ಬಂದಾಗ್ಯೂ ಧೈರ್ಯಗೊಂಡು ಕೋಟೆಯೊಳಕ್ಕೆ ಪ್ರವೇಶಮಾಡಲಾರದೇ ಎದೆಗುಂದಿರುವ ನಿನ್ನ ಆಲಸ್ಯವನ್ನು ಸೈರಿಸಲಾರದೇ ನಿನ್ನನ್ನು ಸಿಂಹಾಸನದ ಸಮೀಪಕ್ಕೆ ಸಾಗಿಸಿಕೊಂಡು ಹೋಗುವುದಕ್ಕೋಸುಗ ನಾನೇ ಬಂದಿರುವೆನು. ಇನ್ನಾದರೂ ತಡಮಾಡಬೇಡ.

ಜಯಭೇರಿಯನ್ನು ಹೊಡೆಯಿಸು. ನೀನು ನಿನ್ನ ಪ್ರಮುಖರಾದ ಸೇನಾನಾಯಕನೊಡನೆ ನನ್ನನ್ನು ಹಿಂಬಾಲಿಸಿ ಬಾ. ಸಮಯ ಸಿಕ್ಕಿದಾಗ ಸಾಹಸಮಾಡಿ ಕಾರ್ಯವನ್ನು ಸಾಧಿಸಿಕೊಳ್ಳದವನ ಸಮೃದ್ಧವನ್ನು ಕಾಲವು ಅಪಹರಿಸಿ ಬಿಡುವುದು. ನಡೆ ನಿನ್ನನ್ನು ಒನ್ನು ನಿಮಿಷದಲ್ಲಿ ಸಿಂಹಾಸನದ ಮೇಲೆ ಕೂರಿಸುವೆನು." ಎಂದು ತನ್ನ ಕುದುರೆಯನ್ನು ಹಿಂದಿರುಗಿಸಿ ಮುಂದರಿದು ಹೊರಟಳು. ಕೂಡಲೇ ಆ ಮಹಾರಾಜನು ಜಯಭೇರಿಯನ್ನು ಹೊಯಿಸಿಕೊಂಡು ತನ್ನನ್ನು ಹಿಂಬಾಲಿಸುವಂತೆ ತನ್ನ ಸೇನಾನಾಯಕರಿಗೆ ಬೆಸಸಿ ಸಂತೋಷಾತಿಶಯದಿಂದ ಹಿಗ್ಗಿ ತಲೆಗಾಲ್ತಿಳಿಯದೇ ಕುದುರೆಯ ಮೇಲೆ ಏರಿ ಆ ಮೋಹಿನಿಯನ್ನು ಹಿಂಬಾಲಿಸಿದನು. ಜಯಲಕ್ಷ್ಮಿಯು ನೆಟ್ಟಗೆ ಹೇಮನಗರದ ಕೋಟೆಯೊಳಕ್ಕೆ ಹೊರಟಳು. ಅಲ್ಲಿ ಅಲ್ಲಲ್ಲಿ ಅಪ್ರಮತ್ತರಾಗಿ ಕಾವಲಿದ್ದ ಬಿಚ್ಚುಕತ್ತಿ ಪಹರೆಯವರೆಲ್ಲರೂ ಈ ತೇಜೋ ಮೂರ್ತಿಯನ್ನು ನೋಡಿ ಬೆರಗಾಗಿ ಚಿತ್ರಲಿಖಿತ ಪ್ರತಿಮೆಗಳಂತೆ ನಿಂತರು. ರಾಜಲಕ್ಷ್ಮಿಯು ತನ್ನ ಕುದುರೆಯನ್ನು ಅರಮನೆಯ ಬಾಗಿಲ ಮುಂದಣ ಮೈದಾನದಲ್ಲಿ ನಿಲ್ಲಿಸಿ ಹಿಂದೆ ಬರುತ್ತಿದ್ದ ಪಾರಸೀಕ ಮಹಾರಾಜನನ್ನು ನೋಡಿ, ಗಂಭೀರವಾಗಿ "ಎಲೈ ನೀವು ನಿಮ್ಮ ಕುದುರೆಗಳನ್ನೆಲ್ಲಾ ಇಲ್ಲಿಯೇ ಬಿಟ್ಟು ವಿನೀತರಾಗಿ ನನ್ನೊಡನೆ ಅರಮನೆಯೊಳಕ್ಕೆ ಬನ್ನಿರಿ.'' ತಾನು ತನ್ನ ಕುದುರೆಯನ್ನು ಅಲ್ಲಿಯೇ ಬಿಟ್ಟು ಅರಮನೆಯ ಬಾಗಿಲ ಕಡೆಗೆ ಕಾಲುನಡೆಯಿಂದ ಮುಂದರಿದು ಪ್ರಾಸಾದದ ಮೇಲುಪ್ಪರಿಗೆಯ ಸೋಪಾನಗಳನ್ನು ಏರಿ ಹೊರಟಳು. ಆ ಮಹಾರಾಜನು ರಾಜಲಕ್ಷ್ಮಿಯ ಅಪ್ಪಣೆಯಂತೆ ಆಕೆಯನ್ನು ಹಿಂಬಾಲಿಸಿ ಹೊರಟನು. ರಾಜಲಕ್ಷ್ಮಿಯು ಮೇಲುಪ್ಪರಿಗೆಯನ್ನು ಸೇರಿದಕೂಡಲೇ ಅಲ್ಲಿ ನಡಾಕಟ್ಟಿಕೊಂಡು ಸಿದ್ಧರಾಗಿದ್ದ ಅಧಿಕಾ

ರಿಗಳನ್ನು ನೋಡಿ "ಎಲೈ, ಸರಿಯಾದ ಮುಹೂರ್ತವು ಬನ್ದೊದಗಿತು. ಇನ್ನು ನೀವು ಆಲಸ್ಯ ಮಾಡಲಾಗದು ; ಮಂಗಳವಾದ್ಯಗಳು ಮೊಳಗಲಿ ! ವಿಜಯೋತ್ಸವವು ವಿಜೃಮ್ಭಣೆಯಿಂದ ನಡೆಯಲಿ." ಎನ್ದಳು. ಆಕ್ಷಣವೇ ದಿಗಂತಗಳು ಸೆಲೆಯೇಳುವಂತೆ ಜಯಭೇರಿಯ ನಿನಾದವು ಭೋರೆಂದು ಎದ್ದಿತು. ಜಯಲಕ್ಷ್ಮಿಯು ಅಂತರ್ಧಾನಳಾದಳು. ಕತ್ತಲು ಕವಿದಂತೆ ಆಯುಧಪಾಣಿಗಳಾದ ಸೈನಿಕರು ಎತ್ತಣದಿಂದಲೋ ಬಂದು ಪಾರಸೀಕ ಪ್ರಮುಖರನ್ನು ಮುತ್ತಿ ಅರಗಳಿಗೆಯಲ್ಲಿ ಅವರನ್ನು ಸೆರೆಪಂಜರಗಳಲ್ಲಿ ಸೇರಿಸಿಬಿಟ್ಟರು. ಈ ಅಸಾಧಾರಣವಾದ ಕಾರ್ಯವನ್ನು ನಿರ್ವಹಿಸಿದ ಕಾರಣ ಈ ರಾಜಪುತ್ರನಿಗೆ ಸಂಗ್ರಾಮಸಿಂಹನೆಂಬ ಅನ್ವರ್ಥಕವಾದ ಹೆಸರನ್ನು ಕೊಟ್ಟಿರುವರು. ಈತನು....." ಎನ್ನುತ್ತಿರುವಷ್ಟರಲ್ಲಿಯೇ ಮೋಹಿನಿಯು "ಎಲೇ,ಚಿತ್ರಲೇಖೇ, ಸಾಕು ಸಾಕಿನ್ನಾತನ ಪ್ರತಾಪವು; ನೀನಿನ್ನೇಕೆ ಆ ಮಹಾವೀರನನ್ನು ಚಿತ್ರಿಸುವುದಕ್ಕೆ ಶ್ರಮ ಪಡುತ್ತಿರುವೆ ? ಸಾಕು ಸುಮ್ಮನಿರು. ಆ ವಯಸ್ಸಿನಲ್ಲಿಯೇ ಅಂತಹ ಕ್ಷುಲ್ಲಕೋಪಾಯ ದಿಂದ ಆ ಮಲ್ಲರನ್ನೆಲ್ಲಾ ಮೋಸಗೊಳಿಸಿದ, ರಣಹೇಡಿಯಾದ ಆ ಕ್ಷತ್ರಿಯಾಧಮನಿಗೆ ಸಂಗ್ರಾಮಸಿಂಹನೆಂಬ ಹೆಸರನ್ನು ಯಾವ ವಿವೇಕಿಯೂ ಕೊಟ್ಟಿರಲಾರನು. ವಿವೇಕಿಗಳು ಅವನಿಗೆ ಸರಿಯಾದ ಹೆಸರನ್ನು ಕೊಟ್ಟಿರುವ ವಿಷಯದಲ್ಲಿ ಸಂಶಯವೇಯಿಲ್ಲ ; ಆದರೆ, ಬುದ್ಧಿಶಾಲಿಗಳಾರೋ ಅವನಲ್ಲಿ ಕನಿಕರದಿಂದ ಅವನ ಆ ಹೆಸರಿನ ಆದಿಯಲ್ಲಿ ಒಂದಕ್ಷರವನ್ನು ಸೇರಿಸಿರಬಹುದು. ಸಾಕಿನ್ನಾತನಚಿತ್ರವನ್ನು ಅತ್ತ ಒಗೆದು ಮತ್ತಾರನ್ನಾದರೂ ಬರೆ. ವೀರಕುಮಾರಿಯರು ಅಂತಹ ಕ್ಷತ್ರಿಯಾಧಮನ ಚಿತ್ರವನ್ನು ನೋಡಿದರೆ ಸಚೈಲಸ್ನಾನವನ್ನು ಮಾಡಬೇಕು." ಎನ್ದಳು.

ಚಿತ್ರಲೇಖೆಯು ಒಡನೆಯೇ ತಾನು ಬರಿಯುತ್ತಿರುವ ಚಿತ್ರವನ್ನು ಚೂರುಚೂರಾಗಿ ಹರದು ಬೀಸಾಡಿ ಪಶ್ಚಾತ್ತಾಪ ಸೂಚಕವಾದ ಮಂದಹಾಸದಿಂದ ಮತ್ತೊಂದು ಕಾಗದವನ್ನು ಕೈಗೆ ತೆಗೆದುಕೊಂಡು, ‹‹ ನಾನೀಗ ಒಬ್ಬರಾಜಕುಮಾರನನ್ನು ಬರಿಯುವೆನು ; ಈತನಲ್ಲಿ ನೀನಾವ ದೋಷವನ್ನೂ ಹುಡುಕಲಾರೆ. ಆ ರೀತನೆನ್ನುವಿಯೋ ? ಈತನು ಮಾಗಧ ದೇಶದ ಮಹಾರಾಜನ ಮಗನಾದ ಸೋಮದತ್ತನ ಮಗನು. ಸೋಮದತ್ತನಿಗೆ ಮಕ್ಕಳೇ ಇರಲಿಲ್ಲ. ಒಂದಾನೊಂದು ದಿನ ಆತನು ಮಹಾರಣ್ಯದಲ್ಲಿ ಬೇಟೆಯಾಡುತ್ತಿದ್ದಾಗ ಒಂದು ಸಿಂಹವನ್ನು ಅಟ್ಟಿಕೊಂಡು ದುರ್ಗಮವಾದ ಬೆಟ್ಟದಸಾಲಿಗೆ ಹೋದನು. ಅಲ್ಲಿ ಒಂದು ಸರೋವರದ ತಡಿಯಲ್ಲಿ ಕೊಡೆಯಂತೆ ಸೊಂಪಾಗಿ ಬೆಳೆದಿದ್ದ ಒನ್ದು ಸುರಹೊನ್ನೆಯ ಮರದ ನೆರಳಿನಲ್ಲಿ ಒಂದು ದೊಡ್ಡ ಸಿಂಹವು ನೆಲದಮೇಲೆ ಬಿದ್ದಿದ್ದ ಹೊಸ ಚಿಗುರುಗಳನ್ನು ನೆಕ್ಕುತ್ತಾ ನಿಂತಿದ್ದಿತು. ಅದನ್ನು ಕಂಡು ರಾಜನು ಬಾಣವನ್ನು ಸನ್ಧಾನಮಾಡುವಷ್ಟರಲ್ಲಿಯೇ ಅದು ಮಟ್ಟಮಾಯವಾಗಿ ಹೋಯಿತು. ಆಗ ರಾಜನು ಆಶ್ಚರಿಗೊಂಡು ಆ ಮರದ ಕೆಳಕ್ಕೆ ಹೋಗಿ ನೋಡಲು ಅಲ್ಲಿ ಆಚಿಗುರಿನಮೇಲೆ ವಟಪತ್ರಶಾಯಿಯಾದ ಶ್ರೀ ಕೃಷ್ಣನಂತೆ ಕಾಲುಗಳನ್ನು ಎತ್ತಿಕೊಂಡು ಕೈಗಳಿಂದ ಹೆಬ್ಬೆಟ್ಟನ್ನು ಬಾಯಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಪ್ರಯತ್ನಪಡುತ್ತಾ ಮಗು ಅಂಗತನಾಗಿ ಮಲಗಿದ್ದಿತು. ಅದಕ್ಕೆ ಅಮೂಲ್ಯವಾದ ಕವಚ ಒಂದು ಹಾಕಿದ್ದಿತು ನವರತ್ನ ಖಚಿತವಾದ ಬಾಲತೊಡಿಗೆಗಳೆಲ್ಲಾ ಇದ್ದುವು ; ಇದರ ಎದೆಯಮೇಲೆ ಒಂದು ಚೀಟಿಯು ಅಂಟಿಸಿದ್ದಿತು ; ಅದರಲ್ಲಿ, ‹‹ ಅಭಿನವ ಭರತ ’’ ಎನ್ದು ಬರದಿದ್ದಿತು. ರಾಜನು ಆ ಮಗುವನ್ನು ಅತಿಹರುಷದಿಂದ

ಮನೆಗೆತ್ತಿಕೊಂಡು ಬನ್ದು ತನ್ನ ಹೆಂಡತಿಯಕೈಗೆ ಕೊಟ್ಟನು. ಆಕೆಯು ಆದಕ್ಕೆ ತನ್ನ ಔರಸಪುತ್ರನಿಗೆ ಹೇಗೋ ಹಾಗೆ ಜಾತಕರ್ಮ ನಾಮಕರಣಾದಿ ಸಂಸ್ಕಾರಗಳನ್ನು ಮಾಡಿಸಿದಳು. ಪುರೋಹಿತರು ಆ ಮಗುವಿಗೆ ದೇವದತ್ತನೆಂದು ಹೆಸರಿಟ್ಟರು ; ತಂದೆಯು ಅದನ್ನು ರಾಜಶೇಖರನೆಂದು ಕರೆದನು. ತಾಯಿಯು ಸೋಮಸುಂದರನೆಂದು ಕರೆದಳು; ಈ ಮಗು ದಿನೇದಿನೇ ಶುಕ್ಲಪಕ್ಷದ ಚಂದ್ರನಂತೆ ಬೆಳದು ಬಾಲ್ಯಕೌಮಾರಾವಸ್ಥೆಗಳನ್ನು ದಾಟಿತು. ಈಗ ಈತನ ಯೌವನ ದಶೆಯ ಚರಿತ್ರೆಯು ಬಹಳ ಮನೋರಂಜಕವಾಗಿದೆ. ಎನ್ನುತ್ತಿರುವಾಗ ಜಗನ್ಮೋಹಿನಿಯು ಬೇಸರದಿಂದ, “ಚಿತ್ರಲೇಖೆ, ಈ ಅಜ್ಞಾತ ಕುಲಗೋತ್ರನ ಚರಿತ್ರೆಗೆ ಇನ್ನು ಮಂಗಳವನ್ನು ಮಾಡು. ತಾಪಸಕುಮಾರಿಯರ ಮನವು ಇಂತಹ ಕಾಕರಿಮುನುಜರಲ್ಲಿ ನಾಟುವುದಿಲ್ಲ. ಆದರ ಎದೆಯಮೇಲೆ ಬರೆದಿದ್ದ ಅಭಿನವ ಭರತನೆಂಬ ಸಮಾಸದ ಉತ್ತರಪದಕ್ಕೆ ಆ ಸುಪ್ರಸಿದ್ಧನಾದ ದಶರಥ ಕುಮಾರನೆಂಬ ಅರ್ಥವೋ ಅಥವಾ ನಟನೆಮ್ಬ ಅರ್ಥವೋ ಅಥವಾ, ದುಷ್ಯನ್ತಕುಮಾರನೆಂದು ಅರ್ಥವೋ ಅಥವಾ ನಾಟ್ಯಾಚಾರ್ಯನೆಂದು ಅರ್ಥವೋ ಅಥವಾ ನಟನೆಂದು ಅರ್ಥವೋ ಹೇಳುವುದಕ್ಕೆ ಸಾಕಾದ ಕಾರಣಗಳಿಲ್ಲ. ಬಹುಶಃ, ಸೋಮದತ್ತನು ಆ ಪದಕ್ಕೆ ದುಷ್ಯಂತ ಕುಮಾರನೆಂದು ಅರ್ಥಮಾಡಿಕೊಂಡು ತಾನು ಭವಿಷ್ಯಚ್ಚಕ್ರವರ್ತಿಯ ತಂದೆ ಎಂಬ ಅಭಿಮಾನದಿಂದಿರಬಹುದು. ಆದರೆ ಯುವಕನ ಪೂರ್ವವೃತ್ತಾಂತವನ್ನು ಪರ್ಯಾಲೋಚಿಸಿದರೆ ಆ ಪದಕ್ಕೆ ಸಾಮಾನ್ಯನಾದ ನಟನೆಂಬುದಕ್ಕಿಂತಲೂ ಬೇರೆ ಯಾವ ಅರ್ಥವೂ ಸಾಧುವಾಗಿ ಕಾಣುವುದಿಲ್ಲ.” ಎಂದು ಚಿತ್ರಲೇಖೆಯು ಚಿತ್ರಿಸುತ್ತಿದ್ದ ಆ ಚಿತ್ರಪಟವನ್ನು ಕಿತ್ತುಕೊಂಡು ಚೂರುಚೂರಾಗಿ ಹರದು ಬೀಸಾಡಿ

ಮನ್ದಹಾಸದಿಂದ ಚಿತ್ರಲೇಖೆಯ ಮುಖವನ್ನು ನೋಡಿ, "ಎಲೌ, ಜಾಗ್ರತೆಯಾಗಿ ಮತ್ತಾರನ್ನಾದರೂ ಬರೆ ನೋಡುವ" ಎನ್ದಳು.

ಆದಕ್ಕೆ ಚಿತ್ರಲೇಖೆಯು ಮತ್ತೊನ್ದು ಕಾಗದವನ್ನು ಕೈಗೆ ತೆಗೆದುಕೊಂಡು, ಈ ರಾಜಕುಮಾರನ ಚರಿತ್ರೆಯು ಅತಿವಿಚಿತ್ರವಾಗಿದೆ ಹೇಳುವೆನು ಕೇಳು ಈತನು ಕಾಮ್ಬೋಜರಾಜನ ಮಗನಾದ ವಿಚಿತ್ರ ವೀರ್ಯನ ಮಗ; ಇವನ ಹೆಸರು ವೀರಕೇಸರಿ; ಈತನ ತಾಯಿಯ ಹೆಸರು ವಿದ್ಯುಲ್ಲತೆ; ಈಕೆಯು ಕಾಮ್ಬೋಜದೇಶದಮನ್ತ್ರಿಯಮಗಳು. ವಿಚಿತ್ರವೀರ್ಯನ ತಂದೆಯು ತನ್ನ ಮಗನಿಗೆ ಸಲುವಾಗಿ ಅರಮನೆ ಯಲ್ಲಿ ಕಲ್ಪಿಸಿದ್ದ ಸಕಲಕಲಾ ಶಾಲೆಯಲ್ಲಿ ಅನೇಕಮನ್ದಿ ರಾಜಕುಮಾ ರರೂ, ಕುಮಾರಿಯರೂ, ವಿದ್ಯಾವ್ಯಾಸಂಗವನ್ನು ಮಾಡುತ್ತಿದ್ದರು. ಇವರುಗಳಲ್ಲಿ ವಿಚಿತ್ರವೀರ್ಯನು, ಮನ್ತ್ರಿಯಮಗಳಾದ ವಿದ್ಯುಲ್ಲ ತೆಯು, ಸೇನಾದಿಪತಿಯ ಕುಮಾರ್ತೆಯಾದ ಚನ್ದ್ರಪ್ರಭೆಯು, ಈ ಮೂವರೂ ಸ್ನೇಹಿತರಾಗಿದ್ದರು. ಇವರು ಬಹಳ ಅನ್ಯೋನ್ಯವಾಗಿ ಸ್ಪರ್ಧೆಯಿಂದ ವಿದ್ಯಾವ್ಯಾಸಂಗವನ್ನು ಮಾಡುತ್ತಿದ್ದರು. ಇವರ ಸ್ನೇಹದ ವಿಷಯವಾಗಿ ವಿಶೇಷೋಕ್ತಿಯಿಂದೇನು? ಆಗಿನ ಕಾಲದಲ್ಲಿ ಮೈತ್ರಿಯ ಲಕ್ಷಣಕ್ಕೆ ಇವರುಗಳೇ ಲಕ್ಷ್ಯವಾಗಿದ್ದರು. ಮಹಾರಾಣಿಯು ತನ್ನ ಮಗನಿಗೆ ವಿದ್ಯುಲ್ಲತೆಯನ್ನು ಮದುವೆ ಮಾಡಿಕೊಳ್ಳ ಬೇಕೆಂದು ಕುತೂಹಲವುಳ್ಳವಳಾಗಿದ್ದಳು; ಮಹಾರಾಜನು ತನ್ನ ಮಗನಿಗೆ ಚನ್ದ್ರಪ್ರಭೆಯು ಅನುರೂಪಳಾಗಿರುವಳೆಂದು ಅಂದುಕೊಂಡಿ ದ್ದನು. ವೀರಕೇಸರಿಯೂ ಇವಳಲ್ಲಿಯೇ ವಿಶೇಷವಾಗಿ ಅನುರಕ್ತನಾಗಿ ದ್ದನು. ಹೀಗಿರಲೊಂದುದಿನ ಎನ್ದಿನಂತೆಯೇ ಈ ಮೂವರೂ ಸರಸಸ ಲ್ಲಾಪಗಳನ್ನು ಆಡುತ್ತಿರಲು ದೈವಯೋಗದಿಂದ ಸರಸವು ವಿರಸವಾಗಿ

ಪರಿಣಮಿಸಿತು. ವೀರಕೇಸರಿಯು ಏನೋ ಒಂದು ಮಾತಿಗಾಗಿ ಚನ್ದ್ರಪ್ರಭೆಯ ಮೇಲೆ ಕೋಪಿಸಿಕೊಂಡು "ನಾನು ನಿನ್ನನ್ನು ಸರ್ವಥಾ ವಿವಾಹಮಾಡಿಕೊಳ್ಳುವುದಿಲ್ಲ" ಎಂದು ಶಪಥಮಾಡಿದನು. ಅದಕ್ಕೆ ಆ ವೀರಕುಮಾರಿಯು ಕೋಪಾವಿಷ್ಟಳಾಗಿ, "ಎಲೈ, ನೀನು ನನ್ನನ್ನು ವಿವಾಹಮಾಡಿಕೊಂಡರೂ ಸರಿಯೇ; ಮಾಡಿಕೊಳ್ಳದಿದ್ದರೂ ಸರಿಯೇ. ನಾನೇನೊ ನಿನ್ನನ್ನು ಮನಸಾ ವರಿಸಿದ್ದೆನು; ಆದುದರಿಂದ, ನಾನು ನಿನ್ನ ಹೊರತು ಮತ್ತೊಬ್ಬನ ಕೈಯನ್ನು ಹಿಡಿಯುವುದೂ ಇಲ್ಲ; ನನ್ನ ಸಂಕಲ್ಪವು ಸಿದ್ಧಿಯಾಗುವುದಕ್ಕೆ ತಕ್ಕ ಪ್ರಯತ್ನವನ್ನು ನನ್ನ ಮರಣಾವಧಿಮಾಡದೇ ಇರುವುದೂ ಇಲ್ಲ. ಒಳ್ಳೆಯದಿರಲಿ ! ವೀರಪತ್ನಿಯರ ರಕ್ತವು ನನ್ನಧಮನಿಯಲ್ಲಿ ಓಡಾಡುತ್ತಿದ್ದರೆ, ನಾನು ನಿನ್ನಿಂದಲೇ ಒಬ್ಬ ಮಗನನ್ನು ಪಡದು ಅವನಿಂದಲೇ ವೀರಕೇಸರಿಯಾದ ನಿನ್ನನ್ನು ಕೈಶೆರೆಹಿಡಿಸಿ ಕೇಸರಿಯಂತೆ ಪಂಜರದಲ್ಲಿಡಿಸಿ ನಿನಗೆ ವಿವೇಕೋದಯವಾಗುವ ಹಾಗೆ ಮಾಡದೇ ಇರುವುದಿಲ್ಲ. ಈ ನನ್ನ ಶಪಥವು ನಿನಗೆ ಚೆನ್ನಾಗಿ ಜ್ಞಾಪಕವಿರಲಿ" ಎನ್ದು ಮಿತಿಮೀರಿದ ದುಃಖದಿಂದ ಉಕ್ಕಿ ಕಪೋಲಗಳಮೇಲೆ ಕಾಲುವೆಯಾಗಿ ಹರಿಯುತ್ತಿದ್ದ ಕಣ್ಣೀರನ್ನು ಶರಗಿನಿಂದ ಒರೆಸಿಕೊಳ್ಳುತ್ತಾ ತನ್ನ ಮನೆಗೆ ಹೊರಟುಹೋದಳು." ಎನ್ದು ಮಾತು ನಿಲ್ಲಿಸಿ ಏಕಾಗ್ರ ಚಿತ್ತತೆಯಿಂದ ಆ ಚಿತ್ರದ ಸೂಕ್ಷ್ಮಭಾಗಗಳನ್ನು ಚಿತ್ರಿಸತೊಡಗಿದಳು.

ಅದಕ್ಕೆ ಜಗನ್ಮೋಹಿನಿಯು ಅಚ್ಚರಿಗೊಂಡು, "ಅಹಹಾ ! ಇದೀಗ ವೀರಕ್ಷತ್ರಿಯ ಕುಮಾರಿಗೆ ತಕ್ಕ ಶಪಥವು ! ಪ್ರತಿಜ್ಞೆಯು ನೆರವೇರಲಿ ; ನೆರವೇರದೇ ಹೋಗಲಿ ; ನೆರವೇರುವುದಕ್ಕೆ ತಕ್ಕ ಪ್ರಯತ್ನವನ್ನು ಮರಣಾವಧಿ ಮಾಡುವುದೀಗ ಪೌರುಷವು. ಅವಿಚ್ಛಿನ್ನವಾದ

ಪ್ರಯತ್ನವೇ ಅಭೀಷ್ಟಸಿದ್ಧಿ ಆದಿಕಾರಣ. ಇಂತಹ ಅಸಾಧ್ಯವಾದ ಶಪಥವನ್ನು ಮಾಡಿದ ಆ ಮನಸ್ವಿಯು ಅದಕ್ಕೆ ತಕ್ಕ ಪ್ರಯತ್ನವನ್ನು ಮಾಡದೇ ಬಿಡುವಳೇ! ಒಳ್ಳೆಯದು, ಮುಂದೆ ಮುಂದೆ?'' ಎನ್ದಳು. ಆಗ ಚಿತ್ರಲೇಖೆಯು, ‹‹ ಬಳಿಕ ಆ ವಿದ್ಯುಲ್ಲತೆಯು ಕನ್ಯಾಜನೋಚಿ'' ತವಾದ ವ್ರತೋಪಾಸ ನಿಯಮಗಳನ್ನು ಆಚರಿಸಬೇಕೆಂಬ ನೆವದಿಂದ ತನ್ನ ಮಾತಾಪಿತೃಗಳ ಅನುಜ್ಞೆಯನ್ನು ಪಡೆದು ತಮ್ಮ ಕುಲಪುರೋಹಿತರಾದ ದತ್ತಾತ್ರೇಯರ ಆಶ್ರಮಕ್ಕೆ ಹೋಗಿ ಅಲ್ಲಿ ಮುನಿಜನ ಶುಶ್ರೂಷೆಯನ್ನು ಮಾಡುತ್ತಾ ತನ್ನ ಮನೋರಥ ಸಿದ್ಧಿಯಾಗುವ ಸಮಯವನ್ನು ತಾಳಿಮೆಯಿಂದ ನಿರೀಕ್ಷಿಸಿಕೊಂಡಿದ್ದಳು. ಕೆಲಕಾಲದಮೇಲೆ, ವಿಚಿತ್ರವೀರ್ಯನು ಮೃಗಯಾವಿಹಾರಾರ್ಥವಾಗಿ ಆ ದತ್ತಾತ್ರೇಯರ ಆಶ್ರಮಕ್ಕೆ ಬಂದನು. ಆಗ ದೈವಯೋಗದಿಂದಲೋ ಅಥವಾ ವಿದ್ಯುಲ್ಲತೆಯ ಪ್ರಯತ್ನದಿಂದಲೋ ಆತನ ದೃಷ್ಟಿಯು ವಿದ್ಯುಲ್ಲತೆಯಮೇಲೆ ಬಿದ್ದಿತು. ಅರಗಳಿಗೆಯಲ್ಲಿ ಆತನ ಮನವು ಆ ಸೌಂದರ್ಯನಿಧಿಯಾದ ವಿದ್ಯುಲ್ಲತೆಯ ಕಟಾಕ್ಷಶರವೃಷ್ಟಿಯಿಂದ ಜಯಿಸಲ್ಪಟ್ಟಿತು. ಬಳಿಕ ಆತನು ಆ ವನಿತೆಯನ್ನು ವರಿಸಬೇಕೆಂದು ಎಷ್ಟು ಸಾಹಸಪಟ್ಟರೂ ಆಕೆಯು ಅದಕ್ಕೆ ಅನುಮೋದಿಸಲಿಲ್ಲ. ಆಗ ಆ ವಿಚಿತ್ರವೀರ್ಯನು-ಏನೆಂದು ಹೇಳಲಿ-ಮಾನವನ್ನು ಬಿಟ್ಟು ಆ ಕಾಮಿನಿಯ ಕಾಲಿಗೆ ಬಿದ್ದು ದೈನ್ಯವೃತ್ತಿಯಿಂದ ಬೇಡಿಕೊಂಡನು. ಆಗ ಆ ಚದುರೆಯು ಆತನಿಂದ ನನ್ನನ್ನೇ ಪಟ್ಟದ ರಾಣಿಯನ್ನಾಗಿಮಾಡಿಕೊಳ್ಳುವೆನು, ಎನ್ದು ಸೂರ್ಯಚನ್ದ್ರಸಾಕ್ಷಿತವಾಗಿ ಪ್ರಮಾಣವಚನವನ್ನೂ, ಅದಕ್ಕೆ ನಿದರ್ಶನವಾಗಿ ಆತನ ಮುದ್ರೆಯುಂಗುರವನ್ನೂ ತೆಗೆದುಕೊಂಡು ಆತನನ್ನು ವರಿಸಿದಳು. ಆ ರಾಜನು ತನ್ನ ಪಟ್ಟಣಕ್ಕೆ ಹಿಂದಿರುಗಿದಮೇಲೆ ಸ್ವಾಭಾವಿಕವಾಗಿ

ಈ ಸಂಗತಿಯನ್ನೆಲ್ಲಾ ಮರೆತುಹೋದನು. ಆ ಸಾಧ್ವಿಯು ಗರ್ಭಿಣಿಯಾಗಿ ಸರಿಯಾದಕಾಲದಲ್ಲಿ ಆ ತಪೋವನದಲ್ಲಿಯೇ ಪುತ್ರರತ್ನವನ್ನು ಪಡೆದಳು. ಈ ಬಾಲಕನು ಶುಕ್ಲಪಕ್ಷದ ಚನ್ದ್ರನಂತೆ ದಿನೇ ದಿನೇ ವೃದ್ಧಿಹೊಂದಿ ಆ ಮಹರ್ಷಿಗಳ ಸಿಕ್ಷೆಯಿಂದ ಅತ್ಯಲ್ಪಕಾಲದಲ್ಲಿಯೇ ಜ್ಞಾನವೃದ್ಧನಾದನು. ಒಂದುದಿನ ಈ ಕುಮಾರನು ತಮ್ಮ ತಾಯಿಯ ಮುಂದೆ ಕೂತುಕೊಂಡು ತಲೆಯನ್ನು ಬಾಚಿಸಿಕೊಳ್ಳುತ್ತಿದ್ದಾಗ ತಮ್ಮ ತಾಯಿಯನ್ನು ಕುರಿತು ತಮ್ಮ ತಪೋವನವಾಸಕ್ಕೆ ಕಾರಣವೇನೆಂದು ಪ್ರಶ್ನೆಮಾಡಿದನು. ಆಗ ಆ ಮಾನಿನಿಯು ತನ್ನ ಕಥೆಯನ್ನು ಆಮೂಲಾಗ್ರವಾಗಿ ಹೇಳಿದಳು. ಅದನ್ನು ಕೇಳಿ ಆ ಕುಮಾರನು ವೀರಾವೇಶವನ್ನು ತಾಳಿ ತಟ್ಟನೆ ಎದ್ದು ನಿಂತು, ‘‘ ಅಮ್ಮಾ ನಾನು, ನಿನ್ನ ಶಪಥವನ್ನು ನೆರವೇರಿಸುವವರೆಗೂ ನಾನು ನನ್ನ ಈ ಕೂದಲನ್ನು ಮುಡಿಗಟ್ಟುವುದಿಲ್ಲ–’’ ಎನ್ದು ಶಪಥವನ್ನು ಮಾಡಿದನು. ಅದನ್ನು ಕೇಳಿ ಆ ಮಾನಿನಿಯು ‘‘ ವತ್ಸಾ, ಏನಿದು ! ನೀನೂ ಈ ನಿಭಾರ್ಗ್ಯಳಂತೆಯೇ ಅವಶಾತ್ತಾಗಿ ಅಸಾಧ್ಯವಾದ ಶಪಥವನ್ನು ಮಾಡಿದೆಯಲ್ಲಾ ಮುಂದೇನುಗತಿ ! ನೀನಿನ್ನೂ ಕಣ್ಣು ತೆರೆಯದ ಹಸುಗೂಸು ; ನಿನಗೆ ಆ ವೀರನನ್ನು ಜಯಿಸುವಷ್ಟು ಬಲವೆಲ್ಲಿದೆ ? ಸಹಾಯಸಂಪತ್ತಿಯೆಲ್ಲಿದೆ ? ಕೊಂಚ ಸೈರಿಸು! ಅದಕ್ಕೂ ಸರಿಯಾದಕಾಲ ಬರದೇ ಇರಲಾರದು ’’ ಎನ್ದಳು. ಅದಕ್ಕೆ ಆ ಕುಮಾರನು — ‘‘ ಅಮ್ಮಾ, ನೀನು ಹಾಗನ್ನಬೇಡ ! ಪರದೇವತೆಯಾದ ಮಾತೆಯ ಆಶೀರ್ವಾದಕ್ಕಿಂತಲೂ ಅತಿಶಯವಾದ ಬಲವು ಈ ಭೂತಳದಲ್ಲಿ ಯಾವುದೂ ಇಲ್ಲ. ನನ್ನ ವಿಕ್ರಮಕ್ಕೆ ನನ್ನ ಧಮನಿಯಲ್ಲಿ ಓಡುತ್ತಿರುವ ಸತ್ಯಸಂಧರಾದ ಮಹಾ ವೀರರ ರಕ್ತವಲ್ಲದೇ ನನ್ನ ವಯಸ್ಸು ಸರ್ವಥಾ ಕಾರಣವಲ್ಲ. ಮನಮಾಡಿದರೆ ಅನುವು ತಾನಾಗಿಯೇ ಬರು

ವುದು. ಇದಲ್ಲದೇ ಉದ್ದೇಸಿಸಿದ ಕಾರ್ಯಜಯಕ್ಕೆ ಮನೋಜಯವೇ ಸೂಚಕ. ಈ ಸಮಯದಲ್ಲಿ ನೀನು ಅಡ್ಡಮಾತುಗಳನ್ನಾಡದೇ ನನಗೆ ಜಾಗ್ರತೆಯಾಗಿ ಆಶೀರ್ವದಿಸು, ನಾನು ಹೊರಡುವೆನು '' ಎನ್ದು ತಾಯಿಯ ಕಾಲಿಗೆ ಅಡ್ಡಬಿದ್ದನು. ಆಗಲಾ ವೀರಮಾತೆಯು ಅರಗಳಿಗೆ ಅವಾಕ್ಕಾಗಿ ನಿಂತಳು, ಅವಳ ಆಲಮೋಗವು ವಿಕಸಿತವಾಯಿತು, ಕಣ್ಣುಗಳಿಂದ ನೀರುಧಾರೆಯಾಗಿ ಸುರಿಯಿತು. ಆಕೆಯ ಕಣ್ಣೀರ ಧಾರೆಯು ತನ್ನ ಪ್ರತಿಜ್ಞೆಯನ್ನು ಪರಿಪಾಲಿಸುವುದಕ್ಕೆ ಉದ್ಯುಕ್ತನಾದ ತನ್ನ ವೀರಕುಮಾರನನ್ನು ಕಂಡ ಆನಂದದಿಂದ ಉಂಟಾಯಿತೋ ಅಥವಾ ತನ್ನ ಪ್ರಾಣಸಮನಾದ ಮಗನನ್ನು ಅಗಲು ವ್ಯಸನದಿಂದ ಉಂಟಾಯಿತೋ ಹೇಳುವುದಕ್ಕಾಗುವುದಿಲ್ಲ. ಅದೇತಕ್ಕೆಂದರೆ, ಮಹಾವೀರರ ಚರಿತ್ರೆಗಳಿಂದ ಭಾರತೀಯರಾದ ವೀರಮಾತೆಯರಿಗೆತಮ್ಮ ಮಕ್ಕಳನ್ನು ರಣರಂಗಕ್ಕೆ ಕಳುಹಿಸುವುದೊನ್ದುಮಹೋತ್ಸವವೆಂದು ತಿಳಿಯಬರುತ್ತದೆ. ಆದರೆ, ಹೆತ್ತತಾಯಿಯು ತನ್ನ ಮಗುವನ್ನುಕಯ್ಯಾರ ಮೃತ್ಯುವಿನ ಬಾಯಿಗೆ ತುತ್ತು ಮಾಡುವುದೆಮ್ಬುದು ಸಾಮಾನ್ಯರಿಗೆ ಮಾನುಷ್ಯಸ್ವಭಾವಕ್ಕೆ ವಿರುದ್ಧವಾಗಿ ಕಾಣುತ್ತದೆ. ಈ ವಿಷಯದಲ್ಲಿವೀರಮಾತೆಯರ ಅಂತಃಕರಣವೇ ಪ್ರಮಾಣ.

ಆಗಲಾಮನಸ್ವಿನಿಯು ತಟ್ಟನೆ ಶರಗಿನಿಂದ ಕಣ್ಣೀರನ್ನು ಒರಿಸಿಕೊಂಡು ಮಗನನ್ನು ಮೇಲಕ್ಕೆ ಯೆತ್ತಿ, ಮೈಯ್ದಡವಿ, ‹‹ ವತ್ಸಾ, ದೇವರು ನಿನಗೆ ಜಯವನ್ನು ದಯೆಪಾಲಿಸಲಿ! '' ಎನ್ದು ಹರಸಿದಳು. ಕೂಡಲೆ ಆ ವೀರಕುಮಾರನು ಹಿನ್ದಿರುಗಿ ನೋಡದೇ ಹೊರಟುಹೋದನು

ತಾಯಿಯು, ಸಿಂಹದಮರಿಯಂತೆ ಆ ಗಹನಮಾರ್ಗದಲ್ಲಿ ಪ್ರಯಾಣಮಾಡುತ್ತಿದ್ದ ಮಗನನ್ನು ಕಣ್ಣಿಗೆ ಮರೆಯಾಗುವವರೆಗೂ ಎವೆಯಿಕ್ಕದೆ ನೋಡುತ್ತಿದ್ದು ಬಳಿಕ ಅಲ್ಲಿಯೇ ಕೈಕಾಲು ಕುಸಿದು ನೆಲಕ್ಕೆ

ಬಿದ್ದು ಹೋದಳು. ಆಕೆಯು ನೆಲಕ್ಕೆ ಬಿದ್ದುಹೋದುದಕ್ಕೆ ಕಾರಣವನ್ನು ಬಹಳ ಹೊತ್ತು ಯೋಚಿಸಬೇಕಾದುದಿಲ್ಲ. ಆಕೆಯ ಮನವು ಆಕೆಯ ಕನ್ದನ ಹಿಂದೆಯೇ ಹೊರಟುಹೋಯಿತು. ಮನವು ತನುವನ್ನು ಬಿಟ್ಟುಹೋದಮೇಲೆ ಇನ್ದ್ರಿಯಗಳು ಸ್ತಬ್ಧವಾದವು ; ಮನೋ ಇನ್ದ್ರಿಯ ವ್ಯಾಪಾರಶೂನ್ಯವಾದ ತನುವು ತಾನಾಗಿಯೇ ನೆಲಕ್ಕೆ ಬಿದ್ದು ಹೋದುದೇನೂ ಸ್ವಭಾವವಿರುದ್ಧವಲ್ಲ.

ಮೋಹನೀ:—ಅಷ್ಟಲ್ಲದೇ ಸ್ತ್ರೀಬುದ್ಧಿಯು ವಿನಾಶಕವಾದುದೆಂದು ಸುಪ್ರಸಿದ್ಧವಾಯಿತೆ ? ಒಳ್ಳೆಯದು ! ಆಮೇಲೇನಾಯಿತು ?

ಚಿತ್ರಲೇಖೆ:—ಮಹಾರಾಣಿಯೇ, ಮನ್ನಿಸಬೇಕು ; ಈ ಅಪವಾದವು ಅಸತೀವಿಷಯಕವಾದುದು. ಸತಿಯರ ಮತಿಯು ಅತಿಹಿತವಾದುದು. ಅದಕ್ಕೆ ಈ ಪತಿವ್ರತಾ ಶಿರೋಮಣಿಯ ಚರಿತ್ರೆಯೇ ನಿದರ್ಶನವಾಗಿದೆ. ಈ ಸಾಧ್ವಿಯ ಶಪಥವು ಹೇಗೆ ನೆರವೇರುವುದೋ ಕೊಂಚ ಕೇಳು. ಆ ಬಾಲಕನು ಕ್ಷಿಪ್ರದಲ್ಲಿಯೇ ಬೇಕಾದಷ್ಟು ಸೈನ್ಯವನ್ನು ಕಟ್ಟಿಕೊಂಡು ಬಂದು ತನ್ನ ತನ್ದೆಯನ್ನು ಪ್ರತಿಭಟಿಸಿ ಹನ್ನೆರಡು ದಿನ ಅವನೊಂದಿಗೆ ಹೆಣಗಾಡಿ ಕಡೆಗೆ ಅವನನ್ನು ಸೋಲಿಸಿ ಸೆರೆಹಿಡಿದು ಪಂಜರದಲ್ಲಿ ಹಾಕಿಕೊಂಡು ತಮ್ಮ ತಾಯಿಯ ಇದಿರಿಗೆ ತಂದು ನಿಲ್ಲಿಸಿದನು.

ಮೋಹಿನೀ :—ಆಹಾ ! ಕಡೆಗೆ ಹೆಂಗಸಿನ ಹಟವೇ ಗೆದ್ದಿತಲ್ಲಾ! ಆಮೇಲೆ ಏನಾಯಿತು ?

ಚಿತ್ರಲೇಖೆ:— ಚಿಂತಾನಳಕ್ಕೆ ಗ್ರಾಸವಾಗಿ, ವ್ರತೋಪವಾಸನಿಯಮಗಳಿಂದ ಕೃಶಳಾಗಿ ಅಸ್ಥಿಪಂಜರದಂತೆ ಕಾಣುತ್ತಿದ್ದ ಆ ಸಾಧ್ವಿಯು ತನ್ನ ವಲ್ಲಭನನ್ನು ನೋಡಿದ ಕೂಡಲೇ ಆತನನ್ನು ಸೆರೆಬಿಡಿಸಿ ಆತನಿಗೆ ಸಾ

ಸ್ಯಾಂಗಪ್ರಣಾಮವನ್ನು ಮಾಡಿ, ತನ್ನ ಪೂರ್ವೋತ್ತರವನ್ನು ಆತನಿಗೆ ಅರಿಕೆಮಾಡಿ, ಆತನು ರಹಸ್ಯದಲ್ಲಿ ತನ್ನೊಡನೆ ಆಡಿದ್ದ ಮಾತುಗಳನ್ನು ನೆನಪು ಮಾಡಿ, ಆತನು ತನಗೆ ಕೊಟ್ಟಿದ್ದ ಮುದ್ರೆಯುಂಗುರ ಮುಂತಾದ ಕುರುವುಗಳನ್ನು ಆತನ ಪ್ರತಿಬಿಮ್ಬದಂತೆ ಕಾಣುತ್ತಿದ್ದ ಆ ಬಾಲವೀರ ನನ್ನು ತೋರಿ, ‹‹ಈಗಲಾದರೂ ನನ್ನ ಅಪರಾಧಗಳನ್ನು ಮನ್ನಿಸಿ ನನ್ನ ನ್ನು ನಿನ್ನ ಪಾದಸೇವಕಳನ್ನಾಗಿ ಸ್ವೀಕರಿಸಬೇಕು'' ಎನ್ದು ಬಹುವಾಗಿ ಬೇಡಿಕೊಂಡಳು. ಆದಾಗ್ಯೂ ಆ ಮಹಾರಾಜನು ಆ ಪತಿವ್ರತಾ ಶಿರೋ ಮಣಿಯನ್ನು ಕಣ್ಣೆತ್ತಿಕೂಡಾ ನೋಡದೇ, ‹‹ನನಗೆ ಸಲವಾಗಿ ಮಹಾ ಮಹಾ ವೀರರಾದ ನನ್ನ ಸೈನಿಕರೆಲ್ಲರೂ ರಣರಂಗದಲ್ಲಿ ತಮ್ಮ ಪ್ರಾಣಗ ಳನ್ನು ಒಪ್ಪಿಸಿದರು. ನನ್ನ ಪ್ರಾಣಗಳಿಗಿಂತಲೂ ಹೆಚ್ಚಾದ ಮಾನವು ಅಳಿದುಹೋಯಿತು ; ಇನ್ನುಳಿದ ಈ ಕಾಷ್ಟದಿಂದ ಪ್ರಯೋಜನವೇನು ? ಈ ಅಪ್ರಯೋಜಕವಾದ ಕಾಷ್ಟವನ್ನು ನೀನು ದಯೆಮಾಡಿ ವೀರಾಗ್ರಣಿ ಯಾದ ನಿನ್ನ ಮಗನ ಕೈಯಿಂದ ಕಡಿಯಿಸಿ ಪಾವಕನಿಗೆ ಒಪ್ಪಿಸಿದರೆ ನಿನಗೆ ಕೋಟಿಯಜ್ಞಗಳ ಫಲವು ಲಭಿಸುತ್ತದೆ” ಎನ್ದನು. ಆಗ ಆಸಮಯ ದಲ್ಲಿ, ‹‹ಎಲೈ, ಮಹಾರಾಜನೇ, ನೀವುಗಳು ಆ ದಿನ ಪಾಠಶಾಲೆಯ ಪಡ ಸಾಲೆಯಲ್ಲಿ, ಪಂಚಭೂತಸಾಕ್ಷಿಯಾಗಿ ಪರಸ್ಪರ ವಿವಾಹ ಮಾಡಿಕೊಳ್ಳು ತ್ತೇವೆಂದು ವಾಗ್ದಾನ ಮಾಡಿದಾಗಲೇ ನಿಮ್ಮಗಳ ಮುಖ್ಯವಾದ ವೈವಾ ಹಿಕವಿಧಿಯು ನೆರವೇರಿತು ; ಆ ನಿನ್ನ ವಾಗ್ದಾನಕ್ಕೆ ವಿರೋಧವಾಗಿ ನಡೆ ದುದರಿಂದಲೇ ನಿನಗೆ ಇಹದಲ್ಲಿ ಇಷ್ಟು ಕಷ್ಟನಷ್ಟಗಳು ಸಂಭವಿಸಿದುವು. ಇನ್ನುಮೇಲಾದರೂ ನೀನು ನಿನ್ನ ಮನಸ್ಸಾಕ್ಷಿಗೆ ಅನುಸಾರವಾಗಿ ನಡದು ಕೊಳ್ಳದೇ ಹೋದರೆ ನಿನಗೆ ಪರಲೋಕದಲ್ಲಿ ಇದಕ್ಕಿಂತಲೂ ಅಧಿಕವಾದ ಅನರ್ಥಗಳು ತಪ್ಪುವುದಿಲ್ಲ. ಈ ಸಾಧ್ವಿಯೇ ನಿನ್ನ ಪಟ್ಟದರಾಣಿಯು ;

ಈ ವೀರಕುಮಾರನೇ ನಿನ್ನ ಔರಸಪುತ್ರನು. ನೀನಿನ್ನು ನಿನ್ನ ಮನಸ್ಸಿನ ಕಾಲುಷ್ಯವನ್ನು ಕಳೆದು ಇವರುಗಳನ್ನು ಯಥಾವಿಧಿಯಾಗಿ ಸ್ವೀಕರಿಸು. ಇದರಿಂದ ನಿನಗೆ ಇಹಪರದಲ್ಲಿ ಮಹಾ ಶ್ರೇಯಸ್ಸು ಉಂಟಾಗುತ್ತದೆ.'' ಎನ್ನುದ್ದ ಅಶರೀರವಾಣಿಯು ಕೇಳಬಂದಿತು.

ಅದನ್ನು ಕೇಳಿದ ಕೂಡಲೇ ವಿಚಿತ್ರವೀರ್ಯನು ವಿದ್ಯುಲ್ಲತೆಯ ಕಾಲಿಗೆ ಬಿದ್ದು ಕ್ಷಮಾಪಣೆಯನ್ನು ಬೇಡಿಕೊಂಡು ವೀರಕೇಸರಿಯಾದ ತನ್ನ ಮಗನನ್ನು ಬಾಚಿ ತಬ್ಬಿಕೊಂಡು, ಪಶ್ಚಾತ್ತಾಪದಿಂದಲೂ ಆನಂದದಿಂದಲೂ ದಡಗುಟ್ಟಿ ಸುರಿಯುತ್ತಿದ್ದ ಆನಂದಭಾಷ್ಪದಿಂದ ಅಭಿಷೇಕವನ್ನು ಮಾಡಿದನು. ಅಂದಿನಿಂದ ಈತನನ್ನು ಎಲ್ಲರೂ ವೀರಕೇಸರಿಯೆಂದು ಕರೆಯುತ್ತಿರುವರು.

ಜಗನ್ಮೋಹಿನೀ:—ಆತನಿಗೆ ವೀರಕೇಸರಿ ಎನ್ನುಬ ಹೆಸರು ಬಹಳ ಅನ್ವರ್ಥಕವಾಗಿದೆ. ಈ ವೀರನ ಭಾವಚಿತ್ರವು ಮುಗಿದಿದ್ದರೆ ಬೇಗ ತಾ ನೋಡುವ.

ಚಿತ್ರಲೇಖೆಯು ಕೈಲಿದ್ದ ಚಿತ್ರಕ್ಕೆ ತಟತಟನೆ ಒಪ್ಪವಿಟ್ಟು ಎತ್ತಿ ಮೋಹಿನಿಯ ಕೈಗೆ ಕೊಟ್ಟಳು. ಮೋಹಿನಿಯು ಅದನ್ನು ಒಂದು ನಿಮಿಷ ನೋಡಿ ತಲೆದೂಗಿ ‹‹ಈತನೀಗ ಮಾದರಿಯ ರಾಜಪುತ್ರನು. ಪ್ರಪಂಚದಲ್ಲಿ ಸುಖದುಃಖಗಳು ಮಿಶ್ರವಾಗಿರುವಂತೆ ಗುಣದೋಷಗಳೂ ಮಿಶ್ರವಾಗಿಯೇ ಇರುವುವು. ಕೇವಲ ಗುಣಗಣ್ಯವಾದ ವಸ್ತುವಾಗಲಿ ಕೇವಲ ದೋಷದುಷ್ಟವಾದ ವಸ್ತುವೇ ಆಗಲಿ ಬ್ರಹ್ಮಸೃಷ್ಟಿಯಲ್ಲಿ ಇಲ್ಲವೇ ಇಲ್ಲ ; ಇದು ಸ್ವಭಾವದ ನಿಯಮ. ಆದರೆ, ಗುಣದೋಷಗಳ ಮಿಶ್ರಣದಲ್ಲಿ ಹೆಚ್ಚೂ ಕಡಮೆ ಇರುತ್ತದೆ. ಗುಣವು ಹೆಚ್ಚಾಗಿದ್ದವರು ಗುಣಿಗಳೆಂತಲೂ, ದೋಷಗಳು ಹೆಚ್ಚಾಗಿದ್ದವರು ದೋಷಿಗಳೆಂತಲೂ ಕರೆಯ

ಲ್ಪಡುತ್ತಾರೆ. ಈತನ ಮುಖಭಾವದಿಂದ ಈತನು ಗುಣಿಗಳಲ್ಲಿ ಅಗ್ರಗಣ್ಯನಾಗಿ ಕಾಣುತ್ತಾನೆ; ಆದರೆ ಈತನ ಮುಖದಮೇಲೆ ತಾಯಿತಂದೆಗಳ ಹಟಪ್ರಕೃತಿಯು ಬಹು ಸ್ಪಷ್ಟವಾಗಿ ಕಾಣುತ್ತಿದೆ. ಏನಾದರೇನು? ಈತನು ಸರ್ವಥಾ ನನ್ನ ಮನೋಪಹಾರಿಯಲ್ಲ.'' ಎಂದು ಆ ಚಿತ್ರವನ್ನು ಚಿತ್ರಲೇಖೆಯ ಕೈಗೆಕೊಟ್ಟಳು.

ಚಿತ್ರಲೇಖೆಯು ಅದನ್ನು ಮೇಜಿನಮೇಲೊತ್ತಟ್ಟಗಿರಿಸಿ, ಮೋಹಿನಿಯ ಮುಖವನ್ನು ನೋಡಿ, ‶ಒಡತಿಯೇ, ನಾನೀರಾಜಪುತ್ರರ ಚರಿತ್ರೆಯನ್ನು ಆಭಿಜಾತ್ಯತಾರತಮ್ಯ ಕ್ರಮದಿಂದ ಚಿತ್ರಿಸುತ್ತಿರುವೆನು. ಈಗ ನಾನು ಬರದು ತೋರಿಸಿದ ರಾಜಪುತ್ರರಲ್ಲಿ ಒಬ್ಬರೂ ನಿನ್ನ ವಲ್ಲಭರಲ್ಲದ ಮೇಲೆ ಇನ್ನುಳಿದವರಲ್ಲಿ ಯಾರೂ ನಿನ್ನ ಪ್ರೇಮಕ್ಕೆ ಪಾತ್ರರಾಗುವಷ್ಟು ಯೋಗ್ಯತೆಯುಳ್ಳವರಾಗಿ ಕಾಣುವುದಿಲ್ಲ. ಮತ್ತಾರನ್ನ ಬರೆಯಲಿ?'' ಎನ್ದು ಕೊಂಚ ಯೋಚಿಸಿ, ‶ಆಹಾ! ಮರತು ಹೋಗಿದ್ದೆನು! ಮತ್ತೊಬ್ಬ ರಾಜಕುಮಾರನನ್ನು ನಿನಗೆ ನಾನು ಮೊದಲೇ ಬರದು ತೋರಿಸಬೇಕಾಗಿದ್ದಿತು. ಒಳ್ಳೆಯದೀಗ ಆ ರಾಜಪುತ್ರನನ್ನು ಬರದು ತೋರಿಸುವೆನು ನೋಡು.'' ಎನ್ದು ಮೇಜಿನಮೇಲಿದ್ದ ಮತ್ತೊನ್ದು ಕಾಗದವನ್ನು ತೆಗೆದುಗೊಂಡು ಕೂರ್ಚಿಕೆಯಿಂದ ವರ್ಣಸಮ್ಮೇಳನವನ್ನು ಮಾಡುತ್ತಾ, ‶ಒಡತಿಯೇ, ಈ ಯೌವನಸ್ಥನು ರಾಜನಾದ ಧರ್ಮವರ್ಮನ ಮಗನು. ಏಕಪತ್ನೀವ್ರತನಾದ ಧರ್ಮವರ್ಮನಿಗೆ ಬಹುಕಾಲ ಸಂತಾನವೇ ಇಲ್ಲದಿರಲು ಆಗ ಆತನು ಪುತ್ರಕಾಮೇಷ್ಟಿಯನ್ನು ಮಾಡಿ ಈ ಸುಪುತ್ರನನ್ನು ಪಡೆದನು. ಧರ್ಮವರ್ಮನು ನಳಹರಿಶ್ಚನ್ದ್ರಾದಿಗಳಂತೆ ಸತ್ಯಸಂಧನಾಗಿದ್ದನು. ದೇವೇನ್ದ್ರನೊಂದುದಿನ, ಈತನ ಸತ್ಯಸಂಧತೆಯನ್ನು ಪರೀಕ್ಷಿಸುವುದಕ್ಕಾಗಿ ಅಷ್ಟದಿಕ್ಪಾಲಕರೊಡನೆ ಸನ್ಯಾಸಿಯ ವೇಷ

ದಿಂದ ಈತನ ಮನೆಗೆ ಹೋದನು. ಧರ್ಮವರ್ಮನು ಇವರುಗಳನ್ನು ಯಥಾವಿಧಿಯಾಗಿ ಸತ್ಕರಿಸಿ ಯೋಗ್ಯವಾದ ಆಸನಗಳಮೇಲೆ ಕುಳ್ಳಿರಿಸಿ ವಿನಯದಿನ್ದ, "ಮಹಾಸ್ವಾಮಿ, ತಾವುಗಳು ಇಲ್ಲಿಗೆ ದಯಮಾಡಿಸಿದ ಕಾರ್ಯವನ್ನು ನಾನು ತಿಳಿಯಬಹುದೇ ? " ಎಂದು ಕೇಳಿದನು. ಆದಕ್ಕೆ ಸನ್ಯಾಸಿಗಳು, ಎಲೈ, ನೀನು ಪುತ್ರಕಾಮೇಷ್ಟಿಯನ್ನು ಮಾಡಿ ಪಡದ ನಿನ್ನ ಕುಮಾರನನ್ನು ನೋಡಬೇಕೆಂದು ಬಂದೆವು. ಎನ್ನಲು ಒಡನೆಯೆ ಮಹಾರಾಜನು ಹೊರಗಡೆ ಆಡುತ್ತಿದ್ದ ಬಾಲಕನನ್ನು ಕರದುಕೊಂಡು ಬಂದು ಆ ಸನ್ಯಾಸಿಗಳ ಪಾದಗಳಮೇಲೆ ಹಾಕಿದನು. ಅವರು ಆ ಬಾಲಕನನ್ನು ಎತ್ತಿ ತೊಡೆಯಮೇಲೆ ಕೂರಿಸಿಕೊಂಡು ಆಶೀರ್ವದಿಸಿ ಅವನ ರಾಜಲಕ್ಷಣಗಳನ್ನು ನೋಡಿನೋಡಿ ಕೊಂಡಾಡಿ, ತಟ್ಟನೆ ಮೇಲಕ್ಕೆ ಎದ್ದು ರಾಜನನ್ನು ಕುರಿತು, " ಯಲೈ ಮಧ್ಯಾಹ್ನವು ಮೀರುತ್ತಾ ಬನ್ದಿತು; ನಾವು ಇಂದು ಮಾರ್ಗಾಯಾಸದಿಂದಲೂ, ಕ್ಷುಧೆಯಿಂದಲೂ, ಬಹು ಬಾಧಿತರಾಗಿರುವೆವು, ಅದುದರಿಂದ ನಮಗೆ ಅಪ್ಪಣೆಯನ್ನು ಕೊಡು, ನಾವು ಈ ಪಟ್ಟಣದಲ್ಲಿ ಯಾರಾದರೂ ಆತಿಥೇಯರು ಇದ್ದರೆ ಅವರ ಮನೆಗೆ ಹೋಗಿ ಭೋಜನವನ್ನು ಮಾಡಿಪ್ರಾಣಗಳನ್ನು ಉಳಿಸಿಕೊಳ್ಳುವೆವು" ಎನ್ದರು. ಆದಕ್ಕೆ ರಾಜನು ವಿಷಣ್ಣನಾಗಿ, ಮಹಾಸ್ವಾಮಿ, ಈ ದಿನ ತಾವು ನನ್ನ ಮನೆಯಲ್ಲಿ ಆತಿಥ್ಯವನ್ನು ಸ್ವೀಕರಿಸದೇ ಹೋದರೆ ನಮ್ಮ ಪಿತೃಗಳಿಗೂ ನಮ್ಮ ವಂಶದವರಿಗೂ ಮಹಾನರ್ಥಗಳು ತಪ್ಪುವುದಿಲ್ಲ. ಅದುದರಿಂದ ತಾವು ಈ ಹೊತ್ತು ನನ್ನ ಆತಿಥ್ಯವನ್ನು ಸ್ವೀಕರಿಸಬೇಕು, ಎನ್ದು ಬೇಡಿಕೊಂಡನು. ಆದಕ್ಕೆ ಸನ್ಯಾಸಿಯು "ಎಲೈ ಮಹಾರಾಜನೆ, ನಮಗೆ ಬೇಕಾದ ಆಹಾರವನ್ನು ಕೊಟ್ಟು ನಮ್ಮನ್ನು ತೃಪ್ತಿಪಡಿಸುವುದಕ್ಕೆ ನಿನಗೆ ಶಕ್ತಿ ಯಿದ್ದರೆ, ನಾವು ನಿನ್ನ ಆತಿಥ್ಯವನ್ನು

ಸ್ವೀಕರಿಸುವುದಕ್ಕೆ ಏನೂ ಅಭ್ಯಂತರವಿರುವುದಿಲ್ಲ' ಎಂದರು. ಅದಕ್ಕೆ ರಾಜನು, ಮಹಾಸ್ವಾಮಿಾ, ತಾವು ಅಷ್ಟುಮಾತ್ರ ನನ್ನಲ್ಲಿ ದಯೆಮಾಡಿ ನನ್ನ ಆತಿಥ್ಯವನ್ನು ಸ್ವೀಕರಿಸುವುದಾದರೆ, ತಮಗೆ ಬೇಕಾದ ಆಹಾರ ವನ್ನು ಕೊಡುವೆನು'' ಎನ್ದನು. ಅದಕ್ಕೆ ಸನ್ಯಾಸಿಯು "ಸತ್ಯವಾಗಿ ನಮಗೆ ಬೇಕಾದ ಆಹಾರವನ್ನು ಕೊಡುವೆಯೋ ?'' ಎನ್ದು ಕೇಳಿದನು. ರಾಜನದಕ್ಕೆ 'ಸತ್ಯವಾಗಿ ಕೊಡುವೆನು' ಎನ್ದನು.

ಆಗಲಾ ಕಪಟಸನ್ಯಾಸಿಯು, 'ಹಾಗಾದರೆ, ನನಗೆ ಈ ಬಾಲ ಕನ ಮಾಂಸವನ್ನು ತಿನ್ನಬೇಕೆಂದು ಅಪೇಕ್ಷೆಯಾಗುತ್ತದೆ. ಆದುದರಿಂದ ಅವನನ್ನು ಜಾಗ್ರತೆಯಾಗಿ ಕೊಯ್ದು ಚೂರುಗಳನ್ನು ಮಾಡಿಕೊಡು' ಎನ್ದು ಕೇಳಿದನು.

ಕರ್ಣಕಠೋರವಾದ ಈ ಯಾಚನೆಯನ್ನು ಕೇಳಿದ ಕೂಡಲೇ ರಾಯನು ನಿಶ್ಚೇತನನಾಗಿ ಪಿಡಗಿನಿಂದ ಬಡಿಯಲ್ಪಟ್ಟ ಮರದಂತೆ ನಿಂತ ನು. ಆಗ ಆ ಕಪಟಸನ್ಯಾಸಿಯು ಮುನಿದು, ಏನಯ್ಯಾ ಮಹಾರಾ ಜನೇ, 'ಮಾತು ಕೊಡುವುದಕ್ಕೆ ಹಿಂದಾಗಿಯೂ ಕೊಟ್ಟಮಾತಿನಂತೆ ನಡ ದುಕೊಳ್ಳುವುದಕ್ಕೆ ಮುಂದಾಗಿಯೂ ಇರಬೇಕೆಂಬ ನೀತಿಯನ್ನು ನಿನಗೆ ನಿನ್ನ ಗುರುಹಿರಿಯರಾರೂ ಬೋಧಿಸಲಿಲ್ಲವೋ ? ಕ್ಷುಧಿತರಾದ ಸನ್ಯಾಸಿ ಗಳಿಗೆ ಕೊಟ್ಟ ಮಾತನ್ನು ಪೂರ್ತಿಮಾಡುವುದಕ್ಕೆ ಹಿಂದು ಮುನ್ದು ನೋಡುತ್ತಿರುವುದೇಕೆ ? ನೀನಿನ್ನು ಅರಗಳಿಗೆ ತಡಮಾಡಿದ್ದೇ ಆದರೆ, ನಮ್ಮ ಪ್ರಾಣಗಳು ಉಳಿಯುವುದಿಲ್ಲ–ನಿನಗೆ ಯತಿಹತ್ಯವು ತಪ್ಪುವುದಿಲ್ಲ' ಎನ್ದನು.

ಆ ಮಾತಿಗೆ ಉತ್ತರವನ್ನು ಕೊಡಲು ಮಹಾರಾಜನಿಗೆ ನಾಲಿ ಗೆಯೇ ಬಾರದೇ ಕತ್ತರಿಸುತ್ತಿರಲು ಅಲ್ಲಿ ಆ ಪಸುಳೆಯು ತಂದೆಯನ್ನು

ಕುರಿತು, 'ಅಪ್ಪಾಜೀ, ನೀನದೇಕೆ ಈಶ್ರೇಯಸ್ಕರವಾದ ಸಮಯದಲ್ಲಿ ಚಿಂತಾಕ್ರಾಂತನಾಗಿರುವನ್ತೆ ಕಾಣುತ್ತಿರುವೆ ? "ಜಾತಸ್ಯಹಿಧ್ರುವೋಮೃತ್ಯುರ್ಧ್ರುವಂಜನ್ಮಮೃತಸ್ಯಚ | ತಸ್ಮಾದಪರಿಹಾರ್ಯೇರ್ಥೇನತ್ವಂಶೋಚಿತುಮರ್ಹಸಿ || ದೇಹೀನಿತ್ಯಮವಧ್ಯೋಯಂ ದೇಹೇ ನಿತ್ಯಸ್ಯಭಾರತ | ತಸ್ಮಾತ್ಸರ್ವಾಣಿಭೂತಾನಿ ನತ್ವಂಶೋಚಿತುಮರ್ಹಸಿ || " ಎಮ್ಬ ಭಗವದ್ವಾಕ್ಯವು ನಿನಗೆ ಜ್ಞಾಪಕಕ್ಕೆ ಬರಲಿಲ್ಲವೆ ? ಎಷ್ಟುದಿನವಿದ್ದರೂ ಸಾಯಲೇಬೇಕು. ಸತ್ತಮೇಲೆ, ಅಶುಚಿಯಾಗಿಯೂ, ಅಸ್ಪರ್ಶವಾಗಿಯೂ, ಅಮಂಗಳವಾಗಿಯೂ ಸುಡುಗಾಡಿನ ಪಾಲಾಗಿಹೋಗುವ ಈ ದೇಹವು ಈ ಯತಿವರ್ಯರ ಭೋಜನಕ್ಕೆ ಪಾತ್ರವಾಗುವುದು, ನಾನು ಹಿನ್ದೆ ಅನೇಕ ಕೋಟಿ ಜನ್ಮಗಳಲ್ಲಿ ಮಾಡಿದ ಪುಣ್ಯಗಳ ಫಲವಲ್ಲವೆ. ಒಬ್ಬ ಯತಿಗೆ ಭೋಜನವನ್ನು ಮಾಡಿಸಿದರೆ ಮೂರುಲೋಕಕ್ಕೂ ಸಂತರ್ಪಣೆಮಾಡಿಸಿದಂತಾಗುವುದೆಂದು ಶಾಸ್ತ್ರವುಹೇಳುತ್ತದೆ. ಹೀಗಿರುವಾಗ ಅಭ್ಯಾಗತರಾದ ಈ ನವ ಯತಿವರ್ಯರಿಗೆ ಏಕಕಾಲದಲ್ಲಿ ತೃಪ್ತಿಪಡಿಸುವುದರ ಫಲವನ್ನು ಹೇಳುವುದಕ್ಕೆ ಅಸದಳವಾಗಿದೆ. ಆದುದರಿಂದ ನೀನು ಈ ಸಮಯದಲ್ಲಿ ನನ್ನ ಈ ಜನ್ಮವನ್ನು ಸಾರ್ಥಕಮಾಡಿಕೊಳ್ಳುವುದಕ್ಕೆ ಅನುಮೋದಿಸಿ, ನಿನ್ನ ಮಾತನ್ನು ಉಳಿಸಿಕೊಂಡು ನಮ್ಮ ವಂಶದ ಮರ್ಯಾದೆಯನ್ನು ಕಾಪಾಡು. ನೀನು ಈ ಅಲ್ಪವಿಷಯಕ್ಕಾಗಿ ಅಜ್ಞರನ್ತೆ ವ್ಯಸನಪಡುವುದು ಯುಕ್ತವಲ್ಲ " ಎನ್ದು ತನ್ನ ಕೈಯ್ಯಲ್ಲಿದ್ದ ಕರವಾಳದಿಂದ ತನ್ನ ತಲೆಯನ್ನು ತಾನೇ ಕತ್ತರಿಸಿ ಆ ಯತಿಗಳ ಪಾದಗಳಿಗೊಪ್ಪಿಸಿದನು. ಆಗ ಆ ಸನ್ಯಾಸಿಗಳಾಗಿದ್ದ ಇನ್ದ್ರಾದಿದೇವತೆಗಳು ಪ್ರತ್ಯಕ್ಷರಾಗಿ ಆ ಬಾಲಕನ ರುಂಡಮುಂಡಗಳನ್ನು ಸನ್ಧಾನಮಾಡಿ ಅವನಿಗೆ ಮಾನುಷ ಸಾಮಾನ್ಯರಿಗೆ ಅಲಭ್ಯವಾದ ಅನೇಕ ವರಗಳನ್ನು ದಯಪಾಲಿಸಿ, ಮಹಾ

ರಾಜನನ್ನೂ ಬಹುವಾಗಿ ಶ್ಲಾಘಿಸಿ ಅಂತರ್ಧಾನವನ್ನು ಹೊಂದಿದರು. ಈತನ ಬಾಲ್ಯಯೌವ್ವನದಶೆಗಳ ಚರಿತ್ರೆಗಳು ಬಹಳ ಹೃದಯಂಗಮವಾಗಿವೆ '' ಎನ್ನುವ ವೇಳೆಗೆ ಆ ಚಿತ್ರವು ಮುಗಿಯಿತು. ಅದನ್ನು ಎತ್ತಿ, '' ಇದೋ ನೋಡು ಈತನೇ ಆ ಮಹಾನುಭಾವನಾದ ರವಿವರ್ಮನು '' ಎನ್ದು ಜಗನ್ಮೋಹಿನಿಯ ಕೈಗೆ ಕೊಟ್ಟಳು.

ಈ ಚಿತ್ರವು ದೃಷ್ಟಿಗೋಚರವಾದಕೂಡಲೇ ಮೋಹಿನಿಯ ಮುಖವು ಅರುಣೋದಯಕಾಲದ ತಾಮರಸದಂತೆ ಪ್ರಫುಲ್ಲವಾಯಿತು ; ಕಪೋಲಗಳು ಕೆಂಪಾದುವು, ಶರೀರವು ರೋಮಾಂಚಕಂಚುಕಿತವಾಯಿತು, ಪತಿಸಂದರ್ಶನ ಸಮಯದಲ್ಲಿ ಕನ್ಯಾಜನಸಾಧಾರಣವಾದ ಲಜ್ಜೆಯು ಆಕೆಯ ಮನದಲ್ಲಿ ಅಂಕುರಿಸಿತು, ಅದು ಕಾರಣಚಿತ್ರನಾದ ಆ ರಾಜಕುಮಾರನನ್ನು ಕಣ್ಣೆತ್ತಿ ಮನದಣಿಯ ನಿಟ್ಟಿಸಲಾರದೇ ತಲೆಬಾಗಿ ಕಡೆಗಣ್ಣುಗಳಿಂದ ನೋಡತೊಡಗಿದಳು. ಆ ಚಿತ್ರಪಠವನ್ನು ಹಿಡದಿದ್ದ ಕೈಬೆರಳುಗಳು ಥರಥರನೆ ಅವ್ಯಕ್ತವಾಗಿ ಅದುರಿದುವು.

ಚಿತ್ರಲೇಖೆಯು ಜಗನ್ಮೋಹಿನಿಯ ಸಾತ್ವಿಕವಿಕಾರಗಳನ್ನು ಕೌತುಕದಿಂದ ಗಮನಿಸುತ್ತಿದ್ದು ಮನ್ದಹಾಸದಿಂದ, ''ಮಹಾರಾಣಿಯೇ, ನಿನ್ನ ಮನವನ್ನು ಅಪಹರಿಸಿಕೊಂಡು ಹೋಗಿದ್ದ ವೀರಾಗ್ರಣಿಯು ಕಡೆಗೆ ಸಿಕ್ಕಿದನೇ ? ಈ ಧರ್ಮವೀರನಿಗಲ್ಲದೇ ನಿನ್ನಂತಹ ಮಹಾಯೋಗಿನಿಯ ಮನವನ್ನು ಅಪಹರಿಸುವುದಕ್ಕೆ ಮತ್ತಾರಿಗೆ ಸಾಧ್ಯವು! ವಿದ್ಯುಲ್ಲತೆಯನ್ನು ಆಕರ್ಷಿಸುವ ಶಕ್ತಿಯು ಆಕಾಶಕ್ಕಲ್ಲದೇ ಮತ್ತಾವುದಕ್ಕುಂಟು ಎನ್ದಳು.

ಮೋಹಿನೀ—ಅಂತರ್ಗತವಾದ ಲಜ್ಜೆಯನ್ನು ಪ್ರಕಾಶಗೊಳಿಸುವ ಮನ್ದಸ್ಮಿತದಿನ್ದ, "ಚಿತ್ರಲೇಖೆ, ನೀನು ಸರಿಯಾಗಿ ಊಹಿಸಿದೆ ಈತನೇ ನನ್ನ ಪ್ರಾಣವಲ್ಲಭನು;ಆದರೆ, ನಾನು ನೋಡಿದಾಗ ಈತನ ಮು

ಖವು ಸತ್ವಗುಣಪ್ರಧಾನವಾಗಿದ್ದಿತು, ಈಗ ಈತನ ಮುಖದಲ್ಲಿ ರಜೋಗುಣಬಾಹುಳ್ಯವು ಕಾಣಬರುತ್ತಿದೆ. ಇದಕ್ಕೆ ಕಾರಣವೇನಿರಬಹುದೋ ಕಾಣೆನು.

ಚಿತ್ರಲೇಖೆ—ನೀನು ಈತನನ್ನು ನೋಡಿದಾಗ ಈತನು ಯಾವ ಸ್ಥಿತಿಯಲ್ಲಿದ್ದನು ?

ಮೋಹಿನೀ—ಈತನು ಮಣಿಮಯಮಂಚದಮೇಲೆ ಮಲಗಿ ಸುಖನಿದ್ರೆ ಮಾಡುತ್ತಿದ್ದನು.

ಚಿತ್ರಲೇಖೆ—ಹಾಗಾದರೆ, ಸರಿಯೇ, ಅದು ಹೇಗೆನ್ನುವಿಯೋ ? ಈಗ ನಾನು ಈತನನ್ನು ತನ್ನ ಸೇನಾನಾಯಕರ ಸಂಘದಲ್ಲಿ ದಂಡಯಾತ್ರೆಯ ವಿಷಯವಾಗಿ ಸಂಭಾಷಣೆಯನ್ನು ಮಾಡುತ್ತಿರುವಂತೆ ಚಿತ್ರಿಸಿರುವೆನು. ಈ ಸಮಯದಲ್ಲಿ ಈತನ ಮುಖದಮೇಲೆ ಅಂತರ್ಗತವಾಗಿದ್ದ ರಜೋಗಣವು ಪ್ರಾಧಾನ್ಯವನ್ನು ಹೊಂದಿ ಪ್ರಕಾಶಿಸುವುದು ಸಹಜವಾಗಿದೆ. ಮುಖವು ಮನೋಗತಕ್ಕೆ ಅನುಕ್ರಮಣಿಕೆ. ನಿದ್ರಾವಸ್ಥೆಯಲ್ಲಿ ಸ್ವಾಭಾವಿಕವಾಗಿ ಮನವು ಲೌಕಿಕ ವ್ಯಾಪಾರಶೂನ್ಯವಾಗಿರುವುದರಿಂದ ಆ ಸಮಯದಲ್ಲಿ ಮುಖವು ಕೇವಲ ನೈಜವಾದ ಪ್ರಧಾನಗುಣವನ್ನೇ ಸೂಚಿಸುತ್ತದೆ.

ಮೋಹಿನೀ—ಕೊಂಚ ಯೋಚಿಸಿ, "ಎಲೌ, ಚಿತ್ರಲೇಖೇ, ನೀನು ದಯೆಮಾಡಿ ಈತನನ್ನು ಮಣಿಮಯ ಮಂಚದಮೇಲೆ ಮಲಗಿ ನಿದ್ರೆ ಮಾಡುತ್ತಿರುವಂತೆ ಚಿತ್ರಿಸು, ನೋಡುವ "

ಚಿತ್ರಲೇಖೆ—"ಆಹಾ ! ಅದೀಗ ಸಂಶಯನಿವರ್ತಕವಾದ ಕೆಲಸ." ಎನ್ನುತ್ತ ತವಕದಿಂದ ಮತ್ತೊಂದು ಕಾಗದವನ್ನು ತೆಗೆದುಕೊಂಡು, ಜಗನ್ಮೋಹಿನಿಯು ತನ್ನ ಕೈಯಲ್ಲಿದ್ದ ತನ್ನ ವಲ್ಲಭನ ಚಿತ್ರ

ಪಟವನ್ನು ಕಣ್ಣಾರನೋಡುವಷ್ಟರೊಳಗಾಗಿ, ಆಕೆಯ ಅಭೀಷ್ಟದಂತೆ ಚಿತ್ರವನ್ನು ಬರದು ಆಕೆಯ ಕೈಗೆ ಕೊಟ್ಟಳು.

ಮೋಹಿನೀ—ತದ್ರೂಪವಾಗಿದ್ದ ಆ ಚಿತ್ರವನ್ನು ಕಣ್ಣಾರನೋಡಿ ಮೋಹಗೊಂಡು ಕೊಂಚಹೊತ್ತು ಮೈ ಮರತವಳಂತೆ ಇದ್ದು ಬಳಿಕ ಮನಸ್ಸನ್ನು ಸ್ವಾಧೀನಕ್ಕೆ ತನ್ದುಕೊಂಡು ಚಿತ್ರಲೇಖೆಯನ್ನು ನೋಡಿ, "ಎಲೌ ಚಿತ್ರಲೇಖೇ, ನಿನ್ನ ಚಿತ್ರಕಲಾಕೌಶಲ್ಯವು ಅಸದೃಶವಾದುದು ; ಈ ಚಿತ್ರಪಟವನ್ನು ನೋಡಿದಕೂಡಲೇ ನಾನಾತನನ್ನು ಪ್ರತ್ಯಕ್ಷವಾಗಿ ನೋಡುತ್ತಿರುವೆನೆಂಬ ಭ್ರಾನ್ತಿಯು ದುರ್ನಿವಾರವಾಗಿದೆ. ಈತನೇ ನನ್ನ ಮನೋಮೋಹಕನು ; ಈತನೇ ನನ್ನ ಮನೋವಲ್ಲಭನು ; ಈತ ನೇ ನನ್ನ ಪ್ರಾಣಕಾನ್ತನು. ಈತನ ಅಡಿದಾವರೆಗಳ ಕೈಂಕರ್ಯವೇ ನನ್ನ ಇಹಪರ ಸುಖಗಳಿಗೆ ಸಾಧಕವಾದುದು. ಈತನಾರಮಗನು ? ಈತನ ಹೆಸರೇನು ?"

ಚಿತ್ರಲೇಖೆ—ತನ್ನೊಳಗೆ ತಾನು, "ರಾತ್ರಿಯಲ್ಲಾ ರಾಮಾ ಯಣಕೇಳಿ ಬೆಳಿಗ್ಗೆ ಶೀತೆಯು ರಾಮನಿಗೇನಾಗಬೇಕು ? ಎನ್ದಹಾಗಾ ಯಿತು. ಕಾಮುಕರಿಗೆ ವಿಸ್ಮರಣೆಯು ಸ್ವಾಭಾವಿಕವಾದುದೆಂಬುದಕ್ಕೆ ಇದುವೇ ನಿದರ್ಶನ." ಎನ್ದುಕೊಂಡು ನಸುನಗುತ, "ಈತನು ಧರ್ಮ ವರ್ಮನ ಮಗನಾದ ರವಿವರ್ಮನೆಂದು ಮೊದಲೇ ಅರಿಕೆಮಾಡಲಿ ಲ್ಲವೆ ?"

ಮೋಹಿನೀ—"ಓಹೋ ! ಅಹುದಹುದು." ಎನ್ದು ಕೊಂಚ ಯೋಚಿಸಿ, "ಎಲೌ, ಚಿತ್ರಲೇಖೇ, ನಿನ್ನೆ ಸಾಯಂಕಾಲ ಪೂಜ್ಯರಾದ ಕುಶನಾಭರು ಇಲ್ಲಿಗೆ ಬನ್ದು ನನಗೊಂದು ಮಾತು ಹೇಳಿದರು. ಅದೀಗ ನನಗೆ ನೆನಪಿಗೆ ಬನ್ದಿತು. ಅದೇನೆನ್ನುವಿಯೋ, ನಮ್ಮ ತನ್ದೆಯು ಈ ರಾಜಪುತ್ರನಿಗೆ ನನ್ನನ್ನು ಕೊಟ್ಟು, ವಿವಾಹ ಮಾಡಿಸಬೇಕೆಂದು ಕುಶನಾಭ

ರಿಗೆ ಹೇಳಿದ್ದನಂತೆ; ಅವರು ಅದರಂತೆ ಕಾರ್ಯನಿರ್ವಾಹ ಮಾಡುವುದ ಕ್ಕೋಸ್ಕರ ಈ ರಾಜಕುಮಾರನನ್ನು ತಮ್ಮ ಆಶ್ರಮಕ್ಕೆ ಬರಮಾಡಿ ಕೊಂಡು ನಿನ್ನೆ ಸಾಯಂಕಾಲ ಇಲ್ಲಿಗೆ ಬಂದು ಆ ವಿಷಯವಾಗಿ ನನ್ನ ಅಭಿಪ್ರಾಯವನ್ನು ಕೇಳಿದರು. ನಾನದಕ್ಕೆ ಸಮ್ಮತಿಸದಿರಲು ಅವರು ಹಿಂದಿರುಗಿ ತಮ್ಮ ಆಶ್ರಮಕ್ಕೆ ಹೊರಟುಹೋದರು.

ಚಿತ್ರಲೇಖೆ—ಆಶ್ಚರಿಗೊಂಡು, ‹‹ಆ ಮಹಾನುಭಾವರು ನಿನ್ನೆ ಸಾಯಂಕಾಲ ಎಷ್ಟು ಹೊತ್ತಿನಲ್ಲಿ ಬಂದಿದ್ದರು ?''

ಮೋಹಿನೀ—ಅವರು ಇಲ್ಲಿಂದ ಹೊರಟುಹೋದಾಗ ಸಾಯಂ ಸನ್ಧ್ಯಾಕಾಲವು ಸಮೀಪಮಾಗುತ್ತಿದ್ದಿತು.

ಚಿತ್ರಲೇಖೆ—ಈಗಲೀಗ ನಿನ್ನ ಸ್ವಪ್ನಾರ್ಥವು ನಿರ್ಣಯವ ಯಿತು. ಮಹಾತ್ಮರ ಮನೋಗತವಾದದ್ದು ನಿನ್ನ ದೃಷ್ಟಿಗೋಚರವಾ ದುದೇನೋ ಅತಿಶಯವಲ್ಲ.

ಮೋಹಿನೀ—ಮನೋಗತವಾದುದೂ, ದೃಷ್ಟಿಗೋಚರವಾದು ದೂ, ನನ್ನ ಹಸ್ತಗತವಾಗುವ ಬಗೆಹೇಗೆ ?

ಚಿತ್ರಲೇಖೆ—ಅದೀಗ ಬಹಳ ಸುಲಭಸಾಧ್ಯವಾಗಿದೆ.

ಮೋಹಿನೀ—ಅದು ಹೇಗೆ ?

ಚಿತ್ರಲೇಖೆ—ನಿನ್ನ ವಲ್ಲಭನಾದ ಆ ರಾಜಕುಮಾರನು ಇನ್ನೂ ಕುಶನಾಭರ ಆಶ್ರಮವನ್ನು ಬಿಟ್ಟುಹೋಗಿರಲಾರನು; ಆದುದರಿಂದ ನಾವು ಜಾಗ್ರತೆಯಾಗಿ ಅಲ್ಲಿಗೆ ಹೋದರೆ ನಮ್ಮ ಇಷ್ಟಾರ್ಥ ಸಿದ್ಧಿಯಾಗುವುದ ರಲ್ಲಿ ಏನೂ ಸಂದೇಹವಿಲ್ಲ.

ಮೋಹಿನೀ—''ಹಾಗಾದರೆ, ನಾವು ಜಾಗ್ರತೆಯಾಗಿ ನಮ್ಮ ಪ್ರ ಯಾಣಕ್ಕೆ ಬೇಕಾದುವುಗಳನ್ನು ಅಣಿಮಾಡಿಸಿಕೊಂಡು ಸಂಧ್ಯಾಕಾಲಕ್ಕೆ

ಮುಂಚಿತವಾಗಿ ಕುಶನಾಭರ ಆಶ್ರಮಕ್ಕೆ ಹೋಗುವ ನಡೆ.'' ಎನುತ್ತ ಎದ್ದು ಹೊರಟಳು. ಚಿತ್ರಲೇಖೆಯು ಜಗನ್ಮೋಹಿನಿಯನ್ನು ಹಿಂಬಾಲಿಸಿದಳು.

---

## ಹದಿಮೂರನೆಯ ಪ್ರಕರಣ.

### ಅಪಹರಣ.

ಪಶ್ಚಿಮದಿಗ್ವಿಜಯಕ್ಕೆ ಪ್ರಯಾಣೋನ್ಮುಖನಾದ ಸೂರ್ಯನು ಭಾರತವರ್ಷವನ್ನು ಬಿಟ್ಟು ಹೋಗಲಾರದೇ ಹಿಂದಿರುಗಿ ಅಸ್ತಗಿರಿಯ ಮಸ್ತಕದಮೇಲೆ ನಿಂತು ದಿಕ್ತಟದಲ್ಲಿ ಲಿಖಿತ ಚಿತ್ರದಂತೆ ಕಂಗೊಳಿಸುತ್ತಿದ್ದ ಮಹಾಮಹಾಯೋಗಿಗಳಿಗಾಶ್ರಯವಾದ ಹಿಮಗಿರಿಯನ್ನೂ, ಅದರಿಂದ ಇಳಿಯುತ್ತಿರುವ ಮಹಾ ನದಿಗಳನ್ನೂ ನೋಡುತ್ತಾ ನಿಂತು, ಅಲ್ಲಿ ಅಲ್ಲಲ್ಲಿ ಆಸನ್ನವಾದ ತನ್ನ ವಿಯೋಗವನ್ನು ಸೈಸಲಾರದೇ ಕನ್ನಿಕುನ್ನುತ್ತಿದ್ದ ಕೆಂದಾವರೆಗಳ ಮುಗ್ಧತನವನ್ನು ಕಂಡು ನಗುತ್ತಿರುವಂತೆ ಕಾಣುತ್ತಿದ್ದನು. ಅರವಿನ್ದಬಾನ್ಧವನ ಅಟ್ಟಹಾಸದ ಲಹರಿಯೇ ಎಮ್ಬನ್ತೆ ದಿಕ್ಕುದಿಕ್ಕಿಗೆ ಪ್ರಸರಿಸಿದ್ದ ಕೆಮ್ಬಣ್ಣದ ರಶ್ಮಿಗಳು, ಆವೇಳೆಯಲ್ಲಿ ಪೂರ್ವಸಮುದ್ರದಲ್ಲಿ ಗಂಗಾಮುಖದ ಕಡೆಗೆ ಬರುತ್ತಿದ್ದ ಒಂದು ದೋಣಿಯನ್ನು ಹತ್ತಿಸಿ ಎತ್ತಿಹಿಡಿದ ಕೆಂಪು ಮಹತಾಪಿನಂತೆ ಪ್ರಕಾಶಗೊಳಿಸಿತು.

ಈ ದೋಣಿಯಲ್ಲಿ ಇಬ್ಬರು ಹೆಂಗಸರು ಮಾತ್ರ ಕುಳಿತುಕೊಂಡಿದ್ದರು. ಇವರಲ್ಲಿ ಒಬ್ಬಾಕೆಯು ಸುಮಾರು ಹದಿನೆಂಟು ವಯಸ್ಸಿನವಳಾಗಿ ಕಾಣುತ್ತಿದ್ದಳು. ಈಕೆಯು ಆಗಿನಕಾಲದ ಸೂರ್ಯಕಿರಣಗಳ ಕಾಂತಿಯಂತೆ ಕೆಂಪಾದ ಸೀರೆಯನ್ನು ಉಟ್ಟುಕೊಂಡಿದ್ದಳು ; ಇವಳ

ಲಮ್ಬಾಯಮಾನವಾದ ಗುಂಗುರ ಕೂದಲು ಸಮುದ್ರದ ಗಾಳಿಗೆ ಚದರಿ ವಿಕಾಸೋನ್ಮುಖವಾದ ಕೆಂದಾವರೆಯ ಸುತ್ತಲೂ ಸುಳಿದಾಡುವ ದುಮ್ಬಿಗಳನ್ನೆ ಕಂಗೊಳಿಸುತ್ತಿದ್ದಿತು ; ಈಕೆಯ ಮೈಯ್ಯಮೇಲೆ ಸಾಮಾನ್ಯವಾಗಿ ಸುಮಂಗಲಿಯರಿಗೆ ಯೋಗ್ಯವಾದ ಆಭರಣವಾವುದೂ ಇರಲಿಲ್ಲ ; ಈಕೆಯ ಪಕ್ಕದಲ್ಲಿ ಕುಳಿತುಕೊಂಡಿದ್ದ ಹೆಂಗಸಿಗೆ ಸುಮಾರು ಮೂವ್ವತ್ತು ವರ್ಷಕ್ಕೆ ಮೇಲಾಗಿದ್ದನ್ತೆ ಕಾಣುತ್ತಿದ್ದಿತು. ಈಕೆಯು ಅಮೂಲ್ಯವಾದ ಪೀತಾಂಬರವನ್ನು ಉಟ್ಟಿದ್ದಳು ; ಸಕಲಾಭರಣಗಳನ್ನೂ ಇಟ್ಟುಕೊಂಡಿದ್ದಳು. ಆ ದೋಣಿಯನ್ನು ಇವಳೇ ತನ್ನ ಜತೆಗಾತಿಯ ಸಂಗಡ ಮನ್ದಹಾಸದಿಂದ ಏನೋ ಮಾತನಾಡುತ್ತಾ ನಡಿಸುತ್ತಿದ್ದಳು.

ನೋಡುತ್ತಿದ್ದಹಾಗೆಯೇ ಆ ದೋಣಿಯು ದಡಕ್ಕೆ ಬನ್ದು ಸೇರಿತು. ಇಬ್ಬರೂ ದೋಣಿಯನ್ನು ತಟ್ಟನೆ ಬಿಟ್ಟಿಳಿದರು. ಚಿಕ್ಕವಳು ಅತ್ತಿತ್ತನೋಡಿ ದಾರಿಯನ್ನು ಗುರುತುಹಿಡಿದವಳನ್ತೆ ಮುನ್ದರಿದು ಹೊರಟಳು. ದೊಡ್ಡವಳು ಆ ದೋಣಿಯ ಹಗ್ಗವನ್ನು ದಡದಲ್ಲಿದ್ದ ಒಂದು ಗಿಡದ ಬುಡಕ್ಕೆ ಕಟ್ಟಿ ಕೂಡಲೇ ಅವಳನ್ನು ಹಿಂಬಾಲಿಸಿ ಚಿಕ್ಕವಳನ್ನು ಕುರಿತು, “ಎಲೌ, ಜಗನ್ಮೋಹಿನೀ, ಮಹಾನುಭಾವರಾದ ಕುಶನಾಭರ ಆಶ್ರಮವು ಇಲ್ಲಿಗೆ ಎಷ್ಟು ದೂರದಲ್ಲಿರುವುದು ? ” ಎನ್ದು ಕೇಳಿದಳು.

ಮೋಹಿನೀ—ತನ್ನ ಕೈಯನ್ನೆತ್ತಿ, “ಅದು ಬಹಳ ದೂರವಿಲ್ಲ. ಅದೋ ನೋಡು ! ಅಲ್ಲಿ ಕಾಣುವ ಆ ಮಾವಿನತೋಪಿಗೆ ಬಲಗಡೆ ಅಗ್ಗಿನಲ್ಲಿ ಬನ್ದು ಬಾಳೆಯ ತೋಟ ಕಾಣುತ್ತದೆಯಲ್ಲಾ ಅದೇ ಆ ತಪೋನಿಧಿಗಳ ಆಶ್ರಮ. ಇನ್ನು ನೀನು ಕೊಂಚ ಜಾಗ್ರತೆಯಾಗಿ ಕಾಲು ಹಾಕು; ಸನ್ಧ್ಯಾಕಾಲದೊಳಗಾಗಿ ನಾವು ಅಲ್ಲಿಗೆ ಹೋಗಿ ಸೇರಿಬಿಡೋಣ ; ಏತಕ್ಕೆಂದರೆ, ಮಹರ್ಷಿಗಳೆಲ್ಲರೂ ಆ ಸಮಯದಲ್ಲಿ ಸನ್ಧ್ಯಾವನ್ದನಾದಿ ವಿಧಿ

ಗಳಲ್ಲಿ ಆಸಕ್ತರಾಗುವರು. ಆಗ ನಮಗೆ ಅವರ ಸನ್ದರ್ಶನವಾಗುವುದು ದುರ್ಲಭ.

ಹೀಗೆ ಮಾತನಾಡಿಕೊಳ್ಳುತ್ತಾ ಅವರು ಆಶ್ರಮದ ಸಮೀಪಕ್ಕೆ ಬನ್ದು ಸೇರಿದರು. ಆ ಆಶ್ರಮ ಪ್ರದೇಶದಲ್ಲಿ ಆಗ ಕಾಲೋಚಿತವಾದ ಹೋಮಧೂಮವೂ ಕಾಣಿಸಲಿಲ್ಲ ; ವೇದಘೋಷವೂ ಕೇಳಬರಲಿಲ್ಲ. 'ಇನ್ಥಹ ಸನ್ದರ್ಭದಲ್ಲಿ ಆ ಆಶ್ರಮದ ಸುತ್ತಮುತ್ತಲೂ ಅನೇಕಾವೃತ್ತಿ ಸಂಚಾರ ಮಾಡದವರಾರಾದರೂ ಆಗಿದ್ದರೆ,' ದಾರಿ ತಪ್ಪಿಹೋಯಿತೋ ಏನೋ ಎನ್ದು ದಿಗ್ಭ್ರಮೆಗೊಂಡು ಅನ್ತಲಿಯಬೇಕಾಗಿತ್ತು ; ಆದರೆ ನಮ್ಮ ಕಥಾನಾಯಕಿಯು ನಮ್ಮ ವಾಚಕರಿಗೆ ಆಗಲೇ ವೇದ್ಯವಾಗಿರುವನ್ತೆ ಆಶ್ರಮದಲ್ಲಿ ಹುಟ್ಟಿ ಆಶ್ರಮದಲ್ಲಿ ಬೆಳದವಳಾದುದರಿಂದಲೂ ಅನೇಕಾವೃತ್ತಿ ಆ ಆಶ್ರಮವನ್ನು ನೋಡಿದ್ದವಳಾದುದರಿಂದಲೂ ಕೊಂಚವಾದರೂ ಸಂದೇಹಪಡದೇ ‘‘ಏನಿದಾಶ್ಚರ್ಯ’’ ವೆಂದು ಮನದೊಳಗಂದುಕೊಳ್ಳುತ್ತಾ ಕೌತುಕದಿನ್ದ ಜಾಗ್ರತೆಯಾಗಿ ಆಶ್ರಮದೊಳಕ್ಕೆ ಪ್ರವೇಶಮಾಡಿದಳು.

ಅಲ್ಲಿ ಎಲ್ಲೆಲ್ಲಿ ಸುತ್ತಿನೋಡಿದರೂ ಒಬ್ಬ ಪ್ರಾಣಿಯೂ ಕಣ್ಣಿಗೆ ಕಾಣಿಸಲಿಲ್ಲ. ಒಂದು ಪರ್ಣಶಾಲೆಯ ಮುಂದುಗಡೆ ಮಾತ್ರ ಸನ್ನ್ಯಾಸಿಯೊಬ್ಬನು ಕುಳಿತುಕೊಂಡಿದ್ದನು. ಈ ತಪಸ್ವಿಯು ಕಣ್ಣುಗಳನ್ನು ಮುಚ್ಚಿಕೊಂಡು ಜಪಮಾಲೆಯನ್ನು ತಿರುಗಿಸುತಾ ತುಟಿಗಳನ್ನು ಪಿಟಪಿಟನೆ ಅಲ್ಲಾಡಿಸುತ್ತಿದ್ದನು.

ಈತನನ್ನು ಕಂಡಕೂಡಲೇ ಸುಮಂಗಲಿಯರು ‘‘ಮುನಿಗಳಿಗೆ ನಮೋನಮಃ’’ ಎಂದು ಸಾಷ್ಟಾಂಗ ಪ್ರಣಾಮವನ್ನು ಮಾಡಿ ಎದ್ದು ಬದ್ಧಾಂಜಲಿಗಳಾಗಿ ತಲೆಬಾಗಿ ಇದಿರಿಗೆ ನಿಂತರು. ಕೂಡಲೇ ಆ ಮು

ನಿಯು, ‘‘ಆಹಾ ! ಏನಿದು ? ಯಾರೋ ಅಸತಿಯರು ನನ್ನ ತಪಸ್ಸಿಗೆ ವಿಘ್ನವನ್ನು ಮಾಡಲುಜ್ಜುಗಿಸಿರುವಂತೆ ಕಾಣುತ್ತದೆ.’’ ಎಂದು ಕಣ್ಣುಬಿಟ್ಟು ತಟ್ಟನೆ ಎದ್ದು ನಿಂತು ಆ ಮಾನಿನಿಯರನ್ನು ದುರುದುರನೆ ನೋಡಿ ಕಡುಕೋಪದಿಂದ, ‘‘ಎಲೇ, ಈಯಾಶ್ರಮದಲ್ಲಿ ಹೆಂಗಳೆಯುಯರಿಗೆ ಪ್ರವೇಶವಿಲ್ಲವೆಂಬುದು ನಿಮಗರಿಕೆ ಇಲ್ಲವೋ ?’’ ಎಂದನು. ಈ ಮಾತಿಗೆ ಆ ಮಾನಿನಿಯರು ಬೆದರಿ ಬೆವರಿ ಬೆಂಡಾಗಿ ಉಡಗಿ ಥರಥರನೆ ನಡುಗುತ್ತಾ, ‘‘ನಮ್ಮ ಅಪರಾಧವನ್ನು ಮನ್ನಿಸಬೇಕು ! ಮಹಾಸ್ವಾಮಿ ! ಈ ಪ್ರತಿಷೇಧವು ನಮಗೆ ಸತ್ಯವಾಗಿ ಗೊತ್ತಿರಲಿಲ್ಲ.’’

ತಪಸ್ವಿ:—ಓಹೊ! ಇಂತಹ ಲೋಕಪ್ರಸಿದ್ಧವಾದ ಸಮಾಚಾರವು ನಿಮಗೆ ಗೊತ್ತಿರಲಿಲ್ಲವೋ ! ಸಮಯಕ್ಕೆ ತಕ್ಕಂತೆ ಸುಳ್ಳಾಡುವುದರಲ್ಲಿ ಹೆಂಗಸರಿಗಿಂತಲೂ ನಿಪುಣರಾರೂ ಇಲ್ಲ ! ಒಳ್ಳೆಯದಿರಲಿ ; ನೀವಾರು ?

ಹೆಂಗಸರು:—ನಾವು ಪದ್ಮದ್ವೀಪದ ಸೇವಕರು.

ತಪಸ್ವಿ:—ಪದ್ಮದ್ವೀಪವೆಂಬುದಾವುದು ? ಅದೆಲ್ಲಿದೆ ? ಎಂದಂದುಕೊಂಡು, ಕೊಂಚಧ್ಯಾನಿಸಿ, ಓಹೋ ! ಆ ಕುಲಪತಿಗಳಾದ ಅರವಿಂದಬಾಂಧವರ ತಪಃಪ್ರಭಾವದಿಂದ ನಿರ್ಮಿಸಲ್ಪಟ್ಟುದಲ್ಲವೆ ಆ ಪದ್ಮದ್ವೀಪವೆಂಬುದು ?

ಹೆಂಗಸರು:—ಅಹುದು ಮಹಾಸ್ವಾಮಿ.

ತಪಸ್ವಿ:—ಓಹೋ ! ಈ ಭೂಮಂಡಲದಲ್ಲಿ ಮಹಾ ಯೋಗಿಗಳ ತಪಶ್ಶಕ್ತಿಗೆ ಆ ಪದ್ಮದ್ವೀಪವು ನಿದರ್ಶನವಾಗಿದೆ. ಒಳ್ಳೆಯದು ! ಆ ಕುಲಪತಿಗಳ ಕುಮಾರಿಯಾದ ಜಗನ್ಮೋಹಿನಿ ಎಂಬಾಕೆಯು ಅಲ್ಲಿ ಸುರಕ್ಷಿತಳಾಗಿರುವಳೆ ?

ಚಿತ್ರಲೇಖೆ:—ತನ್ನ ಪಕ್ಕದಲ್ಲಿದ್ದ ಮೋಹಿನಿಯನ್ನು ಕೈಯಿಂದ ಮುಟ್ಟಿ, ಮಹಾಸ್ವಾಮಿಾ, ಈಕೆಯೇ ಆ ಜಗನ್ಮೋಹಿನಿಯು.

ತಪಸ್ವಿ:— ಆ ಮಾತನ್ನು ಕೇಳಿದ ಕೂಡಲೇ ಕೈಯಲ್ಲಿದ್ದ ಜಪಮಾಲೆಯನ್ನು ಕೊರಳಿಗೆ ಹಾಕಿಕೊಂಡು ಮೋಹಿನಿಯ ಕಾಲಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ, ಕ್ಷಂತವ್ಯೋ ಮೇಪರಾಧಃ, ಕ್ಷಂತವ್ಯೋಮೇಪರಾಧಃ ಎಂದು ಎದ್ದು ನಿಂತು ಬದ್ಧಾಂಜಲಿಯಾಗಿ ತಪಸ್ವಿನಿಯೇ, ನಾನು ಆ ಮಹಾನುಭಾವರಾದ ಅರವಿನ್ದ ಬಾನ್ಧವರ ಪ್ರಿಯಶಿಷ್ಯನು ನಾನು ಹನ್ನೆರಡು ವರ್ಷ ಹಟಯೋಗದಲ್ಲಿ ಅವರಿಂದ ಶಿಕ್ಷಿತನಾಗಿರುವೆನು ಆದುದರಿಂದ ಅವರ ಕುಮಾರಿಯಾದ ನೀನು ಅವರಂತೆಯೇ ಪೂಜಾರ್ಹಳು. ನಾನು ವ್ಯಕ್ತಿಜ್ಞಾನವಿಲ್ಲದೆ ಆತುರದಿಂದ ಆಡಿದ ದುರುಕ್ತಿಗಳನ್ನು ನೀವು ಮನ್ನಿಸಬೇಕು,

ಮೋಹಿನಿ.—ಮಹಾ ಯೋಗಿಗಳಾದ ಅರವಿಂದ ಬಾಂಧವರ ನಾಮಶ್ರವಣದಿನ್ದ ಉತ್ತೇಜಿತವಾದ ಜ್ಞಾನಭಕ್ತಿ ವೈರಾಗ್ಯಾದಿಗಳಿಂದ ರೋಮಾಂಚ ಕಂಚುಕಿತಳಾಗಿ ಕೈಜೋಡಿಸಿಕೊಂಡು ನಮ್ರೀಭೂತಳಾಗಿ ಮಹಾಸ್ವಾಮಿ ನನ್ನ ತಾತಪಾದರ ಪ್ರಿಯಶಿಷ್ಯರಾದ ತಮ್ಮ ಸಂದರ್ಶನದಿಂದ ನಾನಿಂದು ಕೃತಾರ್ಥಳಾದೆನು ನನ್ನ ವಿಷಯದಲ್ಲಿ ತಾವು ಅಂತಹ ಮುನಿಜನ ವಿರುದ್ಧವಾದ ಮಾತುಗಳನ್ನು ಆಡಲಿಲ್ಲ. ಆದುದರಿಂದ ತಾವು ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕಾದ ಆವಶ್ಯಕವಿಲ್ಲ.

ತಪಸ್ವಿ—ಕ್ಷಮಾಸಮುದ್ರರಾದ ತಪೋನಿಧಿಗಳಿಗೆ ಆವುದೂ ಕೋಪಜನಕವಲ್ಲ.ಮಹಾ ಯೋಗಿನಿಯೇ. ತಾವು ಇಂದು ಈ ಸಮಯದಲ್ಲಿ ಇಲ್ಲಿಗೆಬಿಜಯಮಾಡಿದುದಕ್ಕೆ ಕಾರಣವನ್ನು ನಾನರಿಯಬಹುದೇ?

ಚಿತ್ರಲೇಖೆ—ನಾವು ಮಹಾನುಭಾವರಾದ ಕುಶನಾಭರ ಪಾದಸಂದರ್ಶನಕ್ಕೋಸ್ಕರವಾಗಿ ಬಂದಿರುವೆವು.

ತಪಸ್ವಿ—ಕುಶನಾಭರು ತಮ್ಮ ಸಂದರ್ಶನಕ್ಕೆ ಬಂದಿದ್ದ ಆದಿತ್ಯವರ್ಮನನ್ನು ಸಂಗಡ ಕರೆದುಕೊಂಡು ಸಾಯಂ ಸಂಧ್ಯಾವಂದನೆಯನ್ನು ಆಚರಿಸುವುದಕ್ಕೆ ಗಂಗೆಗೆ ಹೋದರು.

ಚಿತ್ರಲೇಖೆ—ಪುನಃ ಈಯಾಶ್ರಮಕ್ಕೆ ಬರುವರೋ ? ಇಲ್ಲವೋ ?

ತಪಸ್ವಿ—ಅವರು ಕೈಲಾಸಕ್ಕೆ ಹೋದರೂ ಔಪಾಸನದ ವೇಳೆಗೆ ಇಲ್ಲಿಗೆ ಬಾರದೇ ಇರುವುದಿಲ್ಲ.

ಚಿತ್ರಲೇಖೆ—ಹಾಗಾದರೆ, ಅವರು ಇಲ್ಲಿಗೆ ದಯಮಾಡಿಸುವುದಕ್ಕೆ ಇನ್ನೆಷ್ಟು ಹೊತ್ತಾಗುವುದು ?

ತಪಸ್ವಿ—ಇನ್ನೆಲ್ಲಾ ಒಂದು ಗಳಿಗೆಯೊಳಗಾಗಿ ಬಂದುಬಿಡುವರು. ಓಹೋ ! ನಿಮ್ಮ ಸಂಗಡ ಮಾತನಾಡುತ್ತಾ ನಾನು ನನ್ನ ಕೈಂಕರ್ಯವನ್ನು ಮರೆತು ಹೋಗುತ್ತಿದ್ದೆನು, ಇನ್ನೇನು ಗುರುಗಳು ಬಂದು ಬಿಡುವರು. ನೀವು ಅದುವರೆಗೂ ಅವರ ಈ ಪರ್ಣಶಾಲೆಯ ಪಸಾರೆಯಲ್ಲಿ ಕುಳಿತುಕೊಂಡು ವಿಶ್ರಮಿಸಿಕೊಳ್ಳಿರಿ. ನಾನು ಅಷ್ಟರಲ್ಲಿಯೇ ಈ ಸರೋವರದ ಕಡೆಗೆ ಹೋಗಿ ಸಮಿತ್ತುಗಳನ್ನು ತೆಗೆದುಕೊಂಡು ಬರುವೆನು.

ಆ ಸುದತಿಯರೀರ್ವರೂ “ಅಪ್ಪಣೆಯನ್ತಾಗಲಿ,” ಎಂದು ಅಲ್ಲಿ ಹೋಗಿ ಕುಳಿತುಕೊಂಡರು. ಆ ತಪಸ್ವಿಯು ಸರೋವರದ ಕಡೆಗೆ ಬಿರಬಿರನೆ ಹೊರಟುಹೋದನು.

ಆ ಸಮಯದಲ್ಲಿ ರಜನೀಶನ ರಶ್ಮಿಗಳಿಂದ ದಿಕ್ಕುದಿಕ್ಕುಗಳಲ್ಲಿ

ಯೂ ಬೇಟೆಯಾಡಲ್ಪಟ್ಟ ಮುಂಗತ್ತಲು ನೆಲೆಗಾಣದೆ ಆ ತಪೋವನದ ತರುಗಳ ಮರೆಯಲ್ಲಿ ಬಂದಡಗಿಕೊಳ್ಳುತ್ತಿದ್ದವು, ಇದನ್ನು ನೋಡಿ ವಿನೋದಗೊಳ್ಳುತ್ತಿದ್ದ ಆ ಸುಮಂಗಲಿಯರ ಕಿವಿಗೆ ಒಮ್ಮಿನೊಮ್ಮೆ ಆ ವನಮಧ್ಯದಲ್ಲಿ ಹಲೆಗೊಂಡ ಸಿಳ್ಳಿಯ ಶಬ್ದವು ಕೇಳಿಸಿತು. ಅದನ್ನು ಅವರು ಆಶ್ಚರ್ಯದಿಂದ ಆಲಿಸಿ ಭಯಭ್ರಾಂತರಾಗಿ ಏನದೆಂದು ಎಸ್ಟು ಅತ್ತಿತ್ತ ನೋಡುತ್ತಿರುವಷ್ಟರಲ್ಲಿ ಆ ತಪಸ್ವಿಯು ತವಕದಿಂದ ಹಿಂದಿರುಗಿ ಬರುತ್ತಿದ್ದನು. ಆ ಅಬಲೆಯರು ಅವನನ್ನು ನೋಡಿ, “ಮಹಾಸ್ವಾಮಿ, ಕಾಂತನಾಭನು ಬರುವುದಕ್ಕೆ ಇನ್ನೂ ಎಷ್ಟು ಹೊತ್ತಾಗುವುದು ?” ಎಂದು ಕೇಳಿದರು ಅದಕ್ಕೆ ಅವನು ಔದಾಸೀನ್ಯದಿಂದ “ಓಹೋ ! ಅಷ್ಟರಲ್ಲೇ ಕಾತುರಪಡುವುದೇಕೆ ? ಇನ್ನು ಒಂದು ಕ್ಷಣದಲ್ಲಿ ಬಂದು ಸೇರುತ್ತಾನೆ.” ಎಂದು ಉತ್ತರ ಕೊಟ್ಟನು. ಚಿತ್ರಲೇಖೆಯು ಆ ತಪಸ್ವಿಯ ಭಾವವ್ಯತ್ಯಾಸವನ್ನು ನೋಡಿ ಆತನ ಮಾತಿನ ಧ್ವನಿಯನ್ನು ಪರ್ಯಾಲೋಚಿಸುತ್ತಾ ಸ್ತಬ್ಧಳಾಗಿ ನಿಂತಳು. ಆಕೆಯ ಅಭಿಪ್ರಾಯವು ಸ್ಥಿರಪಡುವುದಕ್ಕೆ ಮುಂಚಿತವಾಗಿಯೇ ದೂರದಲ್ಲಿ ಬರುತ್ತಿದ್ದ ಗಾಡಿಯ ಶಬ್ದವು ಅವಳ ಮನಸ್ಸನ್ನು ಚದರಿಸಿತು. ಅದನ್ನು ಕೇಳಿ ಆಕೆಯು “ಮಹಾಸ್ವಾಮಿ, ಅವುದೋ ಗಾಡಿಯು ಇತ್ತಲೇ ಬರುತ್ತಿರುವಂತಿದೆಯಲ್ಲಾ ; ಅದಾವದು ?” ಎಂದು” ಆ ತಪಸ್ವಿಯನ್ನು ಕೇಳಿದಳು. ಅದಕ್ಕೆ ಆತನು ನಸುನಗುತ್ತಾ, “ನಮ್ಮೊಡೆಯನದಲ್ಲದೇ ಮತ್ತಾರ ಗಾಡಿಯು ಈ ಕಾಂತಾರದಲ್ಲಿ ಇಷ್ಟು ಹೊತ್ತಿನಲ್ಲಿ ಬರಲಾಪುದು ?” ಎಂದನು.

ಚಿತ್ರಲೇಖೆ.—ನಿಮ್ಮೊಡೆಯನಾರು ?

ತಪಸ್ವಿ.—ಓಹೋ ! ಇನ್ನು ನಮ್ಮ ಮಹಾರಾಜನಾರೆಂಬು ದು ನಿಮಗಿನ್ನೂ ಗೊತ್ತಾಗಲಿಲ್ಲವೋ ! ವಿಧಿಯು ನಿಮ್ಮನ್ನು ಈ ವೇಳೆಯಲ್ಲಿ ಆರ ಕೈಗೆ ಸೇರಿಸಬೇಕೆಂದು ಇಲ್ಲಿಗೆ ಕರತಂದಿರುವನೋ ಆ ಮಹಾಪುರುಷನಲ್ಲದೆ ನಮ್ಮೊಡೆಯನು ಮತ್ತಾರು ?

ಚಿತ್ರಲೇಖೆಯು ಈ ತಪಸ್ವಿಯ ಶ್ಲೇಷೋಕ್ತಿಗಳಿಗೆ ಬೆರಗಾಗಿ ಹಿಂದು ಮುಂದು ತೋರದೆ ಸ್ತಬ್ಧಳಾಗಿ ನಿಂತಳು. ನಮ್ಮ ಕಥಾನಾ ಯಕಿಯು ಅತಿ ಕೌತುಕದಿಂದ "ಮಹಾಸ್ವಾಮಿಾ ಆಮಹಾಪುರುಷನು ಇಲ್ಲಿಗೆ ಈಗ ಬರುತ್ತಾನೆಯೆ? " ಎಂದು ಕೇಳಿದಳು. ಅದಕ್ಕೆ ತಪ ಸ್ವಿಯು "ಇದೋ ನೋಡು. ನಮ್ಮೊಡೆಯನು ಬಂದೇಬಿಟ್ಟನು " ಎಂದನು.

ಆ ವೇಳೆಗೆ ಸರಿಯಾಗಿ ಎರಡು ಕುದುರೆಯ ಗಾಡಿಯೊಂದು ಅಲ್ಲಿಗೆ ಬಂದು ನಿಂತಿತು. ಇದರ ಹಿಂದುಗಡೆ ಆಯುಧ ಪಾಣಿಗ ಳಾದ ಆರು ಜನ ಸವಾರರಿದ್ದರು. ಈ ಗಾಡಿಯೊಳಗಿನಿಂದ ಒಬ್ಬ ಮನುಷ್ಯನು ಸರ್ರನೆ ಕೆಳಕ್ಕೆ ಇಳಿದನು. ಆತನು ಆಕಾರದಿಂದಲೂ ಉಡುಗೆ ತೊಡಿಗೆಗಳಿಂದಲೂ ಆಗಿನ ಕಾಲದ ಸಾಹಸಿಕನಾದ ರಾಜ ಪುತ್ರನಂತೆ ಕಾಣುತ್ತಿದ್ದನು. ಇವರೆಲ್ಲರೂ ನಮ್ಮ ಕಥಾನಾಯಕಿ ಯನ್ನು ಕಂಡ ಕೂಡಲೇ ಜಗನ್ಮೋಹಿನಿಯನ್ನು ಕಂಡದಾನವರಂತೆ ಬೆಕ್ಕಸಬೆರಗಾಗಿ ಚಿತ್ರಲಿಖಿತ ಪ್ರತಿಮೆಗಳಂತೆ ನಿಂತರು.

ಆಗ ಆ ತಪಸ್ವಿಯು ತನ್ನ ಮೈಯನ್ನು ತಾನು ನೋಡಿಕೊಂಡು, "ಈ ವಿಕಾರವಾದ ಸನ್ಯಾಸಿ ವೇಷವು ನನಗಿನ್ನೇತಕ್ಕೆ ? ಮೊಲವು ಕೈಗೆ ಸಿಕ್ಕದ ಮೇಲೆ ಬಲೆಯಿಂದ ಫಲವೇನು ?" ಎಂದು ತನ್ನ ಮೈಮೇಲಿದ್ದ ಕಾವಿಯ ಬಟ್ಟೆಗಳನ್ನೂ ರುದ್ರಾಕ್ಷಮಾಲೆಗಳನ್ನೂ

ಜಟಾಜೂಟವನ್ನೂ ಕಿತ್ತು ಕಿತ್ತು ಬೀಸಾಡಿ ಅಲ್ಲಿ ಒಂದು ಮರದ ಕೊಂಬೆಗೆ ಗಂಟು ಕಟ್ಟಿಹಾಕಿದ್ದ, ಆ ಸವಾರರು ಹಾಕಿಕೊಂಡಿದ್ದಂತಹ ಚಡ್ಡಿ ಕವಚ ಕ್ಕುಲ್ಲಾಯಿ ಮುಂತಾದವುಗಳನ್ನು ತೆಗೆದು ಹಾಕಿಕೊಂಡು ಗಾಡಿಯಿಂದ ಇಳಿದಮನುಷ್ಯನನ್ನು ನೋಡಿ ‹‹ಒಡೆಯನೇ ಅದೇಕೆ ನೀನು ಹೀಗೆ ಬಂದ ಕಾರ್ಯವನ್ನು ಮರತುಸ್ತಬ್ಧನಾಗಿ ನಿಂತುಬಿಟ್ಟೆ? ನೋಡಿದೆಯೋ, ಮೋಹಿನಿಯ ಮೋಹಕ ಶಕ್ತಿಯು ಹೇಗಿದೆ, ಎಂದನು. ಅದಕ್ಕೆ ಆ ಒಡೆಯನು ‹‹ಶಬ್ಬರಿಗೆ ಬಂದ ಹೆಬ್ಬುಲಿಯು ಕೂಡಾ ಈಕೆಯನ್ನು ನೋಡಿದ ಕೂಡಲೆ ಬೆರಗಾಗಿ ತೆರದ ಬಾಂಬಿಯನ್ನು ಮುಚ್ಚ ಮರತು ಬೆಂಡಾಗಿ ನಿಲ್ಲುವುದು'' ಎಂದನು. ಅದಕ್ಕೆ ತಪಸ್ವಿಯು ‹‹ನಿನ್ನ ಬಣ್ಣಣೆಯನ್ನಿನ್ನು ಸಾಕುಮಾಡು ; ಈಕೆಯ ಇದಿರಿಗೆ ನೀನಿನ್ನು ಕೊಂಚ ಹೊತ್ತು ನಿಂತರೆ ನೀನೊಬ್ಬ ಮಹಾಕವಿಯಾಗಿ ಬಿಡುವೆ. ಒಳ್ಳೆಯದು ! ಬಂದ ಕಾರ್ಯವನ್ನು ಮುಂದೆ ನೋಡು'' ಎಂದು ಜಗನ್ಮೋಹಿನಿಯ ಕಡೆಗೆ ಕೈ ತೋರಿ ‹‹ನಿನಗೀಗ ನಾನು ಈಕೆಯೇ ಜಗನ್ಮೋಹಿನಿಯೆಂದು ಹೇಳಬೇಕಾದುದಿಲ್ಲ ; ಜಗನ್ಮೋಹಿನಿಯು ಪಕ್ಕದಲ್ಲಿ ನಿಂತಿರುವ ಆ ಹೆಂಗಸು ಈಕೆಯ ದಾದಿಯು. ಇನ್ನು ನಾವು ತಿಲಮ್ಬ ಮಾಡಲಾಗದು ; ಕೈಗೆ ಬಂದ ತುತ್ತು ಬಾಯಿಗೆ ಬಾರದೇ ಹೋದೀತು'' ಎಂದನು.

ಕೂಡಲೇ ಆ ಒಡೆಯನು ಜಗನ್ಮೋಹಿನಿಯನ್ನು ಅಡ್ಡಪಾಪನಂತೆ ಎತ್ತಿ ಆ ಗಾಡಿಯೊಳಗೆ ಮಲಗಿಸಿ ಬಾಗಿಲನ್ನು ಮುಚ್ಚಿ ತಾನು ಬಾಗಿಲ ಹತ್ತಿರವೇ ನಿಂತು ಹಿಂದಿರುಗಿ ತನ್ನ ಹಿಂಬಾಲಕರನ್ನು ನೋಡಿ, ‹‹ಎಲೈ, ಇವಳೀದಾಸಿಯನ್ನು ಜಾಗ್ರತೆಯಾಗಿ ಎತ್ತಿಕೊಂಡು ಬನ್ನಿ.'' ಎಂದನು.

ಆವೇಳೆಗೆ ಆ ದಾದಿಯು ಅದೃಶ್ಯಳಾದಳು. ಅವರೆಲ್ಲರೂ ಸಿಡಿಮಿಡಿಗೊಂಡು ಬೇಟೆಯ ಮೃಗವನ್ನು ಹುಡುಕುವಂತೆ ಸುತ್ತುಮುತ್ತಲೂ ಹುಡುಕಾಡಿದರು. ಆದರೂ ಏನೂ ಪ್ರಯೋಜನವಾಗಲಿಲ್ಲ. ಆಗ ಒಡೆಯನು, “ಎಲೈ, ಹುಲಿಯು ಬೋನಿಗೆ ಬಿದ್ದ ಮೇಲೆ, ಹುಲ್ಲೆಯು ಎಲ್ಲಿ ಹೋದರೇನು ? ಆ ಬಡ ಹೆಂಗಳೆಯಿಂದ ನಮಗೆ ಪ್ರಯೋಜನವೇನು ? ಅವಳು ಎಲ್ಲಾದರೂ ಹೋಗಲಿ ; ಸಾಕಿನ್ನು ; ಎಲ್ಲರೂ ಗಿರಿದುರ್ಗಕ್ಕೆ ಹಿಂದಿರುಗಿರಿ.” ಎಂದು ಗರ್ಜಿಸಿ ತಾನೇ ಗಾಡಿಯ ಮೇಲೇರಿ ಕುದುರೆಗಳ ಲಗಾಮನ್ನು ಕೈಗೆ ತೆಗೆದುಕೊಂಡು ಗಾಡಿಯನ್ನು ಹಿಂದಿರುಗಿಸಿ ಕುದುರೆಗಳನ್ನು ಚಾವಟಿಯಿಂದ ಚಟೀರ್ ಚಟೀರನೆ ಹೊಡೆದನು. ಕೂಡಲೇ ಗಾಡಿಯು ಮಿಂಚಿನ ವೇಗದಿಂದ ಆ ಕಾಡಿನೊಳಕ್ಕೆ ತೆರಳಿತು. ಆ ತಪಸ್ವಿಯು ತಟ್ಟನೆ ಆ ಗಾಡಿಯ ಹಿಂದುಗಡೆ ಏರಿ ಕುಳಿತುಕೊಂಡನು. ಕೂಡಲೇ ಅಲ್ಲಿ ಹುಡುಕಾಡುತ್ತಿದ್ದ ಸವಾರರೆಲ್ಲರೂ ತಮ್ಮ ತಮ್ಮ ಕುದುರೆಗಳ ಮೇಲೆ ಹತ್ತಿಕೊಂಡು, “ಜಯಭೈರವಾನಂದ ! ಜಯ ಜಯ ಭೈರವಾನಂದ !” ಎಂದು ಅಟ್ಟಹಾಸದಿಂದ ಗರ್ಜಿಸುತ್ತಾ ಆ ಗಾಡಿಯನ್ನು ಹಿಂಬಾಲಿಸಿದರು.

ಅಯ್ಯೋ ! ಈ ಸಮಯದಲ್ಲಿ ನಮ್ಮ ಕಥಾನಾಯಕಿಯ ಪ್ರಿಯಸಖಿಯಾದ ಚಿತ್ರಲೇಖೆಯ ಮನೋವೃತ್ತಿಯು ಹೇಗಿದ್ದಿತೋ ! ಹೇಗಾದರೂ ಇರಲಿ, ಆಕೆಯು ಧೈರ್ಯಗೆಡಲಿಲ್ಲ. ವಿಪತ್ಕಾಲದಲ್ಲಿ ಧೈರ್ಯಕ್ಕಿಂತಲೂ ಮಿಗಿಲಾದ ಸಾಹಾಯ್ಯವಾವುದೂ ಇಲ್ಲ. ಪರಮದಯಾಳುವಾದ ದೇವರು ಈ ಸಾಹಾಯ್ಯ ಸಂಪದವನ್ನು ಮನುಷ್ಯವರ್ಗಕ್ಕೆ ಹಂಚುವುದರಲ್ಲಿ ಅಬಲೆಯರಲ್ಲಿ ತನ್ನ ಪಕ್ಷಪಾತವನ್ನು ವ್ಯಕ್ತಪಡಿಸಿರುವನು. ಚಿತ್ರಲೇಖೆಯು ಆ ಗಲಭೆಯಲ್ಲಿ ಎದೆಗುಂದದೇ

ಧೈರ್ಯವನ್ನು ಅವಲಂಬಿಸಿ ಆ ಪರ್ಣಕುಟೀರದ ಪಾರ್ಶ್ವದಲ್ಲಿದ್ದ ಒಂದು ಮರದ ಪೊಟ್ಟರೆಯಲ್ಲಿ ತಟ್ಟನೆ ಅವಿತುಕೊಂಡಳು. ಆ ಸಮಯದಲ್ಲಿ ಆ ಪೊಟ್ಟರೆಯು ಆಕೆಯ ದೃಷ್ಟಿಗೆ ಬಿದ್ದುದೊಂದು ಸೋಜಿಗವಾಗಿದೆ. ಆ ಪೊಟ್ಟರೆಯು ಮೊದಲಿಂದಲೂ ಅಲ್ಲಿಯೇ ಇದ್ದಿತೋ ಅಥವಾ ಆ ವನದೇವತೆಯೇ ಆಕೆಗಾಗಿ ಆ ಕ್ಷಣದಲ್ಲಿ ನಿರ್ಮಾಣಮಾಡಿದಳೋ ಹೇಳಲಸದಳವಾಗಿದೆ. ಬಹುತರವಾಗಿ ದೇವನಿರ್ಮಿತವಾಗಿರಬಹುದು ; ಅದೇತಕ್ಕೆಂದರೆ, ಅಂತಹ ಪೊಟ್ಟರೆಯು ಮೊದಲಿನಿಂದಲೂ ಅಲ್ಲಿ ಇದ್ದಿದ್ದರೆ ಆ ತಪಸ್ವಿಯು ಆಕೆಯನ್ನು ಅದರಲ್ಲಿ ಹುಡುಕದೇ ಬಿಡುತ್ತಿರಲಿಲ್ಲ ; ಇದಲ್ಲದೇ, ಅತೀಂದ್ರಿಯರಾಗಿ ಮಾನವರ ಧರ್ಮಾಧರ್ಮವನ್ನು ಪರಿಶೀಲಿಸುವ ದೇವತೆಗಳು ಧಾರ್ಮಿಕರನ್ನು ಎಂದಿಗೂ ಕೈಬಿಡುವುದಿಲ್ಲ.

ಚಿತ್ರಲೇಖೆಯು ಆ ಭಯಂಕರವಾದ ರಾತ್ರಿಯಲ್ಲಾ ಆ ಪೊಟ್ಟರೆಯಲ್ಲಿಯೇ ಜಾಗರಣೆಮಾಡಿ ಮಾರನೆಯದಿನ ಅರುಣೋದಯವಾದ ಕೂಡಲೇ ಕಿರಾತನ ಕೈಯಿಂದ ತಪ್ಪಿಸಿಕೊಂಡಿದ್ದ ಶಶಶಾವಕದಂತೆ ಅಲ್ಲಿಂದ ಹೊರಹೊರಟಳು. ಈಕೆಯ ಕಣ್ಣಿಗೆ ಮೊಟ್ಟಮೊದಲು ಆ ತಪಸ್ವಿಯು ಆ ಪರ್ಣಶಾಲೆಯ ಪರಿಸರದಲ್ಲಿ ಬೀಸಾಡಿದ್ದ ಕಾವಿಯ ಬಟ್ಟೆ, ಜಟಾ ಮುಂತಾದ ಸನ್ಯಾಸಿ ವೇಷದ ಸಾಮಗ್ರಿಗಳು ಕಾಣಿಸಿದುವು. ಆ ಕ್ಷಣದಲ್ಲಿಯೇ ಆಕೆಯು ಸನ್ಯಾಸಿ ವೇಷವನ್ನು ತಾಳಿ ತನ್ನ ಉಡುಗೆತೊಡಿಗೆಗಳನ್ನು ಕಳಚಿ, ಆ ಪೊಟ್ಟರೆಯಲ್ಲಿ ಕಟ್ಟಿಟ್ಟು ಆ ವೇಷಕ್ಕೆ ಕಡಮೆಯಾಗಿದ್ದ ಅಲ್ಲಿದ್ದ ಭಸ್ಮವನ್ನು ಮೈಗೆಲ್ಲಾ ಬಳದುಕೊಂಡು ಸರ್ವಪ್ರಯತ್ನದಿಂದಲೂ ತನ್ನ ಸ್ವಾಭಾವಿಕವಾದ ಆಕಾರವನ್ನು ಮರೆಮಾಚಿಕೊಂಡು ನಿರ್ಭಯಳಾಗಿ ದಿಕ್ಕು ತೋಚದವಳಾಗಿದ್ದ

ರೂ ದೇವರೇ ಗತಿ ಎಂದು ಆ ಕಾಡಿನೊಳಕ್ಕೆ ನುಗ್ಗಿದಳು. ಸುಮಾರು ಎರಡುಗಂಟೆಯ ಹೊತ್ತು ಪ್ರಯಾಣ ಮಾಡಿದ ಬಳಿಕ ಆಕೆಯ ದಾರಿಗೆ ಅಡ್ಡವಾಗಿ ಸಣ್ಣದೊಂದು ಹೊಳೆಯು ಹರಿಯುತ್ತಿದ್ದಿತು. ದೈವಯೋಗದಿಂದ ಅದರಲ್ಲಿ ಆಗ ನೀರು ಅಷ್ಟು ವಿಶೇಷವಾಗಿರಲಿಲ್ಲ. ವಾದುದರಿಂದ ಅದನ್ನು ಅನಾಯಾಸವಾಗಿ ದಾಟಿ ಆಚೆಯ ಕಡೆಗೆ ಸೇರಿದಳು. ಅಲ್ಲಿ ಯಾರೋ ಮೂವರು ಯುವಕರು ಆಗತಾನೆ ಸ್ನಾನಸಂಧ್ಯಾವಂದನೆಗಳನ್ನು ತೀರಿಸಿಕೊಂಡು ಕವಚಾದಿಗಳನ್ನು ಹಾಕಿಕೊಳ್ಳುತ್ತಿದ್ದರು. ಚದುರೆಯಾದ ಚಿತ್ರಲೇಖೆಯು ಅವರ ಆಕಾರದಿಂದಲೇ ಅವರನ್ನು ಸಾಧುಗಳೆಂದು ತಿಳಿದುಕೊಂಡಳು ; ಆದಾಗ್ಯೂ ಅವರನ್ನು ಭೇಟಿಮಾಡಿಕೊಳ್ಳುವುದಕ್ಕೆ ಮುಂಚಿತವಾಗಿ, ಅವರ ನಡೆನುಡಿಗಳನ್ನು ಕಂಡು ಕೇಳಿ ಅವರ ಶೀಲಸ್ವಭಾವಗಳನ್ನು ನಿರ್ಧರಿಸಿಕೊಳ್ಳಬೇಕೆಂದು ಬಗೆದು ಅವರಿಗೆ ಗೋಚರವಾಗದಂತೆ ಅವರ ಸಮೀಪದಲ್ಲಿದ್ದ ಒಂದು ಮೆಳೆಯ ಮರೆಯಲ್ಲಿ ಮೆದಲದೇ ನಿಂತುಕೊಂಡಳು.

ಆಗ ಅವರಲ್ಲೊಬ್ಬನು ಮತ್ತೊಬ್ಬನನ್ನು ಕುರಿತು “ಮಿತ್ರನೇ, ನನ್ನನ್ನು ನೀನು ಬೇರೆ ವಿಧವಾಗಿ ಭಾವಿಸಬೇಡ; ನಾನು ನಿನ್ನನ್ನು ಮಿತ್ರನೆಂದು ಕರೆಯುವುದು ಕೇವಲ ಔಪಚಾರಿಕವೆಂದು ತಿಳಿದಿರುವಿಯೋ ? ಅಂತಹ ಅನರ್ಥವಾದ ಸಂಬೋಧನೆಗಳನ್ನು ಮಾಡುವುದಕ್ಕೆ ನನ್ನ ಅಂತಃಕರಣವು ಸರ್ವಥಾ ಒಡಂಬಡುವುದಿಲ್ಲ. ಲೋಕದಲ್ಲಿ ಮಿತ್ರನಿಗಿಂತಲೂ ಆಪ್ತಕರಾರೂ ಇಲ್ಲ ; ಮಿತ್ರನಲ್ಲಿ ಹೇಳಿಕೊಂಡ ಸುಖವು ಉಕ್ಕುವುದೂ ದುಃಖವು ಕುಗ್ಗುವುದೂ ಸ್ವಾಭಾವಿಕವಾಗಿದೆ. ಹೀಗಿರುವಲ್ಲಿ ನನ್ನ ಸುಖದುಃಖಗಳನ್ನು ನಿನ್ನೊಡನೆ ಹೇಳಿಕೊಳ್ಳದೇ ಮತ್ತಾರಲ್ಲಿ ಹೇಳಿಕೊಳ್ಳಲಿ ? ಆದರೆ, ನಾನು ಇದುವರೆಗೂ

ಚದರಿಹೋಗಿದ್ದ ನನ್ನ ಮನವನ್ನು ಕೂಡ ಹಾಕಿ ಚದರಿದುದಕ್ಕೆ ಕಾರಣವನ್ನು ಕಂಡುಹಿಡಿಯುವುದರಲ್ಲಿ ವ್ಯಗ್ರನಾಗಿದ್ದೆನಾದುದರಿಂದ ನಿನ್ನ ಹಿತಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಕೊಡುವುದಕ್ಕೆ ಅಸಮರ್ಥನಾಗಿದ್ದೆನು. ಇನ್ತಹ ಕುನ್ಸುಗಳು ಮಿತ್ರಧರ್ಮಾನುಸಾರವಾಗಿ ಕ್ಷಮಿಸಲ್ಪಡತಕ್ಕವುಗಳಾಗಿವೆ ಎನ್ದು ನಾನು ನಿನಗೆ ಅರಿಕೆಮಾಡಬೇಕಾದುದಿಲ್ಲ. ಅದ್ಯಾಪಿ, ನನ್ನ ಮನೋವೈಕಲ್ಯಕ್ಕೆ ಕಾರಣವು ನಿಷ್ಕರ್ಷೆಯಾಗಲಿಲ್ಲ; ಆದರೂ ನನ್ನ ಮನೋಗತವನ್ನು ನಿನಗೆ ಒಡೆದು ಹೇಳುವೆನು. ಕೇಳು. ನಿನ್ನೆ ರಾತ್ರಿ ನಾನುಸ್ವಪ್ನದಲ್ಲಿ ಒಂದುಮನ್ದಿರವನ್ನು ಕಂಡೆನು. ಆಭವನವನ್ನುವರ್ಣಿಸುವಷ್ಟು ವಾಚೋಯುಕ್ತಿ ನನಗೆಸಾಲದು. ಎನ್ತಹ ಮಹಾಕವಿಯಾದರೂ ಅದನ್ನು ಅತಿಶಯೋಕ್ತಿಯಿಂದ ಬಣ್ಣಿಸಲಾರನು; ಅದೇತಕ್ಕೆಂದರೆ ಅದರ ವಿಷಯದಲ್ಲಿ ಅತಿಶಯೋಕ್ತಿಯು ಸ್ವಭಾವೋಕ್ತಿಯ ಲೇಶವನ್ನು ಕೂಡಾ ಅತಿಕ್ರಮಿಸಲಾರದು. ವಿಶೇಷೋಕ್ತಿಯಿಂದ ಫಲವೇನು? ಆ ಪ್ರಾಸಾದವನ್ನು ಆದಿಶೇಷನು ಕೂಡಾ ಸರಿಯಾಗಿ ವರ್ಣಿಸಲಾರನು; ಆ ಭವನದ ಬಣ್ಣಣೆಯು ಹಾಗಿರಲಿ: ಅದರಲ್ಲಿ ಹಂಸತೂಲಿಕಾತಲ್ಪದ ಮೇಲೆ, ಮಿತ್ರನೇ, ಏನೆನ್ದು ಹೇಳಲಿ! ಒಬ್ಬ ಸುನ್ದರಿಯು ಮಲಗಿದ್ದಳು. ಆ ಮೋಹನಾಂಗಿಯ ಲೋಕೋತ್ತರವಾದ ಲಾವಣ್ಯವು ನನ್ನ ಮನವನ್ನು ಸೂರೆಗೊಂಡಿತು. ಆಕೆಯನ್ನು ನಾನು ಕಣ್ಣಾರ ನೋಡುವವರೆಗೂ ನನಗೆ ಚಿತ್ತಸ್ವಾಸ್ಥ್ಯವು ಉಂಟಾಗುವುದಿಲ್ಲ. ಹಾ! ಮಿತ್ರನೇ, ಆ ಮೋಹನಾಂಗಿಯನ್ನು ನಾನು ಮರಳಿ ನೋಡುವ ಬಗೆಯಾವುದು? ಆ ಮೋಹಿನಿಯು ಎಲ್ಲಿರುವಳು ? ಆ ಭವನವೆಲ್ಲಿದೆ? ಹಾಮೋಹಿನೀ! ಹಾಮೋಹಿನೀ!'' ಎನ್ದು ಮೂರ್ಛಿತನಾಗಿ ನೆಲಕ್ಕೆ ಬಿದ್ದನು. ಆಗ ಆ ಮಿತ್ರನು ಆತನನ್ನು ಶೈತ್ಯೋಪಚಾರಗಳಿಂದ

ಸಂತವಿಸಿ, "ಒಡೆಯನೇ, ಈ ಸಂಗತಿಯನ್ನು ನೀನು ನನಗೆ ಮೊದಲೇ ಹೇಳಿದ್ದರೆ ನೀನಿಷ್ಟು ಬಳಲುವುದಕ್ಕೆ ಕಾರಣವಿರುತ್ತಿರಲಿಲ್ಲ. ನಿನ್ನ ಸ್ವಪ್ನಾರ್ಥವು ನನಗೆ ಕರತಳಾಮಲಕದಂತೆ ಸ್ಪಷ್ಟವಾಗಿರುವುದು. ನೀನು ಸ್ವಪ್ನದಲ್ಲಿ ಕಂಡ ಆ ದಿವ್ಯಭವನವು, ಮಹಾನುಭಾವರಾದ ಕುಶನಾಭರು ಅಪ್ಪಣೆಕೊಡಿಸಿದಂತೆ ಆ ಮಹಾಯೋಗಿಗಳಾದ ಅರವಿಂದಬಾಂಧವರು ತಮ್ಮ ತಪಃಪ್ರಭಾವದಿಂದ ತಮ್ಮ ಪ್ರಿಯ ಪುತ್ರಿಗೆ ಸಲುವಾಗಿ ನಿರ್ಮಿಸಿದ ಅರಮನೆಯು ; ಅಲ್ಲಿ ಮಲಗಿದ್ದ ಸುಂದರಿಯೋ ಅರವಿಂದಬಾಂಧವರ ಮಗಳಾದ ಜಗನ್ಮೋಹಿನಿಯು. ಆ ಮಹಾಯೋಗಿಗಳ ಸಂಕಲ್ಪದಂತೆ ನಿಮ್ಮಗಳ ವೈವಾಹಿಕ ವಿಧಿಯು ನೆರವೇರುವುದಕ್ಕಾಗಿ ಆಕೆಯು ಆ ಜಗನ್ಮೋಹಿನಿಯೂ ಆ ಭವನವೂ ಸ್ವಪ್ನದಲ್ಲಿ ನಿನಗೆ ಪ್ರತ್ಯಕ್ಷವಾಗಿವೆ. ಇಲ್ಲದಿದ್ದರೆ, ಆ ತಪೋವನದಲ್ಲಿ ಇಂತಹ ಲೌಕಿಕಸ್ವಪ್ನವು ಎಂದಿಗಾದರೂ ಆಗುವುದುಂಟೇ?" ಎಂದನು.

ಒಡೆಯ:—ಮಿತ್ರನೇ, ನೀನು ಹೇಳುವುದು ಯಥಾರ್ಥವಾಗಿರಬಹುದು. ಏತಕ್ಕೆಂದರೆ, ವಿಪ್ರವಾಕ್ಯವು ಎಂದಿಗೂ ತಪ್ಪುವುದಿಲ್ಲ. ಮುಖ್ಯವಾಗಿ ಆ ಮಹರ್ಷಿಗಳ ಅನುಜ್ಞೆಯನ್ನು ಉಲ್ಲಂಘಿಸಿದ್ದರಿಂದ ಈ ವಿಧವಾದ ಮನೋವ್ಯಥೆಯು ನನಗೆ ಸಂಭವಿಸಿತು.

ಮಿತ್ರ:—ನಾನಾಮಾತನ್ನು ಆಡುವುದಕ್ಕೆ ಸಂಕೋಚಪಡುತ್ತಿದ್ದೆನು.

ಒಡೆಯ:—ಮಿತ್ರನೇ, ಈಗಿನ ಕಾಲದಲ್ಲಿ ಕರ್ಮಫಲಗಳುಬಹು ಜಾಗ್ರತೆಯಾಗಿ ಪರಿಪಾಕಕ್ಕೆ ಬರುತ್ತವೆ.

ಮಿತ್ರ:—ಸತ್ಕರ್ಮಗಳಿಗಿಂತಲೂ ದುಷ್ಕರ್ಮಗಳ ಸಿದ್ಧಿಯು ಅತಿತೀವ್ರವಾಗಿರುವ ಹಾಗೆ ಕಾಣುತ್ತದೆ.

ಒಡೆಯ :—ಅದಕ್ಕೆ ನಾನೇ ಸದರ್ಶನವಾಗಿರುವೆನಲ್ಲಾ. ಒಳ್ಳೆಯದು, ಅದು ಹಾಗಿರಲಿ, ಮುಂದೆ ನನ್ನ ಮನೋರಥಸಿದ್ಧಿಗೆ ಮಾಡುವದೇನು ?

ಮಿತ್ರ:—ಅದಕ್ಕೆ ಮಾಡಬೇಕಾದುದೇಸಿದೆ ? ನನ್ನ ಅಪರಾಧ ವನ್ನು ಮನ್ನಿಸಬೇಕೆಂದು ಪೂಜ್ಯರಾದ ಕುಶನಾಭರಿಗೆ ಮೊರೆ ಇಟ್ಟರೆ ನಿನ್ನ ಮನೋರಥವು ಕ್ಷಿಪ್ರದಲ್ಲಿ ನೆರವೇರುತ್ತದೆ.

ಒಡೆಯ:—ಆಗ ನಾನು ಅವರ ಮಹದಾಜ್ಞೆಯನ್ನು ಆ ರೀತಿ ಯಾಗಿ ಉಲ್ಲಂಘಿಸಿ ಈಗ ಅವರಿಗೆ ಮುಖವನ್ನು ಹೇಗೆ ತೋರಿಸಲಿ ? ತಪೋನಿಷ್ಠರಾದ ಅವರು ಒನ್ನುವೇಳೆ ನಮ್ಮ ಅತಿಕ್ರಮ ಪ್ರವೇಶ ದಿನ್ದ ಕುಪಿತರಾಗಿ ಏನಾದರೂ ಶಾಪವನ್ನು ಕೊಟ್ಟರೆ ಗತಿಯೇನು ?

ಮಿತ್ರ:—ಕರುಣಾಸಮುದ್ರರಾದ ಮುನಿಜನರು ಶರಣಾಗ ರಾದವರ ಮೇಲೆ ಎನ್ದಿಗೂ ಕೋಪಿಸಿಕೊಳ್ಳುವುದಿಲ್ಲ. ನಡೆ, ನಾವಿನ್ನು ತಡಮಾಡದೇ ಕುಶನಾಭರ ಆಶ್ರಮಕ್ಕೆ ಹೋಗೋಣ.

ಆ ಮಾತಿಗೆ ಒಡೆಯನು ಒಡಂಬಟ್ಟು ಕುಶನಾಭರ ಆಶ್ರಮದ ಕಡೆಗೆ ಹೊರಟನು. ಉಳಿದ ಈರ್ವರೂ ಅವನನ್ನು ಹಿಂಬಾಲಿಸಿದರು.

ಇವರ ಸಂಭಾಷಣೆಯನ್ನು ಮರೆಯಲ್ಲಿ ನಿಂತು ,ಕೌತುಕದಿಂದ ಕೇಳುತ್ತಿದ್ದ ಚಿತ್ರಲೇಖೆಯು ತನ್ನಲ್ಲಿ ತಾನು, "ಈ ಒಡೆಯನೇ ನಮ್ಮ ಜಗನ್ಮೋಹಿನಿಯ ಮೋಹಕನು; ಈತನೂ ಆ ಜಗನ್ಮೋಹಿನಿಯಂತೆ ಆಕೆ ಯನ್ನು ಸ್ವಪ್ನದಲ್ಲಿ ಕಂಡು, ವಿರಹ ವ್ಯಥೆಯನ್ನು ಅನುಭವಿಸುತ್ತಿರು ವನು. ಇವರೀರ್ವರ ಗರ್ವಭಂಗಕ್ಕಾಗಿ ಆ ತಪೋನಿಧಿಗಳು ಈ ಸಂಗತಿಗ ಳಿಗೆ ಅವಕಾಶಕೊಟ್ಟಿರುವ ಹಾಗೆ ಕಾಣುತ್ತದೆ. ಒಳ್ಳೆಯದಿರಲಿ." ಎನ್ದ ನ್ದುಕೊಂಡು ಪ್ರಯಾಣೋನ್ಮುಖರಾದ ಅವರಿದಿರಿಗೆ ಹೋದಳು. ಈಕೆಯು

ಋಷಿವೇಷವನ್ನು ನೋಡಿದಕೂಡಲೇ, ಆ ಒಡೆಯನು ಆಕೆಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಎದ್ದು ಕೃತಾಂಜಲಿಯಾಗಿ ನಿಂತುಕೊಂಡನು.

ಆಗ ಚಿತ್ರಲೇಖೆಯು ತನ್ನ ವೇಷಕ್ಕೆ ಅನುಸಾರವಾಗಿ ಆತನನ್ನು ನಿಟ್ಟಿಸಿ "ಎಲೈ, ನೀನಾರು ?" ಎಂದು ಕೇಳಿದಳು.

ಒಡೆಯ:—ಯೋಗೀಶ್ವರರೇ, ನಾನು ಧರ್ಮವರ್ಮನ ಮಗನಾದ ಆದಿತ್ಯವರ್ಮನು.

ಯೋಗೀಶ್ವರ:—ತಲೆದೂಗಿ, ಓಹೋ ! ಆ ಮಹದ್ವಂಶದಲ್ಲಿ ಹುಟ್ಟಿದವನಾದುದರಿಂದಲೇ ನೀನಿಂತಹ ನಡೆನುಡಿಗಳಿಂದ ಅಲಂಕೃತನಾಗಿರುವೆ.

ಆದಿತ್ಯವರ್ಮ:—ನನ್ನ ಜಿಜ್ಞಾಸೆಯನ್ನು ಮನ್ನಿಸಬೇಕು. ನಾನು ಈಗ ಯಾವ ಮಹಾ ಯೋಗಿಗಳ ಪಾದದರ್ಶನದಿಂದ ಪವಿತ್ರನಾದೆನು ಎಂಬುವುದನ್ನು ತಿಳಿಯಬೇಕೆಂದು ನನ್ನ ಮನವು ಆತುರಪಡುತ್ತಿದೆ.

ಯೋಗೀಶ್ವರ:—ಎಲೈ, ನಾನು ಪೂಜ್ಯರಾದ ಕುಶನಾಭರ ಶಿಷ್ಯಾನುಶಿಷ್ಯನು.

ಆದಿತ್ಯ:—ಮಹಾಸ್ವಾಮಿ, ತಾವು ಎಲ್ಲಿಗೆ ಪಯಣಮಾಡುತ್ತಿರುವಿರಿ ?

ಯೋಗೀಶ್ವರ:—ಎಲೈ, ನಮ್ಮ ಗುರುಗಳಾದ ಕುಶನಾಭರು ತಮ್ಮ ತಪಸ್ಸಿಗೆ ಮುಂದೆ ಏನೋ ವಿಘಾತವು ಸಂಭವಿಸಬಹುದೆಂದು ತಮ್ಮ ಜ್ಞಾನದೃಷ್ಟಿಯಿಂದ ತಿಳಿದುಕೊಂಡು ನಿನ್ನೆ ರಾತ್ರೆ ಯೋಗಮಾರ್ಗದಿಂದ ಬದರಿಕಾಶ್ರಮಕ್ಕೆ ಹೊರಟುಹೋದರು. ನಾನೂ ಅವರ ಶಿಶ್ರೂಷೆಗಾಗಿ ಅಲ್ಲಿಗೆ ಹೋಗಬೇಕೆಂದು ಹೊರಟಿರುವೆನು.

ಆದಿತ್ಯ:—ಮಹಾಸ್ವಾಮಿ, ತಾವು ನನ್ನಲ್ಲಿ ಕೃಪೆಮಾಡಿ ನನಗೆ ತಮ್ಮ ಗುರುಗಳ ಸಂದರ್ಶನವನ್ನು ಮಾಡಿಸುವುದಾದರೆ, ನಾನೂ ತಮ್ಮ ಸಂಗಡಲೇ ಬರುವೆನು.

ಯೋಗೀಶ್ವರ:—"ಓಹೋ! ಇದೇನಾಶ್ಚರ್ಯ! ಎಲೈ, ನೀನು ಮೊನ್ನೆ ರಾತ್ರಿ ನಮ್ಮ ಆಶ್ರಮದಲ್ಲಿಯೇ ಇದ್ದು ನಮ್ಮ ಗುರುಗಳ ಸಂಗಡ ಸಂಭಾಷಣೆಯನ್ನು ಮಾಡಿ ಮಾರನೆಯ ದಿನ ಅವರ ಅನುಜ್ಞೆಯನ್ನು ಪಡೆದು ಬಂದೆಯಲ್ಲವೆ? ಪುನಃ ಇಷ್ಟು ತೀವ್ರವಾಗಿ ಅವರನ್ನು ನೋಡಬೇಕಾದ ಉದ್ದೇಶವೇನು? ಎಂದು, ತಲೆಬಾಗಿ ನಿಂತಿದ್ದ ಆದಿತ್ಯವರ್ಮನ ಮುಖವನ್ನು ಒಂದು ಕ್ಷಣ ಸಂವೀಕ್ಷಿಸಿ, "ಓಹೋ! ಆ ಯೋಗೀಶನನ್ದಿನಿಯ ವೈವಾಹಿಕ ಪ್ರಸಂಗಕ್ಕಾಗಿಯೋ ?"

ಆದಿತ್ಯ:—ಯೋಗೀಶ್ವರರಿಗೆ ವೇದ್ಯವಿಲ್ಲದ್ದು ಆವುದಿದೆ ?"

ಯೋಗೀಶ್ವರ:—ಆ ಜಗನ್ಮೋಹಿನಿಯನ್ನು ತಿರಸ್ಕಾರಮಾಡಿದ್ದಕ್ಕಾಗಿ ನಿನಗೀಗ ಪಶ್ಚಾತ್ತಾಪ ಉಂಟಾದ ಹಾಗಿದೆ. ಲೌಕಿಕ ವ್ಯವಹಾರದಲ್ಲಿ ಸಮಯಚ್ಯುತಿಯಾದ ಬಳಿಕ ಪಶ್ಚಾತ್ತಾಪಡುವುದರಿಂದ ಫಲವೇನು? ಪಶ್ಚಾತ್ತಾಪವು ಕೇವಲ ತಪಿಸುವವನ ಬುದ್ಧಿಗೇಡಿತನವನ್ನು ಪ್ರಕಟಿಸುತ್ತದೆ. ಆದರೆ, ಮಾಡಿದ ಪಾಪಕ್ಕೆ ಪಶ್ಚಾತ್ತಾಪಕ್ಕಿಂತಲೂ ಉತ್ತಮವಾದ ಪ್ರಾಯಶ್ಚಿತ್ತವಿಲ್ಲ. ಒಳ್ಳೆಯದು, ಈ ಪ್ರಸಂಗದಲ್ಲಿ ಆ ಮಹಾ ಸಾಧ್ವಿಯಾದ ಮುನಿಕುಮಾರಿಗೆ ಸಂಭವಿಸಿದ ವ್ಯಾಪತ್ತಿಯು ನಿನಗೆ ಗೊತ್ತಿದೆಯೋ ?

ಆದಿತ್ಯವರ್ಮ:—ಆಕೆಗೆ ವಿಪತ್ತು ಸಂಭವಿಸಿತೇನು ?

ಯೋಗೀಶ್ವರ:—ಅಪಹೃತಳಾಗುವುದಕ್ಕಿಂತಲೂ ಅಧಿಕವಾದ ವಿಪತ್ತು ಯಾವದಿದೆ?

ಆದಿತ್ಯ:—ಹಾ! ಜಗನ್ಮೋಹಿನಿಯೂ ಅಪಹೃತಳಾದಳೇ ?

ಯೋಗೀಶ್ವರ:—ಅಹುದಯ್ಯಾ ! ಆ ಮಹಾ ಯೋಗಿಗಳಾದ ಅರವಿನ್ದಬಾನ್ಧವರ ಪ್ರಿಯನನ್ದಿನಿಯಾದ ಜಗನ್ಮೋಹಿನಿಯೇ ಅಪಹೃತಳಾದಳು.

ಆದಿತ್ಯ;—ಅದೆಂದು ?

ಯೋಗೀಶ್ವರ:—ನಿನ್ನೇ ರಾತ್ರಿ; ನಿನ್ನೇ ರಾತ್ರಿಯೇ.

ಆದಿತ್ಯ:—ಅದು ಹೇಗೆ?

ಯೋಗೀಶ್ವರ:—ಆಕೆಯೂ ನಿನ್ನನ್ತೆಯೇ ಕುಶನಾಭರ ಹಿತೋಪದೇಶವನ್ನು ಉಲ್ಲಂಘಿಸಿ ಪಶ್ಚಾತ್ತಾಪದಿನ್ದಲೂ ವಿರಹತಾಪದಿಂದಲೂ ಸಂತಪ್ತಳಾಗಿ ನಿನ್ನೆ ಸಾಯಂಕಾಲ ಅವರಿಗೇ ಮೊರೆ ಇಡುವುದಕ್ಕೆ ಸಲುವಾಗಿ ಅವರ ಆಶ್ರಮಕ್ಕೆ ಹೋದಳು. ಆ ಸಮಯದಲ್ಲಿ ಅವರು ಅಲ್ಲಿ ಇಲ್ಲದೆ ಇದ್ದುದರಿಂದ ಯಾರೋ ವಂಚಕರು ಅವಳನ್ನು ಮೋಸಗೊಳಿಸಿ ಅಪಹರಿಸಿಕೊಂಡು ಹೋದರು.

ಆದಿತ್ಯ:—ಇಂತಹ ತಪೋವನದಲ್ಲಿ ಅಂತಹ ದುಷ್ಕರ್ಮಗಳು ನಡೆವುದಂದರೇನು?

ಯೋಗೀಶ್ವರ:—ದುರಾತ್ಮರ ದುರ್ವ್ಯಾಪಾರವು ಸಾಧುಗಳೆಡೆಯಲ್ಲಿ ಅಲ್ಲದೇ ಮತ್ತೆಲ್ಲಿ ನಡೆಯುವುದು?

ಆದಿತ್ಯ:—ಆಕೆಯನ್ನು ಅಪಹರಿಸಿದ ಆ ದುರಾತ್ಮರಾರು ?

ಯೋಗೀಶ್ವರ:—ಅವರಾರೋ ನನಗೆ ಗೊತ್ತಿಲ್ಲ. ಆದರೆ ಇಷ್ಟು ಮಾತ್ರ ಹೇಳಬಲ್ಲೆನು. "ಜಯಭೈರವಾನನ್ದ! ಜಯಜಯಭೈರವಾನನ್ದ!" "ಗಿರಿದುರ್ಗಕ್ಕೆ ನಡೆಯಿರಿ !" ಎನ್ನು ಶಬ್ದ ಮಾತ್ರ ನನ್ನ ಕಿವಿಗೆ ಬಿದ್ದಿತು.

ಈ ಮಾತನ್ನು ಕೇಳಿದ ಕೂಡಲೇ ಆದಿತ್ಯವರ್ಮನು ವೀರಾವೇಶದಿಂದ, "ವಿನಾಶಕಾಲೇ ವಿಪರೀತ ಬುದ್ಧಿಃ" ಈಗಲೀಗ ಆ ದುಷ್ಟದಾನವನಿಗೆ ವಿನಾಶಕಾಲವು ಸಂಘಟಿಸಿತು. ನಾನಿನ್ನು ಆ ಭೈರವಾನಂದನಿಗೂ ಅವನ ಕಡೆಯುವರಿಗೂ ಯಮದರ್ಶನವನ್ನು ಮಾಡಿಸಿ ಅವನ ಆ ಹಾಳು ಗಿರಿದುರ್ಗವೆಂಬುದನ್ನು ಧೂಳೀಪಟಲವನ್ನು ಮಾಡದೇ ಬಿಡುವುದಿಲ್ಲ, ಎಂದು ತನ್ನ ಮಿತ್ರನ ಕಡೆಗೆ ನೋಡಿ, "ಎಲೈ, ಆ ಭೈರವಾನಂದನ ವಂಶವನ್ನು ನಾಶಮಾಡುವವರೆಗೂ ನಾನು ನಮ್ಮ ರಾಜಧಾನಿಗೆ ಹೋಗುವುದಿಲ್ಲ ; ಆದುದರಿಂದ ನೀನು ಜಾಗ್ರತೆ ನಮ್ಮ ಪಟ್ಟಣಕ್ಕೆ ಹೋಗಿ ಒಂದಕ್ಷೋಹಿಣೀ ಸೈನ್ಯವನ್ನು ತೆಗೆದುಕೊಂಡು ಬಾ. ಆ ಭೈರವಾನಂದನನ್ನೂ ಅವನ ಕಡೆಯುವರನ್ನೂ ಕಾಡು ಹಂದಿಗಳಂತೆ ಬೇಟೆಯಾಡುವ" ಎಂದು ಹೇಳಿದನು. ಕೂಡಲೆ ಆ ಮಿತ್ರನು 'ಅಪ್ಪಣೆಯಂತಾಗಲಿ.' ಎಂದು ಹೊರಟು ಹೋದನು.

ಆಗ ಆ ಯೋಗೀಶ್ವರನು ಆದಿತ್ಯವರ್ಮನನ್ನು ನೋಡಿ, "ಎಲೈ, ಆ ತಪಸ್ವಿನಿಯು ಅಪಹೃತಳಾದ ಸುದ್ದಿಯು ಇನ್ನೂ ಪದ್ಮದ್ವೀಪಕ್ಕೆ ತಿಳಿಯಲಿಲ್ಲ. ಅಲ್ಲಿ ಅಸಂಖ್ಯಾತವಾದ ಸೈನ್ಯವಿದೆ; ಅತಿರಥ ಮಹಾರಥರನೇಕರಿದಾರೆ ; ಈ ಸಂಗತಿಯು ಅವರ ಕಿವಿಗೆ ಬಿದ್ದರೆ, ಅವರು ಈ ಅನಾರ್ಯರನ್ನು ಒಂದು ಕ್ಷಣದಲ್ಲಿ ಧ್ವಂಸಮಾಡಿಬಿಡುತ್ತಾರೆ. ದುಷ್ಟಸಂಹಾರಕ್ಕೂ ಶಿಷ್ಟಪರಿಪಾಲನೆಗೂ ಕೈಲಾದಮಟ್ಟಿಗೂ ಸಹಾಯಮಾಡುವುದು ಮಾನವಧರ್ಮ. ಆದುದರಿನ್ದ ನಾನು ಈಗ ಮೊದಲು ಪದ್ಮದ್ವೀಪಕ್ಕೆ ಹೋಗಿ, ಅಲ್ಲಿನ ಮಂತ್ರಿಮುಖ್ಯರಿಗೆ ಈ ವೃತ್ತಾಂತವನ್ನು ತಿಳಿಸುವೆನು. ನೀನು ದಯೆಮಾಡಿ ನನಗೆ ಪದ್ಮದ್ವೀಪದ ರೇವಿನದಾರಿ

ಯನ್ನು ತೋರಿಸಬೇಕು." ಎನ್ದನು. ಅದಕ್ಕೆ ಆದಿತ್ಯವರ್ಮನು "ಒಳ್ಳೆಯದು, ಮಹಾಸ್ವಾಮಿಾ, ಹೀಗೆ ದಯಮಾಡಿಸಬೇಕು." ಎಂದು ರೇವಿನ ಕಡೆಗೆ ಮುಂದರಿದನು. ಯೋಗೀಶ್ವರನು ಆತನನ್ನು ಹಿಂಬಾಲಿಸಿದನು. ಸ್ವಲ್ಪದೂರ ಹೋದಮೇಲೆ ಉತ್ತುಂಗತರಂಗಮಾಲೆಗಳ ಸಂರಂಭದಿಂದ ಘೋರ್ಗರೆಯುತ್ತಿದ್ದ ಸರಿತ್ಪತಿಯು ಲೋಚನಗೋಚರನಾದನು. ಆಗಳಾ ಮುನಿವರನು ಆದಿತ್ಯವರ್ಮನನ್ನು ಕುರಿತು, "ಆಯುಷ್ಮಂತನೇ, ಇದೋ ನೋಡು ಪದ್ಮದ್ವೀಪದ ರೇವು ಅನತಿ ದೂರದಲ್ಲಿ ಕಾಣುತ್ತದೆ. ಇದಲ್ಲದೇ ಇಲ್ಲಿಂದಾಚೆಗೆ ನನ್ನ ಪಥವು ಸುಪಥವಾಗಿರುವ ಹಾಗಿದೆ. ನಾನಿನ್ನು ಅಸಹಾಯನಾಗಿ ನನ್ನ ಸ್ಥಾನವನ್ನು ಸೇರಬಲ್ಲೆನು. ಇನ್ನು ನೀನೂ ನಿನ್ನ ನಿಯೋಗವನ್ನು ಪೂರ್ತೈಸುವುದಕ್ಕೆ ಉದ್ಯುಕ್ತನಾಗು. ನಿನ್ನ ಸಹಾಯಕ್ಕೆ ನಾನು ಬಹಳ ಕೃತಜ್ಞನಾಗಿರುವೆನು. ದೇವರು ನಿನಗೆ ವಿಜಯವನ್ನುಂಟುಮಾಡಲಿ!'' ಎಂದು ಮುಂದರಿದನು. ಆಗ ಆದಿತ್ಯವರ್ಮನು, "ಅಪ್ಪಣೆಯಂತಾಗಲಿ." ಎನ್ನು ಅವರಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಹಿಂದಿರುಗಿದನು.

———:0:———

# ಹದಿನಾಲ್ಕನೆಯ ಪ್ರಕರಣ.

## ಪಾಣಿಗ್ರಹಣ.

ರಸಿಕಶಿಖಾಮಣಿಗಳಾದ ನಮ್ಮ ವಾಚಕರು, ಮೊದಲನೆಯ ಪ್ರಕರಣದಲ್ಲಿ ಉದಾಹೃತವಾದ ಭೈರವಾನಂದನ ಗಿರಿದುರ್ಗವನ್ನು ಕೊಂಚ ನೆನಪಿಗೆ ತಂದುಕೊಳ್ಳಬೇಕು. ಈ ದುರ್ಗವು ಸಣ್ಣದೊಂದು

ಬೆಟ್ಟದ ಕೊಟ್ಟ ಕೊನೆಯಲ್ಲಿ ಕಟ್ಟಲ್ಪಟ್ಟಿದ್ದಾಗ್ಯೂ ಅದು ಎಲ್ಲಿಂದಲೂ ಮಾನವಸಾಮಾನ್ಯರ ದೃಷ್ಟಿಗೆ ಗೋಚರವಾಗುತ್ತಿರಲಿಲ್ಲ. ಇದಕ್ಕೆ ಕಾರಣವು, ಅದರ ಸುತ್ತಮುತ್ತಲೂ ಗಗನ ಚುಮ್ಬಿತವಾಗಿ ಬೆಳೆದಿದ್ದ ಕಾಡುಮರಗಳ ಸನ್ದಣಿಯೊನ್ದೇ ಅಲ್ಲ; ಆದರೆ, ಅದನ್ನು ಕಟ್ಟಿದ್ದ ಸ್ಥಳವಿಶೇಷವು ಮುಖ್ಯವಾಗಿದ್ದಿತು. ಈ ಕೋಟೆಯು ನಟ್ಟನಡುವೆ ಕಟ್ಟಲ್ಪಟ್ಟಿದ್ದ ಅರಮನೆಯ ಚನ್ದ್ರಶಾಲೆಯಲ್ಲಿ ನಿಂತುನೋಡತಕ್ಕವರ ಕಣ್ಣಿಗೆ ಸುತ್ತ ಒನ್ದು ಗಾವುದ ಭೂಪ್ರದೇಶದಲ್ಲಿದ್ದ ಸಮಸ್ತ ವಸ್ತುಗಳೂ ಕರತಳಾಮಲಕದನ್ತೆ ಕಾಣುತ್ತಿದ್ದುವು. ಇದುವೇ ಆ ಭೈರವಾನನ್ದನ ಶಯ್ಯಾಗೃಹ. ಇದನ್ನು ಕಟ್ಟಿಸಿದ ಪುಣ್ಯಾಪುರುಷನು ಆ ಸ್ಥಳವನ್ನು ಹೇಗೆ ಕಂಡು ಹಿಡಿದನೋ! ಬಹುಶಃ, ಉರುಮುನಿಗಳಾದ ವಿಷಜನ್ತುಗಳಿಗೂ ದುಷ್ಟಮೃಗಗಳಿಗೂ ತಮ್ಮ ತಮ್ಮ ಗೋಪ್ಯವಾದ ವಾಸಸ್ಥಳಗಳನ್ನು ಹುಡುಕಿಕೊಳ್ಳುವ ಬುದ್ಧಿಯು ಸ್ವಾಭಾವಿಕವಾಗಿರುವನ್ತೆ ಜಾರಚೋರರಿಗೂ ರಹಸ್ಯವಾದ ಸ್ಥಳಗಳನ್ನು ಹುಡುಕಿಕೊಳ್ಳುವ ಕೌಶಲ್ಯವು ಸ್ವಾಭಾವಿಕವಾಗಿರುವಂತೆ ಕಾಣುತ್ತದೆ.

ಪ್ರಪಂಚದಲ್ಲಿ, ಸಂಪತ್ತಾಗಲೀ ವಿಪತ್ತಾಗಲೀ ಅತ್ಯಾಸನ್ನವಾಗಿದ್ದಲ್ಲಿ ಅವುಗಳಿಗೆ ವಿಷಯನಾಗಿದ್ದ ಪ್ರಾಣಿಯ ಮನಸ್ಸಿಗೆ ಸ್ವಾಸ್ಥ್ಯವಿರುವುದಿಲ್ಲ. ಸಂಪತ್ತು ಸಂಭವಿಸುವುದಾಗಿದ್ದರೆ, ಮನಸ್ಸಿಗೆ ಅನಿರ್ವಾಚ್ಯವಾದ ಉಲ್ಲಾಸವು ಉಂಟಾಗುತ್ತದೆ. ವಿಪತ್ತು ಸಂಭವಿಸುವುದಾಗಿದ್ದರೆ, ಮನಸ್ಸಿಗೆ ಅನಿರ್ವಚನೀಯವಾದ ಕಳವಳವು ಉಂಟಾಗುತ್ತದೆ. ಈ ಸಂಪದ್ವಿಪತ್ತುಗಳ ಸಂಭವವು ಶಾಸ್ತ್ರರೀತ್ಯಾ ಕರ್ಮಾನುಗುಣವಾಗಿದ್ದರೂ ಈ ವಿಧವಾದ ಅವುಗಳ ಸೂಚನೆಯು, ಕರ್ಮಿಯು ಅವುಗಳಿಗೆ ತಕ್ಕಂತೆ ತನ್ನ ಸ್ಥಿತಿಯನ್ನು ಸರಿಪಡಿಸಿಕೊಳ್ಳುವುದಕ್ಕೆ

ಸಲುವಾಗಿ ಪರಮದಯಾಳುವಾದ ಭಗವನ್ತನಿನ್ದ ಪ್ರೇರಿತವಾದದ್ದಲ್ಲದೇ ಅನ್ಯಥಾ ಅಲ್ಲ.

ಅಪರರಾತ್ರಿಯ ಅನ್ತ್ಯಭಾಗವಾಗಿದೆ. ಭೈರವಾನಂದನಿಗೆ ಮನವಲ್ಲಿ ಏನೋ ಕಳವಳ ಉಂಟಾಗಿ ರಾತ್ರಿ ನಿದ್ರೆಯೋ ಬರಲಿಲ್ಲ. ಜಾಗರದಿಂದ ಕಣ್ಣುಗಳು ಕಡುಗೆಂಪಾಗಿವೆ; ಎಷ್ಟು ಹೊತ್ತಿಗೆ ಬೆಳಕ; ಹರಿಯುವುದೋ ಎಂದು ಚನ್ದ್ರಶಾಲೆಯ ಗವಾಕ್ಷಿಗಳಲ್ಲಿ ಅಡಿಗಡಿಗೂ ಮೂಡಣ ದೆಶೆಯನ್ನು ನೋಡುತ್ತಾ ಹಿಂದಕ್ಕೂ ಮುನ್ದಕ್ಕೂ ಬೋನಿನೊಳಗಿನ ಸಿಂಹದನ್ತೆ ಸುತ್ತಾಡುತ್ತಿದ್ದನು. ಆ ಹೊತ್ತಿಗೆ ಯಾರೋ ಒಬ್ಬನು ತಟ್ಟನೆ ಒಳಕ್ಕೆ ಬನ್ದು, "ಒಡೆಯನಿಗೆ ವಿಜಯವಾಗಲಿ!" ಎನ್ದನು.

ಭೈರವಾನನ್ದ:—ಒಳ್ಳೆಯದು, ಸಮಾಚಾರವೇನು? ಜಾಗ್ರತೆಯಾಗಿ ಹೇಳು.

ಬನ್ದವನು:—ಒಡೆಯನೇ, ಮನ್ನಿಸಬೇಕು. ಆ ಹೆಂಗಸನ್ನು ಗಾಡಿಯಿಂದ ಕೆಳಕ್ಕೆ ಇಳಿಸುವುದಕ್ಕೆ ನಮ್ಮ ಕೈಲಾದ ಸಾಹಸವನ್ನೆಲ್ಲಾ ಮಾಡಿದೆವು ; ಆದರೂ ಏನೂ ಪ್ರಯೋಜನವಾಗಲಿಲ್ಲ.

ಭೈರವಾನನ್ದ:—ಕುಪಿತನಾಗಿ, "ಛೇ! ನಾಚಿಗೆಗೇಡಿ ! ನಿನಗೆ ಸೇನಾನಾಯಕನೆಂಬ ಬಿರುದಿಗಿಂತಲೂ ಸೋಮಾರಿನಾಯಕನೆಮ್ಬ ಬಿರುದು ಚನ್ನಾಗಿ ಸಲ್ಲುವುದು. ಒಳ್ಳೆಯದು; ನೀನು ಮಾಡಿದ ಸಾಹಸವೇನು? ಬೊಗಳಾದರೂ ಬೊಗಳು ಕೇಳುವ.

ಸೇನಾನಾಯಕ:—ಗಾಡಿಯು ಬನ್ದು ನಿಂತದ್ದು ಮೊದಲು ಇದುವರೆಗೂ ನಮ್ಮ ದುರ್ಗದೊಳಗಣ ಜನರೆಲ್ಲಾ ಸೇರಿ ಸಾವಿರಾರು ಗಡಿಗೆ ನೀರು ಸುರಿಯುತ್ತಲೇ ಇರುವೆವು.

ಭೈರವಾನನ್ದ:—ಅಯ್ಯೋ! ಮುಟ್ಠಾಳಾ, ನೀರೇತಕ್ಕೆ ಸುರಿಸಿದೆ?

ಸೇನಾನಾಯಕ:—ಉರಿಯನ್ನು ಆರಿಸುವುದಕ್ಕೆ.

ಭೈರವಾನನ್ದ:—ಉರಿ ಯಾವುದು? ಬೇಗನೆ ಬೊಗಳು.

ಸೇನಾನಾಯಕ:—ಒಡೆಯನೇ, ನಿನ್ನೆ ರಾತ್ರಿ ನಾವು ಕುಶನಾಭರ ಆಶ್ರಮದಿಂದ ಆ ಹೆಂಗಸನ್ನು ಸಾಗಿಸಿಕೊಂಡು ಬನ್ದ ಗಾಡಿಯು ಅಕಸ್ಮಾತ್ತಾಗಿ ಹತ್ತಿಕೊಂಡು ಉರಿಯಲಾರಂಭಿಸಲಿಲ್ಲವೆ ?

ಭೈರವಾನನ್ದ:—ನೀನೇನೊ ಕನಸುಕಂಡು ನಿದ್ದೆಗಣ್ಣಿನಲ್ಲಿ ಓಡಿಬನ್ದು ಬಾಯಿಗೆ ಬಂದನ್ತೆ ಬೊಗುಳುತ್ತಿರುವಂತಿದೆ. ಉರಿಯು ಹತ್ತಿಕೊಂಡುದು ಯಾವಾಗ ?

ಸೇನಾನಾಯಕ:—ನೀನು ಮೂರ್ಛಿತನಾದ ಕೂಡಲೇ ಹತ್ತಿಕೊಂಡಿತೆಂದು ನೀನು ಪ್ರಜ್ಞೆ ತಿಳಿದಿದ್ದಾಗ ನಾನು ಅರಿಕೆಮಾಡಲಿಲ್ಲವೇ?

ಭೈರವಾನನ್ದ:—ಈಗ ಸದ್ಯಕ್ಕೆ ನಿನಗೆ ಪ್ರಜ್ಞೆ ತಪ್ಪಿರುವ ಹಾಗಿದೆ! ಎಲವೋ, ಹುಚ್ಚಾ, ನಿನಗಿನ್ನೂ ಮದ್ಯದ ಮದ ಇಳಿದ ಹಾಗೆ ಕಾಣಿಸಲಿಲ್ಲ. ನಾನು ಮೂರ್ಛಿತನಾದುದು ಯಾವಾಗ ?

ಸೇನಾನಾಯಕ:—ನಿನ್ನ ಕಾಲಿಗೆ ಹೆಬ್ಬಾವು ಸುತ್ತಿಕೊಂಡಾಗ.

ಭೈರವ:—ನೀನೇನು ಆಶ್ಚರ್ಯದ ಮೇಲಾಶ್ಚರ್ಯವನ್ನು ಹೇಳುತ್ತಿರುವೆ. ಅದು ಯಾವಾಗ ?

ಸೇನಾನಾಯಕ:—ನೀನು ಗಾಡಿಯ ಮೇಲಿನಿಂದ ಇಳಿದು ಒಳಗಿದ್ದ ಹೆಂಗಸನ್ನು ಈಚೆಗೆ ತೆಗೆದುಕೊಳ್ಳಬೇಕೆಂದು ಗಾಡಿಯ ಬಾಗಿಲನ್ನು ತೆಗೆಯುವುದಕ್ಕೆ ಹೋದಾಗ ನಿನ್ನ ಕಾಲಿನಿಂದ ತಲೆಯವರಿಗೂ ದೊಡ್ಡದೊಂದು ಹಾವು ಸುತ್ತಿಕೊಳ್ಳಲಿಲ್ಲವೆ? ಅದನ್ನು ನಾವು

ಗಳೆಲ್ಲರೂ ಸೇರಿ ಬಹು ಶ್ರಮಪಟ್ಟು ಬಿಡಿಸಿದ ಕೂಡಲೇ ನಿನಗೆ ಪ್ರಜ್ಞೆ ತಪ್ಪಿಹೋಯಿತು.

ಭೈರವಾನನ್ದ:—ನನಗೇ ಜ್ಞಾಪಕವಿಲ್ಲದ ಸಂಗತಿಯು ನಿನ್ನಂಥ ತಿಳಿಗೇಡಿಗೆ ಜ್ಞಾಪಕವಿದೆಯೋ! ಒಳ್ಳೆಯದು; ಆ ಉರಿಯು ನೀರು ಸುರಿದ ಮೇಲೇನಾಯಿತು?

ಸೇನಾನಾಯಕ:—ನೀರು ಹಾಕಿದ ಹಾಗೆಲ್ಲಾ ಆಜ್ಯಾಹುತಿಯನ್ನು ಕೊಟ್ಟ ಹಾಗೆ ದಗ್ಧಗ್ಗನೆ ದೊಡ್ಡ ದೊಡ್ಡ ಉರಿಗಳು ಏಳಲಾರಂಭಿಸಿದುವು.

ಭೈರವಾನನ್ದ:—ಆ ಹೆಂಗಸಿನ ಗತಿ ಏನಾಯಿತು? ಅದನ್ನು ಮೊದಲು ಹೇಳು.

ಸೇನಾನಾಯಕ:—ಆಕೆಯು ಆ ಕೆಂಡದ ರಾಶಿಯ ನಡುವೆ ತೆಪ್ಪಗೆ ನಿದ್ರೆ ಹೋಗುತ್ತಿರುವಳು.

ಇದನ್ನು ಕೇಳಿ ಭೈರವಾನನ್ದನು ಆಶ್ಚರ್ಯಪಡುತ್ತಿರುವಷ್ಟರಲ್ಲಿ ದೂತನೊಬ್ಬನು ಓಡಿಬನ್ದು ‹‹ಒಡೆಯನೇ, ಯಾರೋ ಸಾವಿರಾರು ಮನ್ದಿ ಬಿಲ್ಲಾಳುಗಳು ನಮ್ಮ ದುರ್ಗದ ಸುತ್ತಮುತ್ತಲೂ ಸುತ್ತಿಕೊಂಡು ಬೇಟೆಯಾಡುತ್ತಿದಾರೆ.'' ಎನ್ದು ಹೇಳಿದನು. ಅದನ್ನು ಕೇಳಿದಕೂಡಲೇ ಭೈರವಾನನ್ದನು ಸೇನಾನಾಯಕನನ್ನು ಕುರಿತು, ‹‹ಎಲೈ ಏನಿದಾಶ್ಚರ್ಯ! ನಮ್ಮ ದುರ್ಗದ ಬಳಿಗೆ ಬೇಟೆಯಾಡಬನ್ದ ಮನಗಾರರಾರಿರಬಹುದು?

ಸೇನಾನಾಯಕ:—ಕೊಂಚಯೋಚಿಸಿ, ‹‹ಒಡೆಯನೇ, ಮನ್ನಿಸಬೇಕು. ನಿನಗೆ ಆ ಅಸಾಧಾರಣವಾದ ಹೆಬ್ಬಾವು ಸುತ್ತಿಕೊಂಡುದೂ, ಆ ಗಾಡಿಯು ಇದ್ದಕ್ಕಿದ್ದ ಹಾಗೆಯೇ ಹತ್ತಿಕೊಂಡುರಿದುದೂ, ಎನ್ದಿ

ಗೂ ಇಲ್ಲದ ಈ ಬೇಟೆಗಾರರ ಸನ್ನಾಹವೂ ಇವೆಲ್ಲವೂ ನನಗೆ ಮಹೋತ್ಪಾತಗಳಾಗಿ ಕಾಣುತ್ತಿವೆ. ಇದುವರೆಗೂ ಈ ಪ್ರಾಂತ್ಯದಲ್ಲಿ ಬೇಟೆಯಾಡಬಂದ ಮಾನವರ ಸಮಾಚಾರವನ್ನೇ ನಾವು ಕೇಳಿದುದಿಲ್ಲ; ಆದುದರಿಂದ, ನಾವು ಅವರನ್ನು ಕೇವಲ ಸಾಮಾನ್ಯರಾದ ಬೇಟೆಗಾರರೆಂದು ಭಾವಿಸಲಾಗದು.

ಭೈರವಾನಂದ:—ಹಾಗಾದರೆ, ನೀನು ಈಕ್ಷಣವೇ ಬೇಕಾದಷ್ಟು ಸೈನ್ಯವನ್ನು ತೆಗೆದುಕೊಂಡು ಹೋಗಿ ಆ ಬೇಟೆಗಾರರನ್ನೆಲ್ಲಾ ಹಿಂಗಟ್ಟು ಮುರಿಗಟ್ಟಿಸಿ ಎಳಸಿಕೊಂಡು ಬಾ.

ಸೇನಾನಾಯಕ:—'ಅಪ್ಪಣೆಯನ್ತಾಗಲಿ' ಎಂದು ಹಿಂದಿರುಗಿದನು.

ಆಗ ಒಮ್ಮಿಂದೊಮ್ಮೆ ಘೋರವಾದ ಶಬ್ದವು ಕೇಳಬಂದಿತು. ಅದನ್ನು ಕೇಳಿ ಭೈರವಾನಂದನು ಬೆಕ್ಕಸಪಟ್ಟು ಗವಾಕ್ಷಿಯಿಂದ ಸುತ್ತುಮುತ್ತಲೂ ನೋಡಿದನು.

ಎತ್ತನೋಡಿದರೂ ಪರ್ವಕಾಲದ ಸಮುದ್ರದ ತರಂಗಗಳಂತೆ ಒಂದರ ಮೇಲೊಂದು ಒತ್ತಿ ಬರುತ್ತಿದ್ದ ಸೈನಿಕರ ಒರೆಗಳ ಚದಕರವಾಳಗಳು ಸರ್ವಸಾಕ್ಷಿಯ ಅರುಣಕಿರಣ ಸಂಪರ್ಕದಿಂದ ಥಳಥಳಿಸುತ್ತಿದ್ದವು. ಸವಾರರ ಕುದುರೆಗಳ ಹೇಷೆಯು ರಣಭೇರಿಯ ನಿನಾದದೊಂದಿಗೆ ಕಲೆತು ಸಿಡಿಲಬ್ಬಣೆಯಂತೆ ಎದೆಯನ್ನು ಕದಲಿಸುತ್ತಿದ್ದಿತು.

ಆಗ ಭೈರವಾನಂದನು ಕೋಪೋದ್ದೀಪಿತನಾಗಿ ತನ್ನ ಖಡ್ಗವನ್ನು ಕೈಗೆ ತೆಗೆದುಕೊಂಡು ಚನ್ದ್ರಶಾಲೆಯಿಂದಿಳಿದನು.

ಆ ಸಮಯಕ್ಕೆ ಸೇನಾನಾಯಕನು ತತ್ತರಿಸುತ್ತ ಓಡಿಬಂದು, "ಒಡೆಯನೇ, ನಮ್ಮ ದುರ್ಗವು ಮುತ್ತಿಗೆ ಹಾಕಲ್ಪಟ್ಟಿದೆ ; ಹೊರಗೆ ಹೋಗುವುದಕ್ಕೆ ಅವಕಾಶವಿಲ್ಲ." ಎಂದನು.

ಭೈರವಾನನ್ದ:—ಒಳ್ಳೆಯದಿರಲಿ ! ಹೆದರಬೇಡ ! ಜಾಗ್ರತೆಯಾಗಿ ಕೋಟೆಯ ಬಾಗಿಲುಗಳನ್ನು ಭದ್ರಪಡಿಸಿ ನಮ್ಮ ಸೈನ್ಯವನ್ನೆಲ್ಲಾ ಯುದ್ಧಕ್ಕೆ ಸಿದ್ಧಪಡಿಸು. ನಾನು ಅವರನ್ನೆಲ್ಲಾ ಒನ್ದು ನಿಮಿಷದಲ್ಲಿ ಕಾಲಭೈರವನಂತೆ ಧ್ವಂಸಮಾಡಿ ಬಿಡುವೆನು.

ಸೇನಾನಾಯಕ:—"ಬಾಗಿಲುಗಳನ್ನೆಲ್ಲಾ ಆಗಲೇ ಭದ್ರಪಡಿಸಿದೆನು ; ನಮ್ಮ ಸೈನಿಕರೆಲ್ಲರೂ ಆಯುಧಪಾಣಿಗಳಾಗಿ ಯುದ್ಧಕ್ಕೆ ಸನ್ನದ್ಧರಾಗಿರುವರು." ಎನ್ದು ಹೇಳುತ್ತಿರುವಷ್ಟರಲ್ಲಿಯೇ ಸುತ್ತಮುತ್ತಲೂ ಕೋಟೆಯ ಗೋಡೆಗಳು ಉರಳಲಾರಂಭಿಸಿದುವು. ನೋಡುತ್ತಿದ್ದಹಾಗೆಯೇ ಯುದ್ಧಭಟರು ಆ ಕಿಂಡಿಗಳಿಂದ ನುಗ್ಗಿ ತರಂಗತರಂಗವಾಗಿ ಒಳಕ್ಕೆ ಬನ್ದೇ ಬನ್ದರು. ಭೈರವಾನನ್ದನು ತನ್ನ ಸಕಲ ಸೈನ್ಯದೊಡನೆ ಅವರನ್ನು ಎದುರಾಯಿಸಿದನು. ಶತ್ರುಸೈನ್ಯವು ಒನ್ದು ಮುಹೂರ್ತದಲ್ಲಿ ಭೈರವಾನನ್ದನ ಸೈನಿಕರ ಶಿರಗಳನ್ನು ಚಂಡಾಡಿದರು. ಆದರೂ ಭೈರವಾನನ್ದನು ಎದೆಗುನ್ದದೇ, ಬಹುಸಾಹಸದಿನ್ದ ಶತ್ರುಗಳೊನ್ದಿಗೆ ಹೆಣಗಾಡುತ್ತಿದ್ದನು. ಅವನನ್ನು ಶತ್ರುಸೈನ್ಯವೆಲ್ಲಾ ಮುತ್ತಿಕೊಂಡಿತು. ಆದರೂ ಆ ರಣವೀರನು ಅವರನ್ನೆಲ್ಲಾ ಬಹು ಚಮತ್ಕಾರದಿಂದ ನಿವಾರಿಸುತ್ತಿದ್ದನು. ಆಗ ಅವನ ಅಸದೃಶವಾದ ಸಾಹಸವನ್ನು ನೋಡಿ, "ಭಲಾ! ಭಲಾ ! ಶಹಬಾಸ್ ! ಶಹಬಾಸ್ !" ಎನ್ನುತ್ತಾ ದೂರದಲ್ಲಿ ನಿಂತಿದ್ದ ಸವಾರನ ಬಳಿಗೆ ಮತ್ತೊಬ್ಬ ಸವಾರನು ಬನ್ದು, "ಒಡೆಯನೇ, ನೀನದೇಕೆ ಈ ದುರ್ಮಾರ್ಗನ ಕಲಿತನಕ್ಕೆ ಬೆರಗಾಗಿ ಹೀಗೆ ತಟಸ್ಥನಾಗಿ ನಿಂತಿರುವೆ? ಈ ಕಡುಗಲಿಯೇ ಭೈರವಾನನ್ದನೆಂಬ ಮಹಾಪಾತಕಿಯು ! ಇವನು ಸಾಮಾನ್ಯರಿಗೆ ಸೋಲತಕ್ಕವನಲ್ಲ ; ಆದುದರಿಂದ ನೀನೇ ಅವನನ್ನು

ತಡಮಾಡದೇ ಧರ್ಮರಾಜನ ಬಳಿಗೆ ಅಟ್ಟಿಬಿಡು. ಬಳಿಕ ನಾವು ಆ ತಪಸ್ವಿನಿಯ ಗತಿ ಏನಾಯಿತೋ ತಿಳಿದುಕೊಳ್ಳುವ'' ಎನ್ದನು. ಅದನ್ನು ಕೇಳಿದ ಕೂಡಲೇ ಆ ಸವಾರನು ಮಿಂಚಿನವೇಗದಿಂದ ಭೈರವಾನನ್ದನ ಇದಿರಿಗೆ ಹೋಗಿ, ಅವನನ್ನು ಸುತ್ತಿಕೊಂಡಿದ್ದ ಸೈನಿಕರನ್ನು ನೋಡಿ, "ಎಲೈ ಒಬ್ಬನಿಗೆ ಇಷ್ಟು ಜನಗಳು ಸುತ್ತಿಕೊಳ್ಳುವುದು ರಾಜನೀತಿಯಲ್ಲ ; ನೀವೆಲ್ಲರೂ ದೂರ ಹೋಗಿ,'' ಎನ್ದು ತಾನು ಕುದುರೆಯಿಂದ ಕೆಳಕ್ಕೆ ಇಳಿದು ತನ್ನ ಖಡ್ಗವನ್ನು ಕೈಗೆ ತೆಗೆದುಕೊಂಡು, ಅವನನ್ನು ಕುರಿತು, "ಎಲೈ, ನಿನಗೀಗ ನಿನ್ನ ದುಷ್ಟ ಕರ್ಮಗಳ ಪರಿಪಾಕ ಕಾಲವು ಬನ್ದೊದಗಿತು ; ಈಗಲಾದರೂ ನೀನು ಇದುವರೆಗೂ ಮಾಡಿದ ಮಹಾಪಾತಕಗಳಿಗೆ ಪಶ್ಚಾತ್ತಾಪಪಟ್ಟು ಪರಮದಯಾಳುವಾದ ಭಗವನ್ತನ ಕ್ಷಮಾಪಣೆಯನ್ನು ಕೇಳಿಕೊಳ್ಳುವದಾದರೆ, ನಿನಗೆ ಒನ್ದು ನಿಮಿಷ ಅವಕಾಶಕೊಡುವೆನು. ದೇವರನ್ನು ಧ್ಯಾನಮಾಡಿಕೋ. '' ಎನ್ದು ಒನ್ದು ನಿಮಿಷಕಾಲ ವಿವಿಧವಾದ ಕತ್ತಿಯ ಸಾಧನೆಗಳನ್ನು ಮಾಡುತ್ತಿದ್ದು ಬಳಿಕ ಅವನನ್ನು ಕುರಿತು, "ಎಲೈ, ನಾನು ನಿನಗೆ ಕೊಟ್ಟಿದ್ದ ಅವಧಿಯು ಕಳೆದುಹೋಯಿತು ; ನೀನಿನ್ನು ನಿನ್ನಾತ್ಮರಕ್ಷಣೆಗೆ ಜಾಗರೂಕನಾಗಿರತಕ್ಕದ್ದು. ನಾನಿನ್ನು ನಿನ್ನನ್ನು ಕಡಿದು ತುಂಡುತುಂಡುಮಾಡದೇ ಬಿಡೆನು.' ಎಂದು ಅವನ ಪರಾಕ್ರಮ ಪ್ರಕಾಶಕ್ಕೆ ಅವಕಾಶವನ್ನು ಕೊಟ್ಟುಕೊಂಡು ಅವನೊಡನೆ ಅರಗಳಿಗೆ ಹೆಣಗಾಡಿ ಬಳಿಕ ಕೈಚಳಕದಿಂದ ಅವನ ತಲೆಯನ್ನು ಒಂದೇ ಏಟಿಗೆ ಕತ್ತರಿಸಿದನು.

ಆ ವೇಳೆಗೆ ಆ ದುರ್ಗದ ಒತ್ತಟ್ಟಿನಲ್ಲಿ ಒಮ್ಮೆನ್ದೊಮ್ಮೆ ಹಾಹಾರವವು ಕೇಳಬಂದಿತು. ಈ ಜಯಶಾಲಿಯು ಅದನ್ನು

ಆಲಿಸಿ ಏನದೆಂದು ಅತ್ತಿತ್ತ ನೋಡುವಷ್ಟರಲ್ಲಿಯೇ ದೂತನೊಬ್ಬನು ಓಡಿಬಂದು, "ಒಡೆಯನೇ ಅಲ್ಲಿ ಯಾರೋ ಒಬ್ಬ ಹೆಂಗಸು ಅಗ್ನಿಪ್ರವೇಶವನ್ನು ಮಾಡಿಬಿಟ್ಟಳು." ಎಂದು ಹೇಳಿದನು. ಅದನ್ನು ಕೇಳಿದ ಕೂಡಲೇ ಆ ವೀರಾಗ್ರಣಿಯು ಅಲ್ಲಿಗೆ ಪಾದಚಾರಿಯಾಗಿಯೇ ಓಡಿದನು.

ಅಲ್ಲಿ ಯಾರೋ ಒಬ್ಬ ಯುವತಿಯು ಕೆಂಡದ ರಾಶಿಯಲ್ಲಿ ಕಾಂಚನದ ಪಾಂಚಾಲಿಕೆಯಂತೇ ಪ್ರಜ್ವಲಿಸುತ್ತಿದ್ದಳು. ಆಕೆಯನ್ನು ನೋಡಿದ ಕೂಡಲೇ ಆ ಜಯಶಾಲಿಯು, "ಹಾ ! ಅಕಟಕಟಾ ! ಕೆಟ್ಟೆನು, ಕೆಟ್ಟೆನು !" ಎಂದು ಮೂರ್ಛಿತನಾಗಿ ದಪ್ಪನೆ ದಂಡದಂತೆ ನೆಲಕ್ಕೆ ಬಿದ್ದನು.

ಆಗ ಅಲ್ಲಿದ್ದ ದಳಪತಿಗಳೆಲ್ಲರೂ ಕಳವಳಗೊಂಡು ತಕ್ಕ ಶೈತ್ಯೋಪಚಾರಗಳಿಂದ ಆತನನ್ನು ಎಚ್ಚರಗೊಳಿಸಿ ಸಂತವಿಸಲು, ಆತನು ಆ ಸೇನಾಪತಿಗಳನ್ನು ಕುರಿತು, "ಎಲೈ ಸ್ನೇಹಿತರೇ, ನಮ್ಮ ಸರ್ವಸಾಹಸವೂ ನೀರಿನಲ್ಲಿ ಮಾಡಿದ ಹೋಮದಂತಾಯಿತು. ಈ ಸಾಧ್ವಿಯೇ ನನ್ನ ಮೋಹಿನಿಯು ! ಈಕೆಯೇ ನನ್ನ ದೇವದತ್ತಳಾದ ದೇವಿಯು ! ಈ ತಪಸ್ವಿನಿಯ ಇಂತಹ ಅಪಮೃತ್ಯುವಿಗೆ ನಾನೇ ಕಾರಣ ; ಇಂತಹ ಹೆಂಗೊಲೆಗೆ ಕಾರಣಭೂತನಾದ ನನ್ನ ಮನಕೆ ಈ ಭೂತಳದಲ್ಲಿ ಶಾಂತತೆಯು ದುರ್ಲಭ. ಆದುದರಿಂದ ನಾನೂ ಈ ಯೋಗೀಶಕುಮಾರಿಯೊಂದಿಗೆ ಅಗ್ನಿಪ್ರವೇಶವನ್ನು ಮಾಡಿ ಪರಲೋಕದಲ್ಲಿಯಾದರೂ ಆಕೆಯ ಪಾಣಿಗ್ರಹಣವನ್ನು ಮಾಡಿ ಮಹಾನುಭಾವರಾದ ಋಷಿಗಳ ಆಜ್ಞೆಯನ್ನು ನೆರವೇರಿಸುವೆನು" ಎಂದು ಅಗ್ನಿಪ್ರವೇಶಮಾಡುವುದಕ್ಕೆ ಸನ್ನದ್ಧನಾದನು. ಆ ವೇಳೆಗೆ

ಅಂತರಿಕ್ಷಮಾರ್ಗದಿಂದ ಅನೇಕ ಮಹರ್ಷಿಗಳೊಂದಿಗೆ ಕುಶನಾಭರು ಅಲ್ಲಿಗೆ ಬಿಜಮಾಡಿ ಜ್ವಾಲೆಯೊಳಕ್ಕೆ ಪ್ರವೇಶಮಾಡುತ್ತಿದ್ದ ಆ ಸಾಹಸಿಕನ ಕೈಯನ್ನು ಹಿಡಿದುಕೊಂಡು “ ಎಲೈ, ಆದಿತ್ಯವರ್ಮನೇ, ನಿಲ್ಲುನಿಲ್ಲು ! ಆ ಬಾಲೆಯು ಅಗ್ನಿದಗ್ಧಳಾದಳೆಂದು ನೀನು ತಿಳಿಯಬೇಡ ! ಆಕೆಯ ಪಿತೃಪಿತಾಮಹಾದಿಗಳ ತಪಃಪ್ರಭಾವವು ಈ ಆಪತ್ಕಾಲದಲ್ಲಿ ಆ ಪತಿವ್ರತಾ ಶಿರೋಮಣಿಯನ್ನು ಅಗ್ನಿರೂಪದಿಂದ ಕಾಪಾಡುತ್ತಿರುವುದು. ಇದೋ ನೋಡು, ಈ ಕನ್ಯಾಪಿತೃಗಳಾದ ಅರವಿಂದಬಾಂಧವರು ತಮ್ಮ ಶಿಷ್ಯವರ್ಗದೊಡನೆ ದಯಮಾಡಿಸಿರುವರು” ಎಂದು ಅಲ್ಲಿ ನಿಂತಿದ್ದ ಆ ಮಹಾಯೋಗಿಗಳನ್ನು ತೋರಿಸಿದರು. ಆಗ ಆದಿತ್ಯವರ್ಮನು ಅವರಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ ಎದ್ದು ನಿಂತು ನತಶಿರನಾಗಿ, “ಮಹಾಸ್ವಾಮಿಾ, ನನ್ನ ಅಪರಾಧವನ್ನು ಮನ್ನಿಸಬೇಕು! ” ಎಂದು ವಿನಯದಿಂದ ಬೇಡಿಕೊಂಡನು. ಅದಕ್ಕೆ ಅವರು ಕುಶನಾಭರ ಮುಖವನ್ನು ನೋಡಿ, “ಸಹಾಯಾಸ್ತಾದೃಶಾಯೇವ ಯಾದೃಶೀಭವಿತವ್ಯತಾ” ಎಂದು ಆದಿತ್ಯವರ್ಮನನ್ನು ಕುರಿತು, “ವತ್ಸಾ, ಈ ವಿಷಯದಲ್ಲಿ ನಿನ್ನನ್ನು ನಾವು ಅಪರಾಧಿ ಎಂದು ಎಂದಿಗೂ ತಿಳಿಯುವುದಿಲ್ಲ; ಆದುದರಿಂದ ನೀನು ಅದಕ್ಕಾಗಿ ಚಿಂತಿಸಬೇಕಾದುದಿಲ್ಲ.” ಎಂದರು. ಆಗ ಕುಶನಾಭರು “ಕಾರ್ಯವು ಈರೀತಿಯಾಗಿ ಪರಿಣಮಿಸದೇ ಹೋಗಿದ್ದರೆ ಈದುಷ್ಟಸಂಹಾರವು ಹೇಗಾಗುತ್ತಿದ್ದಿತು ? ಭಗವಂತನ ದುಷ್ಟಶಿಕ್ಷಣ ಶಿಷ್ಟಪರಿಪಾಲನ ಕ್ರಮವು ಅಚಿಂತ್ಯಾದ್ಭುತವಾದುದು” ಎಂದು ಆದಿತ್ಯವರ್ಮನನ್ನು ಕುರಿತು “ವತ್ಸಾ, ಇದೋ ನೋಡು. ಅಗ್ನಿಯಲ್ಲಿ ದಗ್ಧಳಾದವಳಂತೆ ಕಾಣುತ್ತಿರುವ ಈ ಕನ್ಯಾರತ್ನದ ಮುಂಗುರುಳು ಮಾ

ಸಲಿಲ್ಲ '' ಎಂದು ತಮ್ಮ ಕಮಂಡಲೋದಕವನ್ನು ಅಭಿಮಂತ್ರಿಸಿ ಪ್ರಜ್ವಲಿಸುತ್ತಿದ್ದ ಆ ಅಗ್ನಿಯ ರಾಶಿಯಮೇಲೆ ಪ್ರೋಕ್ಷಿಸಿದರು. ತತ್ಕ್ಷಣವೇ ಆ ಕನ್ನಿಕೆಯು ನಿದ್ರೆಹೋಗಿ ಎದ್ದವಳ ಹಾಗೆ ಎದ್ದು ಈಚೆಗೆ ಬಂದು ಅಲ್ಲಿ ನಿಂತಿದ್ದ ಗುರು ಹಿರಿಯರಿಗೆ ಅಭಿವಂದಿಸಿ ಲಜ್ಜಾಭರದಿಂದ ತಲೆಬಾಗಿ ನಿಂತಳು. ಆಗ ಕುಶನಾಭರು ಆ ಅನುರೂಪರಾದ ವಧೂವರರನ್ನು ನೋಡಿ, ''ಎಲೈ, ನಾಳೆ ಸಿಂಹ ಲಗ್ನದಲ್ಲಿ ನಿಮ್ಮಗಳ ಪಾಣಿಗ್ರಹಣ ಮಹೋತ್ಸವವನ್ನು ನೆರವೇರಿಸಬೇಕೆಂದು ಗುರುಗಳು ಸಂಕಲ್ಪಮಾಡಿರುವರು; ಆದ ಪ್ರಯುಕ್ತ ನೀವುಗಳು ನಿಮ್ಮ ನಿಮ್ಮ ಸಕಲ ಪರಿವಾರ ಸಮೇತರಾಗಿ ಪದ್ಮದ್ವೀಪಕ್ಕೆ ಈಗಲೇ ಹೋಗಿ ಅಲ್ಲಿ ರಾಜಪುರೋಹಿತರ ಅನುಜ್ಞೆಯನ್ನೇ ವಿವಾಹಕ್ಕೆ ಬೇಕಾದ ಸಕಲ ಸಾಮಗ್ರಿಗಳನ್ನೂ ಸಿದ್ಧಪಡಿಸಿಕೊಂಡಿರಿ. ನಾವೂ ನಮ್ಮ ಆಹ್ನಿಕವನ್ನು ತೀರಿಸಿಕೊಂಡು ಅಲ್ಲಿಗೆ ಬರುವೆವು.'' ಎಂದು ಎಲ್ಲರೂ ಅನ್ತರ್ಧಾನವನ್ನು ಹೊಂದಿದರು.

ತರುವಾಯ ಜಗನ್ಮೋಹಿನಿಯು ಅಲ್ಲಿ ಅಣಿಯಾಗಿದ್ದ ಪಾಲಕಿಯಲ್ಲಿ ಕುಳಿತುಕೊಂಡು ರೇವಿನ ಕಡೆಗೆ ತೆರಳಿದಳು. ಆಕೆಯ ಹಿಂದುಗಡೆಯೇ ಅಲ್ಲಿಗೆ ಬಂದಿದ್ದ ಆಕೆಯ ಪರಿವಾರವೆಲ್ಲವೂ ತಮ್ಮ ತಮ್ಮ ಅಂತಸ್ತಿಗೆ ಯೋಗ್ಯವಾದ ವಾಹನದಲ್ಲಿ ಕುಳಿತುಕೊಂಡು ಹೊರಟರು. ಆದಿತ್ಯವರ್ಮನು ತನ್ನ ಸೇನಾನಾಯಕರಿಂದ ಪರಿವೃತನಾಗಿ ಪದ್ಮದ್ವೀಪಕ್ಕೆ ಪ್ರಯಾಣಮಾಡಿದನು. ಹಿಂದೆಯೇ ಉಭಯ ಪಕ್ಷದ ಸೇನೆಯೂ ಸಂಭ್ರಮದಿಂದ ಬೆರತು ಜಯಧ್ವನಿಯನ್ನು ಮಾಡುತ್ತಾ ಆತನನ್ನು ಹಿಂಬಾಲಿಸಿದರು. ಎಲ್ಲರೂ ಸಮುದ್ರವನ್ನು ದಾಟಿ ಮೂರನೆಯ ಜಾವಕ್ಕೆ ಪದ್ಮದ್ವೀಪವನ್ನು ಸೇರಿದರು. ಆ ನಗ

ರದ ವೈಭವವನ್ನು ನೋಡಿ ಆದಿತ್ಯವರ್ಮನ ಕಡೆಯವರೆಲ್ಲರೂ ಧರ್ಮ ರಾಯನ ರಾಜಸೂಯ ಯಾಗಶಾಲೆಯನ್ನು ಪ್ರವೇಶಿಸಿದ ದುರ್ಯೋಧನಾದಿಗಳ ಅವಸ್ಥೆಯನ್ನು ಹೊಂದಿದರು. ಭವಿಷ್ಯದ್ಭೂಪತಿಯಾದ ಆದಿತ್ಯವರ್ಮನು ರಾಜಕೀಯವಾದ ನೌಕೆಯಿಂದ ಪದ್ಮದ್ವೀಪದ ಮೇಲೆ ಇಳಿದ ಕೂಡಲೇ ಅಲ್ಲಿಯ ಅಮಾತ್ಯರೆಲ್ಲರೂ ಪ್ರಮುಖರಾದ ಪುರಜನರಿಂದೊಡಗೂಡಿ ಆತನನ್ನು ರಾಜಮರ್ಯಾದೆಗಳಿಂದ ಮಂಗಳವಾದ್ಯ ಪುರಸ್ಸರವಾಗಿ ಕರೆದುಕೊಂಡು ಹೋಗಿ ಅರಮನೆಯಲ್ಲಿಯೇ ಇಳಿಸಿದರು. ಅಷ್ಟುಹೊತ್ತಿಗಾಗಲೇ ಅರಮನೆಯ ಬಡಗಿಗಳು ಕಲ್ಯಾಣಮಂಟಪವನ್ನು ನಿರ್ಮಾಣಮಾಡುವುದಕ್ಕೆ ಉಪಕ್ರಮಿಸಿದ್ದರು. ಪುರಜನರೆಲ್ಲರೂ ಆನಂದಪರವಶರಾಗಿ ತಮ್ಮ ತಮ್ಮ ಮನೆಗಳನ್ನೂ ರಾಜಮಾರ್ಗಗಳನ್ನೂ ತಳಿರುದೋರಣಗಳು, ಕದಳೀ ಸ್ತಂಭಗಳು, ಚಿತ್ರಪತಾಕೆಗಳು, ಇವೇ ಮುಂತಾದುವುಗಳಿಂದ ಅಲಂಕರಿಸುತ್ತಿದ್ದರು.

ಆ ಮಹಾಯೋಗಿಗಳ ತಪಃ ಪ್ರಭಾವದಿಂದ ಸಕಲಾಲಂಕಾರಯುಕ್ತವಾಗಿಯೇ ನಿರ್ಮಿತವಾಗಿದ್ದ ಪಟ್ಟಣಕ್ಕೆ ಅಲಂಕಾರ ಮಾಡುವುದು ಪ್ರಫುಲ್ಲವಾದ ಕೆಂದಾವರೆಗೆ ಬಣ್ಣ ಹಾಕುವ ಹಾಗಿದ್ದಿತು. ಆದಿನ ಆ ವಿಧವಾದ ಮಂಗಳಾಲಂಕಾರದಲ್ಲಿ ಆಸಕ್ತರಾಗಿದ್ದ ಆ ಪುರಜನರಿಗೆ ಆ ರಾತ್ರಿಯು ಕಳೆದು ಹೋದುದು ಗೊತ್ತೇ ಆಗಲಿಲ್ಲ.

ಅರುಣೋದಯಕಾಲಕ್ಕೆ ಮುಂಚಿತವಾಗಿಯೇ ವಿವಾಹಮಹೋತ್ಸವಕ್ಕೆ ಬೇಕಾದ ಸಮಸ್ತ ಸಂಭಾರಗಳೂ ಸಿದ್ಧವಾದುವು. ಮಂಗಳವಾದ್ಯಗಾರರು ಹೃದಯಂಗಮವಾದ ಉದಯರಾಗವನ್ನು ಪಾಡತೊಡಗಿದರು. ಆ ವೇಳೆಗೆ ಆದಿತ್ಯನು ತನ್ನ ಅರುಣಕಿರಣಗಳ

ನ್ನು ಪಸರಿಸಿ ಆದಿತ್ಯವರ್ಮನ ವಿವಾಹಮಂಟಪದ ಅಲಂಕಾರವನ್ನು ಪೂರೈಸಿದನು.

ಆ ಸಮಯಕ್ಕೆ ಪುರೋಹಿತರುಗಳು ವಧೂವರರಿಗೆ ಮಂಗಳ ಮಜ್ಜನವನ್ನು ಮಾಡಿಸಿ ಕನ್ಯಾದಾನಕ್ಕೆ ಮುಂಚಿತವಾಗಿ ಮಾಡ ಬೇಕಾಗಿದ್ದ ಮಂಗಳ ಕಾರ್ಯಗಳನ್ನು ಯಥಾವಿಧಿಯಾಗಿ ಮಾಡಿಸ ಲುಪಕ್ರಮಿಸಿದರು. ನಿಶ್ಚಿತವಾಗಿದ್ದ ಲಗ್ನಕ್ಕೆ ಸರಿಯಾಗಿ ಅರವಿಂದ ಬಾಂಧವರು ತಮ್ಮ ಶಿಷ್ಯವರ್ಗದಿಂದೊಡಗೂಡಿ ವಿವಾಹಮಂಟಪಕ್ಕೆ ಬಿಜಮಾಡಿ ಶಾಸ್ತ್ರೋಕ್ತಪ್ರಕಾರವಾಗಿ ಕನ್ಯಾದಾನವನ್ನು ಮಾಡಿ ಪಾಣಿಗ್ರಹಣ ಮಹೋತ್ಸವವನ್ನು ನೆರವೇರಿಸಿ, ವಧೂವರರನ್ನು ಸಿಂಹಾ ಸನದ ಮೇಲೆ ಕೂರಿಸಿ ವೇದೋಕ್ತಾನೇಕ ಆಶೀರ್ವಾದಗಳನ್ನು ಮಾಡಿ ದರು. ಕೂಡಲೇ ಪರಮಾನಂದಭರಿತರಾಗಿ ಮಂಗಳವನ್ನು ಪಾಡಿದರು.

ಸಂಪೂರ್ಣಂ.